ಶುಕ್ರವಾರ, ಮಾರ್ಚ್ 6, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕೌರ್ ಪಡೆಗೆ 'ಟೆಸ್ಟ್'

ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ತಂಡವು ಶುಕ್ರವಾರ ಪರ್ತ್‌ನಲ್ಲಿ ಆರಂಭವಾಗಲಿರುವ ಏಕೈಕ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ

'ಬೇಡಿಕೆ ಈಡೇರಿಸಿ'

ಕನಿಷ್ಠ ವೇತನ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ 'ಎಐಟಿಯುಸಿ' ಸದಸ್ಯರು ಬೆಂಗಳೂರಿನಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು

ಯುಗಾದಿ
ಹಬ್ಬದ ಶುಭಾಶಯಗಳು

ಪರಂಪರೆ ಮತ್ತು ವೈಭವತೆಯ
ಸಂಗಮದೊಂದಿಗೆ ತಯಾರಿಸಲಾಗಿರುವ ನಮ್ಮ ಉತ್ಪನ್ನಗಳೊಂದಿಗೆ
ಈ ಹಬ್ಬದ ಋತುವನ್ನು ಕಾರ್ಯಗಳನ್ನು ಸಂಭ್ರಮಿಸಿರಿ

ಕಾಲಾತೀತ ವಿಶಿಷ್ಟ ವೈವಾಹಿಕ
ರೇಷ್ಮೆ ಮತ್ತು ಆಭರಣ
ಸಂಗ್ರಹಗಳ ಪ್ರಪಂಚದಲ್ಲಿ ಹೆಜ್ಜೆ ಹಾಕಿರಿ

ರೇಷ್ಮೆ ಮತ್ತು ಆಭರಣ
@ ಒಂದೇ ಸ್ಥಳದಲ್ಲಿ

MORE SPACE COLLECTIONS

ನಿಮ್ಮ ವಿವಾಹ ಮತ್ತು ವಿಶೇಷ ಸಂದರ್ಭಗಳ ರೇಷ್ಮೆ ಸೀರೆಗಳನ್ನು, ನೇರವಾಗಿ
ನಮ್ಮಿಂದ ಸಗಟು ದರದಲ್ಲಿ ಖರೀದಿಸಿರಿ
ದಿ ಚೆನ್ನೈ ಸಿಲ್ಕ್ಸ್
ರೇಷ್ಮೆ ಉತ್ಪಾದನೆ ಮತ್ತು ಮಾರಾಟ ಕೇಂದ್ರ ಇದೀಗ @ ಕಾಂಚೀಪುರಂ

SCAN TO LOCATE VENUE

30 MINS FROM ELECTRONIC CITY

ದಿ ಚೆನ್ನೈ ಸಿಲ್ಕ್ಸ್
The Chennai Silks™
Let the celebrations begin!

India's Most Trusted Jeweller
ಶ್ರೀ ಕುಮರನ್ ಜ್ಯುವೆಲರ್ಸ್
Sree Kumaran JEWELLERS
Gold • Diamond • Platinum • Silver

SCAN TO GET MORE UPDATES ABOUT
The Chennai Silks

ಹೊಸೂರ್ (ಟೆಕ್ಸ್‌ಟೈಲ್ & ಜ್ಯುವೆಲ್ಲರಿ)	: ಬೆಂಗಳೂರು ಹೆದ್ದಾರಿ. ☎: 9677761978 । 9167527777
ಗ್ರಾಹಕ ಸೇವಾ ಕೇಂದ್ರ	: ಎಎಸ್‌ಎಲ್ ಪ್ಲಾಜಾ, ಬಸ್ ನಿಲ್ದಾಣದ ಎದುರು, ಹೊಸೂರ್. ☎: 7845759888
ಮೈಸೂರು (ಜ್ಯುವೆಲ್ಲರಿ)	: ಬಿ ಎನ್ ರಸ್ತೆ, ಲಷ್ಕರ್ ಮೊಹಲ್ಲಾ (ಸಬರ್ಬನ್ ಬಸ್ ನಿಲ್ದಾಣದ ಬಳಿ). ☎: 0821–2418916, 9491685000
ಕಾಂಚಿಪುರಂ (ಜ್ಯುವೆಲ್ಲರಿ & ಸಿಲ್ಕ್)	: ವೆಸ್ಟ್ ರಾಜಾ ಸ್ಟ್ರೀಟ್. ☎: 044 27234916, 9566743916, 9003796888
ಕೊಯಂಬತ್ತೂರ್ (ಜ್ಯುವೆಲ್ಲರಿ & ಸಿಲ್ಕ್)	: ಕ್ರಾಸ್‌ಕಟ್ ರೋಡ್, ಗಾಂಧಿಪುರಂ. ☎: 90030 89020, 94916 95000

SCAN TO GET MORE UPDATES ABOUT
Sree Kumaran Jewellers

ಕರ್ನಾಟಕ • ತೆಲಂಗಾಣ • ತಮಿಳನಾಡು • ಪುದುಚೆರಿ

ವರುಷ 6
ದಾಖಲೆಗಳು ನೂರಾರು
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ
ಆರು ಸಾರ್ಥಕ ವಸಂತಗಳನ್ನ ದಿನಾಂಕ 10.03.2026ಕ್ಕೆ
ಯಶಸ್ವಿಯಾಗಿ ಪೂರೈಸುತ್ತಿರುವ
ಉಪಮುಖ್ಯಮಂತ್ರಿಗಳಾದ
ಶ್ರೀ ಡಿ.ಕೆ. ಶಿವಕುಮಾರ್ ರವರಿಗೆ
ಸಮಸ್ತ ಕಾಂಗ್ರೆಸ್ ಪಕ್ಷದ
ಎಲ್ಲಾ ಕಾರ್ಯಕರ್ತರುಗಳಿಂದ
ತುಂಬು ಹೃದಯದ ಅಭಿನಂದನೆಗಳು
-: ಅಭಿನಂದಿಸುವವರು :-
ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರುಗಳು

prajavani.net prajavani
www.prajavani.net
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹುಲಿ ವೇಷ
ಹುಬ್ಬಳ್ಳಿಯಲ್ಲಿ ಗುರುವಾರ ನಡೆದ 'ಜಗ್ಗಲಗಿ ಹಬ್ಬ'ದ ಮೆರವಣಿಗೆಯಲ್ಲಿ ಗಮನ ಸೆಳೆದ ಹುಲಿ ವೇಷ ಧರಿಸಿದ್ದ ಕಲಾವಿದರು

ಸೆನ್ಸೆಕ್ಸ್ 80,015 | ನಿಫ್ಟಿ 24,765 | $/₹ 91.64 | ಚಿನ್ನ (Std. 10g) ₹1,68,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2.84 ಲಕ್ಷ (ಬೆಂಗಳೂರು)

ಪಶ್ಚಿಮ ಏಷ್ಯಾ ಸಂಘರ್ಷ ವಿಸ್ತರಣೆ

ಟ್ರಂಪ್ ಭಾರಿ ಬೆಲೆ ತೆರಬೇಕಾಗುತ್ತದೆ: ಅಮೆರಿಕಕ್ಕೆ ಇರಾನ್ ಎಚ್ಚರಿಕೆ

ದುಬೈ/ಟೆಹರಾನ್ (ಎಪಿ/ಎಎಫ್‌ಪಿ): ಅಮೆರಿಕ –ಇಸ್ರೇಲ್ ಮತ್ತು ಇರಾನ್ ನಡುವೆ ಆರು ದಿನಗಳಿಂದ ನಡೆಯುತ್ತಿರುವ ಯುದ್ಧವು ಪಶ್ಚಿಮ ಏಷ್ಯಾದ ಗಡಿಯಾಚೆಗೂ ವಿಸ್ತರಿಸಿದೆ.

ಭಾರತದಲ್ಲಿ ಸೇನಾ ಸಮರಾಭ್ಯಾಸ ಮುಗಿಸಿಕೊಂಡು ವಾಪಸಾಗುತ್ತಿದ್ದ ಇರಾನ್‌ನ ಯುದ್ಧ ನೌಕೆಯ ಮೇಲೆ ಶ್ರೀಲಂಕಾದ ದಕ್ಷಿಣ ಕರಾವಳಿಯಲ್ಲಿ ಅಮೆರಿಕ ಬುಧವಾರ ದಾಳಿ ನಡೆಸಿತ್ತು. ಅಜರ್‌ಬೈಜಾನ್‌ನ ವಿಮಾನ ನಿಲ್ದಾಣ ಮತ್ತು ಶಾಲೆ ಸಮೀಪ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಕತಾರ್, ಬಹರೇನ್ ಸೇರಿ ಕೊಲ್ಲಿ ರಾಷ್ಟ್ರಗಳಲ್ಲಿ ಇರಾನ್ ಹೊಸ ದಾಳಿಗಳನ್ನು ಗುರುವಾರ ನಡೆಸಿದೆ. ಟೆಹರಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿದಿದ್ದು, ಭಾರಿ ಸ್ಫೋಟಗಳು ವರದಿಯಾಗಿವೆ.

ಕೊಲ್ಲಿ ರಾಷ್ಟ್ರಗಳನ್ನು ಮೀರಿ, ಪಶ್ಚಿಮ ಏಷ್ಯಾ ಯುದ್ಧವು ವಿಸ್ತರಿಸಿದ ಬೆನ್ನಲ್ಲೇ, ಆಸ್ಟ್ರೇಲಿಯಾ ಎರಡು ಸೇನಾ ವಿಮಾನಗಳನ್ನು ಸನ್ನದ್ಧವಾಗಿರಿಸಿದೆ. 'ತನ್ನ ನೆಲದ ಮೇಲೆ ದಾಳಿ ನಡೆದರೆ ಸಶಸ್ತ್ರ ಪಡೆ ಯುದ್ಧದಲ್ಲಿ ಭಾಗವಹಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ' ಎಂದು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಹೇಳಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷವು ನ್ಯಾಟೊ ಸದಸ್ಯ ರಾಷ್ಟ್ರವಾದ ಟರ್ಕಿಯನ್ನೂ ಸಮರ ಕಣದೊಳಕ್ಕೆ ತಂದಿದೆ. ಟರ್ಕಿ ವಾಯುನೆಲೆ ಮೇಲೆ ಇರಾನ್ ಪ್ರಯೋಗಿಸಿದ್ದ ಕ್ಷಿಪಣಿಯನ್ನು ನ್ಯಾಟೊ ಮಿತ್ರರಾಷ್ಟ್ರದ ಪಡೆ ಹೊಡೆದುರುಳಿಸಿದೆ.

▶13

ಭಾರತದ ಸಂತಾಪ

ನವದೆಹಲಿ (ಪಿಟಿಐ): ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಖಮೇನಿ ಅವರ ಸಾವಿಗೆ ಭಾರತ ಗುರುವಾರ ಸಂತಾಪ ಸೂಚಿಸಿದೆ.

ಖಮೇನಿ ಅವರು ಮೃತಪಟ್ಟು 5 ದಿನಗಳು ಗತಿಸಿದ ಬಳಿಕ, ಭಾರತ ಸಂತಾಪ ವ್ಯಕ್ತಪಡಿಸಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಫೆಬ್ರುವರಿ 28ರಂದು ಖಮೇನಿ ಹತರಾಗಿದ್ದಾರೆ.

▶13

ಇಸ್ರೇಲ್ ನಡೆಸಿದ ಬಾಂಬ್ ದಾಳಿಯಿಂದ ಟೆಹರಾನ್‌ನಲ್ಲಿ ಗುರುವಾರ ದಟ್ಟ ಹೊಗೆ ಎದ್ದಿತ್ತು – ಎಎಫ್‌ಪಿ ಚಿತ್ರ

ಇರಾನ್ ಶಸ್ತ್ರಾಸ್ತ್ರ ಕೇಳಿಲ್ಲ: ರಷ್ಯಾ

ಮಾಸ್ಕೊ: 'ಶಸ್ತ್ರಾಸ್ತ್ರ ಪೂರೈಸುವಂತೆ ಇರಾನ್ ಮನವಿ ಮಾಡಿಲ್ಲ' ಎಂದು ರಷ್ಯಾದ ಆಡಳಿತ ಕಚೇರಿ ಕ್ರೆಮ್ಲಿನ್ ಗುರುವಾರ ಸ್ಪಷ್ಟಪಡಿಸಿದೆ.

ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸುತ್ತಿರುವ ವೈಮಾನಿಕ ದಾಳಿಯನ್ನು ಖಂಡಿಸಿರುವ ರಷ್ಯಾ, ತಕ್ಷಣವೇ ಕದನ ವಿರಾಮ ಘೋಷಿಸುವಂತೆ ಒತ್ತಾಯಿಸಿದೆ.

ಬುಶೇರ್‌ನಲ್ಲಿ ಎರಡು ಪರಮಾಣು ಘಟಕ ನಿರ್ಮಾಣಕ್ಕೆ ರಷ್ಯಾ ಕಳೆದ ವರ್ಷ ಇರಾನ್ ಜತೆಗೆ 20 ವರ್ಷಗಳ ಪಾಲುದಾರಿಕೆ ಒಪ್ಪಂದಕ್ಕೆ ಸಹಿ ಹಾಕಿತ್ತು. ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಬಳಸಲು ರಷ್ಯಾಕ್ಕೆ ಶಾಹಿದ್ ಡ್ರೋನ್‌ಗಳನ್ನು ಇರಾನ್ ಪೂರೈಸಿದೆ.

'ಶಸ್ತ್ರಾಸ್ತ್ರ ಪೂರೈಸುವಂತೆ ಇರಾನ್‌ನಿಂದ ಇದುವರೆಗೆ ಯಾವುದೇ ಮನವಿ ಬಂದಿಲ್ಲ. ನಮ್ಮ ಸ್ಥಿರ ನಿಲುವು ಎಲ್ಲರಿಗೂ ತಿಳಿದಿದೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಕ್ರೆಮ್ಲಿನ್ ವಕ್ತಾರ ದಿಮಿಟ್ರಿ ಪೆಸ್ಕೋವ್ ಹೇಳಿದ್ದಾರೆ.

ಅಮೆರಿಕದ ನೌಕೆ ಮೇಲೆ ದಾಳಿ?

ಟೆಹರಾನ್ (ಎಎಫ್‌ಪಿ): 'ಪರ್ಷಿಯನ್ ಕೊಲ್ಲಿಯ ಉತ್ತರ ಭಾಗದಲ್ಲಿ ಅಮೆರಿಕದ ತೈಲ ಸಾಗಾಟದ ನೌಕೆಯ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದು, ನೌಕೆ ಹೊತ್ತಿ ಉರಿಯಿತು' ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಪ್ರಕಟಣೆ ಉಲ್ಲೇಖಿಸಿ ಇರಾನಿನ ಸರ್ಕಾರಿ ಸುದ್ದಿವಾಹಿನಿ ವರದಿ ಮಾಡಿದೆ.

ಈ ದಾಳಿಯ ಕುರಿತು ಇರಾನ್‌ನ ಅಧಿಕೃತ ಹೇಳಿಕೆ ಹೊರಬಿದ್ದಿಲ್ಲ. ಆದರೆ, ತೈಲ ಸಾಗಾಟದ ಹಡಗುಗಳು ಸಾಗುವ ಪ್ರಮುಖ ಜಲಮಾರ್ಗವಾದ ಹೊರ್ಮುಜ್ ಜಲಸಂಧಿ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುವುದಾಗಿ ರೆವಲ್ಯೂಷನರಿ ಗಾರ್ಡ್ಸ್ ಹೇಳಿದೆ.

ಇರಾನ್‌ನ ಮತ್ತೊಂದು ನೌಕೆಗೆ ದಾಳಿ ಭೀತಿ

ಗಾಲೆ (ಶ್ರೀಲಂಕಾ) (ಎಎಫ್‌ಪಿ): ಇರಾನ್‌ನ ಮತ್ತೊಂದು ಯುದ್ಧ ನೌಕೆಯು ಗುರುವಾರ ಶ್ರೀಲಂಕಾದ ಜಲಗಡಿಯೊಳಗೆ ಪ್ರವೇಶಿಸಿದ್ದು, ಅದಕ್ಕೂ ಅಮೆರಿಕದ ದಾಳಿ ಭೀತಿ ಉಂಟಾಗಿದೆ.

100ಕ್ಕೂ ಅಧಿಕ ಸಿಬ್ಬಂದಿ ಇರುವ ನೌಕೆ ಶ್ರೀಲಂಕಾ ಕರಾವಳಿಯಲ್ಲಿ ಸಂಚರಿಸುತ್ತಿದೆ. 'ನೌಕೆಯಲ್ಲಿರುವವರ ಸುರಕ್ಷತೆಗೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆ. ಪ್ರಾದೇಶಿಕ ಶಾಂತಿಯ ದೃಷ್ಟಿಯಿಂದ ಈ ವಿಚಾರದಲ್ಲಿ ಮಧ್ಯಪ್ರವೇಶಿಸುತ್ತೇವೆ' ಎಂದು ಶ್ರೀಲಂಕಾದ ಸಚಿವರೊಬ್ಬರು ಅಲ್ಲಿನ ಸಂಸತ್ತಿಗೆ ತಿಳಿಸಿದ್ದಾರೆ.

ಅಮೆರಿಕ ರಾಯಭಾರ ಕಚೇರಿ ಸ್ಥಗಿತ (ಟೆಹರಾನ್ ವರದಿ): ಇರಾನ್‌ನಿಂದ ಸತತ ಕ್ಷಿಪಣಿ ದಾಳಿ ಬೆನ್ನಲ್ಲೇ, ಕುವೈತ್‌ನಲ್ಲಿರುವ ರಾಯಭಾರ ಕಚೇರಿಯನ್ನು ಅಮೆರಿಕ ಸ್ಥಗಿತಗೊಳಿಸಿದೆ.

ಇರಾನ್‌ನ ಮುಂದಿನ ನಾಯಕನನ್ನು ಆಯ್ಕೆ ಮಾಡುವಲ್ಲಿ ಅಮೆರಿಕ ಪಾತ್ರ ವಹಿಸುತ್ತದೆ. ಆಯತೊಲ್ಲಾ ಖಮೇನಿ ಮಗನನ್ನು ಉತ್ತರಾಧಿಕಾರಿಯಾಗಿ ಮಾಡಲು ಒಪ್ಪಲ್ಲ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಫೈನಲ್‌ಗೆ ಭಾರತ ಲಗ್ಗೆ

ಎಎಫ್‌ಪಿ ಚಿತ್ರ

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಭಾರತ ತಂಡದ ಫೀಲ್ಡರ್ ಅಕ್ಷರ್ ಪಟೇಲ್ ಅವರು ಡೈವ್ ಮಾಡಿ ಇಂಗ್ಲೆಂಡ್ ತಂಡದ ಬ್ಯಾಟರ್ ಹ್ಯಾರಿ ಬ್ರೂಕ್ ಅವರ ಕ್ಯಾಚ್ ಪಡೆದ ಪರಿ. 'ಹಾಲಿ ಚಾಂಪಿಯನ್' ಭಾರತ ತಂಡವು ಈ ಪಂದ್ಯದಲ್ಲಿ 7 ರನ್‌ಗಳಿಂದ ಜಯಿಸಿ, ಸತತ ಎರಡನೇ ಸಲ ಫೈನಲ್‌ಗೆ ಲಗ್ಗೆ ಇಟ್ಟಿತು

ಎಡಗೈ–ಬಲಗೈ ಸಚಿವರ ಮಧ್ಯೆ ಕಾವೇರಿದ ಚರ್ಚೆ

ಒಳಮೀಸಲಾತಿ ಇನ್ನೂ ಅಸ್ಪಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿನ 56,432 ಹುದ್ದೆಗಳ ನೇಮಕಾತಿಗೆ ಮುನ್ನ ಒಳ ಮೀಸಲಾತಿಯನ್ನು ಅನ್ವಯಿಸಬೇಕು ಎಂಬ ವಿಷಯದಲ್ಲಿ ಬಲಗೈ–ಎಡಗೈ ಸಮುದಾಯಗಳನ್ನು ಪ್ರತಿನಿಧಿಸುವ ಸಚಿವರ ಮಧ್ಯೆ ಒಮ್ಮತ ಮೂಡದೇ ಇದ್ದುದರಿಂದ ಗುರುವಾರ ನಡೆದ ಸಚಿವ ಸಂಪುಟ ಸಭೆಯ ಯಾವುದೇ ನಿರ್ಣಯಕ್ಕೆ ಬಾರದೇ ಕೊನೆಗೊಂಡಿದೆ.

ಪರಿಶಿಷ್ಟ ಜಾತಿಗೆ ನಿಗದಿಯಾಗಿರುವ ಶೇ 15 ಮೀಸಲಾತಿಯಲ್ಲಿಯೇ ಒಳ ಮೀಸಲಾತಿ ಕಲ್ಪಿಸುವಂತೆ ಎಡಗೈ ಸಮುದಾಯದವರು ಪಟ್ಟು ಹಿಡಿದಿದ್ದಾರೆ. ರೋಸ್ಟರ್ ಗೊಂದಲ, ನ್ಯಾಯಾಲಯದ ಅಡೆತಡೆ ನಿವಾರಣೆ ಆಗುವವರೆಗೆ ಒಳ ಮೀಸಲಾತಿ ರಹಿತವಾಗಿ ಶೇ 15 ಮೀಸಲಾತಿ ಅನ್ವಯವೇ ನೇಮಕಾತಿ ಪ್ರಕ್ರಿಯೆ ಮುಂದುವರಿಸಬೇಕು ಎಂದು ಬಲಗೈ ಸಮುದಾಯ ಒತ್ತಡ ಹೇರಿದೆ. ಇದೇ ವಿಷಯ ಸಚಿವ ಸಂಪುಟ ಸಭೆಯಲ್ಲೂ ಪ್ರತಿಧ್ವನಿಸಿದೆ.

ಗುರುವಾರ ಸಂಜೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯದ ಕುರಿತು ಬಲಗೈ–ಎಡಗೈ ಪ್ರತಿನಿಧಿಸುವ ಸಚಿವರ ಮಧ್ಯೆ ಕಾವೇರಿದ ಚರ್ಚೆ ನಡೆಯಿತು.

▶9

ಮುಂದಿನ ಸಭೆ ಅಧಿಕಾರ ಸಿ.ಎಂ.ಗೆ

ಎಚ್‌.ಕೆ.ಪಾಟೀಲ

'ಒಳಮೀಸಲಾತಿ ಜಾರಿಗೆ ಸರ್ಕಾರ ಬದ್ಧವಾಗಿದೆ. ಇವತ್ತಿನ ಸಂಪುಟ ಸಭೆಯಲ್ಲಿ ಈ ವಿಷಯವಾಗಿ ವಿಸ್ತೃತ ಚರ್ಚೆ ನಡೆಯಿತು. ಆದರೆ, ಚರ್ಚೆ ಅಪೂರ್ಣವಾಗಿದೆ. ಚರ್ಚೆಯನ್ನು ಮುಂದುವರೆಸಲು ಮುಖ್ಯಮಂತ್ರಿಯವರಿಗೆ ಅಧಿಕಾರ ನೀಡಲಾಗಿದೆ' ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ವಿಷಯವಾಗಿ ಮುಂದಿನ ಸಂಪುಟ ಸಭೆ ಯಾವಾಗ ಸೇರಬೇಕು ಎಂಬ ಬಗ್ಗೆ ಮುಖ್ಯಮಂತ್ರಿಯವರೇ ತೀರ್ಮಾನಿಸುತ್ತಾರೆ. ಆದಷ್ಟು ಬೇಗ ಸಭೆ ಕರೆಯಲಾಗುತ್ತದೆ' ಎಂದು ಅವರು ವಿವರಿಸಿದರು.

'ನೇರ ನೇಮಕಾತಿಗೆ ಸಂಬಂಧಿಸಿದಂತೆ ಕಳೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ ಅಂತಿಮ. ಅದರಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಒಳ ಮೀಸಲಾತಿಗೆ ಬದ್ಧವಾಗಿದೆ' ಎಂದು ಪಾಟೀಲ ಸ್ಪಷ್ಟಪಡಿಸಿದರು.

ಸಚಿವ ಸಂಪುಟ ಸಭೆಯಲ್ಲಿ ಎಲ್ಲ ಸಚಿವರಿಗೂ ಮುಕ್ತವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಮುಖ್ಯಮಂತ್ರಿ ಅವಕಾಶ ನೀಡಿದ್ದರು. ದಲಿತ ಸಮುದಾಯದ ಸಚಿವರು ಅಲ್ಲದೇ, ಇತರ ಸಚಿವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎಂದು ಪಾಟೀಲ ಹೇಳಿದರು.

17ನೇ ಬಜೆಟ್ ಮಂಡಿಸಲಿರುವ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಮಟ್ಟಿಗೆ 16 ಬಾರಿ ಬಜೆಟ್ ಮಂಡಿಸಿ ದಾಖಲೆ ನಿರ್ಮಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ (ಮಾ.6) ತಮ್ಮದೇ ದಾಖಲೆಯನ್ನು ಮುರಿಯಲಿದ್ದು, 17ನೇ ಬಾರಿ ಬಜೆಟ್ ಮಂಡನೆ ಮಾಡಲಿದ್ದಾರೆ.

ಬೆಳಿಗ್ಗೆ 10.15ಕ್ಕೆ ಬಜೆಟ್ ಅಧಿವೇಶನ ಶುರುವಾಗಲಿದ್ದು, ಮಾ.27ರವರೆಗೆ ನಡೆಯಲಿದೆ. 2013ರಿಂದ 2018ರವರೆಗೆ ಮುಖ್ಯಮಂತ್ರಿಯಾಗಿದ್ದ ಅವರು, ಹಣಕಾಸು ಖಾತೆಯನ್ನೂ ಹೊಂದಿದ್ದರು. ಆ ಅವಧಿಯ ಎಲ್ಲ ಬಜೆಟ್‌ಗಳನ್ನೂ ಅವರೇ ಮಂಡಿಸಿದ್ದರು. ಎರಡನೇ ಅವಧಿ ಮುಖ್ಯಮಂತ್ರಿಯಾದ ಬಳಿಕ ಈವರೆಗೆ ಮೂರು ಬಾರಿ ಬಜೆಟ್ ಮಂಡಿಸಿದ್ದು, ನಾಲ್ಕನೇ ಬಜೆಟ್‌ಗೆ ಸುದೀರ್ಘ ತಾಲೀಮು ನಡೆಸಿದ್ದಾರೆ.

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಸರ್ಕಾರ ನಡೆಸಲೇಬೇಕಿದೆ. ಈ ಹೊತ್ತಿನೊಳಗೆ, ಕಾಂಗ್ರೆಸ್‌ನ ಮತಬ್ಯಾಂಕ್ ಅನ್ನು ಹಿಡಿದಿಟ್ಟುಕೊಳ್ಳುವತ್ತ ಲಕ್ಷ್ಯ ವಹಿಸಲೇಬೇಕಿದೆ. ಆ ದಿಸೆಯಲ್ಲಿ ಬಜೆಟ್‌ನ ಹೂರಣಗಳು ಇರಲಿವೆ ಎಂದು ನಿರೀಕ್ಷಿಸಲಾಗಿದೆ.

'ಜಿಎಸ್‌ಟಿ ಸ್ಲ್ಯಾಬ್‌ಗಳ ಪರಿಷ್ಕರಣೆಯಿಂದ ಆಗಿರುವ ನಷ್ಟ, ಕೇಂದ್ರದ ಪಾಲು, ಸಹಾಯಾನುದಾನ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಡಿ ಲಭಿಸುತ್ತಿರುವ ಅನುದಾನಗಳಲ್ಲಿ ವರ್ಷದಿಂದ ವರ್ಷಕ್ಕೆ ಕುಸಿತವಾಗುತ್ತಿದೆ. ಇಂತಹ ಆರ್ಥಿಕ ಸಂಕಷ್ಟದ ನಡುವೆಯೂ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳನ್ನು ಮುಂದಿನ ಆರ್ಥಿಕ ವರ್ಷದಲ್ಲೂ ಮುಂದುವರಿಸಬೇಕಿದ್ದು, ಅದಕ್ಕಾಗಿ ಸುಮಾರು ₹60 ಸಾವಿರ ಕೋಟಿ ಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ. ಗ್ಯಾರಂಟಿಗಳಿಗಾಗಿ ಹಾಗೂ ಬದ್ಧವೆಚ್ಚ ಹೆಚ್ಚುತ್ತಿದ್ದರೂ ಆರ್ಥಿಕ ಶಿಸ್ತು ಕಾಯ್ದುಕೊಳ್ಳುವಲ್ಲಿ ಜಾಣ್ಮೆ ಮೆರೆದಿರುವ ಸಿದ್ದರಾಮಯ್ಯ ಅವರು ತಮ್ಮದೇ ದಾಖಲೆಯ ಬಜೆಟ್ ಅನ್ನು ರೂಪಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

▶8

ಸಂಭಾವ್ಯ ಘೋಷಣೆಗಳು

- ಅಲ್ಪಸಂಖ್ಯಾತ ಬೌದ್ಧ ಸಮುದಾಯದ ಅಭಿವೃದ್ಧಿಗೆ ನಿಗಮ
- ರಾಜ್ಯದ ಆಯ್ದ ಭಾಗಗಳಲ್ಲಿ ಅಂಬೇಡ್ಕರ್ ಅಂತರರಾಷ್ಟ್ರೀಯ ಶಾಲೆ
- ಸಂತ ಶಿಶುನಾಳ ಶರೀಫರ ಹೆಸರಿನಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆಗಳು
- ಕಾರ್ಮಿಕರು, ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕೆ ಸಿಂಹಪಾಲು

ಮಾ. 6, ಶುಕ್ರವಾರ: ರಾಜ್ಯ ಬಜೆಟ್
ಬೆಳಿಗ್ಗೆ 10.15: ಬಜೆಟ್ ಮಂಡನೆ ಆರಂಭ

₹34.46 ಕೋಟಿ ಅಕ್ರಮ ಆಸ್ತಿ ಪತ್ತೆ

ಬೆಂಗಳೂರು: 9 ಅಧಿಕಾರಿ ಗಳಿಗೆ ಸೇರಿದ 42 ಸ್ಥಳಗಳಲ್ಲಿ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ₹34.46 ಕೋಟಿಯಷ್ಟು ಅಕ್ರಮ ಸಂಪತ್ತು ಪತ್ತೆ ಮಾಡಿದ್ದಾರೆ.

ವಿವರ ▶8

ಶಾಲಾ ಪಠ್ಯಪುಸ್ತಕ: ಬೆಲೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪಠ್ಯಪುಸ್ತಕ ಸಂಘವು 2026–27ನೇ ಶೈಕ್ಷಣಿಕ ವರ್ಷದ ಶಾಲಾ ಪಠ್ಯಪುಸ್ತಕಗಳ ಬೆಲೆ ಹೆಚ್ಚಿಸಿದ್ದು, ಕೆಲವು ಪುಸ್ತಕಗಳ ಬೆಲೆಯಲ್ಲಿ ಶೇ 50ರವರೆಗೆ ಏರಿಕೆಯಾಗಿದೆ.

ರಾಜ್ಯ ಪಠ್ಯಕ್ರಮ ಅನುಸರಿಸುವ ಖಾಸಗಿ ಶಾಲೆಗಳಿಗೆ ಅಗತ್ಯವಿರುವ ಪಠ್ಯಪುಸ್ತಕಗಳಿಗೆ ಬೇಡಿಕೆ ಸಲ್ಲಿಸಲು ಶಾಲಾ ಶಿಕ್ಷಣ ಇಲಾಖೆ ಈಚೆಗೆ ಸೂಚಿಸಿತ್ತು. ಸೂಚನಾ ಪತ್ರದಲ್ಲಿ ನಮೂದಿಸಿದ ಪ್ರಕಾರ, ಕೆಲ ಪುಸ್ತಕಗಳ ಬೆಲೆಗಳನ್ನು ಹೆಚ್ಚಳ ಮಾಡಲಾಗಿದೆ.

3ನೇ ತರಗತಿಯ ಪರಿಸರ ಅಧ್ಯಯನ ಪುಸ್ತಕದ ಬೆಲೆ ₹22ರಿಂದ ₹45ಕ್ಕೆ, 2ನೇ ತರಗತಿಯ ಗಣಿತ (ಇಂಗ್ಲಿಷ್ ಭಾಗ–2) ಪುಸ್ತಕದ ಬೆಲೆ ₹25ರಿಂದ ₹51ಕ್ಕೆ ಹೆಚ್ಚಳ ಮಾಡಲಾಗಿದೆ.

1ರಿಂದ 5ನೇ ತರಗತಿ ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತ ವಿಷಯಗಳ ಪಠ್ಯಪುಸ್ತಕಗಳ ಬೆಲೆಯನ್ನು ಎಲ್ಲ ಹಂತಗಳಲ್ಲೂ ಹೆಚ್ಚಿಸಲಾಗಿದೆ.

▶8

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ವಾತಾವರಣ ಇರಲಿದೆ

ವಾಹನ ಸಂಚಾರ ಮಾರ್ಗ ಬದಲು

'5-ಕೆ ಸೇಫ್ ಎ ಥಾನ್' ಓಟ: ಕಸ್ತೂರ್‌ಬಾ ರಸ್ತೆಯಲ್ಲಿ ಬೆಳಿಗ್ಗೆ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಸುರಕ್ಷತೆ ಜಾಗೃತಿಗಾಗಿ ಸಾರಿಗೆ, ಪೊಲೀಸ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ನಗರದಲ್ಲಿ ಮಾರ್ಚ್ 7ರಂದು '5-ಕೆ ಸೇಫ್ ಎ ಥಾನ್' ಓಟ ಹಮ್ಮಿಕೊಂಡಿದ್ದು, ಕಸ್ತೂರಬಾ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಕಂಠೀರವ ಕ್ರೀಡಾಂಗಣದಿಂದ ಆರಂಭವಾಗುವ ಓಟವು ಸಿದ್ದಲಿಂಗಯ್ಯ ಜಂಕ್ಷನ್, ಕ್ವೀನ್ಸ್ ವೃತ್ತ, ಸಿಟಿಒ, ಪೊಲೀಸ್ ತಿಮ್ಮಯ್ಯ ವೃತ್ತ, ವಿಧಾನ ಸೌಧ ಮುಂಭಾಗ, ಗೋಪಾಲಗೌಡ ಸರ್ಕಲ್, ಕೆ.ಆರ್.ಸರ್ಕಲ್, ಹಡ್ಸನ್ ಸರ್ಕಲ್, ಕಸ್ತೂರಬಾ ರಸ್ತೆ ಮಾರ್ಗವಾಗಿ ಸಾಗಿ ಕಂಠೀರವ ಕ್ರೀಡಾಂಗಣದಲ್ಲಿ ಅಂತ್ಯಗೊಳ್ಳಲಿದೆ.

5-ಕೆ ಸೇಫ್ ಎ ಥಾನ್ ಭಾಗವಾಗಿ ಬೈಕ್ ಮತ್ತು ಸೈಕಲ್ ರ‍್ಯಾಲಿ, ವಾಕಥಾನ್ ಹಾಗೂ ಮ್ಯಾರಥಾನ್ ಸಹ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶನಿವಾರ ಬೆಳಿಗ್ಗೆ 7ರಿಂದ 10 ಗಂಟೆವರೆಗೆ ಕಸ್ತೂರಬಾ ರಸ್ತೆಯಲ್ಲಿ ಎಲ್ಲಾ ಮಾದರಿಯ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

ಎಚ್‌ಎಲ್‌ಡಿ ಜಂಕ್ಷನ್‌ನಿಂದ ಕಸ್ತೂರಬಾ ರಸ್ತೆ ಮೂಲಕ ಕ್ವೀನ್ಸ್ ಜಂಕ್ಷನ್ ಮತ್ತು ಶಾಂತಿನಗರದ ಕಡೆಗೆ ಹೋಗುವ ವಾಹನಗಳು, ಎಚ್‌ಎಲ್‌ಡಿ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ಹಡ್ಸನ್ ಜಂಕ್ಷನ್, ದೇವಾಂಗ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಮಿಷನ್ ರಸ್ತೆ, ಶಾಂತಿನಗರ ಮಾರ್ಗವಾಗಿ ರಿಚ್ಮಂಡ್ ಜಂಕ್ಷನ್, ಕ್ವೀನ್ಸ್ ಜಂಕ್ಷನ್ ತಲುಪಬಹುದು ಎಂದು ಸಂಚಾರ ಪೊಲೀಸರು ಹೇಳಿದ್ದಾರೆ.

ಕೆ.ಆರ್.ಸರ್ಕಲ್‌ನಿಂದ ಇಂಡಿಯನ್ ಎಕ್ಸ್‌ಪ್ರೆಸ್ ಕಡೆಗೆ ಹೋಗುವ ವಾಹನಗಳು ಮಹಾರಾಣಿ ಅಂಡರ್ ಪಾಸ್ ಬಳಿ ಎಡಕ್ಕೆ ತಿರುವು ಪಡೆದು ಪ್ಯಾಲೇಸ್ ರಸ್ತೆ, ಸಿಐಡಿ ಜಂಕ್ಷನ್, ಚಾಲುಕ್ಯ ವೃತ್ತ, ಇನ್‌ಫೆಂಟ್ರಿ ರಸ್ತೆ, ಕಾಫಿ ಬೋರ್ಡ್ ಮಾರ್ಗವಾಗಿ ಸಂಚರಿಸಬೇಕು ಎಂದು ಸಂಚಾರ ಪೊಲೀಸರು ಮನವಿ ಮಾಡಿದ್ದಾರೆ.

ಸ್ಪರ್ಧಿಗಳ ಪ್ರವೇಶ

- ವಾಕಥಾನ್ ಮತ್ತು ಮ್ಯಾರಥಾನ್‌ನಲ್ಲಿ ಭಾಗವಹಿಸುವವರು ಕ್ರೀಡಾಂಗಣದ ಗೇಟ್ ಸಂಖ್ಯೆ: 3, 4, 5
- ಬೈಕ್ ಮತ್ತು ಸೈಕಲ್ ರ‍್ಯಾಲಿಯಲ್ಲಿ ಭಾಗವಹಿಸುವವರು ಗೇಟ್ ಸಂಖ್ಯೆ 6

ಪಾರ್ಕಿಂಗ್ ಸ್ಥಳಗಳು

- ಪಿಡಬ್ಲ್ಯುಡಿ ಕಚೇರಿ
- ನೃಪತುಂಗ ರಸ್ತೆ
- ವೈಎಂಸಿಎ ಮೈದಾನ

'ಓಪನ್ ಡೇ': ಸಂಚಾರ ವ್ಯವಸ್ಥೆ ಬದಲಾವಣೆ

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಮಾರ್ಚ್ 7ರಂದು 'ಓಪನ್ ಡೇ' ಕಾರ್ಯಕ್ರಮ ಆಯೋಜಿಸಲಾಗಿದ್ದು, ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗಿದೆ.

ಐಐಎಸ್‌ಸಿಯಲ್ಲಿ ಶನಿವಾರ ಬೆಳಿಗ್ಗೆ 9ರಿಂದ ಸಂಜೆ 6ರ ವರೆಗೆ ನಡೆಯುವ 'ಓಪನ್ ಡೇ' ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಮುಕ್ತ ಪ್ರವೇಶವಿದೆ.

ಸುಮಾರು 80 ಸಾವಿರ ವಿದ್ಯಾರ್ಥಿಗಳು 200ಕ್ಕೂ ಹೆಚ್ಚು ಬಸ್ ಹಾಗೂ 700 ಕಾರುಗಳಲ್ಲಿ ಕಾರ್ಯಕ್ರಮಕ್ಕೆ ಬರುವ ನಿರೀಕ್ಷೆ ಇದೆ. ಹೀಗಾಗಿ, ಸುಗಮ ಸಂಚಾರದ ದೃಷ್ಟಿಯಿಂದ ಐಐಎಸ್‌ಸಿ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ಸಂಚಾರ ವ್ಯವಸ್ಥೆಯಲ್ಲಿ ಮಾರ್ಪಾಡು ಮಾಡಲಾಗಿದೆ ಎಂದು ಸದಾಶಿವನಗರ ಸಂಚಾರ ಠಾಣೆ ಪೊಲೀಸರು ಹೇಳಿದ್ದಾರೆ.

- ಯಶವಂತಪುರ ಕಡೆಯಿಂದ ಬಳ್ಳಾರಿ ರಸ್ತೆ ಕಡೆಗೆ ಮತ್ತು ಬಳ್ಳಾರಿ ರಸ್ತೆಯಿಂದ ಯಶವಂತಪುರದ ಕಡೆಗೆ ಹೋಗುವ ವಾಹನಗಳು ಸರ್ ಸಿ.ವಿ.ರಾಮನ್ ರಸ್ತೆಯ ಬದಲು ಪರ್ಯಾಯ ಮಾರ್ಗಗಳಲ್ಲಿ ಸಂಚರಿಸಬೇಕು
- ಶಾಲಾ ಬಸ್ ಹಾಗೂ ನಾಲ್ಕು ಚಕ್ರದ ವಾಹನಗಳನ್ನು ಅರಮನೆ ಮೈದಾನದ ಕೃಷ್ಣ ವಿಹಾರದಲ್ಲಿ ನಿಲುಗಡೆ ಮಾಡಬೇಕು
- ಕೃಷ್ಣ ವಿಹಾರದಿಂದ ಐಐಎಸ್‌ಸಿಗೆ ಬಸ್ ವ್ಯವಸ್ಥೆ ಮಾಡಲಾಗಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಬಸ್‌ಗಳ ಮೂಲಕ ಕ್ಯಾಂಪಸ್‌ಗೆ ಬರಬೇಕು
- ದ್ವಿಚಕ್ರ ವಾಹನಗಳನ್ನು ಐಐಎಸ್‌ಸಿಯ ಜಿಮ್ ಖಾನಾ ಮೈದಾನದ ಬದಿಯಲ್ಲಿ ನಿಲುಗಡೆ ಮಾಡಬೇಕು

ವಾಹನ ನಿಲುಗಡೆ ನಿರ್ಬಂಧಿತ ರಸ್ತೆಗಳು

- ಕಸ್ತೂರಬಾ ರಸ್ತೆ
- ದೇವಾಂಗ ರಸ್ತೆ
- ವಿಠಲ್ ಮಲ್ಯ ರಸ್ತೆ
- ಎನ್.ಆರ್.ರಸ್ತೆ
- ಆರ್‌ಆರ್‌ಎಂಆರ್ ರಸ್ತೆ
- ನೃಪತುಂಗ ರಸ್ತೆ
- ಕೆ.ಜಿ.ರಸ್ತೆ
- ಶೇಷಾದ್ರಿ ರಸ್ತೆ

ಬೆಂಗಳೂರಿನ ಜ್ಞಾನಭಾರತಿ ರೈಲ್ವೆ ಮೇಲ್ಸೇತುವೆ ಕಾಮಗಾರಿಗಾಗಿ ರಸ್ತೆಯನ್ನು ನೈಋತ್ಯ ರೈಲ್ವೆಯು ತಾತ್ಕಾಲಿಕವಾಗಿ ಗುರುವಾರ ಮುಚ್ಚಿದ್ದು, ದಿಢೀರ್ ವಾಹನ ಸಂಚಾರವಿಲ್ಲದೇ ಜನರು ಪರದಾಡುವಂತಾಯಿತು ಚಿತ್ರ: ಪ್ರಶಾಂತ್ ಎಚ್‌.ಜಿ.

ಎಪಿಎಸ್ ವಿದ್ಯಾರ್ಥಿಗಳಿಂದ ಸಾಧನೆ

ಬೆಂಗಳೂರು: ಎಪಿಎಸ್ ಎಜುಕೇಷನಲ್ ಟ್ರಸ್ಟ್‌ನ ಆಚಾರ್ಯ ಪಾಠಶಾಲಾ ಕಾಲೇಜ್ ಆಫ್ ಆರ್ಟ್ಸ್ ಮತ್ತು ಸೈನ್ಸ್‌ನ ವಿದ್ಯಾರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಬಿಸಿಎ ವಿಭಾಗದಲ್ಲಿ ಎನ್.ಜೆ. ಸಂಜನಾ ಮೊದಲ ರ‍್ಯಾಂಕ್ (ಶೇಕಡ 97.23), ಎನ್. ಪ್ರಿಯಾ ನಾಲ್ಕನೇ ರ‍್ಯಾಂಕ್ (ಶೇ 96.41), ಡಿ. ರುಚಿತಾ ಆರನೇ ರ‍್ಯಾಂಕ್ (ಶೇ 96.37), ಪಿ. ಪ್ರಕೃತಿ ಎಂಟನೇ ರ‍್ಯಾಂಕ್ (ಶೇ 96.07), ಪಿ.ಕೆ. ಧನುಶ್ರೀ ಎಂಟನೇ ರ‍್ಯಾಂಕ್ (ಶೇ 96.07), ಎಂ.ಎ ಅರ್ಥಶಾಸ್ತ್ರ ವಿಭಾಗದಲ್ಲಿ ಆರ್. ಲಾವಣ್ಯ ಯಾದವ್ ಮೊದಲ ರ‍್ಯಾಂಕ್ (ಶೇ 78.75) ಹಾಗೂ ಎಸ್. ನಿಮಿಷಾ ಎರಡನೇ ರ‍್ಯಾಂಕ್ (ಶೇ 75.05) ಪಡೆದಿದ್ದಾರೆ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ಸಂತ ಜ್ಞಾನೇಶ್ವರ ಮಹಾರಾಜರ ಜನ್ಮೋತ್ಸವ, ಸಂತ ತುಕಾರಾಮ ಮಹಾರಾಜರ ಸದೇಹ ವೈಕುಂಠ ಗಮನದ ಮಹೋತ್ಸವ ಜ್ಞಾನೇಶ್ವರಿ ಪಾರಾಯಣ, ಆಯೋಜನೆ ಮತ್ತು ಸ್ಥಳ: ವಿಠೋಬಾ (ಪಾಂಡುರಂಗ) ದೇವಸ್ಥಾನ, ಬಸೆಟ್ಟಿಪೇಟೆ, ಬೆಳಿಗ್ಗೆ 6.30ರಿಂದ

'ಪರೀಕ್ಷೆ ಭಯ ಬೇಡ' ಒಂದು ಸಂವಾದ: ಭಾಗವಹಿಸುವವರು: ಡಾ.ಸಿ.ಆರ್. ಚಂದ್ರಶೇಖರ್, ಲತಾ, ಕೃಷ್ಣಪ್ಪ, ಡಾ. ವಸುಂಧರಾ ಭೂಪತಿ, ಆಯೋಜನೆ: ಯು ಭೂಪತಿ ಸ್ಮಾರಕ ಟ್ರಸ್ಟ್, ಸ್ಥಳ: ಸರ್ಕಾರಿ ಪ್ರೌಢಶಾಲೆ, ಪ್ಯಾಲೇಸ್ ಗುಟ್ಟಹಳ್ಳಿ, ಮಧ್ಯಾಹ್ನ 2

ಗಸ್ತು ಅರಣ್ಯ ಪಾಲಕರ ನೇರ ನೇಮಕಾತಿ ಆದೇಶ ಪ್ರತ ವಿತರಣೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಈಶ್ವರ ಬಿ. ಖಂಡ್ರೆ, ಆಯೋಜನೆ: ಅರಣ್ಯ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, **ವಿಧಾನಸೌಧ, ಸಂಜೆ 4**

ಪ್ರಸನ್ನ ಗಣಪತಿ ದೇವಸ್ಥಾನದ ವಾರ್ಷಿಕೋತ್ಸವ, ಕುಂಭಾಭಿಷೇಕ: ಕಲಶಗಳ ಮೆರವಣಿಗೆ, ಗುರು ಪ್ರಾರ್ಥನೆ, ಗಣಪತಿ ಪೂಜೆ, ಸಂಕಷ್ಟಹರ ಪೂಜೆ, ಮಹಾಮಂಗಳಾರತಿ, ಆಯೋಜನೆ: ಚಂದ್ರಾ ಬಡಾವಣೆ ನಿವಾಸಿಗಳ ಸಂಘ, ಸ್ಥಳ: ಪ್ರಸನ್ನ ಗಣಪತಿ ದೇವಸ್ಥಾನ, ಚಂದ್ರಾ ಬಡಾವಣೆ, ಸಂಜೆ 4ರಿಂದ

ಪುರಂದರದಾಸರ ಮತ್ತು ತ್ಯಾಗರಾಜರ ಆರಾಧನಾ ಮಹೋತ್ಸವ: ಉದ್ಘಾಟನೆ: ಟಿ.ಎಸ್. ಸತ್ಯವತಿ, ಕಾವ್ಯ ಗಾಯನ: ಎಂ.ಆರ್. ಸತ್ಯನಾರಾಯಣ, ವ್ಯಾಖ್ಯಾನ: ಕಬ್ಬಿನಾಲೆ ವಸಂತ ಭಾರದ್ವಾಜ್, ಕೊಳಲು: ಶಶಾಂಕ ಚಿನ್ನ, ಕರ್ನಾಟಕ ಸಂಗೀತ ಕಛೇರಿ: ಗಾಯನ: ಕಲಾವತಿ ಅವಧೂತ್, ಪಿಟೀಲು: ಬಿ.ಕೆ. ರಘು, ಮೃದಂಗ: ಎಚ್.ಎಸ್. ಸುಧೀಂದ್ರ, ಘಟ: ಓಂಕಾರ್ ರಾವ್, ಆಯೋಜನೆ: ಗಿರಿನಗರ ಸಂಗೀತ ಸಭಾ, ಸ್ಥಳ: ಅಕ್ಷರಂ ಸಭಾಂಗಣ, ರಾಘವೇಂದ್ರಸ್ವಾಮಿ ಮಠದ ಪಕ್ಕ, ಎಂಟನೇ ಕ್ರಾಸ್, ಎರಡನೇ ಹಂತ, ಗಿರಿನಗರ, ಸಂಜೆ 4.30ರಿಂದ

ಏಕತ್ವಂ ಹೋಳಿ ಮ್ಯೂಸಿಕ್ ಫೆಸ್ಟ್: ಗಾಯನ: ಕೀರ್ತನ್ ಹೊಳ್ಳ, ಶ್ರೀಹರಿ ಕುಲಕರ್ಣಿ, ಆಯೋಜನೆ: ಏಕತ್ವಂ, ಸ್ಥಳ: ಬೆಂಗಳೂರು ಗಾಯನ ಸಮಾಜ, ಸಂಜೆ 5ರಿಂದ

'ಬಭ್ರುವಾಹನ ಕಾಳಗ' ಯಕ್ಷಗಾನ ಪ್ರದರ್ಶನ: ಅತಿಥಿಗಳು: ಶುಭಾ ಧನಂಜಯ್, ಆರ್. ಚಂದ್ರಶೇಖರ್, ಎಚ್. ಮಂಜುನಾಥ್, ಆಯೋಜನೆ: ಯಕ್ಷಕಲಾ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

'ಪಾಲಕತ್ವದ ಜವಾಬ್ದಾರಿ' ಉಪನ್ಯಾಸ: ಗುರುರಾಜ ಕರಜಗಿ, ಆಯೋಜನೆ ಮತ್ತು ಸ್ಥಳ: ವಿದ್ಯಾ ಸಂಸ್ಕೃತಿ ಶಾಲೆ, 16ನೇ ಅಡ್ಡರಸ್ತೆ, ಗಾಯತ್ರಿದೇವಿ ಪಾರ್ಕ್ (ಎಕ್ಸ್‌ಟೆನ್ಶನ್), ವೈಯಾಲಿ ಕಾವಲ್, ಸಂಜೆ 6ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ನೇಮಕ

ರಾಜರಾಜೇಶ್ವರಿನಗರ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಕಾರ್ಯದರ್ಶಿ ಆರ್. ಪಿ.ಪ್ರಕಾಶ್ ಅವರನ್ನು ಯಶವಂತಪುರ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಮಂಡಲದ ಬಿಜೆಪಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಆರ್.ಪಿ.ಪ್ರಕಾಶ್

ಜಯರಾಮ್ ಗೌಡ

ಬೆಂಗಳೂರು ಉತ್ತರ ಜಿಲ್ಲೆಯ ಬಿಜೆಪಿ ಅಧ್ಯಕ್ಷ ಎಸ್.ಹರೀಶ್ ಅವರು ನೇಮಕ ಮಾಡಿ ಆದೇಶ ನೀಡಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಯತೀಶ್ ಕುಮಾರ್ ಕೆ.ಅವರನ್ನು ನೇಮಕ ಮಾಡಲಾಗಿದೆ.

ಯಶವಂತಪುರ ನಗರ ಮಂಡಲದ ಅಧ್ಯಕ್ಷರಾಗಿ ಜಯರಾಮೇಗೌಡ, ಪ್ರಧಾನ ಕಾರ್ಯದರ್ಶಿಗಳಾಗಿ ಜಯರಾಮ್ ಟಿ. ಮತ್ತು ಮುನಿಯಪ್ಪರೆಡ್ಡಿ ಅವರನ್ನು ನೇಮಕ ಮಾಡಲಾಗಿದೆ.

'ಕಿದ್ವಾಯಿ: ಸಲಹಾ ಪೆಟ್ಟಿಗೆಗೆ ದೂರು ಬಂದಿಲ್ಲ'

ಬೆಂಗಳೂರು: 'ಕ್ಯಾನ್ಸರ್ ಪೀಡಿತರಿಗೆ ಗುಣಮಟ್ಟದ ಚಿಕಿತ್ಸೆ ಒದಗಿಸಲಾಗುತ್ತಿದ್ದು, ವೈದ್ಯಕೀಯ ಪರೀಕ್ಷೆ ಹಾಗೂ ಚಿಕಿತ್ಸೆಗೆ ಸಂಬಂಧಿಸಿದಂತೆ ರೋಗಿಗಳು ಮತ್ತು ಅವರ ಸಹಾಯಕರಿಂದ ಸಂಸ್ಥೆಯ ಸಲಹಾ ಪೆಟ್ಟಿಗೆಗಳಿಗೆ ಯಾವುದೇ ದೂರು ಬಂದಿಲ್ಲ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಟಿ.ನವೀನ್ ತಿಳಿಸಿದ್ದಾರೆ.

ಮೆಮೊಗ್ರಫಿ ಸೇರಿ ವಿವಿಧ ಪರೀಕ್ಷೆಗಳಿಗೆ ಸಿಬ್ಬಂದಿ ಅಕ್ರಮವಾಗಿ ಹಣ ಪಡೆಯುತ್ತಿರುವುದು ಸೇರಿ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಕೆಯಾಗಿರುವ ವಿವಿಧ ದೂರುಗಳಿಗೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಿರುವ ಅವರು, 'ಸಂಸ್ಥೆಯಲ್ಲಿ ರೋಗಿಗಳಿಗೆ ಚಿಕಿತ್ಸೆ ಪ್ರಥಮ ಆದ್ಯತೆಯಾಗಿದೆ. ಆಧುನಿಕ ವೈದ್ಯಕೀಯ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲಾಗುತ್ತಿದೆ. ರೋಗಿಗಳ ಹಿತ ದೃಷ್ಟಿಯಿಂದ ಹಲವು ವೈದ್ಯಕೀಯ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಲೋಕಾಯುಕ್ತ ಸಂಸ್ಥೆಗೆ ಸಲ್ಲಿಕೆಯಾಗಿದೆ ಎನ್ನಲಾದ ಯಾವುದೇ ದೂರು ಗಮನಕ್ಕೆ ಬಂದಿಲ್ಲ' ಎಂದು ಹೇಳಿದ್ದಾರೆ.

'ಸಂಸ್ಥೆಯಲ್ಲಿ ಆರು ಸಲಹಾ ಹಾಗೂ ದೂರುಗಳ ಪೆಟ್ಟಿಗೆಯನ್ನು ಇರಿಸಲಾಗಿದೆ. ಈ ಪೆಟ್ಟಿಗೆಯಲ್ಲಿ ಯಾವುದೇ ದೂರಿನ ಹಾಗೂ ಸಲಹೆಯ ಪ್ರತಿಯಿಲ್ಲ. ಆದರೂ ಸಲ್ಲಿಕೆಯಾಗಿದೆ ಎನ್ನಲಾದ ದೂರುಗಳನ್ನು ಗಂಭೀರವಾಗಿ ಪರಿಗಣಿಸಿ, ಆಯಾ ವಿಭಾಗದ ಮುಖ್ಯಸ್ಥರ ಗಮನಕ್ಕೆ ತರಲಾಗಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ' ಎಂದು ತಿಳಿಸಿದ್ದಾರೆ.

ಕಣ್ಣಿನ ತಪಾಸಣೆ 8ಕ್ಕೆ

ಬೆಂಗಳೂರು: ಉದಯಭಾನು ಕಲಾಸಂಘದ ಆವರಣದಲ್ಲಿ ಇದೇ 8ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗಾಗಿ ಪರೀಕ್ಷಾ ಶಿಬಿರ ಹಾಗೂ ದಂತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಮಾಹಿತಿಗೆ: ಉದಯಭಾನು ಕಲಾಸಂಘ, ಗವಿಪುರ ಸಾಲು ಛತ್ರಗಳ ಎದುರು, ರಾಮಕೃಷ್ಣಮಠ ಬಡಾವಣೆ, ಕೆಂಪೇಗೌಡನಗರ, 080-26609343, 080-26601831.

ನಿಧನ ವಾರ್ತೆ

ಬಾ.ಹ.ಉಪೇಂದ್ರ

ಬೆಂಗಳೂರು: ಕನ್ನಡ ಪರ ಹೋರಾಟಗಾರ ಹಾಗೂ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ (ಎಚ್‌ಎಎಲ್) ನಿವೃತ್ತ ಡಿಜಿಎಂ ಬಾ.ಹ. ಉಪೇಂದ್ರ (66) ಅವರು ಗುರುವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಸಿಂಗಸಂದ್ರದಲ್ಲಿ ಇರುವ ನಿವಾಸದಲ್ಲಿ ಅವರು ಮೃತಪಟ್ಟಿದ್ದಾರೆ. ಗುರುವಾರ ಮಧ್ಯಾಹ್ನದ ಬಳಿಕ ಪಾರ್ಥಿವ ಶರೀರವನ್ನು ಅವರ ಹುಟ್ಟೂರಾದ ತುಮಕೂರಿಗೆ ಕೊಂಡೊಯ್ದು, ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮೃತರ ಇಚ್ಛೆಯಂತೆ ಕಣ್ಣುಗಳನ್ನು ದಾನವಾಗಿ ನೀಡಲಾಗಿದ್ದು, ಮುತ್ತಸಂದ್ರದಲ್ಲಿರುವ ಅವರ ತೋಟದಲ್ಲಿ ಶನಿವಾರ ಅಂತ್ಯಸಂಸ್ಕಾರ ನಡೆಯಲಿದೆ. ಮೃತರಿಗೆ ಪತ್ನಿ ಶಾಂತಕುಮಾರಿ, ಪುತ್ರ ಚೇತನ್ ಇದ್ದಾರೆ.

ಎಂ. ಚಿದಾನಂದಮೂರ್ತಿ ಅವರ ನೇತೃತ್ವದಲ್ಲಿ ಸಾಹಿತಿಗಳು, ಕಲಾವಿದರ ಬಳಗವು 1986ಲ್ಲಿ ನಡೆಸಿದ 'ಕನ್ನಡ ದೂರದರ್ಶನ' ಹೋರಾಟದ ಮೂಲಕ ಬಾ.ಹ. ಉಪೇಂದ್ರ ಅವರು ಕನ್ನಡ ಹೋರಾಟಕ್ಕೆ ಪ್ರವೇಶಿಸಿದ್ದರು. ಬಳಿಕ ಎಲ್ಲ ಕನ್ನಡ ಪರ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಕನ್ನಡ ಶಕ್ತಿ ಕೇಂದ್ರದ ಸಹ ಕಾರ್ಯದರ್ಶಿ, ಕನ್ನಡ ಗೆಳೆಯರ ಬಳಗದ ಸಂಚಾಲಕರಾಗಿ ಕಾರ್ಯನಿರ್ವಹಿಸಿದ್ದರು.

ಹಲವು ತಾಂತ್ರಿಕ ಪುಸ್ತಕಗಳನ್ನು ಅವರು ಕನ್ನಡಕ್ಕೆ ತಂದಿದ್ದರು. 'ಕನ್ನಡ ಕಿಸೆಗನ್ನಡಿ' ಕೃತಿಯನ್ನು ಸಂಪಾದಿಸಿದ್ದರು.

ಸುಧಾ, ಮಯೂರ ಓದಿರಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬಿಡಿಎ/ಕಾಅ/ವಯೋವಿ-1/ಟೆಂಡರ್/ಟಿ-644/2025-26 ದಿನಾಂಕ: 05.03.2026

ಅಲ್ಪಾವಧಿ ಟೆಂಡರ್‌ಗಳಿಗೆ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಸತಿ ಯೋಜನೆ ಕಾಮಗಾರಿಗಳಿಗೆ (ಇಂಡೆಂಟ್ ಸಂಖ್ಯೆ: ಬಿಡಿಎ/2025-26/ಬಿಡಿ/ವರ್ಕ್-ಇಂಡೆಂಟ್224) ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಟೆಂಡರ್ ವೇಳಾಪಟ್ಟಿ: (1) ಇ-ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜು ಲಭ್ಯವಿರುವ **ದಿನಾಂಕ: 06.03.2026ರಿಂದ.** (2) ಟೆಂಡರ್ ಪ್ರೀ-ಬಿಡ್ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ:**09.03.2026, ಬೆಳಿಗ್ಗೆ 11.00 ಗಂಟೆವರೆಗೆ.** (3) ಟೆಂಡರ್ ಪ್ರೀ-ಬಿಡ್ ಸಭೆಯ ದಿನಾಂಕ ಮತ್ತು ಸಮಯ: **10.03.2026, ಮಧ್ಯಾಹ್ನ 3.00 ಗಂಟೆಗೆ.** (4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **20.03.2026, ಸಂಜೆ 4.00 ಗಂಟೆವರೆಗೆ.** (5) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 23.03.2026, ಸಂಜೆ 4.30 ಗಂಟೆಯ ನಂತರ.**

ಆಸಕ್ತಿಯುಳ್ಳ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು **https://kppp.karnataka.gov.in** ಮೂಲಕ ಅಥವಾ ಬಿಡಿಎಯ ವಸತಿ ಯೋಜನೆ ವಿಭಾಗ-1ನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಿ ಪಡೆಯಬಹುದು.

ಸೂಚನೆ: ಯಾವುದೇ ಕಾರಣಕ್ಕಾಗಿ ಇ-ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡುವಲ್ಲಿ ವಿಳಂಬವಾದರೆ, ಪರಿಷ್ಕೃತ/ಮಾರ್ಪಡಿಸಿದ ಟೆಂಡರ್ ವೇಳಾಪಟ್ಟಿಯನ್ನು ಇ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ವಯೋವಿ-1, ಬೆಂಅಪ್ರಾ, ಬೆಂಗಳೂರು.

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು - 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರ ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರ ಕಳೆದಿವೆ ಎಂದು ಷೇರುದಾರ ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/- ರಂತೆ ನಕಲಿ ಷೇರು ಪ್ರಮಾಣಪತ್ರ ನೀಡುವಂತೆ ಷೇರುದಾರ ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.2/-)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರು ಪ್ರಮಾಣಪತ್ರ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
S005165	500	407	13580586 - 13581085	ಸತ್ಯೇನ್ ಮಡ್ಕೈಕರ್

ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಸ್ವೀಕರಿಸದಿದ್ದಲ್ಲಿ, ಕಂಪನಿಯು ದಿನಾಂಕ 25ನೇ ಜನವರಿ 2022ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/P/CIR/2022/8ರಂತೆ ದೃಢೀಕರಣ ಪತ್ರವನ್ನು ನೀಡಲು ಮುಂದುವರೆಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: 05-03-2026
ತಾನ್ಯಾ ಸನೀಶ್
ಕಂಪನಿ ಕಾರ್ಯದರ್ಶಿ

TIMKEN
ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು-560 100 ದೂರವಾಣಿ : 080 41362000
ಇ-ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಸೂಚನೆ

ಕಂಪನಿಯು 2013 (ಸದರಿ ಕಾಯ್ದೆ) ರ ಕಂಪನಿ ಕಾಯ್ದೆಯಲ್ಲಿ ಅನ್ವಯಿಸುವ ಎಲ್ಲಾ ನಿಬಂಧನೆಗಳ ಪ್ರಕಾರ ಹಾಗೂ ಇದರ ನಿಯಮಾನುಸಾರ ಮತ್ತು ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ನಿಬಂಧನೆ 2015 (ಲಿಸ್ಟಿಂಗ್ ನಿಬಂಧನೆ) ಅನ್ನು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದ ('ಎಂಸಿಎ') ಹಾಗೂ ಸೆಕ್ಯೊರಿಟಿಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ ('ಸೆಬಿ') ಅನ್ವಯಿಸುವ ಸುತ್ತೋಲೆಗಳಿಗೆ ಅನುಗುಣವಾಗಿ ಕೆಳಕಂಡ ಐಟಂಗಳಿಗೆ ಎಲೆಕ್ಟ್ರಾನಿಕ್ ವಿಧಾನದಲ್ಲಿ ಅಂದರೆ ರಿಮೋಟ್ ಇ-ಮತ ಸೌಲಭ್ಯದೊಂದಿಗೆ ಪೋಸ್ಟಲ್ ಬ್ಯಾಲೆಟ್ ಮೂಲಕ ಸದಸ್ಯರುಗಳ ಅನುಮತಿಯನ್ನು ಪಡೆಯಲಾಗುವುದು ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

1. **ಮಿಸ್ಟರ್.ಸೌಮಿತ್ರ ಹಜ್‌ರಾ (DIN: 02293182) ಅವರನ್ನು ಕಂಪನಿಯ ಸ್ವತಂತ್ರ ನಿರ್ದೇಶಕರನ್ನಾಗಿ ಮರು-ನೇಮಕಾತಿ: ವಿಶೇಷ ನಿರ್ಣಯ**
2. **ಮಿಸ್ಟರ್.ಮೈಖೇಲ್ ಡಿಸೆನ್ಸಾ (DIN: 10644441) ಅವರನ್ನು ಕಂಪನಿಯ ಸ್ವತಂತ್ರ ನಿರ್ದೇಶಕರನ್ನಾಗಿ ಮರು-ನೇಮಕಾತಿ: ಸಾಮಾನ್ಯ ನಿರ್ಣಯ**

ಪೋಸ್ಟಲ್ ಬ್ಯಾಲೆಟ್‌ಗಳನ್ನು ಕಂಪನಿ/ಭಾಗವಹಿಸುವ (ವವರ) ಡಿಪಾಸಿಟರ್ / ರಿಜಿಸ್ಟ್ರಾರ್ ಆ್ಯಂಡ್ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಗಳಲ್ಲಿ ತಮ್ಮ ಇ-ಮೇಲ್ ಐಡಿಗಳನ್ನು ನೋಂದಾಯಿಸಿದ ಎಲ್ಲಾ ಸದಸ್ಯರಿಗೆ ಇ-ಮೇಲ್ ಮೂಲಕ ಕಳುಹಿಸಲಾಗುವುದು. ಪೋಸ್ಟಲ್ ಬ್ಯಾಲೆಟ್ ಸೂಚನೆಯು ಕಂಪನಿಯ ವೆಬ್‌ಸೈಟ್ https://www.timken.com/en-in/investors/statutory-compliances/ ನಲ್ಲಿ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಅಂದರೆ ಕಂಪನಿಯ ಷೇರುಗಳ ಪಟ್ಟಿ ಇರುವಲ್ಲಿ ಲಭ್ಯವಿದೆ. ಪೋಸ್ಟಲ್ ಬ್ಯಾಲೆಟ್ ಸೂಚನೆಯು ನ್ಯಾಷನಲ್ ಸೆಕ್ಯೊರಿಟಿಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ವೆಬ್‌ಸೈಟ್ www.evoting.nsdl.com ನಲ್ಲಿ ಸಹ ಲಭ್ಯವಿರುವುದು.

ಕಂಪನಿಯು ಎನ್‌ಎಸ್‌ಡಿಎಲ್‌ನೊಂದಿಗೆ ರಿಮೋಟ್ ಇ-ಮತ ಚಲಾಯಿಸಲು ವ್ಯವಸ್ಥೆ ಮಾಡಿದೆ. ರಿಮೋಟ್ ಇ-ಮತ ಮೂಲಕ ಮತ ಚಲಾವಣೆಯ ವಿವರವದ ಪ್ರಕ್ರಿಯು ಪೋಸ್ಟಲ್ ಬ್ಯಾಲೆಟ್ ಸೂಚನೆಯಲ್ಲಿ ಲಭ್ಯವಿರುವುದು. ಭೌತಿಕ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಕಟ್ಟ ಕಡೆಯ ದಿನವಾದ 27 ಫೆಬ್ರವರಿ, 2026 ರಂದು ಕಂಪನಿಯ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ತಮ್ಮ ಮತವನ್ನು ಎಲೆಕ್ಟ್ರಾನಿಕ್ ಮೂಲಕ ಚಲಾಯಿಸಬಹುದು. ಸದಸ್ಯರ ಮತ ಚಲಾವಣೆಯ ಹಕ್ಕು ತಿಳಿಸಲಾದ ಕಟ್ಟ ಕಡೆಯ ದಿನಾಂಕದಂದು ಕಂಪನಿಯ ಪಾವತಿಸಿದ ಈಕ್ವಿಟಿ ಷೇರು ಬಂಡವಾಳದಲ್ಲಿ ತಾವು ಹೊಂದಿರುವ ಷೇರುಗಳ ಕಂಪನಿಯು ಪಾವತಿಸಿದ ಈಕ್ವಿಟಿ ಷೇರು ಬಂಡವಾಳದ ಪ್ರಮಾಣಕ್ಕೆ ಅನುಗುಣವಾಗಿರುವುದು.

ರಿಮೋಟ್ ಇ-ಮತ ಚಲಾವಣೆಯು 2026, 6 ನೇ ಮಾರ್ಚ್ ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗುವುದು ಹಾಗೂ 2026, 4 ನೇ ಏಪ್ರಿಲ್ ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯಗೊಳ್ಳುವುದು. ನಂತರ ರಿಮೋಟ್ ಇ-ಮತ ವಿಧಾನವನ್ನು ನಿಷ್ಕ್ರಿಯಗೊಳಿಸಲಾಗುವುದು. ನಿಬಂಧನೆಗಳು,

ಅನುಮತಿ ಪಡೆದಿದ್ದಲ್ಲಿ, ರಿಮೋಟ್ ಇ-ಮತ ಚಲಾವಣೆಯ ಕೊನೆಯ ದಿನಾಂಕದಂದು ಪರಿಗಣಿಸಲಾಗುವುದು. ಯಾವ ವ್ಯಕ್ತಿಯ ಹೆಸರು ಕಟ್ಟ ಕಡೆಯ ದಿನವಾದ 27 ಫೆಬ್ರವರಿ 2026 ರಂದು ಸದಸ್ಯರುಗಳ ರಿಜಿಸ್ಟರ್‌ನಲ್ಲಿ ಅಥವಾ ಡಿಪಾಸಿಟರಿಗಳು ನಿರ್ವಹಿಸುವ ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ದಾಖಲೆಯಾಗಿದ್ದು ಇವರಿಗೆ ರಿಮೋಟ್ ಇ-ಮತ ಚಲಾವಣೆ ಸೌಲಭ್ಯದ ಅವಕಾಶ ನೀಡಲಾಗುವುದು.

ಮಿಸ್ಟರ್. ವಿ.ಶ್ರೀಧರನ್ ವಿಫಲರಾದ ಕಾರಣ, ಮಿಸ್ಟರ್. ಪ್ರದೀಪ್ ಬಿ. ಕುಲಕರ್ಣಿ, ಆಂತರಿಕ ಕಂಪನಿ ಕಾರ್ಯದರ್ಶಿ, ಇವರನ್ನು ರಿಮೋಟ್ ಇ-ಮತ ಚಲಾವಣೆಯನ್ನು ನ್ಯಾಯ ಸಮ್ಮತವಾಗಿ ಮತ್ತು ಪಾರದರ್ಶಕತೆ ವಿಧಾನದಲ್ಲಿ ಪರಿಶೀಲಿಸುವ ಸಲುವಾಗಿ ರಿಮೋಟ್ ಇ-ಮತ ಚಲಾವಣೆಯ ಪರಿಶೀಲಕರನ್ನಾಗಿ ನೇಮಿಸಲಾಗಿದೆ. ರಿಮೋಟ್ ಇ-ಮತ ಚಲಾಣೆಯ ಫಲಿತಾಂಶವನ್ನು ಇ-ಮತ ಚಲಾವಣೆ ಮುಕ್ತಾಯದ ನಂತರ ಎರಡು ಕೆಲಸ ದಿನಗಳಿಗಿಂತ ಅಧಿಕವಾಗದೆ ಕಂಪನಿಯ ವೆಬ್‌ಸೈಟ್ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಪ್ರದರ್ಶಿಸಲಾಗುವುದು.

ಯಾವುದೇ ವಿಚಾರಣೆಗೆ ಅಥವಾ ಇ-ಮತ ಚಲಾವಣೆಯ ಬಗ್ಗೆ ಸಮಸ್ಯೆಗಳಿಗೆ ಆಗಿಂದಾಗೆ ಕೇಳಲ್ಪಡುವ ಪ್ರಶ್ನೆ ("ಎಫ್‌ಎಕ್ಯೂ") ಗಳನ್ನು ಗಮನಿಸಿ ಮತ್ತು www.evoting.nsdl.com ನ ಡೌನ್ ಲೋಡಿಂಗ್ ಸೆಕ್ಷನಿನಲ್ಲಿ ಲಭ್ಯವಿರುವ ಇ-ಮತ ಮ್ಯಾನ್ಯುಯಲ್ ಅನ್ನು ಉಲ್ಲೇಖಿಸಬಹುದು ಅಥವಾ: 022-48867000 ಗೆ ಕರೆ ಮಾಡಬಹುದು ಅಥವಾ evoting@nsdl.com ಗೆ ಮನವಿ ಕಳುಹಿಸಬಹುದು.

ಸೂಚನೆಯನ್ನು ಡೌನ್‌ಲೋಡ್ ಮಾಡಲು ಕ್ಯೂಆರ್ ಕೋಡ್

ಬೆಂಗಳೂರು
5 ಮಾರ್ಚ್, 2026
ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/- ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ-ಕಾಂಪ್ಲಯನ್ಸ್
ಸದಸ್ಯತ್ವ ಸಂಖ್ಯೆ : ಎ23953

INSTITUTE FOR SOCIAL AND ECONOMIC CHANGE
Dr. V.K.R.V. Rao Road, Nagarabhavi,
Bangalore - 560 072. India

ISEC invites Short Term Tender from reputed authorised vendors for Supply of Desktop Computers. For more details visit our website: **www.isec.ac.in.** last date for submitting tender is **20th March 2026.**

DIPR/CP/6039/SHIRDI SAI/2025-26
Sd/-
REGISTRAR

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

ಟೆಂಡರು ಸೂಚನೆ ಸಂ.: B/TRD.2025-26/34 ದಿನಾಂಕ: 26.02.2026

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ಮಂಗಗಳು ಇರುವ ಸ್ಥಳಗಳಲ್ಲಿ ಮಂಗಗಳು ಓಹೆಚ್‌ಇ ಮಾಸ್ಟ್/ಸ್ಟ್ರಕ್ಚರ್‌ಗಳ ಮೇಲೆ ಹತ್ತುವುದನ್ನು ನಿರೋಧಿಸಲು ಮಂಗಗಳನ್ನು ನಿಷೇಧಿಸುವ ಉಪಕರಣವನ್ನು ಅಳವಡಿಸುವ ವ್ಯವಸ್ಥೆ.	ರೂ. 52,56,677.75

ಟೆಂಡರು ಸೂಚನೆ ಸಂ.: B/TRD.2025-26/42 ದಿನಾಂಕ: 26.02.2026

ಕಾಮಗಾರಿಯ ವಿವರ	ಅಂದಾಜು ಮೌಲ್ಯ
[1] ಪಿಎಫ್ 7&8 ರ ಲೋ ಹೆಚ್‌ಟಿ ಶೆಲ್ಟರ್ ಅನ್ನು ಬದಲಾಯಿಸುವ ಸಂಬಂಧ ಓಹೆಚ್‌ಇ ಮೇಲಿನ ಮಾರ್ಪಾಡುಗಳು, ಎರಡನೇ ಪ್ರವೇಶ ಕಟ್ಟಡ ಮತ್ತು ಪ್ಲಾಟ್‌ಫಾರ್ಮ್ ಪ್ರವೇಶದ್ವಾರದ ನಡುವಿನ ತೆರೆದ ಪ್ರದೇಶದಲ್ಲಿ ಗ್ರಾನೈಟ್ ನೆಲಹಾಸು ಸೇರಿದಂತೆ ಆಶ್ರಯವನ್ನು ಒದಗಿಸುವುದು [2] ಬೆಂಗಳೂರಿನಲ್ಲಿ ಎಸಿ ಲೋಕೋ ಟ್ರಿಪ್ ಶೆಡ್‌ನ ವರ್ಧನೆಗೆ ಸಂಬಂಧಿಸಿದಂತೆ ಓಹೆಚ್‌ಇ ಮಾರ್ಪಾಡುಗಳು. [3] ಬೆಂಗಳೂರಿನ ಯಾರ್ಡ್‌ನಲ್ಲಿ ಪಿಟ್ ಲೈನ್ ನಂ. 1 ಗಾಗಿ ಓಹೆಚ್‌ಇ ಮಾರ್ಪಾಡುಗಳು. [4] ಬೆಂಗಳೂರಿನ ಯಾರ್ಡ್‌ನಲ್ಲಿ ಟ್ರಾಮ್‌ವೇ ಓಹೆಚ್‌ಇ ಅನ್ನು ಸಾಂಪ್ರದಾಯಿಕಕ್ಕೆ ಪರಿವರ್ತಿಸುವುದು [5] ಬೆಂಗಳೂರಿನ ಕಡೆಗೆ 650 ಮೀ. ಶಂಟಿಂಗ್ ನೆಕ್‌ನೊಂದಿಗೆ ಪ್ರಸ್ತಾವಿತ ರೋಡ್-06 (686 ಮೀ ಸ್ಪರ್ ಲೈನ್) ಅನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಬಿಐಡಿಓಹೆಚ್‌ಇ ಮಾರ್ಪಾಡುಗಳು ರೋಡ್-5 ರ ಪಕ್ಕದಲ್ಲಿರುವ ಅಸ್ತಿತ್ವದಲ್ಲಿರುವ ಸರಕುಗಳ ಇಳಿಸುವಿಕೆಯ ವೇದಿಕೆಯನ್ನು ಸರಿಯಾದ ರೀತಿಯಲ್ಲಿ ಕಿತ್ತುಹಾಕುವುದು [6] ಬೆಂಗಳೂರು-ಯೆಲಿಯೂರು ವಿಭಾಗದ ಕೃಷ್ಣದೇವರಾಯ ಹಾಲ್ಟ್ ನಿಲ್ದಾಣದಲ್ಲಿ 150 ಮೀ ಉದ್ದ ಮತ್ತು 5 ಮೀ ಅಗಲಕ್ಕೆ ಪಿಎಫ್-1 ಮತ್ತು ಪಿಎಫ್-2 ರ ಪ್ರಸ್ತಾವಿತ ವಿಸ್ತರಣೆಗೆ ಸಂಬಂಧಿಸಿದಂತೆ ಓಹೆಚ್‌ಇ ಮಾರ್ಪಾಡು [7] ವೈ ಟಿಎಸ್ ಎಸ್ ಡೌನ್ ಲೈನ್ ಪಿಟಿಎಫ್‌ಇ ಅನ್ನು ಬದಲಾಯಿಸುವ ಓಹೆಚ್‌ಇ ಮಾರ್ಪಾಡು.	ರೂ. 3,48,87,904.24

ಮೇಲಿನ ಟೆಂಡರುಗಳಿಗೆ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **20.03.2026, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/955/AAF/PRB/SWR/2025-26 ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ ಟಿಆರ್‌ಡಿ / ಬೆಂಗಳೂರು

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. **RailOne** ಭಾರತೀಯ ರೈಲ್ವೆಯ ಆಲ್-ಇನ್-ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್ ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, **PNR** ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಆರ್ಡರ್ ಮಾಡಬಹುದು ಮತ್ತು ತಮ್ಮ ಬೆರಳ ತುದಿಯಲ್ಲಿ ಇನ್ನೂ ಅನೇಕ ಸೇವೆಗಳನ್ನು ಪ್ರವೇಶಿಸಬಹುದು. **RailOne** ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಗಳನ್ನು ಬಳಸಿ ಹಾಗೂ 3% ವರೆಗೆ ರಿಯಾಯಿತಿಯನ್ನು ಆನಂದಿಸಿ.

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂಖ್ಯೆ: [illegible] ದಿನಾಂಕ: 27.02.2026

ಕ್ರ. ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	[illegible]	ರೂ. 57,82,969.30
2	[illegible]	ರೂ. 1,29,43,721.00
3	[illegible]	ರೂ. 1,28,55,922.00

ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 30-03-2026 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಪಿಯುಬಿ/962/[illegible]/2025-26

RailOne [illegible]

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂಖ್ಯೆ: [illegible]/172/2026 ದಿನಾಂಕ: 27.02.2026

ಕ್ರ. ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	[illegible]	ರೂ. 782,76,56,049/-

ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 13-05-2026 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಪಿಯುಬಿ/961/[illegible]/2025-26

RailOne [illegible]

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಸೋಮವಾರಪೇಟೆ ಹೋಬಳಿ, ಬೇಲೂರು ಬಸವನಹಳ್ಳಿ ಗ್ರಾಮದಲ್ಲಿ ನೆಲೆಗೊಂಡಿರುವ 12.20 ಎಕರೆ ವಿಸ್ತೀರ್ಣದ ಭೂಮಾಲೀಕರ (ಒಟ್ಟಾರೆಯಾಗಿ **"ಮಾಲೀಕರು"**) ಸ್ವತ್ತಿನ ಶೀರ್ಷಿಕೆಯನ್ನು ನಾವು ಪರಿಶೀಲಿಸುತ್ತಿದ್ದೇವೆ. ಕೆಳ ಷೆಡ್ಯೂಲ್‌ನಲ್ಲಿ ಸಂಪೂರ್ಣವಾಗಿ ವಿವರಿಸಲಾಗಿರುವ ಸ್ವತ್ತನ್ನು ಮತ್ತು ಇನ್ನು ಮುಂದೆ ಷೆಡ್ಯೂಲ್ ಸ್ವತ್ತು ಎಂದು ಕರೆಯಲಾಗುತ್ತದೆ.

ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಅಥವಾ ಮಾಲೀಕರ ವಿರುದ್ಧ ಯಾವುದೇ ಹಕ್ಕು, ಶೀರ್ಷಿಕೆ ಅಥವಾ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಯು ಈ ಪ್ರಕಟಣೆ ಪ್ರಕಟವಾದ **ಏಳು (7) ದಿನಗಳ** ಒಳಗೆ ಅದರ ಪೂರಕ ದಾಖಲೆ ಪುರಾವೆಗಳೊಂದಿಗೆ ಕೆಳಗೆ ಸಹಿ ಮಾಡಿದವರಿಗೆ ತಮ್ಮ ಆಕ್ಷೇಪಣೆಗಳನ್ನು ತಿಳಿಸಬೇಕು. ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ ಏಳು (7) ದಿನಗಳ ಒಳಗೆ ನಮಗೆ ಅಂತಹ ಯಾವುದೇ ಸೂಚನೆ ಬರದಿದ್ದರೆ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮಾಲೀಕರ ಶೀರ್ಷಿಕೆ ಸ್ಪಷ್ಟವಾಗಿದೆ, ಮಾರುಕಟ್ಟೆಗೆ ಅರ್ಹವಾಗಿದೆ ಮತ್ತು ಯಾವುದೇ ರೀತಿಯ ಹೊರೆಗಳಿಂದ ಮುಕ್ತವಾಗಿದೆ ಮತ್ತು ಷೆಡ್ಯೂಲ್ ಸ್ವತ್ತು ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಯಾವುದೇ ರೀತಿಯ ಹಕ್ಕು, ಶೀರ್ಷಿಕೆ ಅಥವಾ ಆಸಕ್ತಿ ಇಲ್ಲ ಎಂದು ಭಾವಿಸಲಾಗುತ್ತದೆ. ಈ ಪ್ರಕಟಣೆಯನ್ನು ಪ್ರಕಟಿಸಿದ ದಿನಾಂಕದಿಂದ ಏಳು (7) ದಿನಗಳ ನಂತರ ಸ್ವೀಕರಿಸಿದ ಹಕ್ಕುಗಳು ಅಥವಾ ಆಪಾದಿತ ಹಿತಾಸಕ್ತಿ ಯಾವುದಾದರೂ ಇದ್ದರೆ, ಎಲ್ಲಾ ಉದ್ದೇಶಗಳು ಮತ್ತು ಉದ್ದೇಶಗಳಿಗಾಗಿ ಮನ್ನಾ ಮಾಡಲಾಗಿದೆ ಮತ್ತು ನಿರ್ಲಕ್ಷಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ನಮ್ಮ ಕಕ್ಷೀದಾರರ ಮೇಲೆ ಬದ್ಧವಾಗಿರುವುದಿಲ್ಲ.

ಷೆಡ್ಯೂಲ್

ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲೂಕು, ಸೋಮವಾರಪೇಟೆ ಹೋಬಳಿ, ಬೇಲೂರು ಬಸವನಹಳ್ಳಿ ಗ್ರಾಮದಲ್ಲಿರುವ ರೆಡೀಮ್ಡ್ ಸಾಗು ಜಮೀನಿನ ವಿವರ ಈ ಕೆಳಕಂಡತಿವೆ.

ಕ್ರ. ಸಂ.	ಸರ್ವೇ ನಂ.	ವಿಸ್ತೀರ್ಣ (ಎಕರೆಗಳು)	ಮಾಲೀಕರು	ಚಕ್ಕುಬಂದಿ
1	52/3	5.80	1) ಐ.ಕೆ. ಮುದ್ದಪ್ಪ ಬಿನ್ ಐ.ಪಿ. ಕಾಳಪ್ಪ ಮತ್ತು 2) ಕೆ. ನವ್ಯಾ ದೇವಯ್ಯ ಕೋಂ ಐ.ಕೆ. ಮುದಪ್ಪ ಇಬ್ಬರ ವಾಸ: ನಂ. 37, ಕಾವೇರಿ, 1ನೇ ಮುಖ್ಯ ರಸ್ತೆ, 4ನೇ ಹಂತ, ಟಿ.ಕೆ. ಲೇಔಟ್, ಸರಸ್ವತಿಪುರಂ ಮೈಸೂರು-9	ಪೂರ್ವಕ್ಕೆ: ಸರ್ವೆ ನಂ. 53; ಪಶ್ಚಿಮಕ್ಕೆ: ಸರ್ವೆ ನಂ. 2/14 ಮತ್ತು 52/1; ಉತ್ತರಕ್ಕೆ: ಸರ್ವೆ ನಂ. 2/36, 52/1 ಮತ್ತು 2/63; ದಕ್ಷಿಣಕ್ಕೆ: ಸರ್ವೆ ನಂ. 52/2
2	2/72	6.40	ನವ್ಯಾ ದೇವಯ್ಯ ಕೋಂ.ಮುದ್ದಪ್ಪ ಐ.ಕೆ. (ಕೆ.ಎ. ದೇವಯ್ಯ ಅವರ ಮಗಳು) ವಾಸ: #37, ಕಾವೇರಿ, 1ನೇ ಮುಖ್ಯರಸ್ತೆ, 4ನೇ ಹಂತ, ಟಿ.ಕೆ. ಲೇಔಟ್, ಸರಸ್ವತಿಪುರಂ, ಮೈಸೂರು-9	ಪೂರ್ವಕ್ಕೆ: ಸರ್ವೆ ನಂ. 2/14; ಪಶ್ಚಿಮಕ್ಕೆ: ಸರ್ವೆ ನಂ. 2/63; ಉತ್ತರಕ್ಕೆ: ಹಳ್ಳಿ ರಸ್ತೆ; ದಕ್ಷಿಣಕ್ಕೆ: ಸರ್ವೆ ನಂ. 2/14, 53, 52/2

ಮಾಲಿನಿ ರಾಜು
AZB & ಪಾರ್ಟ್ನರ್ಸ್
ಲೇವಲ್ 5, 37 ಕನ್ನಿಂಗ್ಹ್ಯಾಮ್, ಕನ್ನಿಂಗ್ಹ್ಯಾಮ್ ರಸ್ತೆ, ಬೆಂಗಳೂರು-560 052
Email: malini.raju@azbpartners.com Tel: + 91-8042400500
ದಿನಾಂಕ: 06.03.2026 ಸ್ಥಳ: ಬೆಂಗಳೂರು

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816-2281105 Email:eemitmk@gmail.com
ಐ.ಎಫ್.ಟಿ ಸಂಖ್ಯೆ.26/2025-26 KW-4 & KW-2 (ದ್ವಿ ಲಕೋಟೆ)
ದಿನಾಂಕ: 03.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಲೆಕ್ಕ ಶೀರ್ಷಿಕೆ: 4702- ವಿಶೇಷ ಘಟಕ ಯೋಜನೆ ಮತ್ತು 4702-ಗಿರಿಜನ ಉಪಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆ.ಪಿ.ಪಿ ಪೋರ್ಟಲ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 26/2025-26, ದಿ: 03-03-2026 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:
1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 03-03-2026 ರಂದು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2. ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ: 09-03-2026 ಬೆಳ್ಳಗ್ಗೆ 11.30 ಗಂಟೆಯವರೆಗೆ ಸ್ವೀಕರಿಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನ ಮೂಲಕ ದಿನಾಂಕ: 11-03-2026 ಸಾಯಂಕಾಲ 5.00ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು ದಿನಾಂಕ: 12-03-2026 ಸಾಯಂಕಾಲ 5.05 ಗಂಟೆಗೆ ತೆರೆಯಲಾಗುವುದು. 5. ಆರ್ಥಿಕ ಬಿಡ್ಡನ್ನು ದಿನಾಂಕ: 13-03-2026 ಸಾಯಂಕಾಲ 5.10 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.
DIPR/TUM/476/KSMCA/2025-26

ಪ್ಯಾಕ್ ಹೌಸ್ ಕೊಠಡಿಗೆ ಬೀಗಮುದ್ರೆ

ಹಣ್ಣು, ತರಕಾರಿ ಬದಲು ಅನುಮತಿ ಇಲ್ಲದೆ ರೆಡಿಮೇಡ್ ಬಟ್ಟೆ ಸಂಗ್ರಹ ಪತ್ತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಒಪ್ಪಂದದಂತೆ ಬಾಡಿಗೆ ಪಾವತಿಸದ ಖಾಸಗಿ ಸಂಸ್ಥೆ
- ಹಲವು ಬಾರಿ ನೋಟಿಸ್ ನೀಡಿದ್ದರೂ ಸ್ಪಂದನೆಯಿಲ್ಲ
- ಬ್ಯಾಂಕ್ ಗ್ಯಾರಂಟಿ ಮೊತ್ತ ಮುಟ್ಟುಗೋಲು

ದೇವನಹಳ್ಳಿ: ಹಣ್ಣು ಮತ್ತು ತರಕಾರಿ ಸಂಸ್ಕರಣೆ ಹಾಗೂ ರಫ್ತು ಉದ್ದೇಶಕ್ಕಾಗಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಆರಂಭಿಸಿರುವ ಪೂಜನಹಳ್ಳಿ ಪ್ಯಾಕ್ ಹೌಸ್‌ನಲ್ಲಿ ಅನುಮತಿ ಇಲ್ಲದೆ ರೆಡಿಮೇಡ್ ಬಟ್ಟೆ ಸಂಗ್ರಹಿಸಿರುವುದು ಪತ್ತೆಯಾಗಿದ್ದು, ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಘಟಕದ ಒಂದು ಹಾಲ್‌ಗೆ ಬೀಗ ಜಡಿದು ಸೀಲ್ ಹಾಕಿದ್ದಾರೆ.

ಪೂಜನಹಳ್ಳಿ ತೋಟಗಾರಿಕಾ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ (ಕೆಪೆಕ್) ಸಮಗ್ರ ಶೀತಲ ಸರಪಳಿ ಘಟಕ ಸ್ಥಾಪಿಸಿದೆ. ಫಿಜಾ ಗ್ಲೋಬಲ್ ಆಗ್ರೋ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಜೂನ್ 2024ರಲ್ಲಿ ಈ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆ ವಹಿಸಲಾಗಿತ್ತು.

ಆದರೆ, ಸಂಸ್ಥೆಯು ಘಟಕವನ್ನು ಸಮರ್ಪಕವಾಗಿ ನಿರ್ವಹಿಸುತ್ತಿರಲಿಲ್ಲ ಮತ್ತು ಒಪ್ಪಂದದ ಪ್ರಕಾರ ಪಾವತಿಸಬೇಕಾದ ಬಾಡಿಗೆಯನ್ನೂ ಪಾವತಿಸಿಲ್ಲ ಎಂದು ಕೆಪೆಕ್ ತಿಳಿಸಿದೆ. ಈ ಸಂಬಂಧ ಹಲವು ಬಾರಿ ನೋಟಿಸ್ ನೀಡಲಾಗಿದ್ದರೂ ಸಂಸ್ಥೆ ಸ್ಪಂದಿಸದ ಹಿನ್ನೆಲೆಯಲ್ಲಿ ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಜೊತೆಗೆ ಒಪ್ಪಂದ ಉಲ್ಲಂಘನೆಯ ಕಾರಣಕ್ಕೆ ಸಂಸ್ಥೆಗೆ ಟರ್ಮಿನೇಷನ್ ಆದೇಶ ನೀಡಲಾಗಿದೆ. ಆದರೆ ಘಟಕವನ್ನು ಕೆಪೆಕ್‌ಗೆ ಇನ್ನೂ ಹಸ್ತಾಂತರಿಸಿಲ್ಲ ಎಂದು ತಿಳಿಸಲಾಗಿದೆ.

ಇದರ ಮಧ್ಯೆ ಘಟಕದ ಆವರಣದಲ್ಲಿ ಅನುಮಾನಾಸ್ಪದ ಸರಕು ವಾಹನಗಳ ಸಂಚಾರ ಕಂಡು ಬಂದ ಹಿನ್ನೆಲೆಯಲ್ಲಿ ಮಾರ್ಚ್ 2ರಂದು ಕೆಪೆಕ್ ಸಂಸ್ಥೆ ವಾಣಿಜ್ಯ ತೆರಿಗೆ ಇಲಾಖೆಗೆ ಮಾಹಿತಿ ನೀಡಿತ್ತು. ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಬಾಳೆ ಸಂಸ್ಕರಣಾ ಘಟಕದ ಹಾಲ್‌ನಲ್ಲಿ ಯಾವುದೇ ದಾಖಲೆಗಳಿಲ್ಲದೆ ರೆಡಿಮೇಡ್ ಬಟ್ಟೆಗಳನ್ನು ಸಂಗ್ರಹಿಸಿರುವುದು ಪತ್ತೆಯಾಯಿತು. ಸದರಿ ಘಟಕದ ಆವರಣದಲ್ಲಿ ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆ ಮತ್ತು ರಫ್ತು ಚಟುವಟಿಕೆಗಳಿಗೆ ಹೊರತ್ತಪಡಿಸಿ ಇನ್ನಾವುದೇ ಅನ್ಯ ಚಟುವಟಿಕೆಗಳಿಗೆ ಅಥವಾ ಬಳಕೆಗೆ ಆಸ್ಪದ ಇಲ್ಲ.

ಸ್ಥಳದಲ್ಲಿದ್ದ ಮೇಲ್ವಿಚಾರಕರನ್ನು ವಿಚಾರಿಸಿದಾಗ, ಸಂಗ್ರಹಿಸಿದ್ದ ಬಟ್ಟೆಗಳಿಗೆ ಸಂಬಂಧಿಸಿದ ತೆರಿಗೆ ಬಿಲ್‌ಗಳು ಅಥವಾ ಅಗತ್ಯ ದಾಖಲೆಗಳನ್ನು ನೀಡಲು ವಿಫಲರಾದರು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಬಾಳೆ ಸಂಸ್ಕರಣಾ ಘಟಕದ ಹಾಲ್ ಅನ್ನು ಕೆಪೆಕ್ ಅಧಿಕಾರಿಗಳ ಸಮ್ಮುಖದಲ್ಲಿ ಸೀಲ್ ಮಾಡಿದ್ದಾರೆ.

ಈ ಘಟಕವನ್ನು ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆ ಹಾಗೂ ರಫ್ತು ಕಾರ್ಯಗಳಿಗೆ ಮಾತ್ರ ಬಳಸಬೇಕಾಗಿದ್ದು, ಬೇರೆ ವಸ್ತುಗಳನ್ನು ಸಂಗ್ರಹಿಸಿರುವುದು ಒಪ್ಪಂದ ಉಲ್ಲಂಘನೆಯಾಗಿದೆ ಎಂದು ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ಸಮಗ್ರ ಶೀತಲ ಸರಪಳಿ ಘಟಕ(ಎಡಚಿತ್ರ). ಘಟಕದ ಹಾಲ್ ಅನ್ನು ಸೀಲ್ ಮಾಡಲಾಗಿದೆ

'ಮಾಹೆ' ಕ್ವಾಂಟಮ್ ಹಬ್ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ವಿಶ್ವವಿದ್ಯಾಲಯವರು ತನ್ನ ಅಂಗಸಂಸ್ಥೆಯಾದ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ) ಬೆಂಗಳೂರು ಕ್ಯಾಂಪಸ್‌ನಲ್ಲಿ 'ಕ್ವಾಂಟಮ್ ಹಬ್@ಮಾಹೆ'ಯನ್ನು ಗುರುವಾರ ಆರಂಭಿಸಿದೆ. ಭಾರತದ ರಾಷ್ಟ್ರೀಯ ಕ್ವಾಂಟಮ್ ಮಿಷನ್‌ಗೆ ಅನುಗುಣವಾಗಿರುವ, ಸ್ವದೇಶಿ ಕ್ವಾಂಟಮ್ ಹಾರ್ಡ್‌ವೇರ್ ಅಭಿವೃದ್ಧಿಗಾಗಿ ಮೀಸಲಾಗಿರುವ ಓಪನ್ ಆರ್ಕಿಟೆಕ್ಚರ್ ವ್ಯವಸ್ಥೆ ಇದಾಗಿದೆ.

ಮಾಹೆ ಕುಲಪತಿ ಲೆಫ್ಟಿನೆಂಟ್ ಜನರಲ್ ಎಂ.ಡಿ. ವೆಂಕಟೇಶ್ ಮಾತನಾಡಿ, 'ವಿನ್ಯಾಸದಿಂದ ಅನುಷ್ಠಾನದ ತನಕ ಎಲ್ಲವನ್ನೂ ಒಳಗೊಂಡ ವೇದಿಕೆಯಾಗಿರುವ ಕ್ಯು-ಹಬ್@ಮಾಹೆ, ಕ್ವಾಂಟಮ್ ಹಾರ್ಡ್‌ವೇರ್ ಪ್ರಯೋಗಗಳು, ಡೀಪ್ ಟೆಕ್ ಸ್ಟಾರ್ಟಪ್ ಇನ್‌ಕ್ಯುಬೇಶನ್, ಮಾನವ ಸಂಪನ್ಮೂಲ ಅಭಿವೃದ್ಧಿ, ಪರೀಕ್ಷಾ ಮೂಲಸೌಕರ್ಯ ಮತ್ತು ಏಕೀಕೃತ ಶೈಕ್ಷಣಿಕ ವ್ಯವಸ್ಥೆಯಡಿ ಸಂಶೋಧನೆಗಳನ್ನು ಒಳಗೊಂಡಿದೆ. ಈ ಕ್ರಮ ಭಾರತದ ಕ್ವಾಂಟಮ್ ತಂತ್ರಜ್ಞಾನ ಮೌಲ್ಯ ವ್ಯವಸ್ಥೆಯ ಎಲ್ಲ ಹಂತಗಳಲ್ಲೂ ಭಾರತವನ್ನು ಸಂಪೂರ್ಣವಾಗಿ ಸ್ವಾವಲಂಬಿಯಾಗಿಸುವ ಗುರಿ ಹೊಂದಿದೆ' ಎಂದು ತಿಳಿಸಿದರು.

ಆರಂಭಿಕ ಹಂತದಲ್ಲಿ, ಈ ಕೇಂದ್ರ 25 - ಕ್ಯುಬಿಟ್ ಡೈಲ್ಯೂಷನ್ ರೆಫ್ರಿಜಿರೇಶನ್ (ಡಿಆರ್) ಆಧಾರಿತ ಓಪನ್ ಆರ್ಕಿಟೆಕ್ಚರ್ ವ್ಯವಸ್ಥೆಯೊಡನೆ ಕಾರ್ಯಾರಂಭಿಸಲಿದೆ. ಇದು ಆಧುನಿಕ ತರಬೇತಿ ಮತ್ತು ಪ್ರಾಯೋಗಿಕತೆಗೆ ಪೂರಕವಾಗಿ ವಿನ್ಯಾಸಗೊಂಡಿದೆ. ಮುಂದಿನ ಹಂತದಲ್ಲಿ 50–150 ಕ್ಯುಬಿಟ್ 'ಪ್ರೂಫ್ ಆಫ್ ಕಾನ್ಸೆಪ್ಟ್' ವೇದಿಕೆಯಾಗಿ ಬೆಳೆದು, ಅಂತಿಮವಾಗಿ 150–1,000 + ಕ್ಯುಬಿಟ್ ಕೈಗಾರಿಕಾ ದರ್ಜೆಯ ಕ್ವಾಂಟಮ್ ಉತ್ಪನ್ನ ವ್ಯವಸ್ಥೆಯಾಗಿ ಮುಂದುವರಿಯಲಿದೆ ಎಂದು ಮಾಹಿತಿ ನೀಡಿದರು.

ಪ್ರಸ್ತುತ ಕ್ಯು-ಹಬ್@ಮಾಹೆ ಸ್ಥಾಪನೆಗಾಗಿ ಕ್ವಾಂಟ್ರೋಲಾಕ್ಸ್ (ಫಿನ್‌ಲೆಂಡ್) ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರೊಂದಿಗೆ ಬ್ಲೂಫೋರ್ಸ್ (ಫಿನ್‌ಲೆಂಡ್), ಕ್ಯೂಬ್ಲಾಕ್ಸ್ (ನೆದರ್‌ಲೆಂಡ್), ಕಾನ್‌ಸೈನ್ಸ್ (ಸ್ವೀಡನ್) ಮತ್ತು ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಗ್ (ಸಿ-ಡಿಎಸಿ), ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಸಹಯೋಗದೊಂದಿಗೆ ರೂಪಿಸಲಾಗಿದೆ ಎಂದರು.

ಡಿಸೆಂಬರ್ ಒಳಗೆ 100 ಕ್ವಾಂಟಮ್ ಎಂಜಿನಿಯರ್‌ಗಳನ್ನು ತರಬೇತಿಗೊಳಿಸುವ ಗುರಿಯನ್ನು ಹೊಂದಿದೆ. ಇದಕ್ಕಾಗಿ ಆನ್‌ಲೈನ್ ಪಠ್ಯಕ್ರಮ, ಮೌಲ್ಯಮಾಪನ ಮತ್ತು ಪ್ರಯೋಗಾಲಯ ತರಬೇತಿಗಳನ್ನು ಒಳಗೊಂಡ ವ್ಯವಸ್ಥಿತ ಸರ್ಟಿಫಿಕೇಟ್ ತರಬೇತಿಯನ್ನು ಒದಗಿಸಲಾಗುತ್ತದೆ. ಈ ಕೇಂದ್ರವು ಸೆಪ್ಟೆಂಬರ್‌ನಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ವಿವರಿಸಿದರು.

ಮಣಿಪಾಲ್ ಉನ್ನತ ಶಿಕ್ಷಣ ಅಕಾಡೆಮಿ (ಮಾಹೆ) ಬೆಂಗಳೂರಿನ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಕ್ವಾಟಮ್‌ಹಬ್@ಮಾಹೆ ಸ್ಥಾಪಿಸಲು ಕ್ವಾಂಟ್ರೋಲಾಕ್ಸ್ ಜೊತೆ ಗುರುವಾರ ಒಪ್ಪಂದ ನಡೆಯಿತು. ಎಸ್‌.ಡಿ. ಸುದರ್ಶನ್, ವಿಶಾಲ್ ಛತ್ರತ್, ಎಂ.ಡಿ. ವೆಂಕಟೇಶ್, ಮಧು ವೀರರಾಘವನ್, ಐವೆನ್ ಜೋಸ್ ಉಪಸ್ಥಿತರಿದ್ದರು

'ಮಕ್ಕಳ ಮೇಲೆ ಅತಿಯಾದ ಪ್ರೀತಿ ಬೇಡ'

ಪ್ರಜಾವಾಣಿ ವಾರ್ತೆ

ಗುರುರಾಜ ಕರಜಗಿ

ಬೆಂಗಳೂರು: ಮಕ್ಕಳ ಮೇಲೆ ಪೋಷಕರಿಗೆ ಅತಿಯಾದ ಪ್ರೀತಿ. ಹಾಗಾಗಿ ಮಕ್ಕಳ ಕೆಲಸವನ್ನು ಪೋಷಕರೇ ಮಾಡುತ್ತಿದ್ದಾರೆ. ಇದು ಮಕ್ಕಳ ಮೇಲೆ ಪರಿಣಾಮ ಬೀರುತ್ತಿದೆ ಎಂದು ಶಿಕ್ಷಣ ತಜ್ಞ ಗುರುರಾಜ ಕರಜಗಿ ಹೇಳಿದರು.

ವಿದ್ಯಾಸಂಸ್ಕೃತಿ ಶಾಲೆಯು 'ಪ್ರಜಾವಾಣಿ'ಯ ಸಹಯೋಗದಲ್ಲಿ ಹಮ್ಮಿಕೊಂಡಿರುವ ಪಾಲಕರಿಗೊಂದು ಕಿವಿಮಾತು ಮೂರು ದಿನಗಳ ವಿಶೇಷ ಕಾರ್ಯಕ್ರಮದಲ್ಲಿ ಅವರು ಗುರುವಾರ ಮಾತನಾಡಿದರು.

ತಾಯಿಯೇ ಎಡಗೈನಿಂದ ಮಗುವಿನ ಹೋಂ ವರ್ಕ್ ಮಾಡಿಕೊಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಮಕ್ಕಳ ಕೆಲಸವನ್ನು ಅವರೇ ಮಾಡಿಕೊಳ್ಳಲು ಬಿಡಬೇಕು. ಮಗು ಕೇಳದಿದ್ದರೂ ಹೆಚ್ಚು ಬಟ್ಟೆ, ಆಟಿಕೆ ಸಾಮಾನುಗಳನ್ನು ತಂದು ಕೊಡಲಾಗುತ್ತದೆ. ದೊಡ್ಡವರಾಗುತ್ತಿದ್ದಂತೆ ಅವರ ವರ್ತನೆ ಬದಲಾಗಿರುತ್ತದೆ. ಆಗ ಏನಿದ್ದರೂ 'ಡಿಮಾಂಡಿಂಗ್, ಕಮಾಂಡಿಂಗ್' ಆಗಿರುತ್ತದೆ. ಅಂದರೆ ತನಗೆ ಬೇಕಾಗಿರುವುದನ್ನು ಕೊಡಿಸುವಂತೆ ಪಟ್ಟು ಹಿಡಿಯುತ್ತಾರೆ. ಎಲ್ಲದಕ್ಕೂ ಒಂದು ಮಿತಿ ಇದೆ. ಹಾಗೆಯೇ ಪ್ರೀತಿಗೂ ಮಿತಿ ಇರಬೇಕು ಎಂದು ಕಿವಿಮಾತು ಹೇಳಿದರು.

ಮಕ್ಕಳಿಗೆ ಊಟ ಕೊಡಿಸಿ, ಪ್ರವಾಸ ಮಾಡಿಸಿ, ತೊಂದರೆಯಿಲ್ಲ. ಆದರೆ ಪ್ರೀತಿಯನ್ನು ವಸ್ತುವಾಗಿ ಬದಲಿಸಬೇಡಿ. ಮುಂದೆ ಮಕ್ಕಳು ಸಂಬಂಧಗಳಿಗೂ ಬೆಲೆ ಕೊಡುವುದಿಲ್ಲ. ಶಾಲೆಯಲ್ಲಿ ಮಕ್ಕಳು ಎಂಟು ತಾಸು ಕಳೆಯುತ್ತಾರೆ. ಆದರೆ ಹೆಚ್ಚು ಸಮಯ ಕಳೆಯುವುದು ಮನೆಯಲ್ಲಿ. ಹಾಗಾಗಿ ಪೋಷಕರ ಮೇಲೆ ಮಕ್ಕಳ ಜವಾಬ್ದಾರಿ ಹೆಚ್ಚು ಎಂದರು.

ಎಲ್ಲ ಸವಲತ್ತು ಸಿಕ್ಕಿದರೂ ಕೆಲ ಮಕ್ಕಳ ಪ್ರೀತಿ ಸಿಗಲಿಲ್ಲವೆಂಬ ಕಾರಣಕ್ಕೆ ಜೀವ ಕಳೆದುಕೊಂಡಿರುವ ಉದಾಹರಣೆಯೂ ಇದೆ. ದಿನಪತ್ರಿಕೆಗಳಲ್ಲಿ ಡ್ರಗ್ಸ್ ಪತ್ತೆ ಸುದ್ದಿ ಓದುತ್ತಿದ್ದರೆ ಭಯವಾಗುತ್ತದೆ. ಪೋಷಕರು ತಮ್ಮ ಮಕ್ಕಳ ಬ್ಯಾಗ್ ತಪಾಸಣೆ ಮಾಡಬೇಕು. ಅವರ ಸ್ನೇಹಿತರು ಯಾರು ಎಂಬುದನ್ನು ತಿಳಿದುಕೊಳ್ಳಬೇಕು. ಅವರ ಮೇಲೆ ಕಣ್ಣಿಟ್ಟಿರಬೇಕು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಮಕ್ಕಳು ಜಂಕ್ ಫುಡ್ ಸೇವಿಸುವುದು ಹೆಚ್ಚಾಗಿದೆ. ಹಾಗಾಗಿ ಸ್ಥೂಲಕಾಯದ ಸಮಸ್ಯೆ ಹೆಚ್ಚಾಗುತ್ತಿದೆ. ವ್ಯಾಯಾಮ, ಕ್ರೀಡೆಯಲ್ಲಿ ತೊಡಗಿಸಿಕೊಳ್ಳಲು ಬಿಡಬೇಕು ಎಂದರು.

ಇದೇ 11ರಂದು ಪರೀಕ್ಷಾ ಮಂಡಳಿಗೆ ಮುತ್ತಿಗೆ

ಬೆಂಗಳೂರು: ರಾಜ್ಯದಲ್ಲಿ ದ್ವಿಭಾಷಾ ನೀತಿ ಜಾರಿಗೊಳಿಸಬೇಕು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಭಾಷೆಯ ಪರೀಕ್ಷೆಯನ್ನು ಕಡ್ಡಾಯಗೊಳಿಸಿರುವುದನ್ನು ಖಂಡಿಸಿ, ಮಾರ್ಚ್ 11ರಂದು ಮಲ್ಲೇಶ್ವರದಲ್ಲಿ ಇರುವ ಪರೀಕ್ಷಾ ಮಂಡಳಿಯ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಹಿಂದಿ ಹೇರಿಕೆ ವಿರೋಧಿ- ಕರ್ನಾಟಕ ಒಕ್ಕೂಟ ತಿಳಿಸಿದೆ.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಮುಖಂಡರಾದ ಪಾರ್ವತೀಶ ಬಿಳಿದಾಳೆ, ಸಾ.ರಾ. ಗೋವಿಂದು, ಜಾಣಗೆರೆ ವೆಂಕಟರಾಮಯ್ಯ, ಕೋಡಿಹಳ್ಳಿ ಚಂದ್ರಶೇಖರ್, 'ಕಳೆದ ಶೈಕ್ಷಣಿಕ ವರ್ಷದ ಪರೀಕ್ಷೆಯಲ್ಲಿ 1.42 ಲಕ್ಷ ವಿದ್ಯಾರ್ಥಿಗಳು ಹಿಂದಿ ಭಾಷೆಯಲ್ಲಿ ಅನುತ್ತೀರ್ಣರಾಗಿದ್ದರು. ರಾಜ್ಯ ಸರ್ಕಾರ ಕನ್ನಡಿಗರ ಮೇಲೆ ಹಿಂದಿ ಭಾಷೆಯನ್ನು ಹೇರುವ ಮೂಲಕ ಕೇಂದ್ರದ ಸರ್ಕಾರದ ಭಾಷಾ ದೌರ್ಜನ್ಯ ನೀತಿಗೆ ಕೈಜೋಡಿಸಿದೆ' ಎಂದು ಆರೋಪಿಸಿದರು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಸಹಾಯವಾಣಿ

ಬೆಂಗಳೂರು: ವಿದ್ಯುತ್ ಪೂರೈಕೆ ಸೇರಿದಂತೆ ಇತರೆ ದೂರುಗಳ ಶೀಘ್ರ ಪರಿಹಾರಕ್ಕಾಗಿ ಬೆಸ್ಕಾಂ ವ್ಯಾಪ್ತಿಯಲ್ಲಿ ವಾಟ್ಸ್‌ಆ್ಯಪ್ ಸಹಾಯವಾಣಿ ಸಂಖ್ಯೆಗಳು ಕಾರ್ಯನಿರ್ವಹಿಸುತ್ತಿದ್ದು, ಗ್ರಾಹಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಬೆಸ್ಕಾಂ ತಿಳಿಸಿದೆ.

ಸಹಾಯವಾಣಿ: ಬೆಂಗಳೂರು ನಗರ ಜಿಲ್ಲೆ ದಕ್ಷಿಣ ವೃತ್ತ: 82778 84011, ಪಶ್ಚಿಮ ವೃತ್ತ: 82778 84012, ಪೂರ್ವ ವೃತ್ತ: 82778 84013, ಉತ್ತರ ವೃತ್ತ: 82778 84014.

ಬೆಂಗಳೂರನಲ್ಲಿ ಮಹಾ ರುದ್ರಾಕ್ಷಿ ಪ್ರದರ್ಶನ ಹಾಗೂ ಮಾರಾಟ

ಮಾರ್ಚ್ 04 ರಿಂದ 09 ರವರೆಗೆ
ಬೆಳಗ್ಗೆ 10.30 ರಿಂದ ರಾತ್ರಿ 09.00

ಬೆಂಗಳೂರು: ನಗರದ **ಹೊಟೇಲ್** Hotel Le Foliage, Beside Sangeeta Gadgets, **ಸಂಗಮ ಸರ್ಕಲ್ ಬಸ್ ಸ್ಟಾಪ್ ಹತ್ತಿರ,** Opp. Metro Pillar EP-No.9, **ಎದುರಿಗೆ, 46 ನೇ ಕ್ರಾಸ್ 8 ಬ್ಲಾಕ್, ಸಿಆರ್ ಲೇಔಟ್, 1ನೇ ಹಂತ, ಜೆ.ಪಿ. ನಗರ, ಬೆಂಗಳೂರು, ಮಾರ್ಚ್ 4** ರಿಂದ **9** ರವರೆಗೆ ರುದ್ರಾಕ್ಷಿ ಪ್ರದರ್ಶನ ಮಾರಾಟ, **ಒಂದು ಮುಖಿ ಯಿಂದ 21 ಮುಖಿ ರುದ್ರಾಕ್ಷಗಳು ಲಭ್ಯವಿವೆ.** ಇಂಡಸ್-ನೇಪಾಳ ಸಂಸ್ಥೆಯ **ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ** ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಮಾಂಸಹಾರಿಗಳು ಸಹ ರುದ್ರಾಕ್ಷಿಗಳನ್ನು ಧರಿಸಬಹುದು.
ಸಂಪರ್ಕಿಸಿ: ಡಾ. ನರೇಂದ್ರ ಕಾಶಿರೆಡ್ಡಿ 7097296666

ADVT

ಪಿಎಂ ಶ್ರೀ ಕೇಂದ್ರಿಯ ವಿದ್ಯಾಲಯ

ನಂ1, ಜಾಲಹಳ್ಳಿ (ಪಶ್ಚಿಮ), ಬೆಂಗಳೂರು – 560 015

ಒಪ್ಪಂದ ಆಧಾರಿತ ಶಿಕ್ಷಕರಿಗಾಗಿ ನೇರ ಸಂದರ್ಶನ: 2026–27

2026–27ನೇ ಶೈಕ್ಷಣಿಕ ವರ್ಷದ ಭಾಗಕಾಲಿಕ ಒಪ್ಪಂದ ಆಧಾರಿತ ಶಿಕ್ಷಕರ ಪ್ಯಾನೆಲ್ ಸಿದ್ಧಪಡಿಸಲು, ಕೆಳಗಿನ ಹುದ್ದೆಗಳು ಮತ್ತು ದಿನಾಂಕಗಳಿಗೆ ಅನುಗುಣವಾಗಿ, ಪಿಎಂ ಶ್ರೀ ಕೇಂದ್ರಿಯ ವಿದ್ಯಾಲಯ ನಂ1, ಜಾಲಹಳ್ಳಿ (ಪಶ್ಚಿಮ), ಬೆಂಗಳೂರು – 560 015ರಲ್ಲಿ ನೇರ ಸಂದರ್ಶನವನ್ನು ನಡೆಸಲಾಗುತ್ತದೆ.

ಸಂದರ್ಶನದ ದಿನಾಂಕ	ಸಂದರ್ಶನಕ್ಕೆ ನೋಂದಣಿ	ಪೋಸ್ಟ್‌ಗಳು/ ವಿಷಯಗಳ ವರ್ಗ
10.03.2026 (ಮಂಗಳವಾರ)	ಬೆಳಿಗ್ಗೆ 8:00 ರಿಂದ ಬೆಳಿಗ್ಗೆ 9:30 ರವರೆಗೆ	**ಸ್ನಾತಕೋತ್ತರ ಪದವಿ ಪಡೆದ ಶಿಕ್ಷಕರು) (ಪಿಜಿಟಿ):** ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಗಣಿತ, ಕಂಪ್ಯೂಟರ್ ಸೈನ್ಸ್, ಇಂಗ್ಲಿಷ್, ಹಿಂದಿ, ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಮನೋವಿಜ್ಞಾನ, ಸಮಾಜಶಾಸ್ತ್ರ ಮತ್ತು ಯೋಗ **ಪ್ರಶಿಕ್ಷಿತ ಪದವೀಧರ ಶಿಕ್ಷಕರು (ಟಿಜಿಟಿ):** ಇಂಗ್ಲಿಷ್, ಹಿಂದಿ, ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಮತ್ತು ಸಂಸ್ಕೃತ. ಕಂಪ್ಯೂಟರ್ ತರಬೇತುದಾರರು.
11.03.2026 (ಬುಧವಾರ)	ಬೆಳಿಗ್ಗೆ 8:00 ರಿಂದ ಬೆಳಿಗ್ಗೆ 9:30 ರವರೆಗೆ	**ಪ್ರಾಥಮಿಕ ಶಿಕ್ಷಕರು (ಪಿಆರ್‌ಟಿ) ವೃತ್ತಿಪರ ಕೌಶಲ್ಯ ತರಬೇತುದಾರರು:** ಬಾಲವಾಟಿಕಾ ಶಿಕ್ಷಕರು (ಯುಕೆಜಿ) ಕ್ರೀಡಾ ತರಬೇತುದಾರ/ ನರ್ಸ್/ ವೈದ್ಯರು/ ವಿಶೇಷ ಶಿಕ್ಷಕರು/ ಸಲಹೆಗಾರರು (ಕೌನ್ಸೆಲರ್)/ ಬ್ರಾಸ್ ಬ್ಯಾಂಡ್ ತರಬೇತುದಾರ/ ಪಿಆರ್‌ಟಿ ಕನ್ನಡ/ ಕಲೆ ಮತ್ತು ಕೈಗಾರಿಕೆ/ ಸಂಗೀತ/ ನೃತ್ಯ/ ಯೋಗ ತರಬೇತುದಾರ/ ವೃತ್ತಿಪರ ತರಬೇತುದಾರ

ಅರ್ಹತೆ, ವಿದ್ಯಾರ್ಹತೆ ಮತ್ತು ಸಂಬಳ ಸಂಬಂಧಿಸಿದ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ವಿದ್ಯಾಲಯದ ವೆಬ್‌ಸೈಟ್‌ನ್ನು ನೋಡಿ: https://no1jalahalli.kvs.ac.in
ದೂರವಾಣಿ: 080 28388422

ಎಲ್ಲ ಪ್ರಮಾಣಪತ್ರಗಳ ಒಂದು ಸೆಟ್ ಝೆರಾಕ್ಸ್ ಪ್ರತಿಗಳನ್ನು, ಮೂಲ ಪ್ರಮಾಣಪತ್ರಗಳು, ಫೋಟೋ ಹಾಗೂ ಗುರುತಿನ ಚೀಟಿ (ಐಡಿ ಪ್ರೂಫ್) ಜೊತೆಗೆ ತರಬೇಕು.
ನೊಂದಣಿ ಅರ್ಜಿ ಫಾರ್ಮ್ ಅನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು.

ಪ್ರಾಂಶುಪಾಲರು

ಪಾದಚಾರಿಗಳ ಸಂಕಷ್ಟ ಪರಿಹಾರಕ್ಕೆ 9 ಸ್ಕೈವಾಕ್

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಿಪಿಪಿ ಮಾದರಿಯಲ್ಲಿ 9 ತಿಂಗಳಲ್ಲಿ ನಿರ್ಮಾಣ

● ಆರ್. ಮಂಜುನಾಥ್

ಬೆಂಗಳೂರು: ಪ್ರಮುಖ ರಸ್ತೆಗಳ ಜಂಕ್ಷನ್‌ಗಳಲ್ಲಿ ರಸ್ತೆ ದಾಟಲು ನಾಗರಿಕರು ಪರದಾಡುವುದನ್ನು ತಪ್ಪಿಸಲು ಹಾಗೂ ಸುಗಮ ವಾಹನ ಸಂಚಾರಕ್ಕಾಗಿ ಒಂಬತ್ತು ಸ್ಕೈವಾಕ್‌ಗಳನ್ನು ಸಾರ್ವಜನಿಕ– ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ನಿರ್ಮಿಸಲು ಕೇಂದ್ರ ನಗರ ಪಾಲಿಕೆ ನಿರ್ಧರಿಸಿದೆ.

ಸ್ಕೈವಾಕ್ ನಿರ್ಮಿಸಲು ಗುತ್ತಿಗೆ ಪಡೆಯುವ ಸಂಸ್ಥೆಗೆ ವಾಣಿಜ್ಯ ಜಾಹೀರಾತು ಪ್ರದರ್ಶನಕ್ಕೆ ಜಾಹೀರಾತು ನೀತಿ ಅನ್ವಯ ಅವಕಾಶವನ್ನು ನಗರ ಪಾಲಿಕೆ ನೀಡಲಿದೆ. ಐದು ವರ್ಷದ ಅವಧಿಗೆ ಗುತ್ತಿಗೆ ನೀಡಲು ನಿರ್ಧರಿಸಿ, ಟೆಂಡರ್ ಆಹ್ವಾನಿಸಲಾಗಿದೆ.

ಸ್ಕೈವಾಕ್‌ನ ಎರಡೂ ಬದಿ ಲಿಫ್ಟ್ ಅಳವಡಿಸಬೇಕು. ಈ ಲಿಫ್ಟ್‌ಗಳು ಕನಿಷ್ಠ 16 ಜನರನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿರಬೇಕು. ಈ ಲಿಫ್ಟ್‌ಗಳಿರುವ ಪ್ರದೇಶದಲ್ಲಿ ಆಂಬುಲೆನ್ಸ್, ಸಮೀಪದ ಆಸ್ಪತ್ರೆ, ಪೊಲೀಸ್ ಠಾಣೆ, ಸಂಚಾರ ಪೊಲೀಸರು, ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಸಹಾಯವಾಣಿ, ನಿಯಂತ್ರಣ ಕಚೇರಿಯ ಮಾಹಿತಿಯನ್ನು ಸಂಪರ್ಕ ಸಂಖ್ಯೆಯೊಂದಿಗೆ ನಮೂದಿಸಬೇಕು ಎಂಬ ಷರತ್ತು ವಿಧಿಸಲಾಗಿದೆ.

ಮೆಟ್ಟಿಲುಗಳ ಜೊತೆಗೆ ಎಕ್ಸಲೇಟರ್‌ಗಳನ್ನು ಅಳವಡಿಸಬೇಕು. ಇದರ ನಿರ್ವಹಣೆ ಕೂಡ ಗುತ್ತಿಗೆದಾರರದ್ದಾಗಿದ್ದು, ಯಾವುದಾದರೂ ಸಮಸ್ಯೆ ಆದರೆ 24 ಗಂಟೆಯೊಳಗೆ ಪರಿಹರಿಸಬೇಕು. ಇಲ್ಲದಿದ್ದರೆ ದಿನಕ್ಕೆ ₹10 ಸಾವಿರ ದಂಡ ವಿಧಿಸಲಾಗುತ್ತದೆ. ಲಿಫ್ಟ್ ಹಾಗೂ ಎಕ್ಸಲೇಟರ್‌ಗಳು ಬೆಳಿಗ್ಗೆ 10ರಿಂದ ರಾತ್ರಿ 10ರವರೆಗೆ ಕಾರ್ಯನಿರ್ವಹಿಸಬೇಕು. ಇವು 24 ಗಂಟೆಯೂ ಕಾರ್ಯನಿರ್ವಹಿಸುವ ವ್ಯವಸ್ಥೆ ಇರಬೇಕು.

ಸ್ಕೈವಾಕ್, ರಸ್ತೆಯಿಂದ ಆರು ಮೀಟರ್ ಎತ್ತರದಲ್ಲಿರಬೇಕು. ಯಾವ ಪ್ರದೇಶದಲ್ಲಿ ಕಾಮಗಾರಿ ಆಗಬೇಕು ಎಂಬುದನ್ನು ಕೇಂದ್ರ ನಗರ ಪಾಲಿಕೆ ವತಿಯಿಂದ ಗುರುತು ಮಾಡಿಕೊಡಲಾಗುತ್ತದೆ. ಸಿಸಿ ಟಿವಿ ಕ್ಯಾಮೆರಾಗಳನ್ನು ಲಿಫ್ಟ್, ಎಕ್ಸಲೇಟರ್, ಸ್ಕೈವಾಕ್‌ನ ಮಾರ್ಗದಲ್ಲಿ ಅಳವಡಿಸಿ, ಎಲ್ಲ ರೀತಿಯಲ್ಲೂ ನಿಗಾವಹಿಸಬೇಕು. ಈ ಮೂಲಕ ನಾಗರಿಕರ ಸುರಕ್ಷತೆಯನ್ನು ಖಾತರಿಪಡಿಸಬೇಕು.

ಸ್ಕೈವಾಕ್‌ನ ನೆಲಹಾಸು ಜಾರುರಹಿತ ವ್ಯವಸ್ಥೆ ಹೊಂದಿರಬೇಕು. ಸ್ಕೈವಾಕ್ ಪ್ರದೇಶದಲ್ಲಿ ಅವಕಾಶವಿರುವ ಸ್ಥಳದಲ್ಲಿ ಕುಂಡದಲ್ಲಿ ಗಿಡಗಳನ್ನು ನೆಟ್ಟು ನಿರ್ವಹಣೆ ಮಾಡಬೇಕು. ಸಂಪೂರ್ಣ ಸ್ವಚ್ಛತೆ ಕಾಪಾಡಿಕೊಂಡು, ಭದ್ರತಾ ಸಿಬ್ಬಂದಿ ಪೂರ್ಣಾವಧಿಯಲ್ಲಿ ಕಾರ್ಯನಿರ್ವಹಿಸಬೇಕು ಎಂಬ ಷರತ್ತುಗಳನ್ನು ಕೇಂದ್ರ ನಗರ ಪಾಲಿಕೆ ವಿಧಿಸಿದೆ.

ಸ್ಕೈವಾಕ್‌ನಲ್ಲಿ ವಾಣಿಜ್ಯ ಜಾಹೀರಾತುಗಳನ್ನು ರಸ್ತೆಯ ಎರಡೂ ಬದಿ ಪ್ರದರ್ಶಿಸಬಹುದು. ಸ್ಕೈವಾಕ್‌ನ ಒಳಬದಿಯಲ್ಲೂ ಜಾಹೀರಾತಿಗೆ ಅವಕಾಶ ನೀಡಲಾಗುತ್ತದೆ. ನೆಲದಿಂದ ಒಂದು ಮೀಟರ್ ಎತ್ತರದವರೆಗೆ ಯಾವುದೇ ರೀತಿಯ ಜಾಹೀರಾತು ಪ್ರದರ್ಶಿಸುವಂತಿಲ್ಲ. ನಾಲ್ಕು ವರ್ಷದವರೆಗೆ ರಿಯಾಯಿತಿ ದರದಲ್ಲಿ ಶುಲ್ಕವನ್ನು ಪಾಲಿಕೆಗೆ ಪಾವತಿಸಬೇಕಾಗುತ್ತದೆ. ಐದನೇ ವರ್ಷ ಶೇ 5ರಷ್ಟು ಶುಲ್ಕ ಹೆಚ್ಚಾಗುತ್ತದೆ. ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ, ವರ್ಗಾವಣೆ (ಡಿಬಿಎಫ್‌ಒಟಿ) ಆಧಾರದಲ್ಲಿ ಈ ಗುತ್ತಿಗೆ ನೀಡಲಾಗುತ್ತದೆ. ಹೀಗಾಗಿ, ಐದು ವರ್ಷದ ನಂತರ, ವಾಣಿಜ್ಯ ಬಿಡ್ ಕರೆಯಲಾಗುತ್ತದೆ. ಅದರಂತೆ ಪ್ರಕ್ರಿಯೆ ಮುಂದುವರಿಯುತ್ತದೆ ಎಂದು ಟೆಂಡರ್‌ನಲ್ಲಿ ತಿಳಿಸಲಾಗಿದೆ.

ಸಂಚಾರ ಪೊಲೀಸರ ಸಲಹೆ ಮೇರೆಗೆ ಪಾದಚಾರಿಗಳಿಗೆ ಅನುಕೂಲ ಕಲ್ಪಿಸಲು ಅತ್ಯಾಧುನಿಕ ಸ್ಕೈವಾಕ್‌ಗಳನ್ನು ಶೀಘ್ರವಾಗಿ ನಿರ್ಮಿಸಲಾಗುತ್ತದೆ

ರಾಜೇಂದ್ರ ಚೋಳನ್, ಆಯುಕ್ತ, ಬೆಂಗಳೂರು ಕೇಂದ್ರ ನಗರ ಪಾಲಿಕೆ

ಮುಖ್ಯಾಂಶಗಳು

- ಲಿಫ್ಟ್, ಎಕ್ಸಲೇಟರ್ ವ್ಯವಸ್ಥೆ
- ಬೆಳಿಗ್ಗೆ 10ರಿಂದ ರಾತ್ರಿ 10ರವರೆಗೆ ಕಾರ್ಯನಿರ್ವಹಣೆ
- ಸ್ವಚ್ಛತೆ, ಸುರಕ್ಷೆ, ಹಸಿರೀಕರಣಕ್ಕೆ ಒತ್ತು

ಪಾದಚಾರಿ ಮಾರ್ಗಕ್ಕೆ ಹೊಸ ರೂಪ

‘ಕೇಂದ್ರ ನಗರ ಪಾಲಿಕೆ ವ್ಯಾಪ್ತಿಗೆ ಬರುವ ಪ್ರತಿ ವಿಧಾನಸಭೆ ಕ್ಷೇತ್ರದಲ್ಲಿ ತಲಾ 10 ಕಿ.ಮೀ ಉದ್ದದ ಪಾದಚಾರಿ ಮಾರ್ಗಕ್ಕೆ ಶೀಘ್ರವೇ ಹೊಸ ರೂಪ ಕೊಡಲಾಗುವುದು. ಪಾದಚಾರಿ ಮಾರ್ಗದ ಒತ್ತುವರಿಯನ್ನು ಸಂಪೂರ್ಣವಾಗಿ ತೆರವುಗೊಳಿಸಿ, ಸ್ವಚ್ಛತೆ ಕಾಪಾಡಿಕೊಳ್ಳಲಾಗುತ್ತದೆ. ಅಲ್ಲದೆ, ಆಕರ್ಷಕ ವಿನ್ಯಾಸ ಮೂರು ಅಡಿ ಎತ್ತರದ ‘ರೈಲಿಂಗ್’ ಅನ್ನು ಅಳವಡಿಸಲಾಗುತ್ತದೆ. ಇದರಿಂದ ಒತ್ತುವರಿಗೆ ಆಸ್ಪದ ಇರುವುದಿಲ್ಲ’ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೇಲ್ಸೇತುವೆಗಳ ವಿಭಜಕಗಳಲ್ಲಿ ದೊಡ್ಡ ಕುಂಡಗಳನ್ನು ಇಟ್ಟು, ಅದರಲ್ಲಿ ಗಿಡಗಳನ್ನು ಬೆಳೆಸಲಾಗುತ್ತದೆ. ಈ ಹಿಂದೆ ಇಂತಹ ಯೋಜನೆ ಮಾಡಲಾಗಿತ್ತಾದರೂ ನಿರ್ವಹಣೆ ಕೊರತೆಯಿಂದ ಗಿಡಗಳು ಹಾಳಾಗಿದ್ದವು. ಅದನ್ನೆಲ್ಲ ಪರಿಶೀಲಿಸಿಯೇ ವಿಭಜಕಗಳಲ್ಲಿ ಗಿಡಗಳನ್ನು ಹಾಕಲಾಗುತ್ತಿದೆ. ಇವುಗಳ ನಿರ್ವಹಣೆಯನ್ನು ತೋಟಗಾರಿಕೆ ಇಲಾಖೆಗೆ ವಹಿಸಲಾಗಿದ್ದು, ಯಾವುದೇ ಲೋಪವಾಗದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಮೊದಲ ಹಂತವಾಗಿ, ಸಿರ್ಸಿ–ಮೈಸೂರು ರಸ್ತೆ ಮೇಲ್ಸೇತುವೆಯ ವಿಭಜಕಗಳಲ್ಲಿ ದೊಡ್ಡ ಕುಂಡಗಳನ್ನು ಇರಿಸಿ, ಗಿಡಗಳನ್ನು ಹಾಕಲಾಗುತ್ತಿದೆ. ನಮ್ಮ ಪಾಲಿಕೆ ವ್ಯಾಪ್ತಿಯ ಎಲ್ಲ ಮೇಲ್ಸೇತುವೆಗಳಲ್ಲೂ ಈ ರೀತಿಯ ಹಸಿರೀಕರಣ ಮಾಡಲಾಗುತ್ತದೆ’ ಎಂದು ಮಾಹಿತಿ ನೀಡಿದರು.

ಎಲ್ಲೆಲ್ಲಿ ಸ್ಕೈವಾಕ್?

- ಬಿಡಿಎ ಕಾಂಪ್ಲೆಕ್ಸ್ ಸಮೀಪ, ಹಳೆ ಮದ್ರಾಸ್ ರಸ್ತೆ
- ಡೈಮಂಡ್ ಡಿಸ್ಟ್ರಿಕ್ಟ್, ಹಳೆ ವಿಮಾನ ನಿಲ್ದಾಣ ರಸ್ತೆ
- ಕಾಮರಾಜ ರಸ್ತೆ ಮತ್ತು ಕಬ್ಬನ್ ರಸ್ತೆ ಜಂಕ್ಷನ್
- ಕಿಮ್ಸ್ ಜಂಕ್ಷನ್, ಕೃಷ್ಣರಾಜೇಂದ್ರ ರಸ್ತೆ
- ಸ್ವಾಕ್–35 ಜಂಕ್ಷನ್, ಕೆಂಗಲ್ ಹನುಮಂತಯ್ಯ ರಸ್ತೆ ಮತ್ತು ಡಾ. ಮರಿಗೌಡ ರಸ್ತೆ
- ಶಿವಶಂಕರ್ ವೃತ್ತ, ಕೃಷ್ಣರಾಜೇಂದ್ರ ರಸ್ತೆ ಮತ್ತು ಲಾಲ್‌ಬಾಗ್ ಪೋರ್ಟ್ ರಸ್ತೆ
- ಅಮರ್ ಜಂಕ್ಷನ್, ಧನ್ವಂತ್ರಿ ರಸ್ತೆ
- ಮೈಸೂರು ಬ್ಯಾಂಕ್ ಜಂಕ್ಷನ್, ಕೆಂಪೇಗೌಡ ರಸ್ತೆ–ಅರಮನೆ ರಸ್ತೆ–ಪೋಸ್ಟ್ ಆಫೀಸ್ ರಸ್ತೆ, ಅವೆನ್ಯೂ ರಸ್ತೆ
- ಕ್ವೀನ್ಸ್ ಜಂಕ್ಷನ್, ಎಂ.ಜಿ ರಸ್ತೆ–ಕಸ್ತೂರಬಾ ರಸ್ತೆ, ಲ್ಯಾವೆಲ್ಲೆ ರಸ್ತೆ, ಕ್ವೀನ್ಸ್ ರಸ್ತೆ.

‘ನರೇಗಾ ಯೋಜನೆ ನಿಲ್ಲಿಸುವ ಹುನ್ನಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನರೇಗಾ ಯೋಜನೆಯನ್ನು ವಿಬಿ ಜಿ ರಾಮ್ ಜಿ ಹೆಸರಿನಲ್ಲಿ ಬದಲಾವಣೆ ಮಾಡಿ ಯೋಜನೆ ಸ್ಥಗಿತಗೊಳಿಸುವ ಉದ್ದೇಶವಿದೆ. ಇದರಿಂದ ಸಾಮಾಜಿಕ, ಆರ್ಥಿಕ ಭದ್ರತೆಗೆ ಹೊಡೆತ ಬೀಳಲಿದೆ’ ಎಂದು ಆರ್ಥಿಕ ತಜ್ಞ ಜಾನ್ ಡ್ರೀಝ್ ಹೇಳಿದರು.

ಮನರೇಗಾ ರಕ್ಷಣಾ ಒಕ್ಕೂಟ ಗಾಂಧಿ ಭವದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮನರೇಗಾ ವರ್ಸಸ್ ವಿಬಿ ರಾಮ್‌ಜಿ ಕಟು ವಾಸ್ತವಗಳು’ ಸಂವಾದದಲ್ಲಿ ಅವರು ಮಾತನಾಡಿದರು.

‘ಕೇಂದ್ರ ಸರ್ಕಾರವು ಉದ್ಯೋಗ ಖಾತ್ರಿ ಯೋಜನೆಯನ್ನು ಈಗಿನ ಸ್ವರೂಪಕ್ಕೆ ತಕ್ಕುನಾಗಿ ಬದಲಾವಣೆ ಮಾಡಿ ಸಶಕ್ತಗೊಳಿಸುತ್ತಿರುವುದಾಗಿ ಹೇಳುತ್ತಿದೆಯಷ್ಟೇ. ನಿಧಾನವಾಗಿ ಯೋಜನೆ ನಿಲ್ಲಲಿದೆ. ಈ ಸರ್ಕಾರ ಉದ್ಯಮಿಗಳ ಪರವಾಗಿದೆ ’ ಎಂದು ಟೀಕಿಸಿದರು.

‘ಈ ಯೋಜನೆಗೆ ₹95 ಸಾವಿರ ಕೋಟಿ ಆರ್ಥಿಕ ನೆರವು ನೀಡುವುದಾಗಿ ಹೇಳಿದೆ. ರಾಜ್ಯ ಸರ್ಕಾರಗಳು ಶೇ 40ರ ಅನುಪಾತದಂತೆ ಅನುದಾನ ನೀಡಿದರೆ ಹೆಚ್ಚಿನ ಆರ್ಥಿಕ ಬಲ ಸಿಗಲಿದೆ. ಅನುದಾನ ಬಿಡುಗಡೆ, ಬಳಕೆ ಮೇಲೆ ಈ ವರ್ಷದಲ್ಲಿ ಬದಲಾವಣೆಯ ಚಿತ್ರಣ ಸಿಗಲಿದೆ. ಮೂರ್ನಾಲ್ಕು ವರ್ಷದಲ್ಲಿ ನಿಖರವಾಗಿ ತಿಳಿಯಲಿದೆ’ ಎಂದು ಹೇಳಿದರು.

ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ ಮಾತನಾಡಿ, ‘ನರೇಗಾ ಯೋಜನೆ ಬದಲಾವಣೆ ಸ್ವರೂಪವನ್ನು ಪ್ರಕಟಿಸಿರುವ ಕೇಂದ್ರ ಸರ್ಕಾರ ನಿಯಮಾವಳಿಗಳನ್ನು ರೂಪಿಸಬೇಕಿದೆ. ಇವುಗಳು ಬಂದ ನಂತರ ಬದಲಾವಣೆ ಸ್ವರೂಪ ಹೇಗಿರಲಿದೆ. ಏನು ಪರಿಣಾಮ ಆಗಬಹುದು ಎನ್ನುವುದು ತಿಳಿಯಬಹುದು. ಯೋಜನೆ ಕುರಿತಾಗಿ ವ್ಯಾಪಕ ಚರ್ಚೆಯೂ ಆಗಬೇಕು’ ಎಂದು ತಿಳಿಸಿದರು.

‘ಈಗಾಗಲೇ ರಾಜ್ಯ ಸರ್ಕಾರವು ವಿಬಿ ಜಿ ರಾಮ್ ಜಿ ಯೋಜನೆಗೆ ವಿರೋಧ ವ್ಯಕ್ತಪಡಿಸಿ ಹಿಂದಿನ ಯೋಜನೆಯನ್ನೇ ಮುಂದುವರೆಸುವಂತೆ ಆಗ್ರಹಿಸಿದೆ. ಈ ಹೋರಾಟ ಇನ್ನಷ್ಟು ಕೆಳ ಹಂತಕ್ಕೂ ತಲುಪಿ ಜನ ಸಾಮಾನ್ಯರಿಗೆ ಹುನ್ನಾರ ತಿಳಿಯಬೇಕು. ಕೇಂದ್ರ ಸರ್ಕಾರ ಒಕ್ಕೂಟ ವ್ಯವಸ್ಥೆ ಹಾಳು ಮಾಡಿ ರಾಜ್ಯಗಳನ್ನು ಗುಲಾಮರನ್ನಾಗಿಸುವ ಪ್ರಯತ್ನ ಮಾಡಿದೆ. ಕಾಯಕಕ್ಕೆ ಒತ್ತು ನೀಡುತ್ತಿದ್ದ ಯೋಜನೆಗೆ ಕರ್ಮ ಸಿದ್ದಾಂತ, ರಾಮನ ಹೆಸರು ನೀಡಿ ಸರ್ಕಾರ ಧರ್ಮದ ರೂಪ ನೀಡುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

₹25 ಕೋಟಿ ಮೌಲ್ಯದ ಸ್ವತ್ತು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಾರ್ಯಾಚರಣೆ ನಡೆಸಿ, ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವ ಮೂಲಕ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿತು.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಹೇರೋಹಳ್ಳಿ ಗ್ರಾಮದ ಸರ್ವೆ ನಂ.64ರಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್, ಕಟ್ಟಡಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಯಿತು.

ಅಂದಾಜು ₹25 ಕೋಟಿ ಮೌಲ್ಯದ 13 ಗುಂಟೆ ಜಾಗವನ್ನು ವಶಪಡಿಸಿಕೊಂಡಿತು. ಕಟ್ಟಡದ ಅವಶೇಷಗಳನ್ನು ತೆರವುಗೊಳಿಸಿ, ಸುತ್ತಲೂ ಬೇಲಿ ಹಾಕಲಾಗಿದೆ.

ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಯಿತು. ವಲಯಾಧಿಕಾರಿಗಳು, ಆರಕ್ಷಕ ಅಧೀಕ್ಷಕ, ಬಿಡಿಎ ಕಾರ್ಯಪಡೆ ಎಂಜಿನಿಯರ್ ಅಧಿಕಾರಿ–1, ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಜರಿದ್ದರು.

ಬೆಂಗಳೂರು ಜಲಮಂಡಳಿಯಲ್ಲಿ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಬೇಸಿಗೆ ನೀರಿನ ನಿರ್ವಹಣೆ ಸಭೆ ನಡೆಸಿದರು

ನೀರು ನಿರ್ವಹಣೆ – ವಾರ್ಡ್‌ಗೆ ಒಬ್ಬ ಉಸ್ತುವಾರಿ: ತುಷಾರ್ ಗಿರಿನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೇಸಿಗೆಯಲ್ಲಿ ನಗರದಲ್ಲಿ ನೀರಿನ ಕೊರತೆ ಉಂಟಾಗದ ಹಾಗೆ ಕ್ರಮ ಕೈಗೊಳ್ಳಬೇಕು’ ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಜಲಮಂಡಳಿ ಕೇಂದ್ರ ಕಚೇರಿಯಲ್ಲಿ ಪರಿಶೀಲನಾ ಸಭೆ ನಡೆಸಿದ ಅವರು, ’ನಗರದ ಯಾವುದೇ ಭಾಗದಲ್ಲೂ ನೀರಿನ ತೊಂದರೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ತಕ್ಷಣ ಜಾರಿಗೆ ತರಬೇಕು’ ಎಂದರು.

‘ಭಾರತೀಯ ವಿಜ್ಞಾನ ಸಂಸ್ಥೆ ನೀಡಿದ ವರದಿಯ ಪ್ರಕಾರ ನಗರದ ಹೊರವಲಯ ಪ್ರದೇಶಗಳಲ್ಲಿ ಅಂತರ್ಜಲ ಮಟ್ಟ ಕುಸಿಯುವ ಸಾಧ್ಯತೆ ಇದೆ. ಪ್ರತಿ ವಾರ್ಡ್‌ಗೆ ಪ್ರತ್ಯೇಕ ಎಂಜಿನಿಯರ್ ಅನ್ನು ನಿಯೋಜಿಸಿ ಪರಿಸ್ಥಿತಿ ಗಂಭೀರವಾಗುವ ಮೊದಲು ಕ್ರಮ ಕೈಗೊಳ್ಳಬೇಕು’ ಎಂದು ಹೇಳಿದರು.

‘ಬೇಸಿಗೆ ತೀವ್ರಗೊಳ್ಳುವ ಮುನ್ನ ಹೊಸ ನೀರು ಸಂಪರ್ಕಗಳ ಪ್ರಕ್ರಿಯೆ ವೇಗಗೊಳಿಸಿ, ಅಗತ್ಯ ಮೂಲಸೌಕರ್ಯವನ್ನು ಸಿದ್ಧಪಡಿಸಬೇಕು. ನಗರದಾದ್ಯಂತ ಇರುವ ಶುದ್ಧ ನೀರಿನ ಘಟಕಗಳು ಕಾರ್ಯ ನಿರ್ವಹಿಸುವಂತೆ ತಕ್ಷಣ ದುರಸ್ತಿ ಮತ್ತು ಮೇಲ್ವಿಚಾರಣೆ ಮಾಡಬೇಕು ಎಂದು ಹೇಳಿದರು.

ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ಪ್ರಧಾನ ಮುಖ್ಯ ಎಂಜಿನಿಯರ್, ವಲಯಗಳ ಎಂಜಿನಿಯರ್‌ಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ರೈತರಿಗೆ ಮರಣ ಶಾಸನ: ಸುನಂದಾ

ಮಂಡ್ಯ: ‘ಕಾವೇರಿ 6ನೇ ಹಂತದ ಬೆಂಗಳೂರು ಕುಡಿಯುವ ನೀರಿನ ಯೋಜನೆಗೆ ಸಚಿವ ಸಂಪುಟದ ಅನುಮೋದನೆ ನೀಡಿರುವುದು ರೈತರಿಗೆ ಮರಣ ಶಾಸನ ಬರೆದಂತಾಗಿದೆ’ ಎಂದು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸುನಂದಾ ಜಯರಾಂ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ 1,934 ಪೌರಕಾರ್ಮಿಕರಿಗೆ ಬುಧವಾರ ಆರೋಗ್ಯ ತಪಾಸಣೆ ನಡೆಸಲಾಯಿತು.

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಸ್ವಚ್ಛತಾ ಯೋಧರಾದ ಪೌರಕಾರ್ಮಿಕರ ಆರೋಗ್ಯದ ಜವಾಬ್ದಾರಿ ಪಾಲಿಕೆಯ ಮೇಲಿದೆ. ಇವರ ಆರೋಗ್ಯ ತಪಾಸಣೆಯನ್ನು ಪಾಲಿಕೆಯಿಂದ ಆಗಾಗ್ಗೆ ನಿರ್ವಹಿಸಲಾಗುತ್ತದೆ ಎಂದು ಆರೋಗ್ಯಾಧಿಕಾರಿ ಬಾಲಸುಂದರ್ ತಿಳಿಸಿದರು.

ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ 25 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, 49 ನಮ್ಮ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿ ಬುಧವಾರ ಬೆಳಿಗ್ಗೆ 9ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಉಚಿತವಾಗಿ ಸಾಮೂಹಿಕ ಆರೋಗ್ಯ ತಪಾಸಣೆಯನ್ನು ಪೌರ ಕಾರ್ಮಿಕರಿಗಾಗಿ ಹಮ್ಮಿಕೊಳ್ಳಲಾಗಿತ್ತು. ತಪಾಸಣಾ ಕಾರ್ಯಕ್ರಮದಲ್ಲಿ 56 ವೈದ್ಯಾಧಿಕಾರಿಗಳು ಹಾಗೂ 168 ಅರೆ ವೈದ್ಯಕೀಯ ಸಿಬ್ಬಂದಿ ಭಾಗವಹಿಸಿದ್ದರು. 605 ಪುರುಷ, 1,348 ಮಹಿಳಾ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು ಎಂದು ಮಾಹಿತಿ ನೀಡಿದರು.

256 ಪೌರಕಾರ್ಮಿಕರು ಮಧುಮೇಹದಿಂದ ಬಳಲುತ್ತಿದ್ದು, 254 ಮಂದಿಗೆ ಅಧಿಕ ರಕ್ತದೊತ್ತಡವಿದೆ. ನಾಲ್ವರಿಗೆ ಹೃದಯ ಸಂಬಂಧಿ ಸಮಸ್ಯೆಗಳಿದ್ದು, 57 ಮಂದಿಗೆ ದಂತ, 39 ಮಂದಿಗೆ ಕಣ್ಣು, 16 ಮಂದಿಗೆ ಕಿವಿ ಸಮಸ್ಯೆಗಳಿವೆ. 43 ಜ್ವರದ ಪ್ರಕರಣಗಳು ದಾಖಲಾಗಿದ್ದು, 67 ಮಂದಿಗೆ ರಕ್ತಹೀನತೆ ಇದೆ. 1,198 ಮಂದಿ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದರು ಎಂದು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Industrial And Factory

AVAILABLE INDUSTRIAL Warehouse 160000 sqft Vijipura, Hoskote. Contact: 9341234288/ 9663224353/ 9845417487.

REAL ESTATE SELLING

Sites

Devanahalli

SITE SALE BIAAPA Approved E-Khatha Coffee Board Layout, Meesaganahalli, N/E/S Corner 30x80 Rs. 6000/ sft. 9731121679.

Industrial & Factory

Intl Airport Road

SALE RED_CATEGORY Industrial Land & Building in AP Hindupur APIIC allotted Suitable for Chemical, Pharma, Organic, Fertilisers Manufacturers. 20000sft, 41500sft, 135000sft clear_titles. Call Verna Developers, Barton Centre, MG_Road. 9916310226.

EDUCATION CORNER ಕ್ಲಾಸಿಫೈಡ್ಸ್

BMS Educational Trust
BMS ACADEMY FOR PROFESSIONAL COURSES
In Association with
Sri Chaitanya ACADEMY
Coaching Classes for JEE, NEET & KCET with PUC/10+2
JEE (Advance + Mains)
NEET (Medical Aspirants)
KCET (Engineering Aspirants)
FEATURES
-PUC Classes @ BMSCW (PU) Campus
-Experience Faculties for PUC & JEE / NEET / KCET
-Daily Practice Papers (DDPs) & Regular Assignments
-Weekly Tests & Monthly Grand Tests with Detailed Analysis
Contact us at:
BMS Academy for Professional Courses
BMS College of Engineering Campus,
Bull Temple Rd, Basavanagudi, Bengaluru-19
89717 36008 | 90365 10011
bmsiasacademy@gmail.com www.bmsacademy.org.in
LIMITED SEATS - ENROLL NOW! Your success is our commitment.

#SouthIndia's No. 1 Study Abroad Consultancy GLOBAL DEGREES
15 Years of Excellence | 19 BRANCHES IN INDIA
GLOBAL DEGREES EDUCATION & MORE
GLOBAL EDUCATION FAIR
BY GLOBAL DEGREES
USA | UK | AUS | NZ | GER | FRA | IRE | UAE | JPN
Interact with 125+ Universities from Worldwide
March 07 Saturday
TAJ MG ROAD, Bengaluru
11:00 AM to 4:00 PM
Special Info Sessions on Study in Japan, Dubai & Germany
Scan & Register
For More Details Contact : 9513040506

Flat

Sahakarnagar

FOR SALE Luxury 3 BHK Flats available Reputed Builders Eco Design, Ample Space, Vasthu Compliance, Security and Greenery, Tatanagar, Bangalore. Brokers Not Entertained. Contact +91 9980883973

DH Classifieds More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD
ALL KARNATAKA + PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9845114560 | +91 9900428036 | +91 9731810277
+91 9886213331 | 080- 45557163/164

BUSINESS

Business to Business

Events And Exhibitions

GR.EVENTS ATOZ Events Management, BANGALORE. Birthday`Party Weddings Naming Ceremony House`Warming Baby`Shower Flower Decoration Engagements Mehandi/Sangeet Ceremony Corporate Events. CALL:7411112565

Hotel & Restaurant

WELL FURNISHED Restaurant with well equipped kitchen & Everything in 1000 Sft area for SALE or RENT in Posh Vijaya Bank Layout, Bannerghatta Road. Lease Agreement Transferable. For Details Call: 9900001954

JOB OPPORTUNITIES

Teachers/ Professors

REQUIRES EXPERIENCED Primary and High School Teachers with B.A / B.Sc., B.Ed / M.A / M.Sc., M.Ed to teach Science, English, Mathematics and Sanskrit. English fluency is must. Walk-in-Interview. Contact Max Muller Public School, Mahalakshmi Layout, B'lore-96. Ph: 23376050. E-mail- maxmullerpublicschool .mlayout@gmail.com

General

HIRING OFFICE ASSISTANTS & CLERKS (Textile Export Company) Bommanahalli, Bangalore. Mail: starsilks@gmail.com

Graphic Designers

REQUIRED GRAPHIC Designer- Photoshop/ Corel Draw/ Illustrator. Experience 1 Year or Above in around Rajajinagar Contact: 9902891620/ 9845579620

PERSONAL

Change of Name

I,SURESHA Residing`at No.69, 1st`Floor, 4th_Cross Road,BOB Colony, 7th`Main_Road, J.P.Nagar 7th`Phase, Bengaluru- 560078 have`changed my`Name`to SURESH_S vide`Affidavit Dtd:05-03-2026 Sworn`Before Notary Ambreshappa, Bangalore

CHANGE OF NAME
I, **NAVEEN CHAND HARPREETH**, residing at No.48, "Srinivasa" RBI Colony, H.A.Farm Post, Anand Nagar, Bengaluru - 560024, have changed my name to **HARPREETH NAVEEN CHAND** vide affidavit dated 05-03-2026 before notary V. Srinivasa Reddy, Bengaluru.

I, CHHOGARAM R/at No.02 3rd Floor Mukkana Setty Ramanna Lane Balepet Cross Bangalore- 560023 have changed my name to CHHOGARAM PATEL vide affidavit dated: 5/3/2026 Before Notary Prakasha.C Bangalore.

I, NAGESHA B.B Residing at Bengaluru-96 have changed my name as NAGESH BAGUR BYATEGOWDA, vide affidavit dated 4/3/2026 before Notary K.S. Bammappanavar, Bengaluru

CHANGE OF NAME
I, **NEHA VINOD SARAF** D/o. Vinod R/a Flat No.1094, Anantashayan Galli, Belgaum, Hukeri, Karnataka-590001 Declared that **NEHA VINOD SARAF, NEHA SARAF** and **NEHA V SARAF** above mentioned Three Names are referred to one and the same person, i.e. myself only. Vide affidavit dated: 04.03.2026 before Notary Mohammed Hussain, K. Bangalore.

I, KOTRESHA K, changed my daughter's name from 'SAANVI UTTANGI KARANAM' to 'SAANVI UTTANGI' as per documents.

CHANGE OF NAME
I, **SAVITHA M N**, residing at No.48, "Srinivasa" RBI Colony, H.A.Farm Post, Anand Nagar, Bengaluru - 560024, have changed my name to **DEVIKA NAVEEN CHAND** and my correct Date of Birth is 10-05-1973, vide affidavit dated 05-03-2026 before notary V. Srinivasa Reddy, Bengaluru.

I, JAYALAKSHMI resident 1378/79 10th main road SBI staff colony Hosahalli extension stage I Vijayanagar, BANGALORE -560040 have changed my name to JAYALAKSHMI RAMUSA vide affidavit dated: 5/3/2026 Before Notary Prakasha.C Bangalore

PROPERTY CORNER

INTL. AIRPORT ROAD
West Facing 45,000sft
East Facing 11,500sft
Converted Commercial Property For Sale.
Suitable For MNC Office, Showroom, Bank, College.
High Rental Income Building.
Just 2 Km Before Devanahalli Airport
On Good Terms,
Very High Appreciation.
7022446922

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಐಎಎಫ್‌ನ ಸುಖೋಯ್–30 ಎಂಕೆಐ ನಾಪತ್ತೆ

ನವದೆಹಲಿ (ಪಿಟಿಐ): ಅಸ್ಸಾಂನ ಜೋರ್ಹಾಟ್ ವಾಯುನೆಲೆಯಿಂದ ಟೇಕ್ ಆಫ್ ಆದ ಭಾರತೀಯ ವಾಯುಪಡೆಯ (ಐಎಎಫ್) ಸುಖೋಯ್– 30 ಎಂಕೆಐ ಯುದ್ಧ ವಿಮಾನವು ಗುರುವಾರ ನಾಪತ್ತೆಯಾಗಿದೆ.

ಯುದ್ಧ ವಿಮಾನದ ಹುಡುಕಾಟಕ್ಕೆ ಶೋಧ ಹಾಗೂ ರಕ್ಷಣಾ ಕಾರ್ಯಾಚರಣೆ ಆರಂಭಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ಐಎಎಫ್ ಮಾಹಿತಿ ಹಂಚಿಕೊಂಡಿದೆ.

‘ರಷ್ಯಾ ನಿರ್ಮಿತ ಸುಖೋಯ್ ಯುದ್ಧ ವಿಮಾನವು ಟೇಕಾಫ್ ಆದ ಬಳಿಕ ಸಂಜೆ 7.42ರ ಸುಮಾರಿಗೆ ಸಂಪರ್ಕ ಕಳೆದುಕೊಂಡಿದೆ. ಇದರ ಶೋಧ ಕಾರ್ಯಾಚರಣೆ ಪ್ರಗತಿಯಲ್ಲಿದೆ’ ಎಂದು ತಿಳಿಸಿದೆ.

ಕಾರು ಡಿಕ್ಕಿ: ವೃದ್ಧೆ ಸಾವು

ಬೆಂಗಳೂರು: ಹೆಬ್ಬಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಅಮೃತ ಹಳ್ಳಿಯಲ್ಲಿ ಕಾರು ಡಿಕ್ಕಿ ಹೊಡೆದ ಪರಿಣಾಮ ವೃದ್ಧೆ ಮೃತಪಟ್ಟಿದ್ದಾರೆ.

ಅಮೃತಹಳ್ಳಿಯ ನಿವಾಸಿ ಮೇರಿ ಮಾರ್ಗರೇಟ್ (70) ಮೃತಪಟ್ಟವರು. ಗುರುವಾರ ಮುಂಜಾನೆ 5.30ರ ಸುಮಾರಿಗೆ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಅಮೃತಹಳ್ಳಿಯ 18ನೇ ಮುಖ್ಯ ರಸ್ತೆ ದಾಟುವಾಗ ವೇಗವಾಗಿ ಬಂದ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಮೇರಿ ಮಾರ್ಗರೇಟ್ ಅವರು ಗಂಭೀರ ವಾಗಿ ಗಾಯಗೊಂಡಿದ್ದರು. ಮೇರಿ ಅವರನ್ನು ಸ್ಥಳೀಯರು ಹಾಗೂ ಸಂಚಾರ ಪೊಲೀಸರು ಆಸ್ಪತ್ರೆಗೆ ದಾಖಲು ಮಾಡಲು ಕರೆದೊಯ್ಯುವ ಮಾರ್ಗದಲ್ಲಿ ವೃದ್ಧೆ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ತಿಳಿಸಿದರು.

ಹೆಬ್ಬಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡ್ರಗ್ ಪೆಡ್ಲರ್‌ಗಳ ‘ಮಾರ್ಗ’ ಬದಲು

ಕೇರಳದಿಂದ ನಗರಕ್ಕೆ ಹೆಚ್ಚಿನ ಪ್ರಮಾಣದ ಮಾದಕ ವಸ್ತುಗಳು ಪೂರೈಕೆ: ತನಿಖೆಯಿಂದ ಪತ್ತೆ

• ಆದಿತ್ಯ ಕೆ.ಎ.

ಬೆಂಗಳೂರು: ಕೇರಳ ರಾಜ್ಯದ ಮೂಲಕವೇ ಬೆಂಗಳೂರಿಗೆ ಹೆಚ್ಚಿನ ಪ್ರಮಾಣದಲ್ಲಿ ಡ್ರಗ್ಸ್ ಪೂರೈಕೆ ಆಗುತ್ತಿದೆ ಎಂಬುದು ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ತನಿಖೆಯಿಂದ ಗೊತ್ತಾಗಿದೆ. ಈ ಹಿಂದೆ ಆಂಧ್ರಪ್ರದೇಶ, ತೆಲಂಗಾಣ ಹಾಗೂ ಮಹಾರಾಷ್ಟ್ರ ರಾಜ್ಯಗಳಿಂದ ಹೆಚ್ಚಿನ ಪ್ರಮಾಣದ ಡ್ರಗ್ಸ್ ನಗರಕ್ಕೆ ಪೂರೈಕೆ ಆಗುತ್ತಿತ್ತು. ಇದೀಗ ಪೆಡ್ಲರ್‌ಗಳು ‘ಮಾರ್ಗ’ ಬದಲಾವಣೆ ಮಾಡಿಕೊಂಡಿದ್ದಾರೆ.

‘ನಗರದಲ್ಲಿ ಡ್ರಗ್ಸ್ ದಂಧೆಗೆ ಕಡಿವಾಣ ಹಾಕುವ ಉದ್ದೇಶದಿಂದ ಕಳೆದೆರಡು ತಿಂಗಳಿಂದ ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ. ಕಾರ್ಯಾಚರಣೆ ವೇಳೆ ಬಂಧಿಸಿರುವ ಆರೋಪಿಗಳ ಪೈಕಿ, ಕೇರಳದವರೇ ಶೇ 60 ಮಂದಿ ಇದ್ದಾರೆ. ಕೇರಳದ ಮೂಲಕವೇ ನಗರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಮಾದಕ ವಸ್ತುಗಳು ಪೂರೈಕೆ ಆಗುತ್ತಿರುವುದು ಕಂಡುಬಂದಿದೆ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ತಿಳಿಸಿದರು.

‘ಈ ಹಿಂದೆ ವಿಮಾನದ ಮೂಲಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಎಲ್‌ಎಸ್‌ಡಿ ಸ್ಟ್ರಿಪ್ಸ್, ಹೈಡ್ರೊಗಾಂಜಾ, ಚರಸ್, ಎಂಡಿಎಂಎ ಕ್ರಿಸ್ಟಲ್ ಅನ್ನು ಹೆಚ್ಚಿನ ಪ್ರಮಾಣದಲ್ಲಿ ತಂದು ಬೆಂಗಳೂರಿನ ವಿವಿಧೆಡೆಗೆ ಪೂರೈಸಲಾಗುತ್ತಿತ್ತು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎನ್‌ಸಿಬಿ ಹಾಗೂ ಕಸ್ಟಮ್ಸ್ ಅಧಿಕಾರಿಗಳು ತಪಾಸಣೆ ಬಿಗಿಗೊಳಿಸಿದ್ದರ ಪರಿಣಾಮ ‘ಡ್ರಗ್ ಪೆಡ್ಲರ್’ಗಳು ಪರ್ಯಾಯ ಮಾರ್ಗ ಕಂಡುಕೊಂಡಿದ್ದಾರೆ. ಥಾಯ್ಲೆಂಡ್, ಬ್ಯಾಂಕಾಕ್ ಸೇರಿದಂತೆ ಬೇರೆಬೇರೆ ದೇಶಗಳಿಂದ ವಿಮಾನದ ಮೂಲಕ ಕೇರಳಕ್ಕೆ ಡ್ರಗ್ಸ್ ಕಳುಹಿಸಲಾಗುತ್ತಿದೆ. ಅಲ್ಲಿಂದ ರಸ್ತೆ ಮಾರ್ಗದ ಮೂಲಕ ಬೆಂಗಳೂರಿಗೆ ಡ್ರಗ್ಸ್ ತರಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ಎರಡು ದಿನಗಳ ಹಿಂದೆ ಬಂಧಿಸಿದ್ದ ಪ್ರೇಮಿಗಳು ಕೇರಳ ಮೂಲದವರು ಎಂಬುದು ತನಿಖೆಯಿಂದ ಗೊತ್ತಾಗಿದೆ. ವಿನ್ಸೆಂಟ್ ಎಂಬಾತನ ಮೂಲಕ ಥಾಯ್ಲೆಂಡ್‌ನಿಂದ ದೇವರ ಚಿತ್ರ ಸೇರಿ ವಿವಿಧ ಚಿತ್ರಕಲೆಗಳ ರೂಪದಲ್ಲಿ ಎಲ್‌ಎಸ್‌ಡಿ ಸ್ಟ್ರಿಪ್ಸ್ ಕೇರಳಕ್ಕೆ ತರಿಸಿಕೊಳ್ಳುತ್ತಿದ್ದರು. ಅಲ್ಲಿಂದ ಬೆಂಗಳೂರಿಗೆ ಬರುತ್ತಿದ್ದ ಡ್ರಗ್ಸ್, ಅಶ್ವಿನ್ ಹಾಗೂ ಮುಬೀನಾ ಅವರಿದ್ದ ಬಾಗಲೂರಿನ ಅಪಾರ್ಟ್‌ಮೆಂಟ್ ಸೇರುತ್ತಿತ್ತು’ ಎಂದು ಸಿಸಿಬಿ ಮೂಲಗಳು ಹೇಳಿವೆ.

ಹೊರವಲಯದಲ್ಲಿ ಬಿಗಿ ತಪಾಸಣೆ: ‘ಯಲಹಂಕ, ಯಲಹಂಕ ನ್ಯೂಟೌನ್, ಕೊಡಿಗೇಹಳ್ಳಿ, ವಿದ್ಯಾರಣ್ಯಪುರ, ಸಂಪಿಗೇಹಳ್ಳಿ, ಕೊತ್ತನೂರು, ಬಾಗಲೂರು, ಅಮೃತಹಳ್ಳಿ, ದೇವನಹಳ್ಳಿ, ಚಿಕ್ಕಜಾಲ, ಸರ್ಜಾಪುರ, ಆನೇಕಲ್ ಭಾಗದಲ್ಲಿ ಪ್ರತಿಷ್ಠಿತ ಕಾಲೇಜುಗಳು, ಹಾಸ್ಟೆಲ್ ಹಾಗೂ ಪೇಯಿಂಗ್ ಗೆಸ್ಟ್‌ಗಳಿವೆ. ಕಾಲೇಜು ವಿದ್ಯಾರ್ಥಿಗಳು ಹಾಗೂ ಪಿ.ಜಿ ನಿವಾಸಿಗಳಿಗೆ ಡ್ರಗ್ಸ್ ಪೂರೈಸಲಾಗುತ್ತಿದೆ ಎಂಬ ಮಾಹಿತಿಯಿದೆ. ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ನಾಯಿ ಮೂತ್ರದ ‘ತಂತ್ರ’

ಅಶ್ವಿನ್

ಮುಬೀನಾ

ಡ್ರಗ್ಸ್ ಮಾರಾಟ ದಂಧೆ ಯಾರಿಗೂ ತಿಳಿಯದಂತೆ ಕೇರಳದ ಅಶ್ವಿನ್ ಹಾಗೂ ಮುಬೀನಾ ಅವರು ‘ತಂತ್ರ’ ರೂಪಿಸಿಕೊಂಡಿದ್ದರು ಎಂಬುದು ಸಿಸಿಬಿ ಪೊಲೀಸರ ತನಿಖೆಯಿಂದ ಪತ್ತೆಯಾಗಿದೆ.

ಆರು ವರ್ಷಗಳಿಂದ ಇಬ್ಬರೂ ಸಹ ಜೀವನ ನಡೆಸುತ್ತಿದ್ದರು. ಬಾಗಲೂರಿನ ಪ್ರತಿಷ್ಠಿತ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿದ್ದರು. ತಮ್ಮ ಫ್ಲ್ಯಾಟ್‌ನಲ್ಲಿ ಅಪಾರ ಪ್ರಮಾಣದ ಡ್ರಗ್ಸ್ ಸಂಗ್ರಹ ಮಾಡಿಕೊಂಡಿದ್ದರು. ಫ್ಲ್ಯಾಟ್‌ನಲ್ಲಿ ಅಂದಾಜು ₹18.50 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿತ್ತು.

ಆರೋಪಿಗಳು ಫ್ಲ್ಯಾಟ್‌ನಲ್ಲಿ ನಾಯಿಗಳನ್ನು ಸಾಕಿದ್ದರು. ಫ್ಲ್ಯಾಟ್‌ನಲ್ಲಿ ದಾಸ್ತಾನು ಮಾಡಿಕೊಂಡಿದ್ದ ಡ್ರಗ್ಸ್‌ನ ವಾಸನೆ ಹೊರಗಿನವರಿಗೆ ಗೊತ್ತಾಗಬಾರದೆಂದು ನಾಯಿಗಳ ಮೂತ್ರವನ್ನೇ ಬಂಡವಾಳ ಮಾಡಿಕೊಂಡಿದ್ದರು.

‘ಸಾಕಿದ್ದ ನಾಯಿಗಳು ಫ್ಲ್ಯಾಟ್‌ನಲ್ಲಿ ಮಲ-ಮೂತ್ರ ವಿಸರ್ಜನೆ ಮಾಡಿಕೊಂಡಿದ್ದರೂ ಅದನ್ನು ಸ್ವಚ್ಛ ಮಾಡುತ್ತಿರಲಿಲ್ಲ. ಅಕ್ಕಪಕ್ಕದ ಫ್ಲ್ಯಾಟ್‌ನವರು ನಾಯಿಯ ವಾಸನೆ ಎಂದು ಮೂಗು ಮುಚ್ಚಿಕೊಂಡು ಓಡಾಟ ನಡೆಸುತ್ತಿದ್ದರು. ‘ಡ್ರಗ್ಸ್ ಘಾಟು’ ಎಂಬ ಸುಳಿವು ಯಾರಿಗೂ ಸಿಗದಂತೆ ಆರೋಪಿಗಳು ತಂತ್ರ ರೂಪಿಸಿದ್ದರು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಜೋಡಿಯ ಐಷಾರಾಮಿ ಜೀವನ: ‘ಆರಂಭದಲ್ಲಿ ಸಣ್ಣ ಪ್ರಮಾಣದಲ್ಲಿ ಡ್ರಗ್ಸ್ ತರಿಸಿಕೊಂಡು ಮಾರಾಟ ಮಾಡುತ್ತಿದ್ದರು. ಮಾರಾಟದಿಂದ ಹೆಚ್ಚಿನ ಹಣ ಬರುತ್ತಿದ್ದಂತೆಯೇ, ಜಾಲವನ್ನು ವಿಸ್ತರಿಸಿಕೊಂಡಿದ್ದರು’ ಎಂದು ಮೂಲಗಳು ಹೇಳಿವೆ.

ಹಣ ಬಂದಂತೆ ಜೋಡಿಯ ಜೀವನಶೈಲಿ ದಿನದಿಂದ ದಿನಕ್ಕೆ ಬದಲಾವಣೆ ಆಗುತ್ತಿತ್ತು. ಅಕ್ಕಪಕ್ಕದ ಫ್ಲ್ಯಾಟ್‌ನವರು ಅನುಮಾನಗೊಂಡು ಬಾಗಲೂರು ಠಾಣೆಯ ಪೊಲೀಸರಿಗೆ ದೂರು ನೀಡಿದ್ದರು. ಅಶ್ವಿನ್, ಮುಬೀನಾ ಅವರ ಚಲನವಲನದ ಮೇಲೆ ಪೊಲೀಸರು ಕಣ್ಣಿಟ್ಟಿದ್ದರು. ಫ್ಲ್ಯಾಟ್ ಮೇಲೆ ದಾಳಿ ನಡೆಸಿದಾಗ ದೇವರ ಫೋಟೊ ಫ್ರೇಮ್, ಚಾಕೊಲೇಟ್, ಬಿಸ್ಕತ್ ಮತ್ತಿತರ ವಸ್ತುಗಳಲ್ಲಿ ಡ್ರಗ್ಸ್ ಅಡಗಿಸಿಟ್ಟು ಮಾರಾಟ ಮಾಡುತ್ತಿರುವುದು ಗೊತ್ತಾಗಿತ್ತು.

ತಪಾಸಣೆ: 31 ವಿದ್ಯಾರ್ಥಿಗಳು ಡ್ರಗ್ಸ್ ತೆಗೆದುಕೊಂಡಿದ್ದು ದೃಢ

ಪಶ್ಚಿಮ ವಿಭಾಗದ ವಿವಿಧ ಕಾಲೇಜುಗಳು ಹಾಗೂ ಹಾಸ್ಟೆಲ್‌ಗಳ ಮೇಲೆ ದಾಳಿ ನಡೆಸಿ ವಿದ್ಯಾರ್ಥಿಗಳನ್ನು ತಪಾಸಣೆಗೆ ಒಳಪಡಿಸಲಾಗಿದ್ದು, 31 ವಿದ್ಯಾರ್ಥಿಗಳು ಡ್ರಗ್ಸ್ ತೆಗೆದುಕೊಂಡಿರುವುದು ವೈದ್ಯಕೀಯ ಪರೀಕ್ಷೆಯಿಂದ ದೃಢಪಟ್ಟಿದೆ.

ಆರು ಶಿಕ್ಷಣ ಸಂಸ್ಥೆಗಳು, ಎರಡು ಹಾಸ್ಟೆಲ್‌ಗಳ ವ್ಯವಸ್ಥಾಪಕ ಮಂಡಳಿಯಿಂದ ಅನುಮತಿ ಪಡೆದು ತಪಾಸಣೆ ಹಾಗೂ ಪರಿಶೀಲನಾ ಕಾರ್ಯ ನಡೆಸಲಾಗಿದೆ. 1,200 ವಿದ್ಯಾರ್ಥಿಗಳ ಮೂತ್ರದ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗಿತ್ತು. ಆ ಪೈಕಿ, 31 ವಿದ್ಯಾರ್ಥಿಗಳು ಡ್ರಗ್ಸ್ ತೆಗೆದುಕೊಂಡಿರುವುದು ಸಾಬೀತಾಗಿದೆ ಎಂದು ಪಶ್ಚಿಮ ವಿಭಾಗದ ಡಿಸಿಪಿ ಎನ್.ಯತೀಶ್ ತಿಳಿಸಿದರು.

‘ಪುಣ್ಯ, ಪದ್ಮಾದೇವಯ್ಯ, ಕಾಡೆ, ಶರಾವತಿ, ಲಕ್ಷ್ಮಿ, ಕಾಂಗರೂ ಕೇರ್ ಆಸ್ಪತ್ರೆಗಳ ವೈದ್ಯರು ವೈದ್ಯಕೀಯ ಪರೀಕ್ಷೆಗೆ ನೆರವು ನೀಡಿದ್ದರು’ ಎಂದು ಪೊಲೀಸರು ಹೇಳಿದರು.

‘ಮಾದಕ ಪದಾರ್ಥಗಳ ಸೇವನೆ ಮಾಡುವವರನ್ನು ಪತ್ತೆಹಚ್ಚಿ ವ್ಯಸನದಿಂದ ಮುಕ್ತಗೊಳಿಸಲು ಇಲಾಖೆಯಿಂದ ‘ಸನ್ಮಿತ್ರ’ ಯೋಜನೆ ರೂಪಿಸಲಾಗಿದೆ. ವ್ಯಸನಿಗಳನ್ನು ಕೌನ್ಸೆಲಿಂಗ್‌ಗೆ ಒಳಪಡಿಸಿ, ಅವರು ಯಾವ ಕಾರಣಕ್ಕೆ ಮಾದಕ ಪದಾರ್ಥಗಳಿಗೆ ದಾಸರಾಗಿದ್ದಾರೆ, ಅವರಿಗೆ ಡ್ರಗ್ಸ್ ಎಲ್ಲಿ ಸಿಗುತ್ತಿದೆ ಎಂಬುದನ್ನು ತಿಳಿದುಕೊಳ್ಳಲಾಗುವುದು. ವ್ಯಸನಿಗಳ ಮೇಲೆ ನಿಗಾ ವಹಿಸಲು ಕಾನ್‌ಸ್ಟೆಬಲ್ ನೇಮಿಸಲಾಗುವುದು. ವ್ಯಸನಿಗಳ ಚಲನವಲನ ತಿಳಿದುಕೊಂಡು ಮಾದಕ ವ್ಯಸನದಿಂದ ಮುಕ್ತಗೊಳಿಸಲು ಪ್ರಯತ್ನ ಮಾಡಲಾಗುವುದು’ ಎಂದು ಪೊಲೀಸರು ಹೇಳಿದರು.

ಪಶ್ಚಿಮ ವಿಭಾಗದ ಪೊಲೀಸರು ವಿದ್ಯಾರ್ಥಿಗಳನ್ನು ತಪಾಸಣೆಗೆ ಒಳಪಡಿಸಿದರು

ಶ್ರೀನಿವಾಸ ಸ್ವಾಮಿಯ ತೇರು ಅಗರ ಗ್ರಾಮದಲ್ಲಿ ಸಂಚರಿಸಿತು

ಅಗರ ಶ್ರೀನಿವಾಸ ಬ್ರಹ್ಮ ರಥೋತ್ಸವ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಸರ್ಜಾಪುರ ರಸ್ತೆ ಅಗರ ಗ್ರಾಮದ ಶ್ರೀನಿವಾಸ ಸ್ವಾಮಿಯ ಬ್ರಹ್ಮ ರಥೋತ್ಸವವು ಗುರುವಾರ ವಿಜೃಂಭಣೆಯಿಂದ ಜರುಗಿತು.

ದೇವಸ್ಥಾನದಲ್ಲಿ ಕಳೆದೊಂದು ವಾರದಿಂದ ಶೇಷವಾಹನೋತ್ಸವ, ವಸಂತೋತ್ಸವ, ಕೀಲುಕುದುರೆ ಉತ್ಸವ, ತೆಪ್ಪೋತ್ಸವ ಹಾಗೂ ಗರುಡೋತ್ಸವ, ಶಯನೋತ್ಸವ ಮತ್ತು ಮಹಾಭಿಷೇಕ ನಡೆದವು. ಜತೆಗೆ ಹಂಸವಾಹನೋತ್ಸವ, ಪ್ರಹ್ಲಾದೋತ್ಸವ, ಕಲ್ಯಾಣೋತ್ಸವ, ಗಜೇಂದ್ರ ಪರಿಪಾಲನೆ ಹಾಗೂ ಗಜವಾಹನೋತ್ಸವಗಳು ನಡೆದವು.

ಸಾರಿಗೆ ಮತ್ತು ಮುಜರಾಯಿ ಖಾತೆ ಸಚಿವ ರಾಮಲಿಂಗಾರೆಡ್ಡಿ, ಶಾಸಕ ಸತೀಶ್ ರೆಡ್ಡಿ, ಮಾಜಿ ಸಂಸದ ಕುಪೇಂದ್ರರೆಡ್ಡಿ, ನಿವೃತ್ತ ನ್ಯಾಯಾಧೀಶ ಶ್ರೀನಿವಾಸರೆಡ್ಡಿ ರಥೋತ್ಸವದಲ್ಲಿ ಭಾಗವಹಿಸಿದ್ದರು. ಸಾವಿರಾರು ಭಕ್ತರು ದೇವರ ದರ್ಶನ ಪಡೆದರು.

ವಿಶೇಷ ಅಲಂಕಾರ: ಶ್ರೀನಿವಾಸ ಸ್ವಾಮಿಯ ಬೆಳ್ಳಿಯ ಮೂರ್ತಿಗೆ ಹೂವಿನ ಅಲಂಕಾರ ಮಾಡಲಾಗಿತ್ತು. ಪ್ರಧಾನ ಅರ್ಚಕರಾದ ಸುಂದರ ವೆಂಕಟೇಶ ಮಹಾದೇಶಿಕನ್ ಮತ್ತು ಎ.ಚಂದ್ರಮೌಳಿ ಅವರ ಮುಂದಾಳತ್ವದಲ್ಲಿ ಪೂಜಾ ವಿಧಿವಿಧಾನಗಳು ಜರುಗಿದವು. ಶ್ರೀನಿವಾಸ ಸ್ವಾಮಿಯ ರಥೋತ್ಸವವು ಅಗರ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು. ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಅಲ್ಲಲ್ಲಿ ಅರವಟಿಕೆ, ಮಜ್ಜಿಗೆ, ಪಾನಕ ವಿತರಿಸಲಾಯಿತು. ಅಗರದ ಬಸವಣ್ಣ ವ್ಯಾಯಾಮ ಶಾಲೆ ವತಿಯಿಂದ ನಡೆದ ಕುಸ್ತಿ ಪ್ರದರ್ಶನವು ಗಮನ ಸೆಳೆಯಿತು. ರಾತ್ರಿ ವಾದ್ಯಗೋಷ್ಠಿ, ಭಜನೆ, ಭಕ್ತಿಗೀತೆಗಳ ಗಾಯನ ನಡೆದವು.

ಪಲ್ಲಕ್ಕಿ ಉತ್ಸವ: ರಾಮದೇವರು, ಆಂಜನೇಯಸ್ವಾಮಿ, ಸತ್ಯನಾರಾಯಣ ಸ್ವಾಮಿ, ಕಾಶಿ ಈಶ್ವರ, ಯಲ್ಲಮ್ಮ ದೇವಿ, ಚನ್ನರಾಯಸ್ವಾಮಿ, ಗುರು ಆದಿಜಾಂಭವಂತ ಸ್ವಾಮಿ ದೇವರುಗಳ ಪಲ್ಲಕ್ಕಿ ಉತ್ಸವವು ಶುಕ್ರವಾರ ಮುಂಜಾನೆವರೆಗೂ ನಡೆಯಲಿದೆ’ ಎಂದು ಶ್ರೀ ಲಕ್ಷ್ಮಿವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥರ ಪಟೇಲ್ ಕೃಷ್ಣಾರೆಡ್ಡಿ ಮಾಹಿತಿ ನೀಡಿದರು.

‘ಜನಸಂಖ್ಯೆಗೆ ತಕ್ಕಂತೆ ಅನುದಾನ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಸಂಖ್ಯೆಗೆ ಅನುಗುಣವಾಗಿ ದಲಿತರಿಗೆ ಶೇಕಡ 24.1ರಷ್ಟು ಅನುದಾನವನ್ನು ಬಜೆಟ್‌ನಲ್ಲಿ ಮೀಸಲಿಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

‘ಪರಿಶಿಷ್ಟ ಜಾತಿಯ ಒಳ ಮೀಸಲಾತಿಯಲ್ಲಿ ಸೃಷ್ಟಿಯಾಗಿರುವ ರೋಸ್ಟರ್ ಬಿಂದು ಗೊಂದಲವನ್ನು ಸರಿಪಡಿಸಿ, 101 ಪರಿಶಿಷ್ಟ ಜಾತಿಗಳಿಗೂ ಅನ್ಯಾಯ ವಾಗದಂತೆ ನೇಮಕಾತಿ ಮಾಡಿಕೊಳ್ಳಬೇಕು. ಎಸ್‌ಸಿ, ಎಸ್‌ಟಿ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಮಾಡಬೇಕು. ರಾಜ್ಯದಲ್ಲಿ ನಾಗರಿಕ ಹಕ್ಕುಗಳ ರಕ್ಷಣೆ ಕಾಯ್ದೆ ಮತ್ತು ದೌರ್ಜನ್ಯ ತಡೆ ಕಾಯ್ದೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಪ್ರತಿಯೊಂದು ಗ್ರಾಮದಲ್ಲಿ ದಲಿತರಿಗಾಗಿ ಸ್ಮಶಾನ ಭೂಮಿಯನ್ನು ಮೀಸಲಿರಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಅರ್ಚಕ ಮತ್ತು ಪೌರಕಾರ್ಮಿಕ ವೃತ್ತಿಯನ್ನು ಸಾರ್ವತ್ರಿಕಗೊಳಿಸಬೇಕು. ಈ ಎರಡು ವೃತ್ತಿಗಳಲ್ಲಿ ಮೀಸಲಾತಿ ಸೌಲಭ್ಯ ಅನುಷ್ಠಾನಗೊಳಿಸಬೇಕು. ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಕಾಯಂಗೊಳಿಸಬೇಕು’ ಎಂದು ಒತ್ತಾಯಿಸಿದರು.

‘ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆಯನ್ನು ಕೂಡಲೇ ರದ್ದುಪಡಿಸಬೇಕು. ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅನುದಾನವನ್ನು ಬೇರೆ ಯೋಜನೆಗಳಿಗೆ ಬಳಕೆ ಮಾಡಬಾರದು. ಈಗಾಗಲೇ ಬಳಕೆ ಮಾಡಿರುವ ಅನುದಾನವನ್ನು ಹಿಂಪಡೆದು, ದಲಿತರ ಅಭಿವೃದ್ಧಿಗೆ ಆದ್ಯತೆ ನೀಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಸಮಿತಿಯ ರಾಜ್ಯ ಘಟಕದ ಸಂಚಾಲಕ ಜೀವನಹಳ್ಳಿ ವೆಂಕಟೇಶ್, ಸಂಘಟನಾ ಸಂಚಾಲಕರಾದ ಕಲ್ಲಪ್ಪ ಕಾಂಬಳೆ, ದೇವಗಳ್ಳಿ ಸೋಮಶೇಖರ್, ಎಫ್.ವೈ. ದೊಡ್ಡಮನಿ, ಶಿವಜ್ಞಾನಿ ಕಪಗಲ್, ಶರಣಪ್ಪ ಗುಳಬಾಳ, ಸದಸ್ಯರಾದ ತರೀಕೆರೆ ನಾಗರಾಜ್, ಜಯನ್ ಮಲ್ಪೆ, ಸಿ. ಚನ್ನಪ್ಪ, ಪಿ.ಎಸ್. ಕೌಡಿಮತ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಸದಸ್ಯರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಕ್ರಿಕೆಟ್ ಪಂದ್ಯಾವಳಿ ಆಯೋಜನೆ

ರಾಜರಾಜೇಶ್ವರಿನಗರ: ಯಶವಂತಪುರ ಶಾಸಕ ಎಸ್.ಟಿ. ಸೋಮಶೇಖರ್ ಕಪ್ 2026 ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಂಡಿದ್ದು 200 ತಂಡಗಳಿಗೆ ಉಚಿತ ಪ್ರವೇಶವಿದೆ. ಮೊದಲು ಬಂದವರಿಗೆ ಪ್ರಥಮ ಆದ್ಯತೆ ನೀಡಲಾಗುತ್ತದೆ.

ಮಾರ್ಚ್ 9ರಿಂದ 15ರವರೆಗೆ ಕೆಂಗೇರಿ ಉಪನಗರ ಗಣೇಶ ಆಟದ ಮೈದಾನದಲ್ಲಿ ಹೊನಲು ಬೆಳಕಿನ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ.

ಪ್ರಥಮ ಬಹುಮಾನ ₹3 ಲಕ್ಷ, ದ್ವಿತೀಯ ಬಹುಮಾನ ₹2.50 ಲಕ್ಷ, ತೃತೀಯ ಬಹುಮಾನ ₹2 ಲಕ್ಷ, ನಾಲ್ಕನೇ ಬಹುಮಾನ ₹1.50ಲಕ್ಷ, ಐದನೇ ಬಹುಮಾನ ₹1ಲಕ್ಷ ಮತ್ತು ಟ್ರೋಫಿ, ಎಲ್ಲಾ ತಂಡಗಳಿಗೆ ₹12 ಸಾವಿರ ಸಮಾಧಾನಕರ ಬಹುಮಾನ ನೀಡಲಾಗುತ್ತದೆ.

‘ಕ್ಷೇತ್ರದ ಯುವಜನರು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಕ್ರೀಡಾಪಟುಗಳಿಗೆ ಸ್ಪರ್ಧೆ ಹಮ್ಮಿಕೊಂಡಿದ್ದು, ಮತದಾರರ ಗುರುತಿನ ಚೀಟಿ ನೀಡಿ ಹೆಸರನ್ನು ನೊಂದಾಯಿಸಿಕೊಳ್ಳಬೇಕು’ ಎಂದು ಶಾಸಕ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

ಮಾಹಿತಿಗೆ ಸಂಪರ್ಕ ಸಂಖ್ಯೆ: 9945913189, 9986773424.

ಕೋಲ್ಕತ್ತ ರೇಸ್

ಶೈನ್ ಗೆಲ್ಲುವ ನಿರೀಕ್ಷೆ

ಎಕೋಸ್ ಆಫ್ ಲೈಟ್ ಹ್ಯಾಂಡಿಕ್ಯಾಪ್ ಶುಕ್ರವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಶೈನ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕಾರ್ನೇಷನ್ 1, ಮೊಗಾಂಬೊ 7, ಸಿಮ್ರನ್ಸ್ ಆಟಿಟ್ಯೂಡ್ 4
2ನೇ ರೇಸ್: ಡೈಮಂಡ್ ಗೋಲ್ಡ್ 7, ಕ್ಯಾಶಬಾನ್ 1, ಫಿನಾಮಿನಲ್ ಲೇಡಿ 9
3ನೇ ರೇಸ್: ಡಾಕ್ಟರ್ ಡೂಮ್ 1, ಕಾಂಟೆಸ್ಸಿನ 2, ಹನಿ ಕೇಕ್ 6
4ನೇ ರೇಸ್: ಸ್ಟಾರ್ ಪವರ್ 2, ಗ್ಲೋಬಲ್ ಫ್ಯಾಶನ್ 6, ಸೀನಾ 12
5ನೇ ರೇಸ್: ಶೈನ್ 2, ಮರ್ಲೆಟ್ 5, ನಾಟಿ ಬ್ಲಶ್ 1
6ನೇ ರೇಸ್: ಡ್ಯೂಸೆನ್‌ಬರ್ಗ್ 1, ಮಲ್ಟಿ ಸಕ್ಸಸ್ 7, ಪಾಲೈಟ್ ವಾರಿಯರ್ 5

ಉತ್ತಮ ಬೆಟ್: ಕಾರ್ನೇಷನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಬೆಂಗಳೂರು ವಿಮಾನ ನಿಲ್ದಾಣಕ್ಕೆ ಸತತ ನಾಲ್ಕನೇ ವರ್ಷವೂ ಸಂದ ಪ್ರಶಸ್ತಿ

ಉತ್ತಮ ವಿಮಾನ ನಿಲ್ದಾಣದ ಗರಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂ.ಗ್ರಾಮಾಂತರ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ 2025ರ ಏರ್‌ಪೋರ್ಟ್ ಕೌನ್ಸಿಲ್ ಇಂಟರ್‌ನ್ಯಾಷನಲ್ ನೀಡುವ ಏರ್‌ಪೋರ್ಟ್ ಸರ್ವಿಸ್ ಕ್ವಾಲಿಟಿ ಪ್ರಶಸ್ತಿಯಲ್ಲಿ ‘ವಿಶ್ವದ ಅತ್ಯುತ್ತಮ ವಿಮಾನ ನಿಲ್ದಾಣ’ ಎಂಬ ಗೌರವ ಪಡೆದುಕೊಂಡಿದೆ. ಬೆಂಗಳೂರು ವಿಮಾನ ನಿಲ್ದಾಣ ಸತತ ನಾಲ್ಕನೇ ವರ್ಷವೂ ಈ ಪ್ರಶಸ್ತಿಗೆ ಪಾತ್ರವಾಗಿದೆ.

ಪ್ರಯಾಣಿಕರಿಂದ ಪಡೆಯುವ ನೇರ ಪ್ರತಿಕ್ರಿಯೆಗಳ ಆಧರಿಸಿ ಪ್ರಶಸ್ತಿ ನೀಡಲಾಗುತ್ತದೆ. ವಿಮಾನ ನಿಲ್ದಾಣದಲ್ಲಿ ದೊರೆಯುವ ಸೇವೆ, ಸೌಕರ್ಯ, ಸ್ವಚ್ಛತೆ, ಪ್ರಯಾಣಿಕರಿಗೆ ಇರುವ ಅನುಕೂಲತೆ ಮತ್ತು ಸೌಲಭ್ಯಗಳನ್ನು ಗಮನದಲ್ಲಿಟ್ಟು ಮೌಲ್ಯಮಾಪನ ಮಾಡಲಾಗುತ್ತದೆ.

ವಿಮಾನ ನಿಲ್ದಾಣದ ಟರ್ಮಿನಲ್-1 ಮತ್ತು ಟರ್ಮಿನಲ್-2ರಲ್ಲಿ ಬಂದಿಳಿಯುವ ಪ್ರಯಾಣಿಕರಿಗೆ ನೀಡುವ ಸೇವೆಗಳು ಉತ್ತಮ ಗುಣಮಟ್ಟದ್ದಾಗಿವೆ ಎಂದು ಪ್ರಯಾಣಿಕರ ಪ್ರತಿಕ್ರಿಯೆ ತಿಳಿಸಿದೆ.

ಇಮಿಗ್ರೇಷನ್ ಪ್ರಕ್ರಿಯೆ ಸಮಯ ಕಡಿಮೆಯಾಗಿರುವುದು, ಸರಕು-(ಬ್ಯಾಗೇಜ್) ಪಡೆಯುವ ವ್ಯವಸ್ಥೆ ಸುಧಾರಿಸಿರುವುದು, ವಿಮಾನ ನಿಲ್ದಾಣದೊಳಗಿನ ಮಾರ್ಗಸೂಚಿಗಳು (ಸೈನ್ ಬೋರ್ಡ್), ನಿರೀಕ್ಷಣಾ ಪ್ರದೇಶಗಳ ಸೌಕರ್ಯ ಮತ್ತು ಡಿಜಿಟಲ್ ಸೇವೆಗಳು ಸುಧಾರಿಸಿರುವುದರಿಂದ ಪ್ರಶಸ್ತಿ ಲಭಿಸಿದೆ ಎಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ತಿಳಿಸಿದೆ.

2025ರಲ್ಲಿ 2024ರಿಗಿಂತ ಕೆಲವು ಸೇವೆಗಳಲ್ಲೂ ಸುಧಾರಣೆ ಕಂಡುಬಂದಿದೆ. ವೈ-ಫೈ ಸೌಲಭ್ಯ, ಸರಕು ಪಡೆಯುವ ಸ್ಥಳದ ಡಿಸ್‌ಪ್ಲೇ ವ್ಯವಸ್ಥೆ, ಟ್ರಾಲಿ, ನಿರೀಕ್ಷಣಾ ಪ್ರದೇಶಗಳ ಆರಾಮದಾಯಕತೆ, ಟರ್ಮಿನಲ್ ಒಳಗಿನ ನಡೆದು ಹೋಗುವ ದೂರ, ಬ್ಯಾಗೇಜ್ ಪಡೆಯುವ ಸಮಯ, ವಿಮಾನದಿಂದ ಇಳಿಯುವ ಸಮಯ ಹಾಗೂ ಇಮಿಗ್ರೇಷನ್ ಪ್ರಕ್ರಿಯೆ ಸಮಯ ಕಡಿಮೆಯಾಗಿದೆ. ಈ ಅಂಶವನ್ನು ಪರಿಗಣಿಸಿ ಪ್ರಶಸ್ತಿ ನೀಡಲಾಗಿದೆ.

‘ಪ್ರಯಾಣಿಕರಿಗೆ ವೇಗವಾದ, ಸುಗಮ ಮತ್ತು ಅನುಕೂಲಕರ ಅನುಭವ ನೀಡುವುದು ನಮ್ಮ ಮುಖ್ಯ ಉದ್ದೇಶ. ವಿಮಾನದಿಂದ ಇಳಿಯುವ ಕ್ಷಣದಿಂದ ಹೊರಗೆ ಬರುವವರೆಗಿನ ಪ್ರಕ್ರಿಯೆ ಸುಗಮವಾಗಿರಲು ನಾವು ವ್ಯವಸ್ಥೆ ಮಾಡಿದ್ದೇವೆ. ನಾಲ್ಕನೇ ವರ್ಷವೂ ಈ ಪ್ರಶಸ್ತಿ ದೊರೆತಿರುವುದು ನಮ್ಮ ತಂಡದ ಒಟ್ಟಾರೆ ಪ್ರಯತ್ನದ ಫಲವಾಗಿದೆ’ ಎಂದು ವಿಮಾನ ನಿಲ್ದಾಣ ಲಿಮಿಟೆಡ್ ಮುಖ್ಯ ಕಾರ್ಯಾಚರಣೆ ಅಧಿಕಾರಿ ಗಿರೀಶ್ ನಾಯರ್ ತಿಳಿಸಿದ್ದಾರೆ.


ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ

ಏ. 1ರಿಂದ ಆನ್‌ಲೈನ್‌ನಲ್ಲೇ ವ್ಯವಸ್ಥೆ ಅಳವಡಿಸಿಕೊಳ್ಳಲು ನಿರ್ದೇಶನ

ಕೈಬರಹದ ರಿಜಿಸ್ಟರ್ ಸ್ಥಗಿತಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಹಣಕಾಸು ವರ್ಷದಿಂದ (ಏಪ್ರಿಲ್ 1) ರಿಜಿಸ್ಟರ್‌ಗಳನ್ನು ಕೈಬರಹದ ಪದ್ಧತಿಯ ಬದಲು ಆನ್‌ಲೈನ್ ವ್ಯವಸ್ಥೆಗೆ ಬದಲಾಯಿಸಿಕೊಳ್ಳಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ನಿರ್ದೇಶಿಸಿದರು.

ಮಹೇಶ್ವರ್ ರಾವ್

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಆರ್.ಆರ್. ನಗರ ವಲಯದ ಕಚೇರಿಗೆ ಭೇಟಿ ನೀಡಿದ ಅವರು, ಜಾಬ್ ಕೋಡ್ ಹಾಗೂ ತಾಂತ್ರಿಕ ಅನುಮೋದನೆಗೆ ಸಂಬಂಧಿಸಿದ ರಿಜಿಸ್ಟರ್ ಪುಸ್ತಕಗಳನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ರಿಜಿಸ್ಟರ್‌ಗಳನ್ನು ಇನ್ನೂ ಕೈಬರಹದಲ್ಲೇ ನಿರ್ವಹಿಸುತ್ತಿರುವುದನ್ನು ಗಮನಿಸಿ, ಅವುಗಳನ್ನು ಆನ್‌ಲೈನ್ ವ್ಯವಸ್ಥೆಗೆ ಕೂಡಲೇ ಬದಲಾಯಿಸುವಂತೆ ಆದೇಶಿಸಿದರು.

ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪರಿಶೀಲನೆ ನಡೆಸಿದರು. ನವರಂಗ್ ಚಿತ್ರಮಂದಿರದಿಂದ ರಾಜಾಜಿನಗರ 10ನೇ ಕ್ರಾಸ್‌ವರೆಗಿನ 700 ಉದ್ದದ ರಸ್ತೆಯ ಪೈಕಿ ಒಂದು ಭಾಗದ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಿ, ವಾಹನಗಳ ಸಂಚಾರಕ್ಕೆ ಅನುವು ಮಾಡಲಾಗಿದೆ. ಮತ್ತೊಂದು ಭಾಗದ ರಸ್ತೆಯನ್ನು ಮಾರ್ಚ್ 31ರೊಳಗಾಗಿ ಪೂರ್ಣಗೊಳಿಸಲಾಗು ವುದು ಎಂದು ಮುಖ್ಯ ಎಂಜಿನಿಯರ್ ಮಾಹಿತಿ ನೀಡಿದರು.

ನವರಂಗ್‌ನಿಂದ ಸ್ಟಾರ್ ಬಜಾರ್ ಸಿಗ್ನಲ್‌ವರೆಗೆ 1.8 ಕಿ.ಮೀ ವೈಟ್ ಟಾಪಿಂಗ್ ಕಾಮಗಾರಿಯನ್ನು ಜುಲೈ ಅಂತ್ಯದೊಳಗಾಗಿ ಪೂರ್ಣಗೊಳಿಸಲು ಮಹೇಶ್ವರ್ ರಾವ್ ಸೂಚನೆ ನೀಡಿದರು.

ಕ್ರಿಮಿನಲ್ ಪ್ರಕರಣ ದಾಖಲಿಸಿ: ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಜಾಹೀರಾತುಗಳನ್ನು ಅಳವಡಿಸುವವರ ಮೇಲೆ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುವಂತೆ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಲ್ಲೇಶ್ವರದ ಐಪಿಪಿ ಕೇಂದ್ರದಲ್ಲಿ ಸಾರ್ವಜನಿಕ ಸಂಪರ್ಕ ಸಭೆಯಲ್ಲಿ ಅವರು ಮಾತನಾಡಿದರು.

‘ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಿದೆ. ಈ ಸಂಬಂಧ ಇನ್ನು ಮುಂದೆ ಯಾರಾದರೂ ಅನಧಿಕೃತವಾಗಿ ಜಾಹೀರಾತುಗಳನ್ನು ಅಳವಡಿಸಿದರೆ ಅಂತಹವರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಬೇಕು. ಅದಲ್ಲದೆ, ಅಂತಹ ಜಾಹೀರಾತುಗಳನ್ನು ಮುದ್ರಿಸುವವರ ಮೇಲೆಯೂ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಬೇಕು. ಇದಕ್ಕಾಗಿ, ಕಾನೂನು ಕೋಶದಿಂದ ಒಬ್ಬ ಅಧಿಕಾರಿಯನ್ನು ಪ್ರತ್ಯೇಕವಾಗಿ ನಿಯೋಜಿಸಬೇಕು’ ಎಂದು ಆದೇಶಿಸಿದರು.

ಸಾರ್ವಜನಿಕ ಸಂಪರ್ಕ ಸಭೆಯಲ್ಲಿ ಕಸದ ಸಮಸ್ಯೆ, ಅನಧಿಕೃತ ಕಟ್ಟಡಗಳ ನಿರ್ಮಾಣ, ಇ-ಖಾತಾ ಸಮಸ್ಯೆ, ಇ-ಸ್ವತ್ತು(ಇಪಿಐಡಿ), ಪಾದಚಾರಿ ಮಾರ್ಗಗಳಲ್ಲಿ ಪಾರ್ಕಿಂಗ್ ಮಾಡುವುದು ಸೇರಿದಂತೆ ವಿವಿಧ ಸಮಸ್ಯೆಗಳ ಕುರಿತು 101 ನಾಗರಿಕರಿಂದ ದೂರುಗಳನ್ನು ಸ್ವೀಕರಿಸಲಾಯಿತು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಸಿಇಒ ಕರೀಗೌಡ, ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ, ಅಭಿವೃದ್ಧಿ ಹೆಚ್ಚುವರಿ ಆಯುಕ್ತ ದಿಗ್ವಿಜಯ್ ಬೋಡ್ಕೆ, ಕಂದಾಯ ಹೆಚ್ಚುವರಿ ಆಯುಕ್ತ ಮಂಜುನಾಥ ಸ್ವಾಮಿ, ಜಂಟಿ ಆಯುಕ್ತ ಸಂಗಪ್ಪ ಉಪಸ್ಥಿತರಿದ್ದರು.

ತಂಬಾಕು ಉತ್ಪನ್ನ ಮಾರಾಟ ನಿಯಂತ್ರಣಕ್ಕೆ ಕ್ರಮ

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆ ಮತ್ತು ಕಾಲೇಜುಗಳ 100 ಮೀಟರ್ ವ್ಯಾಪ್ತಿಯೊಳಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವ ಅಂಗಡಿಗಳ ಮೇಲೆ ದಾಳಿ ನಡೆಸಿ, ಸಿಗರೇಟ್ ಮತ್ತು ಇನ್ನಿತರೆ ತಂಬಾಕು ಉತ್ಪನಗಳ ಕಾಯ್ದೆಯಡಿ (ಕೊಟ್ಪಾ) ಪ್ರಕರಣ ದಾಖಲಿಸಿ ಮಳಿಗೆಗಳನ್ನು ಮುಚ್ಚುವಂತೆ ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಸೂಚಿಸಿದರು.

ಸಾರ್ವಜನಿಕ ಆರೋಗ್ಯ ಮತ್ತು ಸುರಕ್ಷತಾ ಹಿತದೃಷ್ಟಿಯಿಂದ ಮಧ್ಯಮ ಮತ್ತು ಅತಿ ಹೆಚ್ಚು ಅಪಾಯಕಾರಿ ಉದ್ದಿಮೆಗಳನ್ನು ಉದ್ದಿಮೆ ಪರವಾನಗಿ ಪಡೆದ ನಂತರ ಕಡ್ಡಾಯವಾಗಿ ಪರಿಶೀಲಿಸಬೇಕು. ನಿಯಮಗಳನ್ನು ಉಲ್ಲಂಘಿಸುವ ಉದ್ದಿಮೆಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಾರ್ವಜನಿಕ ಸುರಕ್ಷತಾ ದೃಷ್ಟಿಯಿಂದ ಅತಿ ಎತ್ತರದ ಕಟ್ಟಡಗಳ ಮೇಲಿನ ರೂಫ್‌ಟಾಪ್‌ನಲ್ಲಿರುವ ರೆಸ್ಟೋರೆಂಟ್‌ಗಳ ಅಡುಗೆ ಕೋಣೆಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಿ ಎಂದು ಆರೋಗ್ಯ ವಿಭಾಗದ ಅಧಿಕಾರಿಗಳಿಗೆ ಡಿ.ಎಸ್. ರಮೇಶ್ ಸೂಚಿಸಿದರು.

ಕಟ್ಟಡಗಳ ತಳ ಅಂತಸ್ತನ್ನು ವಾಹನ ನಿಲ್ದಾಣಕ್ಕಾಗಿ ಮಾತ್ರ ಮೀಸಲಿರಿಸಿದ್ದು, ಅಲ್ಲಿ ವಾಣಿಜ್ಯ ಚಟುವಟಿಕೆ ನಡೆಸುವ ಕಟ್ಟಡಗಳನ್ನು ಪರಿಶೀಲಿಸಿ, ಅವುಗಳ ಉದ್ದಿಮೆ ಪರವನಾಗಿಯನ್ನು ರದ್ದು ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸೌಂದರ್ಯ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರ ದೂರುಗಳನ್ನು ಮುನಿರಾಜು ಮತ್ತು ಅಧಿಕಾರಿಗಳು ಆಲಿಸಿದರು

ಕುಂದುಕೊರತೆ ಆಲಿಸಿದ ಶಾಸಕ ಮುನಿರಾಜು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬಾಗಲಗುಂಟೆ ವಾರ್ಡ್ ಸೌಂದರ್ಯ ಬಡಾವಣೆಯ ಅನೇಕ ಕುಂದು ಕೊರತೆಗಳನ್ನು ಬಗೆಹರಿಸಲು ಎಲ್ಲಾ ವಿಭಾಗದ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿದ ಶಾಸಕ ಎಸ್. ಮುನಿರಾಜು, ಅಗತ್ಯ ಪರಿಹಾರ ಕ್ರಮ ಕೈಗೊಳ್ಳಲು ಸೂಚಿಸಿದರು.

ಸೌಂದರ್ಯ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ನೀಡಿದ ದೂರಿನ ಮೇರೆಗೆ ಮುನಿರಾಜು ಸಭೆ ನಡೆಸಿದರು.

‘ಬೀದಿ ನಾಯಿ ಮತ್ತು ಕೋತಿಗಳ ಹಾವಳಿ, ಕಸದ ಸಮಸ್ಯೆ ತೀವ್ರವಾಗಿದೆ. ಮನೆ ಕಟ್ಟುವವರು ಚರಂಡಿಯಲ್ಲಿ ಮಣ್ಣು ಸುರಿಯುವುದನ್ನು ನಿಲ್ಲಿಸಬೇಕು. ವಾಹನಗಳಿಗೆ ಅಡ್ಡಿಪಡಿಸುವ ಮರದ ಕೊಂಬೆಗಳ ಕತ್ತರಿಸಬೇಕು, ಪ್ರಕೃತಿ ಬಡಾವಣೆಯಲ್ಲಿನ ಚರಂಡಿಯ ನೀರು ಸೌಂದರ್ಯ ಬಡಾವಣೆಗೆ ಬರುತ್ತಿದ್ದು, ಅದನ್ನು ನಿಲ್ಲಿಸಬೇಕು. ವ್ಹೀಲಿ ಮಾಡುವವರಿಗೆ ಕಡಿವಾಣ ಹಾಕಬೇಕು, ಬೀದಿದೀಪದ ಸಮಸ್ಯೆಗಳನ್ನು ಪರಿಹರಿಸಬೇಕು’ ಎಂದು ನಾಗರಿಕರು ಮನವಿ ಮಾಡಿದರು.

‘ಜಲ್ಲಿಕಲ್ಲು ಮತ್ತು ಮರಳು ತುಂಬಿದ ಲಾರಿಗಳನ್ನು ಹೆದ್ದಾರಿಯಲ್ಲಿ ತಡೆಗಟ್ಟುವುದರಿಂದ ಈ ಬಡಾವಣೆಯ ಮಾರ್ಗವಾಗಿ ಅವು ಚಲಿಸಿ ರಸ್ತೆ ಹಾಳು ಮಾಡುತ್ತಿವೆ. ಅಂತಹ ಲಾರಿಗಳಿಗೆ ಕಡಿವಾಣ ಹಾಕಬೇಕು’ ಎಂಬ ನಿವಾಸಿಗಳ ಮನವಿಗೆ ಸ್ಪಂದಿಸಿದ ಮುನಿರಾಜು, ಈ ಬಗ್ಗೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಕೇಶವಮೂರ್ತಿ, ಎಂಜಿನಿಯರ್‌ಗಳಾದ ಐಶ್ವರ್ಯ, ಮಂಜೇಗೌಡ, ದರ್ಶನ್, ಅರಣ್ಯ ಇಲಾಖೆಯ ರಾಜಪ್ಪ, ಚಿಕ್ಕಣ್ಣ ಉಪಸ್ಥಿತರಿದ್ದರು.

₹10,000 ಲಂಚ ಪಾಲಿಕೆ ಸಿಬ್ಬಂದಿ ಬಂಧನ

ಬೆಂಗಳೂರು: ಗುತ್ತಿಗೆದಾರರೊಬ್ಬರಿಂದ ₹10,000 ಲಂಚ ಪಡೆಯುತ್ತಿದ್ದ ವೇಳೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಪಾಲಿಕೆಯ ಸ್ಯಾನಿಟರಿ ಸೂಪರ್‌ವೈಸರ್ ಒಬ್ಬರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ನಗರದ ಕಾವಲ್ ಬೈರಸಂದ್ರದ ವ್ಯಾಪ್ತಿಯಲ್ಲಿ ಗುತ್ತಿಗೆದಾರ ಅಬ್ದುಲ್ ರೆಹಮಾನ್ ಅವರು ರಸ್ತೆ ದುರಸ್ತಿ ಕಾರ್ಯ ನಡೆಸುತ್ತಿದ್ದರು. ಈ ವೇಳೆ ಅಲ್ಲಿದ್ದ ಚಿಪ್ಪಿಂಗ್ ಯಂತ್ರವನ್ನು ನಗರ ಪಾಲಿಕೆಯ ಆರೋಗ್ಯ ವಿಭಾಗದ ಸ್ಯಾನಿಟರಿ ಸೂಪರ್‌ವೈಸರ್ ಎಂ.ನಾಗರಾಜ ಅವರು ಅನಧಿಕೃತವಾಗಿ ಜಪ್ತಿ ಮಾಡಿದ್ದರು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಯಂತ್ರವನ್ನು ಬಿಡುಗಡೆ ಮಾಡಲು ₹10,000 ಲಂಚ ನೀಡುವಂತೆ ನಾಗರಾಜ ಅವರು ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಅಬ್ದುಲ್ ಅವರು ನೀಡಿದ್ದ ದೂರಿನ ಆಧಾರದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ಅಬ್ದುಲ್ ಅವರು ನಾಗರಾಜ ಅವರಿಗೆ ಗುರುವಾರ ಹಣ ನೀಡಿದ್ದರು. ಈ ವೇಳೆ ದಾಳಿ ನಡೆಸಿ, ಆರೋಪಿಯನ್ನು ಬಂಧಿಸಲಾಯಿತು ಎಂದು ಮಾಹಿತಿ ನೀಡಿದ್ದಾರೆ.

ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜ್ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು. ಲಂಚದ ಹಣವನ್ನು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರೆದಿದೆ ಎಂದಿದ್ದಾರೆ.

ನಿಮ್ಹಾನ್ಸ್: ದಾಖಲೆ ಸಂಖ್ಯೆಯ ರೋಗಿಗಳ ಭೇಟಿ

ಮನೋರೋಗಗಳ ಚಿಕಿತ್ಸೆಗೆ ದೇಶದ ವಿವಿಧೆಡೆಯಿಂದ ಬರುವ ರೋಗಿಗಳು

• ವರುಣ ಹೆಗಡೆ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಗೆ (ನಿಮ್ಹಾನ್ಸ್) ಚಿಕಿತ್ಸೆ ಸಂಬಂಧ ಬರುವ ರೋಗಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು, ಕಳೆದ ಒಂದೇ ವರ್ಷದಲ್ಲಿ ಒಟ್ಟು 6.80 ಲಕ್ಷ ರೋಗಿಗಳು ನೋಂದಣಿ ಮಾಡಿಕೊಂಡು ಚಿಕಿತ್ಸೆ ಪಡೆದಿದ್ದಾರೆ.

ಈವರೆಗೆ ವರ್ಷದ ಅವಧಿಯಲ್ಲಿ ಚಿಕಿತ್ಸೆ ಪಡೆದ ಗರಿಷ್ಠ ರೋಗಿಗಳ ಸಂಖ್ಯೆ ಇದಾಗಿದೆ. ನಗರದ ಹೃದಯ ಭಾಗವಾದ ಲಕ್ಕಸಂದ್ರದಲ್ಲಿ ಇರುವ ಸಂಸ್ಥೆಯು, ವೈದ್ಯಕೀಯ ಚಿಕಿತ್ಸೆಯ ಜತೆಗೆ ಸಂಶೋಧನೆ ಹಾಗೂ ಶಿಕ್ಷಣಕ್ಕೂ ಆದ್ಯತೆ ನೀಡಿದೆ. ಈ ಸಂಸ್ಥೆಗೆ ರಾಜ್ಯದ ವಿವಿಧ ಭಾಗಗಳ ಜತೆಗೆ, ಹೊರ ರಾಜ್ಯಗಳಿಂದಲೂ ಅಧಿಕ ಸಂಖ್ಯೆಯಲ್ಲಿ ರೋಗಿಗಳು ಬರುತ್ತಿದ್ದಾರೆ. 2024ರಲ್ಲಿ ಒಳರೋಗಿಗಳೂ ಸೇರಿ ಒಟ್ಟು 5.5 ಲಕ್ಷ ಮಂದಿ ಸಂಸ್ಥೆಗೆ ಭೇಟಿ ನೀಡಿದ್ದರು.

ಕಳೆದ ವರ್ಷ ಈ ಸಂಖ್ಯೆ 6 ಲಕ್ಷದ ಗಡಿ ದಾಟಿದೆ. ನಿತ್ಯ ಸರಾಸರಿ ಎರಡು ಸಾವಿರ ಮಂದಿ ಹೊರರೋಗಿ ವಿಭಾಗಕ್ಕೆ ಭೇಟಿ ನೀಡುತ್ತಿದ್ದು, ಹಾಲಿ ವ್ಯವಸ್ಥೆಯಡಿ ರೋಗಿಗಳ ನಿರ್ವಹಣೆ ಕಷ್ಟಸಾಧ್ಯವಾಗಿದೆ. ಚಿಕಿತ್ಸೆ ಸಂಬಂಧ ರೋಗಿಗಳು ಮುಂಜಾನೆಯಿಂದಲೇ ಸಂಸ್ಥೆಯ ಆವರಣದಲ್ಲಿ ಕಾಯುವ ದೃಶ್ಯ ಸಾಮಾನ್ಯವಾಗಿದೆ.

ಮುಖ್ಯಾಂಶಗಳು

- ಸಂಸ್ಥೆಯಲ್ಲಿ 60 ವಿಭಾಗಗಳ ಕಾರ್ಯ ನಿರ್ವಹಣೆ
- ಒಂದೇ ವರ್ಷದಲ್ಲಿ 6.80 ಲಕ್ಷ ಮಂದಿ ನೋಂದಣಿ

ಅಂಕಿ ಅಂಶಗಳು

1,096 ನಿಮ್ಹಾನ್ಸ್ ಹೊಂದಿರುವ ಹಾಸಿಗೆಗಳು

2,000 ನಿತ್ಯ ಭೇಟಿ ನೀಡುವ ಸರಾಸರಿ ಹೊರರೋಗಿಗಳು

ಹೊರ ರೋಗಿಗಳ ವಿಭಾಗ, ತುರ್ತು ಚಿಕಿತ್ಸಾ ವಿಭಾಗ, ನರರೋಗ ವಿಭಾಗ, ನರಶಸ್ತ್ರಚಿಕಿತ್ಸಾ ವಿಭಾಗ, ಮನೋವೈದ್ಯ ವಿಭಾಗ (ಮಕ್ಕಳು ಮತ್ತು ವಯಸ್ಕರಿಗೆ ಪ್ರತ್ಯೇಕ), ಮಾದಕ ವ್ಯಸನಿಗಳ ಚಿಕಿತ್ಸಾ ವಿಭಾಗ ಸೇರಿದಂತೆ 60ಕ್ಕೂ ಅಧಿಕ ವಿಭಾಗಗಳನ್ನು ಸಂಸ್ಥೆ ಒಳಗೊಂಡಿದೆ. ಅಪಘಾತ ಸೇರಿದಂತೆ ನಾನಾ ಕಾರಣಗಳಿಂದ ಗಾಯಗೊಂಡು ತಲೆಗೆ ಗಂಭೀರವಾಗಿ ಪೆಟ್ಟು ಮಾಡಿಕೊಂಡವರು, ಮನೋರೋಗಿಗಳು, ಮಾನಸಿಕ ಅಸ್ವಸ್ಥರು, ನರರೋಗ ಸಮಸ್ಯೆ ಉಳ್ಳವರು, ದುಶ್ಚಟಗಳಿಗೆ ಒಳಗಾದವರು, ವಯೋಸಹಜ ನರ ದೌರ್ಬಲ್ಯಗಳನ್ನು ಹೊಂದಿರುವವರು, ಸ್ಮರಣ ಶಕ್ತಿ ಕುಂದಿದವರು ಸೇರಿ ಮಿದುಳು ಮತ್ತು ಮನಸ್ಸಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಒಳಗಾದವರಿಗೆ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತದೆ.

ಇಳಿದ ಸಂಖ್ಯೆ ಏರಿಕೆ: ನಗರದಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಸಂಸ್ಥೆಗೆ ಚಿಕಿತ್ಸೆ ಸಂಬಂಧ ಬರುವವರ ಸಂಖ್ಯೆ ಇಳಿಕೆಯಾಗಿತ್ತು. ಕೋವಿಡ್ ನಿರ್ಬಂಧ, ಲಾಕ್‌ಡೌನ್‌ನಿಂದಾಗಿ ಹೊರ ರಾಜ್ಯಗಳ ರೋಗಿಗಳಿಗೆ ಇಲ್ಲಿಗೆ ಬರುವುದು ಕಷ್ಟಸಾಧ್ಯವಾಗಿತ್ತು. 2022ರಲ್ಲಿ ಕೋವಿಡ್ ನಿಯಂತ್ರಣದ ಬಳಿಕ, ಸಂಸ್ಥೆಗೆ ಬರುವ ರೋಗಿಗಳ ವಾರ್ಷಿಕ ಸಂಖ್ಯೆ 2.5 ಲಕ್ಷದಿಂದ ಏರುಗತಿ ಪಡೆದಿದೆ. ಕಳೆದ ಒಂದೇ ವರ್ಷ ವಿವಿಧ ರೋಗಗಳ ನಿರ್ಣಯ ಸಂಬಂಧ 20 ಲಕ್ಷಕ್ಕೂ ಹೆಚ್ಚು ಪರೀಕ್ಷೆಗಳನ್ನು ನಡೆಸಲಾಗಿದ್ದು, ನರರೋಗಕ್ಕೆ ಸಂಬಂಧಿಸಿದಂತೆ 8 ಸಾವಿರಕ್ಕೂ ಅಧಿಕ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

'ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭದಲ್ಲಿ ಗಾಯಗೊಂಡವರು ಸೇರಿ ವಾರ್ಷಿಕ 50 ಸಾವಿರದಷ್ಟು ತುರ್ತು ಪ್ರಕರಣಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಸಂಸ್ಥೆಗೆ ಚಿಕಿತ್ಸೆಗೆ ಬರುವವರಲ್ಲಿ ಶೇ 60ರಷ್ಟು ರೋಗಿಗಳು ಕರ್ನಾಟಕದವರಾದರೆ, ಉಳಿದವರು ಬೇರೆ ರಾಜ್ಯಗಳಿಂದ ಬರುತ್ತಿದ್ದಾರೆ. ರೋಗಿಗಳಲ್ಲಿ ಶೇ 25ರಿಂದ ಶೇ 30ರಷ್ಟು ಮಂದಿ ವಿದೇಶಿಯರು. ಒಂದು ಕಾಲದಲ್ಲಿ ಹುಚ್ಚಾಸ್ಪತ್ರೆಯೆಂದು ಕರೆಯಲ್ಪಡುತ್ತಿದ್ದ ಸಂಸ್ಥೆಯ ಬಗೆಗಿನ ಜನರ ಮನೋಭಾವ ಈಗ ಬದಲಾಗಿದ್ದು, ಮಾನಸಿಕ ಸಮಸ್ಯೆಗಳು ಹಾಗೂ ಮನೋವೈದ್ಯಕೀಯ ಚಿಕಿತ್ಸೆ ಬಗ್ಗೆ ಅರಿವು ಮೂಡಿದೆ. ಇದರಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಬರುತ್ತಿದ್ದಾರೆ' ಎಂದು ಸಂಸ್ಥೆಯ ಪ್ರಾಧ್ಯಾಪಕರೊಬ್ಬರು ತಿಳಿಸಿದರು.

ಕಳೆದ ವರ್ಷ ಸಂಸ್ಥೆಗೆ ಅತೀ ಹೆಚ್ಚು ರೋಗಿಗಳು ಭೇಟಿ ನೀಡಿದ್ದಾರೆ. ಗುಣಮಟ್ಟದ ಚಿಕಿತ್ಸೆಯಿಂದಾಗಿ ಸಂಸ್ಥೆಗೆ ಬರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ

ಡಾ. ಪ್ರತಿಮಾ ಮೂರ್ತಿ, ನಿಮ್ಹಾನ್ಸ್ ನಿರ್ದೇಶಕಿ

ಸಹಾಯವಾಣಿಗೆ ಸಾವಿರಾರು ಕರೆ

ಮಾನಸಿಕ ಆನಾರೋಗ್ಯ ಸಮಸ್ಯೆಗಳ ನಿವಾರಣೆಗೆ ಸಂಬಂಧಿಸಿದಂತೆ ನಿಮ್ಹಾನ್ಸ್ ಪ್ರಾರಂಭಿಸಿರುವ 'ಟೆಲಿ ಮನಸ್' ಸಹಾಯವಾಣಿಗೆ (14416) ಪ್ರತಿನಿತ್ಯ ಸಾವಿರಾರು ದೂರವಾಣಿ ಕರೆಗಳು ಬರುತ್ತಿವೆ. ವಾರದ ಎಲ್ಲ ದಿನಗಳು 24 ಗಂಟೆಯೂ ದೂರವಾಣಿ ಕರೆಗಳನ್ನು 20 ಭಾಷೆಗಳಲ್ಲಿ ಸ್ವೀಕರಿಸಲಾಗುತ್ತಿದೆ. 2022ರ ಅಕ್ಟೋಬರ್‌ನಲ್ಲಿ ಪ್ರಾರಂಭಿಸಲಾದ ಈ ಸಹಾಯವಾಣಿಗೆ, ಆತ್ಮಹತ್ಯೆ ಆಲೋಚನೆ ಸೇರಿ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಈವರೆಗೆ 30 ಲಕ್ಷಕ್ಕೂ ಅಧಿಕ ದೂರವಾಣಿ ಕರೆಗಳು ಬಂದಿವೆ.

ವೃತ್ತಿಗೆ ಒಳಪಟ್ಟವರು, ಕೌಟುಂಬಿಕ ಸಮಸ್ಯೆ ಎದುರಿಸುತ್ತಿರುವವರು, ಶೈಕ್ಷಣಿಕ ಒತ್ತಡಕ್ಕೆ ಒಳಗಾದವರು, ಮಾದಕ ವಸ್ತುಗಳ ಸೇವನೆಯ ವ್ಯಸನಕ್ಕೆ ಒಳಗಾದವರು, ಜ್ಞಾಪಕ ಶಕ್ತಿ ಕೊರತೆ ಇರುವವರು, ಆರ್ಥಿಕ ಒತ್ತಡದಲ್ಲಿ ಇರುವವರು ಸೇರಿ ವಿವಿಧ ಮಾನಸಿಕ ಸಮಸ್ಯೆ ಎದುರಿಸುತ್ತಿರುವವರು ಸಹಾಯವಾಣಿಗೆ ಕರೆ ಮಾಡುತ್ತಿದ್ದಾರೆ. ಈ ಸಹಾಯವಾಣಿಯೊಂದಿಗೆ ನಿಮ್ಹಾನ್ಸ್ ಹೊರರೋಗಿಗಳ ವಿಭಾಗದ ಮೇಲಿನ ಒತ್ತಡ ಕೊಂಚ ಇಳಿಕೆಯಾಗಿದೆ. ಆತ್ಮಹತ್ಯೆ ಇದ್ದವರಿಗೆ ಈ ಸಹಾಯವಾಣಿ ನೆರವಿನಿಂದ ಮನೋವೈದ್ಯರು ವಿಡಿಯೊ ಸಮಾಲೋಚನೆಯನ್ನೂ ನಡೆಸುತ್ತಾರೆ.

ಒಪಿಡಿ ಸಂಕೀರ್ಣ ನಿರ್ಮಾಣ

ಸಂಸ್ಥೆಯ ಉತ್ತರ ಕ್ಯಾಂಪಸ್‌ನಲ್ಲಿ (ಕ್ವಾಲಸನಹಳ್ಳಿ) ನಾಲ್ಕು ಮಹಡಿಗಳ ಹೊರರೋಗಿ ವಿಭಾಗದ (ಒಪಿಡಿ) ಕಾಂಪ್ಲೆಕ್ಸ್ ನಿರ್ಮಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ₹ 440 ಕೋಟಿ ವೆಚ್ಚದಲ್ಲಿ ಈ ಸಂಕೀರ್ಣ ತಲೆಯೆತ್ತಲಿದ್ದು, ನಿತ್ಯ ಸುಮಾರು ಐದು ಸಾವಿರ ರೋಗಿಗಳಿಗೆ ಸೇವೆ ಒದಗಿಸುವ ಸಾಮರ್ಥ್ಯವನ್ನು ಇದು ಹೊಂದಲಿದೆ. ಈ ಕಟ್ಟಡ ನಿರ್ಮಾಣದ ಬಳಿಕ ಒಪಿಡಿ ಸೇವೆ ದ್ವಿಗುಣಗೊಳ್ಳಲಿದ್ದು, ಒಂದೇ ಸೂರಿನಡಿ ವಿವಿಧ ವಿಭಾಗಗಳ ಸೇವೆ ಲಭ್ಯವಾಗಲಿದೆ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ರೊಬೋಟಿಕ್ ತಂತ್ರಜ್ಞಾನ: 100ಕ್ಕೂ ಅಧಿಕ ಹೃದಯ ಶಸ್ತ್ರಚಿಕಿತ್ಸೆ

ಬೆಂಗಳೂರು: 'ರೊಬೋಟಿಕ್ ತಂತ್ರಜ್ಞಾನದ ನೆರವಿನಿಂದ ಒಂದೇ ತಿಂಗಳಲ್ಲಿ ನೂರಕ್ಕೂ ಅಧಿಕ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗಿದೆ' ಎಂದು ನಾರಾಯಣ ಹೆಲ್ತ್ ಸಿಟಿ ತಿಳಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ಹೃದಯ ಶಸ್ತ್ರಚಿಕಿತ್ಸೆ ವಿಭಾಗದ ಹಿರಿಯ ಸಲಹೆಗಾರ ಡಾ. ರಘು ಎಂ.ಜಿ., 'ಕಳೆದ ತಿಂಗಳು ನಡೆಸಲಾದ ಶಸ್ತ್ರಚಿಕಿತ್ಸೆಯಲ್ಲಿ 45 ವರ್ಷದ ರೋಗಿಯೂ ಸೇರಿದ್ದು, ಅವರು ಈ ಮೊದಲು ಬೈಪಾಸ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ನಂತರದ ದಿನಗಳಲ್ಲಿ ಅವರ ಹೃದಯದ ಕೋಣೆಯಲ್ಲಿ ಗಡ್ಡೆಯೊಂದು ಕಾಣಿಸಿಕೊಂಡಿತ್ತು. ಇದಕ್ಕೆ ಚಿಕಿತ್ಸೆ ನೀಡದಿದ್ದರೆ ರಕ್ತ ಪರಿಚಲನೆಗೆ ಅಡ್ಡಿಯಾಗುವ ಸಾಧ್ಯತೆಯಿತ್ತು. ಆದ್ದರಿಂದ ರೊಬೋಟಿಕ್ ತಂತ್ರಜ್ಞಾನದ ನೆರವಿನಿಂದ ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಯಿತು' ಎಂದು ವಿವರಿಸಿದರು.

'ಈಗಾಗಲೇ ಬೈಪಾಸ್ ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿಗಳಿಗೆ, ಸಾಂಪ್ರದಾಯಿಕ ವಿಧಾನದಂತೆ ಮತ್ತೆ ಎದೆಯನ್ನು ಸೀಳಿ ಶಸ್ತ್ರಚಿಕಿತ್ಸೆ ಮಾಡುವುದು ಅಪಾಯಕಾರಿ. ಈ ಅಪಾಯವನ್ನು ಕಡಿಮೆ ಮಾಡಲು ವೈದ್ಯರ ತಂಡವು ರೊಬೋಟಿಕ್ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆ ನಡೆಸಿತು. ಎದೆಯ ಮೂಳೆಯನ್ನು ಮತ್ತೆ ಸೀಳುವ ಬದಲು, ಎದೆಯ ಬಲಭಾಗದಲ್ಲಿ ಸಣ್ಣ ರಂಧ್ರವನ್ನು ಮಾಡುವ ಮೂಲಕ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಯಿತು' ಎಂದು ಹೇಳಿದರು.

ಡಾ. ತಿರುಪತಿ ಕುಮಾರನ್, 'ರೊಬೋಟಿಕ್ ತಂತ್ರಜ್ಞಾನದ ನೆರವಿನಿಂದ ನಿಖರ ಶಸ್ತ್ರಚಿಕಿತ್ಸೆ ಸಾಧ್ಯವಾಗಲಿದೆ. ರೋಗಿಗಳಿಗೆ ಶಸ್ತ್ರಚಿಕಿತ್ಸೆಯ ನಂತರ ನೋವು ಸಹ ಕಡಿಮೆ ಇರುತ್ತದೆ. ರಕ್ತದ ನಷ್ಟವೂ ಕಡಿಮೆಯಾಗಲಿದ್ದು, ರೋಗಿ ವೇಗವಾಗಿ ಚೇತರಿಸಿಕೊಳ್ಳಲು ಸಾಧ್ಯವಾಗುತ್ತದೆ' ಎಂದು ತಿಳಿಸಿದರು.

ಪುದುಚೇರಿ: ವಿಶೇಷ ವೀಕ್ಷಕರಾಗಿ ದಿನೇಶ್ ಗುಂಡೂರಾವ್

ನವದೆಹಲಿ: ಪುದುಚೇರಿ ವಿಧಾನಸಭಾ ಚುನಾವಣೆಗೆ ವಿಶೇಷ ವೀಕ್ಷಕರಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹಾಗೂ ಮುಖಂಡ ಪೊನ್ನಂ ಪ್ರಭಾಕರ್ ಅವರನ್ನು ನೇಮಿಸಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುರುವಾರ ಆದೇಶ ಹೊರಡಿಸಿದ್ದಾರೆ.

ಕೇರಳದ ವಿಶೇಷ ವೀಕ್ಷಕರಾಗಿ ಇಂಧನ ಸಚಿವ ಕೆ.ಜೆ. ಜಾರ್ಜ್ ಹಾಗೂ ಅಸ್ಸಾಂ ವಿಶೇಷ ವೀಕ್ಷಕರಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಈ ಹಿಂದೆ ನೇಮಿಸಲಾಗಿತ್ತು.

ಚಿಟಿಕೆ ಸುದ್ದಿ

ವಿದ್ಯುತ್ ದರ ಏರಿಕೆಗೆ ವಿರೋಧ

ಬೆಂಗಳೂರು: ಕೈಗಾರಿಕೆ ಮತ್ತು ವಾಣಿಜ್ಯ ಬಳಕೆಯ ವಿದ್ಯುತ್ ದರ ಹೆಚ್ಚಿಸುವುದನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ವಿರೋಧಿಸಿದೆ.

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಕೈಗಾರಿಕೆಗಳು ಬಳಸುವ ವಿದ್ಯುತ್ ದರವನ್ನು ಪ್ರತಿ ಯೂನಿಟ್‌ಗೆ 10 ಪೈಸೆಯಿಂದ 95 ಪೈಸೆವರೆಗೆ ಹೆಚ್ಚಿಸಿರುವುದು ಸರಿಯಲ್ಲ. ಇದು ಜನವಿರೋಧಿ ಮತ್ತು ಕೈಗಾರಿಕಾ ವಿರೋಧಿ ನೀತಿ ಎಂದು ಕೆಇಆರ್‌ಸಿ ಪಕ್ಷ ಖಂಡಿಸಿದೆ.

ಈಗಾಗಲೇ ಕಚ್ಚಾ ವಸ್ತುಗಳ ಬೆಲೆ ಏರಿಕೆ ಮತ್ತು ಮಾರುಕಟ್ಟೆಯ ಪೈಪೋಟಿಯಿಂದ ಕಷ್ಟದಲ್ಲಿರುವ ರಾಜ್ಯದ ಕೈಗಾರಿಕೆಗಳಿಗೆ ವಿದ್ಯುತ್ ದರ ಏರಿಕೆಯು ಮರಣಶಾಸನವಾಗಲಿದೆ. ವಿದ್ಯುತ್ ದರ ಹೆಚ್ಚಳದಿಂದ ಉತ್ಪಾದನಾ ವೆಚ್ಚ ಅಧಿಕವಾಗಿ, ಅನೇಕ ಸಣ್ಣ ಕೈಗಾರಿಕೆಗಳು ಮುಚ್ಚುವ ಸಾಧ್ಯತೆ ಇದೆ. ಇದರಿಂದ ಲಕ್ಷಾಂತರ ಕಾರ್ಮಿಕರ ಮೇಲೆ ನೇರ ಪರಿಣಾಮ ಬೀರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬಿಸಿಯು ಘಟಿಕೋತ್ಸವ

ಬೆಂಗಳೂರು: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯವು ಏಪ್ರಿಲ್ ಮೊದಲ ಅಥವಾ ಎರಡನೇ ವಾರದಲ್ಲಿ 5ನೇ ಘಟಿಕೋತ್ಸವವನ್ನು ಹಮ್ಮಿಕೊಂಡಿದ್ದು, ಪದವಿ ಪ್ರದಾನಕ್ಕೆ ಅರ್ಜಿ ಆಹ್ವಾನಿಸಿದೆ.

2024–25ನೇ ಸಾಲಿನಲ್ಲಿ ಉತ್ತೀರ್ಣರಾದವರು, ಈ ಹಿಂದಿನ ಘಟಿಕೋತ್ಸವದಲ್ಲಿ ಪದವಿ ಪ್ರಮಾಣಪತ್ರ ಪಡೆಯದವರು ಅರ್ಜಿ ಸಲ್ಲಿಸಬಹುದು. ದಂಡ ಶುಲ್ಕವಿಲ್ಲದೇ ಸ್ನಾತಕೋತ್ತರ ವಿಭಾಗ ಹಾಗೂ ಕಾಲೇಜುಗಳ ಅಭ್ಯರ್ಥಿಗಳಲ್ಲಿ ಅರ್ಜಿ ಸಲ್ಲಿಸಲು ಮಾ.9 ಕಡೆಯ ದಿನ. ₹100 ಶುಲ್ಕದೊಂದಿಗೆ ಮಾ.13ರೊಳಗೆ ಸಲ್ಲಿಸಬೇಕು ಎಂದು ಮೌಲ್ಯಮಾಪನ ಕುಲಸಚಿವರು ತಿಳಿಸಿದ್ದಾರೆ. ಮಾಹಿತಿಗೆ https://www.bcu.ac.in

'ಅಂಬೇಡ್ಕರ್ ಅವರನ್ನು ಜಾತಿವಾದದಲ್ಲಿ ಬಂಧಿಸಲಾಗಿದೆ'

ಬೆಂಗಳೂರು: 'ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಅವರ ಅನುಯಾಯಿಗಳು ಜಾತಿವಾದದಲ್ಲಿ ಬಂಧಿಸಿಟ್ಟಿದ್ದಾರೆ' ಎಂದು ರಂಗಕರ್ಮಿ ಪ್ರಕಾಶ್ ಬೆಳವಾಡಿ ಹೇಳಿದರು.

ಸ್ವರಾಜ್ಯ ಪ್ರಕಾಶನ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುಧಾಕರ ಹೊಸಹಳ್ಳಿ ಅವರ ನಾನೂ ಕಾಫಿರ ಪುಸ್ತಕ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

'ಜಾತಿ ವಿನಾಶದ ಹೆಸರಿನಲ್ಲಿ ಅಂಬೇಡ್ಕರ್, ಬಸವಣ್ಣ ಅವರನ್ನು ನಾವೆಲ್ಲರೂ ಸೇರಿ ಸೋಲಿಸಿದ್ದೇವೆ. ಆರ್ಥಿಕತೆ, ಭಾಷಾವಾರು ಪ್ರಾಂತ್ಯಗಳು ಸೇರಿ ಇತ್ಯರ ವಿಚಾರಗಳ ಬಗ್ಗೆ ಅವರನ್ನು ಸರಿಯಾಗಿ ಅರಿತು ಕೊಳ್ಳಬೇಕು. ಅಂಬೇಡ್ಕರ್ ಅವರನ್ನು ಸಮಗ್ರವಾಗಿ ನೋಡಬೇಕು' ಎಂದು ಸಲಹೆ ನೀಡಿದರು.

ಚಿಂತಕ ಜಿ.ಬಿ. ಹರೀಶ್ ಮಾತನಾಡಿ, 'ಸತ್ಯದ ಕುರಿತು ಮಾತನಾಡಲು ಹಿಂದೂ ಸಮಾಜ ಭಯಪಡುವ ಪರಿಸ್ಥಿತಿಯಲ್ಲಿದೆ. ಅಂಬೇಡ್ಕರ್ ಅವರು ಯಾವುದೇ ಭಯ ಇಲ್ಲದೆ ಇಸ್ಲಾಂನ ಲೋಪಗಳ ಕುರಿತು ಮಾತನಾಡಿದ್ದರು. ಅಂತಹ ಲೋಪಗಳನ್ನು ನಾನೂ ಕಾಫಿರ ಕೃತಿ ಧೈರ್ಯವಾಗಿ ಪ್ರಸ್ತಾಪಿಸಿದೆ' ಎಂದರು. ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ರಾಜ್ಯ ಸಂಘಟನಾ ಕಾರ್ಯದರ್ಶಿ ನಾರಾಯಣ ಶೇವಿರೆ ಉಪಸ್ಥಿತರಿದ್ದರು.

₹100 ಕೋಟಿಗೂ ಮಿಕ್ಕಿದ ವ್ಯವಹಾರ

ಕಾನೂನುಬಾಹಿರ ಡಿಜಿಟಲ್ ಚಿನ್ನ ಹೂಡಿಕೆ: ಹೈಕೋರ್ಟ್ ಆತಂಕ– ತನಿಖೆ ಮುಂದುವರಿಸಲು ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನು ಬಾಹಿರವಾಗಿ ಸ್ವೀಕರಿಸಿದ ಡಿಜಿಟಲ್ ಗೋಲ್ಡ್ ಹೂಡಿಕೆಗಳನ್ನು ಚಿನ್ನದ ರೂಪದಲ್ಲಿ ಉಳಿಸಿಕೊಂಡ ಆರೋಪ ಎದುರಿಸುತ್ತಿರುವ, 'ಜಾರ್ ಗೋಲ್ಡ್ ರಿಟೈಲ್ ಪ್ರೈವೇಟ್ ಲಿಮಿಟೆಡ್' ಕಂಪನಿ ವಿರುದ್ಧದ ದೂರನ್ನು ವಜಾಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಕಂಪನಿ ನಿರ್ದೇಶಕ ನಿಶ್ಚಯ ಬಾಬು ಅರಕಲಗೂಡು ಮತ್ತು ಕಂಪನಿ ಪ್ರತಿನಿಧಿ ಅವಿನಾಶ್ ವಸಂತ ದೇಶಪಾಂಡೆ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿದೆ.

'ಗ್ರಾಹಕರು ಖರೀದಿ ಪೂರ್ಣಗೊಳಿಸಿದ ನಂತರ ಚಿನ್ನದ ಗಟ್ಟಿಯ ಯಾವುದೇ ಮಾಲೀಕತ್ವ ಅಥವಾ ಭೌತಿಕ ಸ್ವಾಧೀನವನ್ನು ಉಳಿಸಿಕೊಳ್ಳುವುದಿಲ್ಲ' ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ನ್ಯಾಯಪೀಠ ತಿರಸ್ಕರಿಸಿದೆ.

'ಡಿಜಿಟಲ್ ಚಿನ್ನವು ವಾಣಿಜ್ಯ ಪರಿಕಲ್ಪನೆಯಾಗಿ ವಿಕಸನ ಹೊಂದಿದೆ ಎಂಬುದು ನಿರ್ವಿವಾದ. ಆದರೆ, ದಾಖಲೆಯಲ್ಲಿರುವ ಅಂಶಗಳು ಗಂಭೀರ ಆರೋಪಗಳನ್ನು ಬಹಿರಂಗಪಡಿಸುತ್ತವೆ. ಅರ್ಜಿದಾರರಿಗೆ ಈ ಹಂತದಲ್ಲಿ ರಕ್ಷಣೆ ಒದಗಿಸಿದರೆ ಅಪರಾಧ ಪತ್ತೆಗೆ ಅದರ ಆರಂಭಿಕ ಹಂತದಲ್ಲೇ ಅಡ್ಡಿ ಉಂಟು ಮಾಡಿದಂತಾಗುತ್ತದೆ' ಎಂದು ಸ್ಪಷ್ಟಪಡಿಸಿದೆ.

'ಪೊಲೀಸರು ತನಿಖೆ ನಡೆಸುತ್ತಿರುವ ಸಂದರ್ಭದಲ್ಲಿ ದೂರು ಅಥವಾ ಎಫ್ಐಆರ್ ತನಿಖೆಗೆ ಅರ್ಹವಲ್ಲ ಅಥವಾ ಅದು ಎಷ್ಟು ಸರಿ ಎಂಬ ಅಸ್ಪಷ್ಟ ಸಂಗತಿಗಳ ಆಧಾರದ ಮೇಲೆ ನ್ಯಾಯಪೀಠ ಯಾವುದಾದರೂ ತೀರ್ಮಾನ ತೆಗೆದುಕೊಳ್ಳುವುದು ಅಕಾಲಿಕ. ಅಷ್ಟೇ ಅಲ್ಲ ಕಾನೂನು ಪ್ರಕ್ರಿಯೆಯ ದುರುಪಯೋಗವಾಗುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, 'ಅನಿಯಂತ್ರಿತ ಠೇವಣಿಗಳನ್ನು ಮೊಕದ್ದಮೆಯಲ್ಲೇ ಚಟ್ಟಿಸ ಹಾಕಬೇಕು. ಇದು ಸಾವಿರಾರು ಕೋಟಿ ರೂಪಾಯಿಗಳ ಹಗರಣಕ್ಕೆ ತಿದಿ ಒತ್ತಬಹುದಾದ ಪ್ರಕರಣ. ಸಾರ್ವಜನಿಕರು ಹೂಡಿಕೆ ಮಾಡಿದ ಹಣವನ್ನು ಅರ್ಜಿದಾರರು ಲೂಟಿ ಮಾಡಲು ಬಿಡಬಾರದು. ಆ ಕಾರಣಕ್ಕಾಗಿ ಕನಿಷ್ಠ ತನಿಖೆಯನ್ನು ಮುಂದುವರಿಸಲು ಅನುಮತಿ ನೀಡಬೇಕು' ಎಂಬ ಮನವಿಯನ್ನು ನ್ಯಾಯಪೀಠ ಪುರಸ್ಕರಿಸಿದೆ.

'ನಮ್ಮ ವಿರುದ್ಧ ಕೋರಮಂಗಲ ಠಾಣೆ ಪೊಲೀಸರು ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಕಾಯ್ದೆ ಅಡಿಯಲ್ಲಿ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಎಫ್ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರದ ಪ್ರಧಾನ ಸೆಷನ್ಸ್ ನ್ಯಾಯಾಲಯದಲ್ಲಿನ ನ್ಯಾಯಿಕ ವಿಚಾರಣೆ ರದ್ದುಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಸ್ವಯಂ ಪ್ರೇರಿತ ದೂರಿನ ಮುಖ್ಯಾಂಶಗಳು

• ಕಂಪನಿ ಮತ್ತು ಅದರ ನಿರ್ದೇಶಕರು ಡಿಜಿಟಲ್ ಅಪ್ಲಿಕೇಶನ್ ಮೂಲಕ ಸಾರ್ವಜನಿಕರಿಗೆ ಚಿನ್ನದಲ್ಲಿ ಹೂಡಿಕೆ ಮಾಡಲು ಅವಕಾಶ ಕಲ್ಪಿಸಿದ್ದು, ಈ ವ್ಯವಹಾರಗಳ ಕುರಿತಂತೆ ಸೆಬಿ (ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ) ಅಥವಾ ಸಂಬಂಧಿಸಿದ ನಿಯಂತ್ರಣ ಪ್ರಾಧಿಕಾರದಿಂದ ಅನುಮತಿ ಪಡೆದಿಲ್ಲ. ತಮ್ಮ ವ್ಯವಹಾರ ನಡೆಸುತ್ತಿದ್ದಾರೆ.

• ಸಾರ್ವಜನಿಕರಿಂದ ₹10ರಿಂದ ₹1 ಲಕ್ಷ ವರೆಗೆ ಡಿಜಿಟಲ್ ಗೋಲ್ಡ್ ಹೆಸರಿನಲ್ಲಿ ಹೂಡಿಕೆಗಳನ್ನು ಸ್ವೀಕರಿಸುತ್ತಿದ್ದಾರೆ. ಅಸಲಿ ಚಿನ್ನದ ಬದಲಿಗೆ ಡಿಜಿಟಲ್ ರೂಪದಲ್ಲಿ ಚಿನ್ನವು, ಗ್ರಾಹಕರ 'ಇ-ಖಾತೆ'ಗಳಲ್ಲಿ ಇದೆ ಎಂದು ತೋರಿಸಿ ಅವರಿಗೆ ಬೆಲೆದಾರ ಆದಾಯವನ್ನು ಹಿಂಪಡೆಯಲು ಅವಕಾಶ ಮಾಡಿಕೊಡುತ್ತೇವೆ ಎಂದು ಹೇಳುವ ಅನಿಯಂತ್ರಿತ ಯೋಜನೆಯನ್ನು ಸಾರ್ವಜನಿಕಗೊಳಿಸಿದ್ದಾರೆ.

• ತಮ್ಮ ಜೊತೆಗೆ ಇತರರನ್ನೂ ಸೇರಿದಲ್ಲಿ ಅಂತಹ ಹೂಡಿಕೆದಾರರಿಗೆ ಶೇ 300ರಿಂದ 400ರಷ್ಟು ರೆಫರಲ್ ಬೋನಸ್ (ನಗದು ಅಥವಾ ಬಹುಮಾನ ನೀಡಿಕೆ) ಕೊಡುವುದಾಗಿ ನಂಬಿಸಿ ಹೂಡಿಕೆಗಳನ್ನು ಮತ್ತು ಠೇವಣಿಗಳನ್ನು ಸ್ವೀಕರಿಸಲಾಗುತ್ತಿದೆ.

ಎಫ್ಐಆರ್ ಎಂಬುದು ಅಪರಾಧದ ಎಲ್ಲಾ ವಿವರಗಳನ್ನು ಬಹಿರಂಗಪಡಿಸುವ ವಿಶ್ವಕೋಶವಲ್ಲ. ತನಿಖೆ ಪ್ರಗತಿಯಲ್ಲಿರುವಾಗ ಅದರ ಅರ್ಹತೆಯನ್ನು ಪರಿಶೀಲಿಸುವ ಗೋಜಿಗೆ ಹೋಗಬಾರದು. ತನಿಖೆ ಪೂರ್ಣಗೊಳಿಸಲು ಬಿಡಬೇಕು.

ನ್ಯಾ. ಎಂ.ನಾಗಪ್ರಸನ್ನ

ಮುಖ್ಯಾಂಶಗಳು

- ಮ್ಯಾಜಿಸ್ಟ್ರೇಟ್ ವಿವೇಚನೆಗೆ ಬಿಟ್ಟ ನ್ಯಾಯಪೀಠ
- ಕೋರಮಂಗಲ ಕಚೇರಿಯಲ್ಲಿ 250 ಉದ್ಯೋಗಿಗಳು

3.3 ಕೋಟಿ ಜನರ ಹೂಡಿಕೆ

'ಕಂಪನಿ 2021ರಲ್ಲಿ ಶೂನ್ಯ ವಹಿವಾಟು ಮೂಲಕ ಪ್ರಾರಂಭವಾಗಿ ಇಂದು ₹4 ಸಾವಿರ ಕೋಟಿಗಳ ವಹಿವಾಟು ಹೊಂದಿದೆ. ನಿರ್ದೇಶಕರು ನೀಡಿರುವ ಮಾಹಿತಿಯಂತೆ 3.3 ಕೋಟಿ ಜನರು ತಮ್ಮ ಮೊಬೈಲ್ ಅಪ್ಲಿಕೇಶನ್ ಮೂಲಕ 'ಇ-ಖಾತೆ'ಗಳನ್ನು ತೆರೆದು ವ್ಯವಹಾರ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕಂಪನಿ ಮತ್ತು ಅದರ ನಿರ್ದೇಶಕರು ಸುಮಾರು ₹100 ಕೋಟಿಗೂ ಹೆಚ್ಚಿನ ಮೊತ್ತವನ್ನು ಸಾರ್ವಜನಿಕರಿಂದ ಸ್ವೀಕರಿಸಿ ಅಪರಾಧ ಎಸಗಿರುತ್ತಾರೆ. ಈ ಬಗ್ಗೆ ಅವರು ತಮ್ಮ ಲೆಕ್ಕಪತ್ರಗಳನ್ನು ಮತ್ತು ಮಾಹಿತಿಯನ್ನು ಒದಗಿಸಲು ಹಿಂದೇಟು ಹಾಕಿರುತ್ತಾರೆ' ಎಂದು ಪೊಲೀಸರು ದೂರಿನಲ್ಲಿ ತಿಳಿಸಿದ್ದಾರೆ.

'ಅನಿಯಂತ್ರಿತ ವ್ಯವಹಾರ ನಡೆಸುತ್ತಿದ್ದೇವೆ ಎಂಬುದು ಗೊತ್ತಿದ್ದರೂ ಸಾರ್ವಜನಿಕರಿಗೆ ಈ ನಿಜ ಸಂಗತಿಯನ್ನು ತಿಳಿಸದೇ ಡಿಜಿಟಲ್ ಗೋಲ್ಡ್, 'ಇ-ಗೋಲ್ಡ್ ಪ್ರಾಡಕ್ಟ್' ಹೆಸರಿನಲ್ಲಿ ಡಿಜಿಟಲ್ ಪ್ಲಾಟ್‌ಫಾರ್ಮ್ ಮೂಲಕ 'ಇ-ಖಾತೆ'ಯನ್ನು ತೆರೆದು ಹಣ ಹೂಡಿಕೆ ಮಾಡಲು ಉತ್ತೇಜಿಸಲಾಗುತ್ತಿದೆ. ಈ ಮೂಲಕ ಚಿನ್ನ ಖರೀದಿಸಿ ಠೇವಣಿ ಇರಿಸಿಕೊಂಡಲ್ಲಿ ನಂತರ ಬೇಕಾದಾಗ ಮಾರಾಟ ಮಾಡಿ ಹಣವನ್ನು ಅವರ ಖಾತೆಯಿಂದ ಸಂಸ್ಥೆ ಮೂಲಕ ಪಡೆಯಬಹುದು ಎಂದು ನಂಬಿಸಿ ಹಣವನ್ನು ಮರಳಿಸದೇ ಮೋಸ ಮಾಡುವ ಪ್ರಯತ್ನದಲ್ಲಿರುವುದು ಕಂಡು ಬರುತ್ತಿದೆ. ಇದು, ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಕಾಯ್ದೆ-2019ರ ಕಲಂ 21(1) ಮತ್ತು 21(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ' ಎಂದು ವಿವರಿಸಲಾಗಿದೆ.

ದುಬೈ ಹಾಗೂ ಇತರ ಕಡೆಯಿಂದ ಬಂದ ಪ್ರವಾಸಿಗರನ್ನು ಶಾಸಕ ಬಿ.ನಾಗೇಂದ್ರ ಬರ ಮಾಡಿಕೊಂಡರು

ದುಬೈನಿಂದ ರಾಜ್ಯಕ್ಕೆ ವಾಪಸಾದ ಬಳ್ಳಾರಿ ಪ್ರವಾಸಿಗರ ತಂಡ

ಬೆಂಗಳೂರು: ದುಬೈ ಸೇರಿದಂತೆ ಪಶ್ಚಿಮ ಏಷ್ಯಾದ ಪ್ರಮುಖ ಸ್ಥಳಗಳಲ್ಲಿ ನಾಲ್ಕೈದು ದಿನಗಳಿಂದ ಸಿಲುಕಿದ್ದ ಕನ್ನಡಿಗರು ಗುರುವಾರ ಬೆಂಗಳೂರಿಗೆ ವಾಪಸಾದರು.

60 ವರ್ಷಕ್ಕೂ ಮೇಲ್ಪಟ್ಟ 60 ಹಿರಿಯರು, ಇತರರನ್ನು ಒಳಗೊಂಡ ವಿಮಾನವು ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು. ಬಳ್ಳಾರಿ ಜಿಲ್ಲೆಯವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಕಾರಣ ಶಾಸಕ ಬಿ.ನಾಗೇಂದ್ರ ನಿಲ್ದಾಣಕ್ಕೆ ಆಗಮಿಸಿ ಎಲ್ಲರನ್ನೂ ಬರಮಾಡಿಕೊಂಡರು.

ಪ್ರವಾಸಕ್ಕೆ ಹೊರಟ ನಂತರ ಅಲ್ಲಿ ಉಂಟಾಗಿದ್ದ ಆತಂಕದ ಸನ್ನಿವೇಶ, ಸ್ಥಳೀಯ ಸರ್ಕಾರ, ಕನ್ನಡಪರ ಸಂಘಟನೆಗಳು, ದುಬೈ ಕನ್ನಡ ಕೂಟ ನೀಡಿದ ಸಹಕಾರ, ಕರ್ನಾಟಕ ಸರ್ಕಾರ ಆತ್ಮಸ್ಥೈರ್ಯ ತುಂಬಿದ್ದನ್ನು ಪ್ರವಾಸಿಗರು ಹಂಚಿಕೊಂಡರು.

ಸುರಕ್ಷಿತ ವಸತಿ ವ್ಯವಸ್ಥೆ, ಸಮಯಕ್ಕೆ ಸರಿಯಾದ ಆಹಾರ ಮತ್ತು ವೈದ್ಯಕೀಯ ನೆರವು, ಕಷ್ಟದ ಪರಿಸ್ಥಿತಿಯಲ್ಲೂ ವಿಮಾನ ವ್ಯವಸ್ಥೆ ಮಾಡಿದ್ದನ್ನು ನೆನಪಿಸಿಕೊಂಡರು.

'ಇನ್ನೂ 150 ರಿಂದ 200 ಮಂದಿ ಕನ್ನಡಿಗರು ದುಬೈ ಸೇರಿದಂತೆ ಇರಾನ್ ಮತ್ತು ಸುತ್ತಮುತ್ತಲಿನ ಪ್ರದೇಶ ಗಳಲ್ಲಿ ಸಿಲುಕಿಕೊಂಡಿದ್ದಾರೆ. ಅವರನ್ನು ಸುರಕ್ಷಿತವಾಗಿ ವಾಪಸ್ ಕಳುಹಿಸಲು ತಂಡ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ' ಎಂದು ಕನ್ನಡಿಗರ ಕೂಟದ ಅಧ್ಯಕ್ಷ ಅರುಣ್ ಕುಮಾರ್ ತಿಳಿಸಿದರು.

'ಪರಿವರ್ತನೆಯ ರೂಪಕವಾಗಿದ್ದ ಸಿದ್ದಯ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯ ಲೋಕದಲ್ಲಿ ದಲಿತ ಸಾಹಿತ್ಯಕ್ಕೆ ಪರ್ಯಾಯ ಪದರವಾಗಿದೆ. ಅದರಲ್ಲಿ ಕೆ.ಬಿ. ಸಿದ್ದಯ್ಯ ಅವರು ತಮ್ಮ ಅಭಿವ್ಯಕ್ತಿ ಮೂಲಕ ಸಮಾಜದ ಪರಿವರ್ತನೆಯ ರೂಪಕವಾಗಿದ್ದರು' ಎಂದು ಸಾಹಿತಿ ಎಚ್.ಎಸ್.ಶಿವಪ್ರಕಾಶ್ ಸ್ಮರಿಸಿದರು.

ಜ್ಞಾನಭಾರತಿ ಆವರಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಡಾ.ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ಕನ್ನಡ ಅಧ್ಯಯನ ಕೇಂದ್ರ ಸಹಯೋಗದೊಂದಿಗೆ ಬುಧವಾರ ಆಯೋಜಿಸಿದ್ದ 'ಚಳವಳಿ ಮತ್ತು ಸಾಹಿತ್ಯದ ಒಡನಾಡಿ ಪ್ರೊ.ಕೆ.ಬಿ.ಸಿದ್ದಯ್ಯ ಮರುಓದು, ಮರುನಿರ್ವಚನ' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ದಲಿತ ಸಾಹಿತ್ಯ 11ನೇ ಶತಮಾನದಲ್ಲಿ ಹುಟ್ಟಿ ಶರಣರು, ವಚನಕಾರರ ಮೂಲಕ ಮನೆ, ಮನ ತಲುಪಿತು. ಮಂಟೇಸ್ವಾಮಿ, ಮಲೆಮಾದೇಶ್ವರ ಕಾವ್ಯಗಳು ಜಗತ್ತಿನ ಯಾವ ಕಾವ್ಯಕ್ಕೂ ಕಡಿಮೆಯಿಲ್ಲದ ವಾಸ್ತವವನ್ನು ವ್ಯಕ್ತಿ ಹಿಡಿಯುತ್ತವೆ. ಅಂಬೇಡ್ಕರ್ ಅವರ ಅಭಿವ್ಯಕ್ತಿ, ಅಲ್ಲಮನ ಸಾಹಿತ್ಯದ ಆಶಯಗಳೊಂದಿಗೆ ರಚಿಸಿದ್ದ ಕೆ.ಬಿ.ಸಿದ್ದಯ್ಯನವರ ಕಾವ್ಯ ನವ್ಯ ಸಾಹಿತ್ಯಕ್ಕಿಂತ ಸಂಕೀರ್ಣ ಮತ್ತು ಅಭಿವ್ಯಕ್ತಿಪ್ರಧಾನವಾದದ್ದು' ಎಂದರು.

ಸಾಹಿತಿ ಎಲ್.ಹನುಮಂತಯ್ಯ ಅವರು 'ತೊಗಲ ಮಂಟಪ' ಕೃತಿ ಜನಾರ್ಪಣೆಗೊಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ.ಸೋಮಶೇಖರ್, ಕುಲಸಚಿವರಾದ ಕೆ.ಟಿ. ಶಾಂತಲಾ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ.ಡಿ.ಡೊಮಿನಿಕ್, ಡಾ.ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ವಿಜಯಕುಮಾರ್ ಎಚ್.ದೊಡ್ಡಮನಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಉಪಸ್ಥಿತರಿದ್ದರು.

ಕ್ರೈಸ್ಟ್ ವಿಶ್ವವಿದ್ಯಾಲಯದ ಕನ್ನಡ ಸಂಘಕ್ಕೆ ಕೊಡುಗೆ ನೀಡಿದವರನ್ನು ಗೌರವಿಸಲಾಯಿತು

ಕ್ರೈಸ್ಟ್ ವಿಶ್ವವಿದ್ಯಾಲಯ ಕನ್ನಡ ಸಂಘಕ್ಕೆ ಸುವರ್ಣ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೈಸ್ಟ್ ವಿಶ್ವವಿದ್ಯಾಲಯದ ಕನ್ನಡ ಸಂಘವು ತನ್ನ ಸುವರ್ಣ ಮಹೋತ್ಸವ ಸಮಾರೋಪವನ್ನು ಅದ್ದೂರಿಯಾಗಿ ಆಚರಿಸಿತು.

ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹಾಗೂ ವಿಮರ್ಶಕ ಎಚ್.ಎಸ್. ರಾಘವೇಂದ್ರರಾವ್ ಅವರ ಉಪಸ್ಥಿತಿಯಲ್ಲಿ ಸಮಾರಂಭ ನಡೆಯಿತು.

ಸಂಘದ ಐದು ದಶಕಗಳ ಪಯಣಕ್ಕೆ ಮಹತ್ವದ ಕೊಡುಗೆ ನೀಡಿದ ಲೇಖಕರು, ವಿಮರ್ಶಕರು, ಅನುವಾದಕರು ಮತ್ತು ಪಂಡಿತರನ್ನು ಗೌರವಿಸಲಾಯಿತು. ಕುಲಪತಿ ಡಾ.ಜೋಸೆಫ್ ಸಿ.ಸಿ. ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

1971ರಲ್ಲಿ ಸ್ಥಾಪಿತವಾದ ಈ ಸಂಘವು ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಪ್ರಚಾರದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದು, ಇದುವರೆಗೆ 246 ಪುಸ್ತಕಗಳನ್ನು ಪ್ರಕಟಿಸಿದೆ. ಅಂತರಕಾಲೇಜು ಸ್ಪರ್ಧೆಗಳ ಮತ್ತು ಸಾಹಿತ್ಯ ಚಟುವಟಿಕೆಗಳ ಮೂಲಕ 700ಕ್ಕೂ ಹೆಚ್ಚು ಯುವ ಲೇಖಕರನ್ನು ಬೆಳೆಸಿದೆ. 30ಕ್ಕೂ ಅಧಿಕ ಪ್ರಕಟಣೆಗಳು ರಾಜ್ಯ ಮತ್ತು ರಾಷ್ಟ್ರೀಯ ಸಾಹಿತ್ಯ ಸಂಸ್ಥೆಗಳ ಮಾನ್ಯತೆ ಪಡೆದಿವೆ. ವರ್ಷಪೂರ್ತಿ ನಡೆಯುವ ಸಾಹಿತ್ಯ ಚಟುವಟಿಕೆಗಳ ಸಂಘದ ವೈಶಿಷ್ಟ್ಯವೆಂದು ರಾಮಲಿಂಗಾರೆಡ್ಡಿ ಅಭಿಪ್ರಾಯಪಟ್ಟರು.

ಪುರುಷೋತ್ತಮ ಬಿಳಿಮಲೆ ಅವರು, 'ಅನೇಕ ಸಂಘಗಳು ನಿಷ್ಕ್ರಿಯವಾಗುತ್ತಿರುವ ಸಂದರ್ಭದಲ್ಲಿ ಕ್ರೈಸ್ಟ್ ಕನ್ನಡ ಸಂಘ ತನ್ನ ನಿರಂತರತೆ ಮತ್ತು ಸಾರ್ವಜನಿಕ ಪ್ರಾಸಂಗಿಕತೆಯನ್ನು ಉಳಿಸಿಕೊಂಡಿದೆ' ಎಂದು ಹೇಳಿದರು.

ಗೌರವ ಸ್ವೀಕರಿಸಿದವರ ಪರವಾಗಿ ಮಾತನಾಡಿದ ಎಚ್.ಎಸ್. ರಾಘವೇಂದ್ರರಾವ್, ತರಗತಿಯನ್ನು ಮೀರಿದ ಸಾರ್ವಜನಿಕ ಸಾಹಿತ್ಯ ಚಳವಳಿಯನ್ನು ಸಂಘ ರೂಪಿಸಿದೆ ಎಂದು ಬಣ್ಣಿಸಿದರು. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೇಂದ್ರೆ ಹಾಗೂ ಜಿ.ಪಿ. ರಾಜರತ್ನಂ ಅವರಂತಹ ಮಹನೀಯರ ಪ್ರಭಾವವನ್ನು ಸ್ಮರಿಸಿದರು.

ಜೋಸೆಫ್ ಸಿ.ಸಿ., 5,000ಕ್ಕೂ ಹೆಚ್ಚು ಲೇಖನಗಳನ್ನು ಕನ್ನಡ ವಿಕಿಪೀಡಿಯಗೆ ಸೇರಿಸುವ ಗುರಿಯೊಂದಿಗೆ ಇ-ಪುಸ್ತಕಗಳಾಗಿ ಪರಿವರ್ತಿಸುವುದು ಸೇರಿದಂತೆ ಡಿಜಿಟಲ್ ಉಪಕ್ರಮಗಳನ್ನು ಉಲ್ಲೇಖಿಸಿದರು.

ಮುಖ್ಯಾಂಶಗಳು

- 1971ರಲ್ಲಿ ಸ್ಥಾಪಿತವಾದ ಸಂಘದಿಂದ 246 ಪುಸ್ತಕಗಳ ಪ್ರಕಟಣೆ
- 700ಕ್ಕೂ ಹೆಚ್ಚು ಯುವ ಲೇಖಕರನ್ನು ಬೆಳೆಸಿದ ಕೀರ್ತಿ

ನರೇಗಾ ವರ್ಸಸ್ ಜಿರಾಮ್–ಜಿ ಚರ್ಚೆ: ಅರ್ಥಶಾಸ್ತ್ರಜ್ಞ ನರೇಂದ್ರ ಪಾಣಿ ಕಳವಳ

'ಸ್ಥಳೀಯ ಅಗತ್ಯಗಳ ಕಡೆಗಣಿಸುವ ವಿಬಿ ಜಿ ರಾಮ್–ಜಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಥಳೀಯ ಅಗತ್ಯಗಳ ಆಧಾರದಲ್ಲಿ ನರೇಗಾ ಯೋಜನೆ ಅಡಿ ಅನುದಾನ ಒದಗಿಸಲಾಗುತ್ತಿತ್ತು. ಆದರೆ ವಿಬಿ-ಜಿರಾಮ್-ಜಿ ಯೋಜನೆಯು ಸ್ಥಳೀಯ ಅಗತ್ಯಗಳನ್ನು ಪರಿಗಣಿಸುವುದೇ ಇಲ್ಲ' ಎಂದು ಅರ್ಥಶಾಸ್ತ್ರಜ್ಞ ನರೇಂದ್ರ ಪಾಣಿ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗವು ಬುಧವಾರ ಆಯೋಜಿಸಿದ್ದ 'ನರೇಗಾ ವರ್ಸಸ್ ಜಿರಾಮ್-ಜಿ-ಯೋಜನೆಯಲ್ಲಿ ಬದಲಾವಣೆ-ಸಾಧಕ ಬಾಧಕಗಳು' ವಿಚಾರ ಸಂಕಿರಣದಲ್ಲಿ, 'ಉದ್ಯೋಗ ಖಾತ್ರಿ ಯೋಜನೆ ಕಲಿಸಿದ ಪಾಠಗಳು-ಕರ್ನಾಟಕದ ಅನುಭವಗಳು' ಕುರಿತು ಅವರು ಮಾತನಾಡಿದರು.

'ನರೇಗಾ ಯೋಜನೆ ಜಾರಿಗೆ ತರುವಾಗ ದೇಶದ ಕಡುಬಡತನವನ್ನು ಹೋಗಲಾಡಿಸಬೇಕು, ಜನರ ಜೀವನಮಟ್ಟವನ್ನು ಸುಧಾರಿಸಬೇಕು ಹಾಗೂ ಆ ಮೂಲಕ ಸಾಮಾಜಿಕ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕು ಎಂಬ ಆಶಯ ಇತ್ತು. ಆ ಕಾರಣದಿಂದಲೇ ದೇಶದ ಪ್ರತಿ ರಾಜ್ಯ, ಜಿಲ್ಲೆ, ತಾಲ್ಲೂಕು, ಗ್ರಾಮಗಳ ಅಗತ್ಯಗಳಿಗೆ ಅನುಗುಣವಾಗಿ ಯೋಜನೆಯ ರೂಪುರೇಷೆ ಸಿದ್ಧಪಡಿಸಲಾಗುತ್ತಿತ್ತು' ಎಂದು ವಿವರಿಸಿದರು.

'ತಮ್ಮ ಗ್ರಾಮಕ್ಕೆ ಏನು ಬೇಕು ಎಂಬುದನ್ನು ಕೇಳಲು ನರೇಗಾದಲ್ಲಿ ಗ್ರಾಮಸ್ಥರಿಗೆ ಅವಕಾಶವಿತ್ತು. ಆದರೆ ವಿಬಿ-ಜಿರಾಮ್-ಜಿಯಲ್ಲಿ ಅಂತಹ ಅವಕಾಶವಿಲ್ಲ. 'ಇಡೀ ದೇಶವನ್ನು ಒಂದು ಘಟಕವನ್ನಾಗಿ' ಈ ಯೋಜನೆ ನೋಡಲಿದೆ. ಈಶಾನ್ಯ ಭಾರತದ ಗ್ರಾಮಕ್ಕೂ, ಕರ್ನಾಟಕದ ಬಯಲು ಸೀಮೆಯ ಹಳ್ಳಿಗೂ ಒಂದೇ ಸ್ವರೂಪದ ಯೋಜನೆ ನೀಡಲಿದೆ. ಇದೊಂದು ವಿಫಲ ಮಾದರಿ' ಎಂದರು.

'ಕೃಷಿಯನ್ನು ಪ್ರಧಾನವಾಗಿ ಇರಿಸಿಕೊಂಡೇ ನರೇಗಾ ಅನುಷ್ಠಾನ ಮಾಡಲಾಗುತ್ತಿತ್ತು. ದೀರ್ಘಾವಧಿಯಲ್ಲಿ ಕೃಷಿಭೂಮಿಯ ಫಲವತ್ತತೆ ಹೆಚ್ಚಿಸುವ ಮತ್ತು ಕೃಷಿಯನ್ನು ಸುಸ್ಥಿರ ಜೀವನೋಪಾಯ ಕ್ಷೇತ್ರವನ್ನಾಗಿಸುವ ಗುರಿ ನರೇಗಾದಲ್ಲಿತ್ತು. ಆದರೆ ವಿಬಿ-ಜಿರಾಮ್-ಜಿ ಯೋಜನೆಯು ಇದಕ್ಕೆ ತದ್ವಿರುದ್ಧವಾಗಿ ತಕ್ಷಣದ ಫಲಿತಾಂಶಕ್ಕೆ ಮಾತ್ರವೇ ಒತ್ತು ನೀಡಲಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ, 'ಅಧಿಕಾರ ವಿಕೇಂದ್ರೀಕರಣ ತತ್ವವನ್ನು ತಲೆಕೆಳಗು ಮಾಡುವ ಹುನ್ನಾರ ಇದು. ಜನರ ಉದ್ಯೋಗದ ಅವಕಾಶ ಮತ್ತವರದ್ದೇ, ಗ್ರಾಮ ಪಂಚಾಯಿತಿಗಳ ಅಧಿಕಾರವನ್ನೂ ಕೇಂದ್ರ ಸರ್ಕಾರವು ಕಸಿದುಕೊಳ್ಳುತ್ತಿದೆ' ಎಂದರು.

ವಿಚಾರ ಸಂಕಿರಣದಲ್ಲಿ ಡಿ.ಆರ್.ಪಾಟೀಲ, ಬಿ.ಆರ್.ಪಾಟೀಲ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕಾರ್ಯದರ್ಶಿ ರಮಣದೀಪ್ ಚೌಧರಿ ಮತ್ತು ಗ್ರಾಮೀಣ ಕೂಲಿಕಾರರ ಸಂಘದ ನಾಯಕಿ ಮೋಕ್ಷಮ್ಮ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಅರ್ಹರಿಗೆ ನ್ಯಾಯ ಒದಗಿಸಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ಆಯ್ಕೆಗೆ ಮುಖ್ಯ ಪರೀಕ್ಷೆಯಿಂದ 1:3ರ ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನ) ಕೆಪಿಎಸ್‌ಸಿ ಸಿದ್ಧಪಡಿಸಿರುವ ಅರ್ಹತಾ ಪಟ್ಟಿಗೆ ಹಲವು ಅಭ್ಯರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದು, ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕು’ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದ್ದಾರೆ.

ಈ ಬಗ್ಗೆ ‘ಎಕ್ಸ್’ ಮಾಡಿರುವ ಅವರು, ‘ಒಂದೇ ಕೊಠಡಿಯಲ್ಲಿ ಮುಖ್ಯ ಪರೀಕ್ಷೆ ಎದುರಿಸಿದ್ದ 15 ಮಂದಿಯ ಹೆಸರು ಅರ್ಹರ ಪಟ್ಟಿಯಲ್ಲಿ ಇರುವುದು ಇತರ ಉದ್ಯೋಗಾಕಾಂಕ್ಷಿಗಳಲ್ಲಿ ಗೊಂದಲ ಮೂಡಿಸಿದೆ. ನೊಂದಿರುವ ಅರ್ಹ ಉದ್ಯೋಗಾಕಾಂಕ್ಷಿಗಳಿಗೆ ನ್ಯಾಯ ಒದಗಿಸುವುದು ಸರ್ಕಾರದ ಕರ್ತವ್ಯ’ ಎಂದಿದ್ದಾರೆ.

ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾದವರ ಪಟ್ಟಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವ ಅಭ್ಯರ್ಥಿಗಳು, ಅರ್ಹತಾ ಪಟ್ಟಿ ಸಿದ್ಧಪಡಿಸಿದ ವೇಳೆ ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದ್ದಾರೆ.

‘ಕಳ್ಳರ ದಂಧೆಯ ಕೇಂದ್ರ ಕೆಪಿಎಸ್‌ಸಿ’

‘ಕೆಪಿಎಸ್‌ಸಿ ಎಂದರೆ ಕಳ್ಳರ ದಂಧೆಯ ಕೇಂದ್ರ. ಹಣ ಕೊಡದೇ ಇದ್ದರೆ ಕಚೇರಿಯ ಒಳಗೆ ಕೂಡ ಬಿಡುವುದಿಲ್ಲ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದರು.

‘ಕೆಪಿಎಸ್‌ಸಿಯಲ್ಲಿ ಕುಟುಂಬ, ಜಾತಿ ಎನ್ನುವುದು ಮಾನದಂಡವೇ ಹೊರತು ಅಂಕ, ಪ್ರತಿಭೆ ಮುಖ್ಯವಲ್ಲ. ಕೆಪಿಎಸ್‌ಸಿ ಮುಚ್ಚಿ, ಕೇಂದ್ರದ ಯುಪಿಎಸ್‌ಸಿ ಮಾದರಿಯ ಸಂಸ್ಥೆಯನ್ನು ಸ್ಥಾಪಿಸಬೇಕು. ಈ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಮಾತನಾಡುತ್ತೇನೆ’ ಎಂದರು.

‘ಜಿಲ್ಲೆಗಳಲ್ಲಿ ಕಲಾ ಗ್ಯಾಲರಿ ಸ್ಥಾಪಿಸಿ’

ಕೊಡಗಿನಲ್ಲಿ ರಾಷ್ಟ್ರೀಯ ಮಹಿಳಾ ಕಲಾ ಶಿಬಿರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಹಸಿರು ಹೊದ್ದಿರುವ ಬೆಟ್ಟ ಗುಡ್ಡಗಳು ಹಾಗೂ ತಂಗಾಳಿಯ ನಡುವೆ ಕರ್ನಾಟಕ ಲಲಿತಾ ಕಲಾ ಅಕಾಡೆಮಿಯ ರಾಷ್ಟ್ರೀಯ ಮಹಿಳಾ ಕಲಾ ಶಿಬಿರವು ಗುರುವಾರ ಇಲ್ಲಿ ಆರಂಭಗೊಂಡಿತು.

ನಗರ ಹೊರವಲಯದ ‘ದಿ ಕ್ಯಾಪಿಟಲ್ ವಿಲೇಜ್’ ರೆಸಾರ್ಟ್‌ನಲ್ಲಿ ಆರಂಭವಾದ ಶಿಬಿರದಲ್ಲಿ ಹೈದರಾಬಾದ್, ಗೋವಾ, ಮುಂಬೈ, ತಮಿಳುನಾಡು, ಬರೋಡಾ ಸೇರಿದಂತೆ ಹೊರ ರಾಜ್ಯ ಮತ್ತು ಕರ್ನಾಟಕದ 14ಕ್ಕೂ ಅಧಿಕ ಮಂದಿ ಕಲಾವಿದರು ಭಾಗಿಯಾಗಿದ್ದು ಕಲಾಕೃತಿಗಳ ರಚನೆಯಲ್ಲಿ ತೊಡಗಿದ್ದಾರೆ.

4 ದಿನಗಳ ಶಿಬಿರಕ್ಕೆ ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್ ಹಾಗೂ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಚಿತ್ರ ಬಿಡಿಸುವ ಮೂಲಕ ಚಾಲನೆ ನೀಡಿದರು.

ಪ.ಸ.ಕುಮಾರ್ ಮಾತನಾಡಿ, ‘ಮುಂಬೈನಲ್ಲಿರುವ ಜೆ.ಜೆ.ಚಿತ್ರಕಲೆ ಶಾಲೆಯ ಮಾದರಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ‘ಕಲಾ ಗ್ಯಾಲರಿ’ ಆರಂಭಿಸಬೇಕು ಹಾಗೂ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ಚಿತ್ರಕಲೆಯನ್ನು ಪಠ್ಯದಲ್ಲೇ ಅಳವಡಿಸಬೇಕು’ ಎಂದರು.

ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಹೊರಗುತ್ತಿಗೆ ನೌಕರರ ಸೇವೆಯನ್ನು ಒದಗಿಸುವ ಕುರಿತು ಕೆ.ಪಿ.ಪಿ ಪೋರ್ಟಲ್ ಮೂಲಕ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ (KC-6) ಹಾಗೂ ಎಸ್.ಹೆಚ್.ಡಿ.ಪಿ ನಿಯಮಗಳಾನುಸಾರವಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

(1) **ಕಾಮಗಾರಿ ವಿವರ:** ಲೆಕ್ಕಶೀರ್ಷಿಕೆ: 3054–03–001–1–02–195 ಕೆ.ಪಿ.ಪಿ ಪೋರ್ಟಲ್ ಮೂಲಕ ವಿವರಗಳನ್ನು ಪಡೆಯಬಹುದು.
(2) **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** ಟೆಂಡರ್‌ಗಿಟ್ಟ ಮೊತ್ತದ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆದುಕೊಳ್ಳಬಹುದು.
(3) **ಇಎಂಡಿ ಮೊತ್ತ (ರೂ.ಲಕ್ಷಗಳಲ್ಲಿ):** ಕೆ.ಪಿ.ಪಿ ಪೋರ್ಟಲ್ ಮೂಲಕ ಪ್ಯಾಕೇಜ್‌ವಾರು ಇ.ಎಂ.ಡಿ ವಿವರಗಳನ್ನು ಪಡೆದುಕೊಳ್ಳಬಹುದು.
(4) **ಕಾಲಾವಧಿ:** 12 ತಿಂಗಳು.

ಟೆಂಡರ್ ಪ್ರಕ್ರಿಯೆಯ ವಿವರಗಳು:– (1) ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ದಾಖಲಾತಿಗಳನ್ನು ದಿನಾಂಕ: **06/03/2026 ರಿಂದ ದಿನಾಂಕ: 23/03/2026ರ ಸಂಜೆ 4.30 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. (2) ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **23/03/2026 ರಂದು ಸಂಜೆ 4–30 ಗಂಟೆ ವರೆಗೆ.** (3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 25/03/2026 ರಂದು ಸಂಜೆ 05.30 ಗಂಟೆಗೆ.** (4) ಅರ್ಹ ಟೆಂಡರ್‌ಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ಸಂಭಾವನೀಯ **ದಿನಾಂಕ: 01/04/2026 ರಂದು ಬೆಳಿಗ್ಗೆ 11.30 ಗಂಟೆಗೆ.** (5) ತಿದ್ದುಪಡಿ ಪ್ರಕಟಣೆಗಳು, ಮಾರ್ಪಾಡುಗಳ ಪ್ರಕಟಣೆಗಳು ಮತ್ತು ಪ್ರಕಟಣೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ ಅವುಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಲೋಕೋಪಯೋಗಿ ಇಲಾಖೆ ಮತ್ತು ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿತ ಬಿಡ್ಡುದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಟೆಂಡರ್ ಆಹ್ವಾನಿಸಿರುವ ಹೊರಗುತ್ತಿಗೆ ನೌಕರರ ಸೇವೆಯ ಬಗ್ಗೆ ಹೆಚ್ಚಿನ ವಿವರಗಳನ್ನು ಮುಖ್ಯ ಯೋಜನಾಧಿಕಾರಿರವರ ಕಛೇರಿ, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ರವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಮೂಲಕ: www.kppp.karnataka.gov.in ಇ–ಸಂಗ್ರಹಣೆ ಪೋರ್ಟಲ್‌ನ ಸಹಾಯವಾಣಿ ದೂರವಾಣಿ ಸಂಖ್ಯೆ: 080–22224106.

ಸಹಿ/–
ಅಧೀಕ್ಷಕ ಇಂಜಿನಿಯರ್, ಯೋಜನಾ ಅನುಷ್ಠಾನ ಘಟಕ,
ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್. ವೃತ್ತ, ಬೆಂಗಳೂರು.

DIPR/CP/6036/SMCL/2025-26

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
ನಗರಾಭಿವೃದ್ಧಿ ಭವನ, ನಂ.22, 17ನೇ ’ಎಫ್’ ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ,
ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು–560 038. ದೂರವಾಣಿ: 91–80–25196100, 25196124 ಫ್ಯಾಕ್ಸ್: 080–25196110
ಇ–ಮೇಲ್ ವಿಳಾಸ: info@kuidfc.com ಅಂತರ್ಜಾಲ ವಿಳಾಸ: www.kuidfc.com

ಸಂಖ್ಯೆ:ಕೆಯುಐಡಿಎಫ್.ಸಿ/ಯುಡಬ್ಲ್ಯೂಎಮ್/ಟೆಂಡರ್/2025–26/29/6003 ದಿನಾಂಕ:05.03.2026

ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಸಂಸ್ಥೆಯು N.G.T ಪರಿಸರ ಪರಿಹಾರ ನಿಧಿ ಹಾಗೂ ಎಸ್.ಬಿ.ಎಂ (ನ)–2.0 ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಕಂಡ ಯೋಜನೆಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್ ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) ರೂ.ಲಕ್ಷಗಳಲ್ಲಿ	ಮುಂಗಡ ಭದ್ರತಾ ಠೇವಣಿ ರೂ.ಲಕ್ಷಗಳಲ್ಲಿ
1	“Construction of sewerage system in **Srirangapatana town – Phase 2”** under NGT & SBM (U)-2.0 fund in DBOT model – **Call - 2**	**634.30**	**10.00**
2	“Construction of 3.85 MLD Sewage Treatment Plant in **Someshwara town”** along with 5 years Operation & Maintenance (including 1-year Defect liability period) under Swachh Bharat Mission (U)-2.0 fund through Design, Built, Operate and Transfer (DBOT) model – **Call - 2**	**569.19**	**9.00**
3	Construction of Sewage Treatment Plant (STP) of 3.19 MLD capacity at **Chincholi ULB of Kalburgi District** along with 5 years Operation & Maintenance (including 1-year Defect liability period) under Swachh Bharat Mission (U)-2.0 fund through Design, Built, Operate and Transfer (DBOT) model. **(Package: SBM/KLB_Pkg-9) Call-2**	**427.34**	**6.50**
4	Construction of Sewage Treatment Plants (STP) of capacity 3.03 & 3.37 MLD at **Aurad & Hallikhed-B** ULBs of **Bidar District**, 2.26 & 3.56 MLD at **Yelburga & Kustagi** ULBs of **Koppal District** along with 5 years Operation & Maintenance (including 1-year Defect liability period) under Swachh Bharat Mission (U)-2.0 fund through Design, Built, Operate and Transfer (DBOT) model. **(Package: SBM/KLB_Pkg-7) - Call-2**	**1521.50**	**15.50**

1) ಟೆಂಡರ್ ಆಹ್ವಾನಿಸಿರುವ ದಿನಾಂಕ: **06.03.2026**. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ: **12.03.2026 ಸಮಯ: 11.30 ಪೂರ್ವಾಹ್ನ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **18.03.2026 ಸಮಯ: 5.30 ಅಪರಾಹ್ನ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **20.03.2026 ಸಮಯ: 11.30 ಪೂರ್ವಾಹ್ನ.** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **06.04.2026 ಸಮಯ: 11.30 ಪೂರ್ವಾಹ್ನ.**

ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official Website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು, ಯೋಜನಾ ಮೇಲ್ವಿಚಾರಣಾ ಘಟಕ,
ಯುಡಬ್ಲ್ಯೂಎಮ್–ಕೆಯುಐಡಿಎಫ್‌ಸಿ, ಬೆಂಗಳೂರು

ವಾಸಾಸಂಇ/ವಾಪ್ರ/6027/ಎಂಎಎ/2025–26

₹34.46 ಕೋಟಿ ಅಕ್ರಮ ಆಸ್ತಿ ಪತ್ತೆ

ಸರ್ಕಾರದ ವಿವಿಧ ಇಲಾಖೆಗಳ 9 ಅಧಿಕಾರಿಗಳ ಮನೆ ಮೇಲೆ 'ಲೋಕಾ' ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣಗಳಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆ ಮತ್ತು ಸಂಸ್ಥೆಗಳ 9 ಅಧಿಕಾರಿಗಳಿಗೆ ಸೇರಿದ 42 ಸ್ಥಳಗಳಲ್ಲಿ ದಾಳಿ ನಡಸಿದ ಲೋಕಾಯುಕ್ತ ಪೊಲೀಸರು ₹34.46 ಕೋಟಿಯಷ್ಟು ಅಕ್ರಮ ಸಂಪತ್ತು ಪತ್ತೆ ಮಾಡಿದ್ದಾರೆ.

ಬೆಂಗಳೂರು ನಗರ, ಮಂಡ್ಯ, ಗದಗ, ಮೈಸೂರು, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಯಲ್ಲಿನ ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರು ಗುರುವಾರ ಬೆಳಿಗ್ಗೆ 5ರ ಹೊತ್ತಿಗೆ ದಾಳಿ ನಡೆಸಿದರು. ರಾತ್ರಿಯವರೆಗೂ ನಡೆದ ದಾಳಿಯಲ್ಲಿ ಒಟ್ಟು ₹43.12 ಕೋಟಿ ಮೊತ್ತದ ಆಸ್ತಿ ಪತ್ತೆಯಾಗಿದ್ದು, ಅದರಲ್ಲಿ ₹8.64 ಕೋಟಿಯಷ್ಟು ಮಾತ್ರವೇ ಅಧಿಕೃತ ಮತ್ತು ಘೋಷಿತ ಆದಾಯದ ಸಂಪತ್ತು.

ಮೈಸೂರಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆಸಿಫ್ ಇಕ್ಬಾಲ್ ಖಲೀಲ್ ಅವರಿಗೆ ಸೇರಿದ ಒಟ್ಟು ನಾಲ್ಕು ಸ್ಥಳಗಳಲ್ಲಿ ದಾಳಿ ನಡೆದಿದೆ. ಒಟ್ಟು ₹8.81 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದ್ದು, ಅದರಲ್ಲಿ ಅಕ್ರಮ ಸಂಪತ್ತಿನ ಮೌಲ್ಯವೇ ₹6.89 ಕೋಟಿಯಷ್ಟಾಗುತ್ತದೆ. ಗುರುವಾರದ ದಾಳಿಯಲ್ಲಿ ಅತಿಹೆಚ್ಚು ಆಸ್ತಿ ಪತ್ತೆಯಾಗಿರುವುದು ಈ ಪ್ರಕರಣದಲ್ಲಿ.

ಎಂಟೂ ಅಧಿಕಾರಿಗಳಿಗೆ ಸೇರಿದ, ಒಟ್ಟು ₹30.03 ಕೋಟಿಯಷ್ಟು ಸ್ಥಿರಾಸ್ತಿ ಪತ್ತೆಯಾಗಿದೆ. ₹13.05 ಕೋಟಿ ಮೌಲ್ಯದಷ್ಟು ಚರಾಸ್ತಿ ಪತ್ತೆಯಾಗಿದೆ. ಈ ಅಧಿಕಾರಿಗಳು ಮತ್ತು ಅವರ ಆಪ್ತರಿಗೆ ಸೇರಿದ ಬ್ಯಾಂಕ್ ಲಾಕರ್‌ಗಳ ಪರಿಶೀಲನೆ ಮುಂದುವರೆದಿದ್ದು, ಆಸ್ತಿಯ ಮೌಲ್ಯ ಇನ್ನಷ್ಟು ಹೆಚ್ಚಾಗಬಹುದು ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ.

ಆಸ್ತಿ ವಿವರ

ಶಶಿಧರ್ ಆರ್., ಸಿಇಒ, ಸಿಂಗನಾಯಕನಹಳ್ಳಿ ರೈತ ಸೇವಾ ಸಹಕಾರ ಸಂಘ, ಯಲಹಂಕ, ಬೆಂಗಳೂರು	
₹4.25 ಕೋಟಿ	4 ನಿವೇಶನ, 2 ಮನೆ, 2 ಎಕರೆ ಜಮೀನು
₹90 ಲಕ್ಷ	ಮೌಲ್ಯದ ಚಿನ್ನಾಭರಣ ಮತ್ತು ವಾಹನಗಳು
₹5.15 ಕೋಟಿ	ಒಟ್ಟು ಆಸ್ತಿಯ ಮೌಲ್ಯ
₹3.43 ಕೋಟಿ	ಅಕ್ರಮ ಆಸ್ತಿಯ ಮೌಲ್ಯ
ಎಚ್.ಸಿ.ಇಂದ್ರೇಶ್, ಸಹ ಪ್ರಾಧ್ಯಾಪಕ, ಪಶುವೈದ್ಯಕೀಯ ಕಾಲೇಜು, ಹೆಬ್ಬಾಳ, ಬೆಂಗಳೂರು	
₹2.22 ಕೋಟಿ	ಮೌಲ್ಯದ 10 ನಿವೇಶನ, 2 ಮನೆ
₹32.10 ಲಕ್ಷ	ಮೌಲ್ಯದ ಚಿನ್ನಾಭರಣ ಮತ್ತು ವಾಹನಗಳು
₹2.53 ಕೋಟಿ	ಒಟ್ಟು ಆಸ್ತಿಯ ಮೌಲ್ಯ
₹1.88 ಕೋಟಿ	ಅಕ್ರಮ ಆಸ್ತಿಯ ಮೌಲ್ಯ
ವಸಂತ್ ವಾಲಪ್ಪ ನಾಯಕ್, ಮುಖ್ಯ ಎಂಜಿನಿಯರ್, ಕೆ–ಶಿಪ್, ಬೆಂಗಳೂರು	
₹5.65 ಕೋಟಿ	ಮೌಲ್ಯದ 4 ನಿವೇಶನ, 7 ಮನೆ, 22 ಎಕರೆ 20 ಗುಂಟೆ ಕೃಷಿ ಜಮೀನು
₹74.74 ಲಕ್ಷ	ಮೌಲ್ಯದ ಚಿನ್ನಾಭರಣ ಮತ್ತು ವಾಹನಗಳು
₹6.40 ಕೋಟಿ	ಒಟ್ಟು ಆಸ್ತಿಯ ಮೌಲ್ಯ
₹4.41 ಕೋಟಿ	ಅಕ್ರಮ ಆಸ್ತಿಯ ಮೌಲ್ಯ
ಸತೀಶ್ ಎಸ್., ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಂಡ್ಯ	
₹2.19 ಕೋಟಿ	ಮೌಲ್ಯದ 3 ನಿವೇಶನ, 2 ಮನೆ, 6 ಎಕರೆ ಕೃಷಿ ಜಮೀನು
₹2.26 ಕೋಟಿ	ಮೌಲ್ಯದ ಚಿನ್ನಾಭರಣ ಮತ್ತು ವಾಹನಗಳು
₹4.44 ಕೋಟಿ	ಒಟ್ಟು ಆಸ್ತಿಯ ಮೌಲ್ಯ
₹3.01 ಕೋಟಿ	ಅಕ್ರಮ ಆಸ್ತಿಯ ಮೌಲ್ಯ
ಎಂ.ಕೆ.ಸುರಕೋಡ್ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ, ಶಿರಹಟ್ಟಿ, ಗದಗ	
₹1.38 ಕೋಟಿ	ಮೌಲ್ಯದ 6 ನಿವೇಶನ, 1 ಮನೆ, 29 ಎಕರೆ ಕೃಷಿ ಜಮೀನು
₹73.56 ಲಕ್ಷ	ಮೌಲ್ಯದ ಚಿನ್ನಾಭರಣ ಮತ್ತು ವಾಹನಗಳು
₹2.12 ಕೋಟಿ	ಒಟ್ಟು ಆಸ್ತಿಯ ಮೌಲ್ಯ
₹1.82 ಕೋಟಿ	ಅಕ್ರಮ ಆಸ್ತಿಯ ಮೌಲ್ಯ
ಪ್ರಕಾಶ್ ಈರಪ್ಪ ಗೋಡ್ಬೊಲೆ, ಕಿರಿಯ ಎಂಜಿನಿಯರ್, ಕೆಬಿಜೆಎನ್‌ಎಲ್, ಇಂಡಿ, ವಿಜಯಪುರ	
₹1.45 ಕೋಟಿ	ಮೌಲ್ಯದ 2 ಮನೆ, 1 ಶಾಲಾ ಕಟ್ಟಡ
₹3.15 ಕೋಟಿ	ಮೌಲ್ಯದ ಚಿನ್ನಾಭರಣ ಮತ್ತು ವಾಹನಗಳು
₹4.60 ಕೋಟಿ	ಒಟ್ಟು ಆಸ್ತಿಯ ಮೌಲ್ಯ
ವೀರೇಶ್ ರುದ್ರಯ್ಯ ಹಿರೇಮಠ್, ಎಲೆಕ್ಟ್ರಿಕ್ ಇನ್‌ಸ್ಪೆಕ್ಟರ್, ಇಂಧನ ಇಲಾಖೆ, ಯಾದಗಿರಿ	
₹1.09 ಕೋಟಿ	ಮೌಲ್ಯದ 5 ನಿವೇಶನ, 2 ಮನೆ, 8 ಎಕರೆ 34 ಗುಂಟೆ ಕೃಷಿ ಜಮೀನು
₹45.24 ಲಕ್ಷ	ಮೌಲ್ಯದ ಚಿನ್ನಾಭರಣ ಮತ್ತು ವಾಹನಗಳು
₹1.54 ಕೋಟಿ	ಒಟ್ಟು ಆಸ್ತಿಯ ಮೌಲ್ಯ

ಹಾಸನದ ರಕ್ಷಣಾಪುರಂನ ಸತ್ಯನಾರಾಯಣ ಎಂ.ಸಿ. ಅವರ ಮನೆಯ ಬಾಗಿಲ ಎದುರು ನಿಂತಿದ್ದ ಲೋಕಾಯುಕ್ತ ಅಧಿಕಾರಿಗಳು

4 ತಾಸು ಬಾಗಿಲು ತೆಗೆಯದ ಅಧಿಕಾರಿ

ಗುರುವಾರದ ಕಾರ್ಯಾಚರಣೆಯ ಭಾಗವಾಗಿ ಲೋಕಾಯುಕ್ತ ಪೊಲೀಸರು ಹಾಸನ ಮಹಾನಗರ ಪಾಲಿಕೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸತ್ಯನಾರಾಯಣ ಎಂ.ಸಿ. ಅವರ ಮನೆಯ ಮೇಲೂ ದಾಳಿ ನಡೆಸಿದ್ದರು. ಆದರೆ ಸತ್ಯನಾರಾಯಣ ಅವರು ಮನೆಯ ಬಾಗಿಲು ತೆಗೆಯದೆ ಲೋಕಾಯುಕ್ತ ಪೊಲೀಸ್ ಸಿಬ್ಬಂದಿಯನ್ನು ನಾಲ್ಕು ತಾಸು ಬೀದಿಯಲ್ಲಿಯೇ ನಿಲ್ಲಿಸಿದ್ದರು.

ಹಾಸನದ ರಕ್ಷಣಾಪುರದಲ್ಲಿರುವ ಸತ್ಯನಾರಾಯಣ ಅವರ ಮನೆಯ ಬಾಗಿಲನ್ನು ಲೋಕಾಯುಕ್ತ ಪೊಲೀಸರು ಬೆಳಿಗ್ಗೆ 5.15ರ ಹೊತ್ತಿಗೆ ಬಡಿದರು. ಆದರೆ ಸತ್ಯನಾರಾಯಣ ಅವರು ಮನೆಯ ಬಾಗಿಲು ತೆಗೆಯಲೇ ಇಲ್ಲ. ಬೆಳಿಗ್ಗೆ 8ರ ಹೊತ್ತಾದರೂ ಯಾರೂ ಮನೆಯ ಬಾಗಿಲು ತೆಗೆಯಲಿಲ್ಲ. ಆಗ ಲೋಕಾಯುಕ್ತ ಪೊಲೀಸರು ಸ್ಥಳೀಯ ಪೊಲೀಸರ ನೆರವು ಪಡೆದು, ಸತ್ಯನಾರಾಯಣ ಅವರ ಮೊಬೈಲ್ ಲೊಕೇಶನ್ ಅದೇ ಮನೆಯಲ್ಲಿ ಇರುವುದನ್ನು ಖಚಿತಪಡಿಸಿಕೊಂಡರು.

ತನಿಖೆಗೆ ಸಹಕರಿಸದಿದ್ದರೆ ಬಲವಂತದಿಂದ ಮನೆಯ ಒಳಗೆ ನುಗ್ಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ ನಂತರ ಬೆಳಿಗ್ಗೆ 9ರ ಹೊತ್ತಿಗೆ ಬಾಗಿಲು ತೆರೆದರು. ತಡರಾತ್ರಿಯವರೆಗೂ ನಡೆದ ಶೋಧದ ನಂತರ ಸತ್ಯನಾರಾಯಣ ಅವರಿಗೆ ಸೇರಿದ ₹7.45 ಕೋಟಿಯಷ್ಟು ಒಟ್ಟು ಆಸ್ತಿ, ಅದರಲ್ಲಿ ₹6.82 ಕೋಟಿ ಅಕ್ರಮ ಆಸ್ತಿ ಪತ್ತೆಯಾಗಿದೆ. ಅವರ ಒಟ್ಟು ಆಸ್ತಿಯಲ್ಲಿ ಚಿನ್ನಾಭರಣದ ಮೌಲ್ಯವೇ ₹2.78 ಕೋಟಿಯಷ್ಟಾಗುತ್ತದೆ.

ಮಕ್ಕಳಿಗೆ ಕೊಡಬೇಕಿದ್ದ ಹಾಸಿಗೆ, ಬೆಡ್‌ಶೀಟ್ ಅಧಿಕಾರಿ ಮನೆಯಲ್ಲಿ

ಗದಗ: ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಕೆ ಆರೋಪದ ಮೇಲೆ ಶಿರಹಟ್ಟಿ ತಾಲ್ಲೂಕು ಬಿಸಿಎಂ ಅಧಿಕಾರಿ ಎಂ.ಕೆ.ಸುರಕೋಡ ಅವರಿಗೆ ಸಂಬಂಧಿಸಿದ ಆರು ಕಡೆ ಗುರುವಾರ ಬೆಳಿಗ್ಗೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ಶೇ 227 ಅಧಿಕ ಆಸ್ತಿ ಹೊಂದಿರುವುದನ್ನು ಪತ್ತೆ ಮಾಡಿದ್ದಾರೆ.

ಲೋಕಾಯುಕ್ತ ಪೊಲೀಸರ ಶೋಧನೆ ವೇಳೆ ಅಧಿಕಾರಿಯ ಮನೆಯಲ್ಲಿ ಬಿಸಿಎಂ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಸರಬರಾಜು ಮಾಡಲಾಗಿದ್ದ ಹಾಸಿಗೆ–ಬೆಡ್‌ಶೀಟ್‌ಗಳು, ಹಾಸ್ಟೆಲ್‌ನಲ್ಲಿ ಅಡುಗೆ ಮಾಡಲು ಬಳಸುವ ದೊಡ್ಡ ಪಾತ್ರೆಗಳು, ನೋಟ್‌ಪುಸ್ತಕಗಳು ಸಿಕ್ಕಿವೆ. ದಾಖಲಾತಿಗಳ ಪರಿಶೀಲನೆ ಮುಂದುವರಿದಿದೆ.

ಹಾಸ್ಟೆಲ್‌ನಲ್ಲಿ ಅಡುಗೆ ಮಾಡಲು ಸರ್ಕಾರ ಕೊಟ್ಟಿರುವ ಪಾತ್ರೆಗಳು ಶಿರಹಟ್ಟಿ ತಾಲ್ಲೂಕು ಬಿಸಿಎಂ ಅಧಿಕಾರಿ ಎಂ.ಕೆ.ಸುರಕೋಡ ಅವರ ಮನೆಯಲ್ಲಿ ಪತ್ತೆಯಾಗಿವೆ

ಚಿಟಿಕೆ ಸುದ್ದಿ

ಬಜೆಟ್: ಬಸ್ ನಿಲ್ದಾಣಗಳಲ್ಲಿ ನೇರ ಪ್ರಸಾರ

ಬೆಂಗಳೂರು: ಕರ್ನಾಟಕ ಸರ್ಕಾರದ 2026-27ನೇ ಸಾಲಿನ ಬಜೆಟ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಚ್ 6ರಂದು ಮಂಡಿಸಲಿದ್ದಾರೆ. ರಾಜ್ಯದ ಆಯ್ದ ಬಸ್ ನಿಲ್ದಾಣದ ಟಿವಿಗಳಲ್ಲಿ ಇದರ ನೇರ ಪ್ರಸಾರ ಮಾಡಲು ನಿರ್ಧರಿಸಲಾಗಿದೆ ಎಂದು ವಾರ್ತಾ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಸಿದ್ದರಾಮಯ್ಯ ಅವರು 17ನೇ ಬಾರಿ ಬಜೆಟ್ ಮಂಡನೆ ಮಾಡಲಿದ್ದು, ರಾಜ್ಯದ ಜನರಿಗೆ ತಲುಪಿಸುವ ಉದ್ದೇಶದಿಂದ ವೃತ್ತಿ ಸೊಲ್ಯೂಷನ್ಸ್ ಲಿಮಿಟೆಡ್ ಸಂಸ್ಥೆಯು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಇರುವ ತನ್ನ ಡಿಜಿಟಲ್ ಡಿಸ್‌ಪ್ಲೇ ಪರದೆಗಳ ಮೂಲಕ ನೇರ ಪ್ರಸಾರ ಮಾಡಲಿದೆ.

ಸಾಲದ ಬಜೆಟ್ ಮಂಡನೆ ಖಚಿತ: ಅಶೋಕ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ₹ 1.15 ಲಕ್ಷ ಕೋಟಿ ಸಾಲದ ಬಜೆಟ್ ಮಂಡಿಸಲಿದ್ದು, ಈ ಬಾರಿಯೂ ಜನರ ಮೇಲೆ ತೆರಿಗೆಗಳ ಹೊರೆ ಹಾಕುವುದು ಖಚಿತ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ಎಂದರೆ ತೆರಿಗೆ ಹೇರುವ ರಾಮಯ್ಯ' ಎಂದು ಟೀಕಿಸಿದರು.

'ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ತೆರಿಗೆಗಳ ಹೊರೆ ಕಡಿಮೆ ಮಾಡಿದ್ದಾರೆ. ಆದರೆ, ಸಿದ್ದರಾಮಯ್ಯ ತಿಂಗಳಿಗೆ ನಾಲ್ಕರಂತೆ ತೆರಿಗೆ ಹಾಕುತ್ತಾರೆ. ಈಗಾಗಲೇ 36 ತೆರಿಗೆಗಳನ್ನು ಜನರ ಮೇಲೆ ಹೇರಿದ್ದಾರೆ. ಜನರ ಮೇಲೆ ಹೊರೆ ಹಾಕದೆ ಗ್ಯಾರಂಟಿ ತರುತ್ತೇವೆ ಎಂದು ಚುನಾವಣೆಗೂ ಮೊದಲು ಭರವಸೆ ನೀಡಿದ್ದ ಅವರು, ಈಗ ತೆರಿಗೆಗಳ ಹೊರೆ ಹೇರಿದ್ದಾರೆ' ಎಂದರು.

ಮುಳ್ಳೂರು ನಾಗರಾಜ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಚಾಮರಾಜನಗರ: ನಗರದ ರಂಗವಾಹಿನಿ ಸಂಸ್ಥೆಯು ಮುಳ್ಳೂರು ನಾಗರಾಜ ಸ್ಮರಣೆಯಲ್ಲಿ 15ನೇ ವರ್ಷದ ರಾಜ್ಯ ಮಟ್ಟದ ಕಾವ್ಯ ಪ್ರಶಸ್ತಿಗೆ ಕವನ ಸಂಕಲನಗಳನ್ನು ಆಹ್ವಾನಿಸಿದೆ.

ಕವನ ಸಂಕಲನ 2025ರಲ್ಲಿ ಪ್ರಕಟಗೊಂಡಿರಬೇಕು. ಆಸಕ್ತರು ಭಾವಚಿತ್ರ ಮತ್ತು ಕಿರು ಪರಿಚಯ ದೊಂದಿಗೆ ಸಂಕಲನದ 4 ಪ್ರತಿಗಳನ್ನು ಸಿ.ಎಂ.ನರಸಿಂಹಮೂರ್ತಿ ಅಧ್ಯಕ್ಷರು ರಂಗವಾಹಿನಿ, ಜಯ ದೇಗುಲ, 10ನೇ ಕ್ರಾಸ್, ಕೋರ್ಟ್ ಎದುರು, ಚಾಮರಾಜನಗರ-571313 ಈ ವಿಳಾಸಕ್ಕೆ ಏ.10ರ ಒಳಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್: 99161 15263 ಸಂಪರ್ಕಿಸಬಹುದು.

ವಿದ್ಯುತ್ ದರ ಏರಿಕೆ: ಎಂಎಸ್‌ಎಂಇಗಳಿಗೆ ಹೊರೆ

ಬೆಂಗಳೂರು: ರಾಜ್ಯದ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) 2025-26 ಹಣಕಾಸು ವರ್ಷಕ್ಕೆ ವಿದ್ಯುತ್ ದರಗಳನ್ನು ಪೂರ್ವಾನ್ವಯವಾಗಿ ಪರಿಷ್ಕರಿಸುವಂತೆ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಆದೇಶ ನೀಡಿರುವುದನ್ನು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ವಿರೋಧಿಸಿದೆ.

ಪೂರ್ವಾನ್ವಯ ದರ ಪರಿಷ್ಕರಣೆಗಳು ನಿಯಂತ್ರಣಾತ್ಮಕ ಸ್ಥಿರತೆಯನ್ನು ದುರ್ಬಲಗೊಳಿಸಲಿದೆ. ಕೈಗಾರಿಕೆಗಳ ಕಾರ್ಯಚಟುವಟಿಕೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ. ಸೀಮಿತ ಲಾಭಾಂಶದೊಂದಿಗೆ ಕಾರ್ಯನಿರ್ವಹಿಸುವ ಎಂಎಸ್‌ಎಂಇಗಳ ಆರ್ಥಿಕ ಯೋಜನೆ ಮತ್ತು ಕಾರ್ಯಾಚರಣೆಯ ಸ್ಥಿರತೆಗೆ ತೊಂದರೆಯಾಗಲಿದೆ ಎಂದಿದೆ.

ಯಾವುದೇ ನಿಯಂತ್ರಣಾತ್ಮಕ ನಿರ್ಧಾರವನ್ನು ಪೂರ್ವಾನ್ವಯವಾಗಿ ಜಾರಿಗೆ ತರಬಾರದು ಎಂದಿದೆ. ಹೆಚ್ಚುತ್ತಿರುವ ಉತ್ಪಾದನಾ ವೆಚ್ಚಗಳು ಮತ್ತು ಮಾರುಕಟ್ಟೆ ಒತ್ತಡಗಳಿಂದ ಹೋರಾಡುತ್ತಿರುವ ಸಣ್ಣ ಕೈಗಾರಿಕೆಗಳಿಗೆ ಇದು ಮತ್ತಷ್ಟು ಸಂಕಟ ಉಂಟು ಮಾಡಲಿದೆ ಎಂದು ಕಾಸಿಯಾ ಗೌರವ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಹುಸೇನ್ ತಿಳಿಸಿದ್ದಾರೆ.

ಕೆಪಿಎಸ್‌ಸಿಯಲ್ಲಿ ಮತ್ತೆ ಹಗರಣದ ವಾಸನೆ ಬಂದಿದೆ: ಆಯೋಗದ ಸುಧಾರಣೆಗೆ ಸರ್ಕಾರದ ಕ್ರಾಂತಿಕಾರಕ ನಿರ್ಧಾರ ಬೇಕೇ?

●ಬೇಕು ●ಬೇಡ ●ಏನೂ ಹೇಳಲಾಗದು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸುದ್ದಿ 2 ನಿಮಿಷ

'ಧರ್ಮಸ್ಥಳ: ಕಾಣೆಯಾದವರ ಮಾಹಿತಿಗೆ ತನಿಖೆ ಬೇಕು'

ಮಂಗಳೂರು: ಧರ್ಮಸ್ಥಳ ಗ್ರಾಮದಿಂದ ಕಾಣೆಯಾಗಿದ್ದಾರೆ ಎಂದು ಹೇಳಲಾಗುವ ಯುವತಿಯರು ಮತ್ತು ಮಹಿಳೆಯರ ಬಗ್ಗೆ ಮಾಹಿತಿ ಸಿಗಲೇಬೇಕು. ಆ ನಿಟ್ಟಿನಲ್ಲಿ ತನಿಖೆ ಆಗಬೇಕು ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಹೇಳಿದರು.

ನಗರದಲ್ಲಿ ಗುರುವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಧರ್ಮಸ್ಥಳ ಪ್ರಕರಣದಲ್ಲಿ ಮಹಿಳಾ ಆಯೋಗ ವರದಿ ಕೇಳಿದೆ. ಎಸ್‌ಐಟಿ ಮುಖ್ಯಸ್ಥರ ಜೊತೆ ನಿರಂತರ ಸಂಪರ್ಕದಲ್ಲಿದ್ದು ಹಲವು ಬಾರಿ ಸಭೆಗಳನ್ನೂ ನಡೆಸಲಾಗಿದೆ ಎಂದರು.

ಕಾಣೆಯಾದವರು ಎಲ್ಲಿಗೆ ಹೋದರು? ಸಾವಿಗೀಡಾಗಿದ್ದರೆ ಅದು ಸಂಭವಿಸಿದ್ದು ಹೇಗೆ ಇತ್ಯಾದಿ ವಿವರಗಳು ಬೇಕು. ಇದು ಕಷ್ಟದ ಕೆಲಸ ನಿಜ. ಆದರೆ ಅಷ್ಟು ಮಾಹಿತಿ ತಿಳಿಯಲೇಬೇಕಾಗಿದೆ ಎಂದು ಹೇಳಿದರು.

ಮಾತುಕತೆ: ಅತ್ಯಾಚಾರಕ್ಕೆ ಪೋರ್ನೋಗ್ರಫಿ, ನಶೆ ಮತ್ತಿತರ ಕಾರಣಗಳೂ ಇವೆ. ಸ್ಮಾರ್ಟ್‌ ಫೋನ್‌ಗಳ ಬಳಕೆಯೂ ಕೆಟ್ಟ ಪಾತ್ರ ವಹಿಸುತ್ತದೆ. ರಾಜ್ಯದಲ್ಲಿ ಈಚೆಗೆ ಮಹಿಳೆಯರ ಮೇಲೆ ಆಗಿರುವ ದೌರ್ಜನ್ಯ ಪ್ರಕರಣ ಮತ್ತು ತಡೆಗೆ ಕೈಗೊಂಡ ಕ್ರಮಗಳ ಬಗ್ಗೆ ತಿಳಿದುಕೊಳ್ಳಲು ಪೊಲೀಸರ ಜೊತೆ ಮಾತುಕತೆ ನಡೆಸಲಾಗುತ್ತಿದೆ ಎಂದರು.

ಮಾಲಿನ್ಯ: ವಿದ್ಯಾರ್ಥಿಗಳಿಗೂ ಅಂಟಿದ ದೂಳು

ಕೊಪ್ಪಳ: ಪರಿಸರ ಮಲಿನಗೊಳಿಸುತ್ತಿರುವ ಕಾರ್ಖಾನೆಗಳು ಹೊರಹೊಮ್ಮಿಸುತ್ತಿರುವ ಕಪ್ಪು ಕಣಗಳ ದೂಳಿನಿಂದ ತಾಲ್ಲೂಕಿನ ಹಿರೇಬಗನಾಳ ಗ್ರಾಮದಲ್ಲಿ ವಿದ್ಯಾರ್ಥಿಗಳು ಸಮಸ್ಯೆ ಎದುರಿಸುತ್ತಿದ್ದು, ಗುರುವಾರ ಆ ದೂಳನ್ನು ಜಿಲ್ಲಾಧಿಕಾರಿ ಡಾ.ಸುರೇಶ ಇಟ್ನಾಳ ಅವರಿಗೂ ತೋರಿಸಿದರು.

ಸ್ಪಾಂಜ್ ಹಾಗೂ ಐರನ್ ಕಾರ್ಖಾನೆಗಳಿಂದ ಮಾಲಿನ್ಯ ಹೆಚ್ಚಾಗಿರುವ ಬಗ್ಗೆ ಜನರಿಂದ ವ್ಯಾಪಕವಾಗಿ ದೂರುಗಳು ಬಂದಿದ್ದರಿಂದ ಜಿಲ್ಲಾಧಿಕಾರಿ, ಶಾಸಕ ರಾಘವೇಂದ್ರ ಹಿಟ್ನಾಳ ಹಾಗೂ ಮಾಜಿ ಸಂಸದ ಸಂಗಣ್ಣ ಕರಡಿ ಹಿರೇಬಗನಾಳಕ್ಕೆ ಭೇಟಿ ನೀಡಿದರು. ಅಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ತೆರಳಿದಾಗ ವಿದ್ಯಾರ್ಥಿಗಳು ನಿತ್ಯ ತಾವು ಕುಳಿತುಕೊಳ್ಳುವ ಮೇಜಿನ ಮೇಲೆ ಅಂಟಿಕೊಳ್ಳುವ ಕಪ್ಪು ಕಣಗಳ ದೂಳನ್ನು ತೋರಿಸಿದರು.

ಬಳಿಕ ಗ್ರಾಮಸ್ಥರ ಜೊತೆ ನಡೆದ ಮುಕ್ತ ಸಭೆಯಲ್ಲಿ ಮಾಲಿನ್ಯದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಜನರು, 'ಕಾರ್ಖಾನೆಗಳನ್ನು ಬಂದ್ ಮಾಡಿಸಿ; ಇಲ್ಲವೇ ನಮ್ಮ ಗ್ರಾಮವನ್ನೇ ಸ್ಥಳಾಂತರಿಸಿ' ಎಂದು ಒತ್ತಾಯಿಸಿದರು.

ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, 'ಮಾಲಿನ್ಯ ಉಂಟು ಮಾಡುತ್ತಿರುವ ಕಾರ್ಖಾನೆಗಳ ವಿರುದ್ಧ ಕ್ರಮ ಕೈಗೊಳ್ಳಲು ನೋಟಿಸ್ ಜಾರಿ ಮಾಡಲಾಗುವುದು. ಗ್ರಾಮಸ್ಥರ ನೋವಿಗೆ ಸ್ಪಂದಿಸಲಾಗುವುದು' ಎಂದು ಭರವಸೆ ನೀಡಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರತಿಭಟನೆ

'ವಿಬಿ ಜಿ ರಾಮ್‌ಜಿ ಕಾಯ್ದೆ ಹಿಂಪಡೆಯಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಬಿ ಜಿ ರಾಮ್ ಜಿ ಕಾಯ್ದೆ ರದ್ದು, ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ನಿಯಂತ್ರಣ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು.

ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಹಕ್ಕು ಬಲಪಡಿಸಬೇಕು, ನಗರ ಉದ್ಯೋಗ ಖಾತ್ರಿ ಕಾಯ್ದೆ ಜಾರಿಗೊಳಿಸುವ ಮೂಲಕ ದಿನಗೂಲಿಯನ್ನು ₹600ಕ್ಕೆ ಹೆಚ್ಚಿಸಬೇಕು ಮತ್ತು ವರ್ಷಕ್ಕೆ ಕನಿಷ್ಠ 200 ದಿನ ಕೆಲಸ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಜನವಾದಿ ಮಹಿಳಾ ಸಂಘನೆಯ ನಾಯಕಿ ಕೆ.ಎಸ್. ವಿಮಲಾ ಮಾತನಾಡಿ, 'ಗ್ರಾಮೀಣ ಕೃಷಿ ಬಿಕ್ಕಟ್ಟು ತೀವ್ರಗೊಳ್ಳುತ್ತಿದೆ. ಅತಿವೃಷ್ಟಿ, ಅನಾವೃಷ್ಟಿ, ವನ್ಯಜೀವಿಗಳ ಹಾವಳಿ, ಬೆಳೆ ಹಾನಿಯ ಜತೆಗೆ, ಬೆಂಬಲ ಬೆಲೆ ಇಲ್ಲದೆ ಇರುವುದು ಗ್ರಾಮೀಣ ಜನರ ಬದುಕನ್ನು ಅಸಹನೀಯಗೊಳಿಸಿದೆ. ಹಳ್ಳಿಗಳಲ್ಲಿ ಬದುಕು ನಡೆಸಲಾಗದ ದುಡಿಯುವ ವರ್ಗದ ಜನರು ದೊಡ್ಡ ಸಂಖ್ಯೆಯಲ್ಲಿ ನಗರಕ್ಕೆ ವಲಸೆ ಬರುತ್ತಿದ್ದಾರೆ. ಅವರಿಗೆ ನೆರವಾಗಲು ಮತ್ತು ನಗರ ಪ್ರದೇಶಗಳ ನಾಗರಿಕರಿಗೆ ಸೌಲಭ್ಯಗಳನ್ನು ಕಲ್ಪಿಸಲು ನೆರವಾಗುವಂತೆ ನಗರ ಉದ್ಯೋಗ ಖಾತ್ರಿ ಕಾಯ್ದೆ ಜಾರಿಗೆ ತರಬೇಕು' ಎಂದು ಒತ್ತಾಯಿಸಿದರು.

ಅತ್ಯಾಚಾರ, ಲೈಂಗಿಕ ದೌರ್ಜನ್ಯಗಳು, ಬಾಲ್ಯ ವಿವಾಹ, ಮರ್ಯಾದೆಗೇಡು ಹತ್ಯೆಗಳು ಪ್ರತಿನಿತ್ಯ ವರದಿಯಾಗುತ್ತಿವೆ. ಮರ್ಯಾದೆಗೇಡು ಹತ್ಯೆ ನಿಯಂತ್ರಣಕ್ಕಾಗಿ 'ಇವ ನಮ್ಮ ಇವ ನಮ್ಮವ' ಹೆಸರಿನ ಕರಡು ಮಸೂದೆ ಸಿದ್ಧವಾಗಿದ್ದು, ಬಜೆಟ್ ಅಧಿವೇಶನದಲ್ಲಿ ಮಂಡಿಸಬೇಕು. ಅಲ್ಲದೆ ಧರ್ಮಸ್ಥಳದ ಅತ್ಯಾಚಾರ, ಕೊಲೆ, ಅಸಹಜ ಸಾವು, ಭೂ ಕಬಳಿಕೆ, ಸ್ವ ಸಹಾಯ ಸಂಘಗಳ ಮೇಲಿನ ದೌರ್ಜನ್ಯ ಸೇರಿ ಎಲ್ಲ ಪ್ರಕರಣಗಳನ್ನು ಎಸ್‌ಐಟಿ ಮೂಲಕ ಸಮಗ್ರ ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮೀ ಮಾತನಾಡಿ, ಸ್ವ ಸಹಾಯ ಗುಂಪುಗಳಿಗೆ ಶೇಕಡ 4ರ ಬಡ್ಡಿ ದರದಲ್ಲಿ ಬ್ಯಾಂಕ್ ಸಾಲ ನೀಡಬೇಕು. ಮಹಿಳೆಯರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ಜಾಮೀನು ರಹಿತವಾಗಿ ಕನಿಷ್ಠ ₹2 ಲಕ್ಷದವರೆಗೆ ಸಾಲ ಮಂಜೂರು ಮಾಡಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕ ಎನ್.ಮಹೇಶ್ ಬಾಬು ಅವರು ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದರು. ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆ ರಾಜ್ಯ ಅಧ್ಯಕ್ಷೆ ಚಂದ್ರ ಕುಮಾರಿ, ಪ್ರಧಾನ ಕಾರ್ಯದರ್ಶಿ ದೇವಿ ಪಾಲ್ಗೊಂಡಿದ್ದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ತೆರಿಗೆ ಸಂಗ್ರಹ: ಕಡಬ ತಾ.ಪಂ ರಾಜ್ಯದಲ್ಲೇ ಪ್ರಥಮ

ಕಡಬ: ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕು ಪಂಚಾಯಿತಿಯು ತೆರಿಗೆ ಸಂಗ್ರಹದಲ್ಲಿ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ.

ಹೊಸ ತಾಲ್ಲೂಕು ಘೋಷಣೆ ಆದಾಗಿನಿಂದ ಪ್ರತಿ ವರ್ಷ ತೆರಿಗೆ ಸಂಗ್ರಹದಲ್ಲಿ ಅಗ್ರಸ್ಥಾನ ಪಡೆಯುತ್ತಿದೆ. ಈ ಆರ್ಥಿಕ ವರ್ಷದಲ್ಲೂ ಪ್ರಸಕ್ತ ಸಾಲಿನ ತೆರಿಗೆ ಗುರಿಯನ್ನು ಮೀರಿ (ಶೇ 103ರಷ್ಟು) ಸಾಧನೆ ಮಾಡಿದೆ.

ತಾಲ್ಲೂಕಿನ 21 ಗ್ರಾಮ ಪಂಚಾಯಿತಿಗಳು ಪ್ರಸಕ್ತ ಸಾಲಿನ ಬೇಡಿಕೆಯಲ್ಲಿ ಶೇ 100ರಷ್ಟು ಗುರಿ ತಲುಪಿವೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲ ವಾಣಿಜ್ಯ ಕಟ್ಟಡ, ಮನೆ, ವಿವಿಧ ಕೈಗಾರಿಕಾ ಕಟ್ಟಡಗಳಿಗೆ ಕಾನೂನು ಬದ್ಧವಾಗಿ ವಿಧಿಸುವ ತೆರಿಗೆಗಳಿಗೆ ಸಂಬಂಧಿಸಿ ಪಂಚಾಯಿತಿಗಳಿಗೆ ಗುರಿ ನೀಡಲಾಗುತ್ತದೆ. ವಾರ್ಷಿಕವಾಗಿ ತಾಲ್ಲೂಕಿನ 21 ಗ್ರಾಮ ಪಂಚಾಯಿತಿಗಳಿಗೆ ಒಟ್ಟು ₹ 3.34 ಕೋಟಿ ತೆರಿಗೆ ಸಂಗ್ರಹಿಸುವ ಗುರಿ ನಿಗದಿಪಡಿಸಲಾಗಿತ್ತು. ಆದರೆ, ಈಗಾಗಲೇ ₹ 3.41 ಕೋಟಿ ತೆರಿಗೆಯನ್ನು ಗ್ರಾಮ ಪಂಚಾಯಿತಿಗಳು ಸಂಗ್ರಹಿಸಿವೆ.

ಸುಬ್ರಹ್ಮಣ್ಯ ಗ್ರಾಮ ಪಂಚಾಯಿತಿಯಿಂದಲೇ ₹1 ಕೋಟಿಗೂ ಹೆಚ್ಚು ತೆರಿಗೆ ಸಂಗ್ರಹವಾಗಿದೆ.

'ತೆರಿಗೆ ಪಾವತಿಯಲ್ಲಿ ಸರ್ಕಾರ ಆರಂಭಿಕ 3 ತಿಂಗಳು ಶೇ 5ರಷ್ಟು ರಿಯಾಯಿತಿ ನೀಡಿತ್ತು. ಅಲ್ಲದೆ, ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿ ತೆರಿಗೆ ಸಂಗ್ರಹ ಅಭಿಯಾನದ ಮೂಲಕ ಮಾಡಿರುವ ಶ್ರಮದ ಫಲವಾಗಿ ಈ ಸಾಧನೆ ಸಾಧ್ಯವಾಗಿದೆ' ಎಂದು ಕಡಬ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ನವೀನ್ ಕುಮಾರ್ ಭಂಡಾರಿ ತಿಳಿಸಿದ್ದಾರೆ.

17ನೇ ಬಜೆಟ್ ಮಂಡಿಸಲಿರುವ ಸಿದ್ದರಾಮಯ್ಯ

ಒಂದನೇ ಪುಟದಿಂದ...

ಕಳೆದ ಸಾಲಿನ ಬಜೆಟ್ ₹4.09 ಲಕ್ಷ ಕೋಟಿ ಗಾತ್ರ ಹೊಂದಿತ್ತು. ಈ ಬಾರಿ ಬಜೆಟ್‌ನ ಒಟ್ಟು ಗಾತ್ರ ₹4.50 ಲಕ್ಷ ಕೋಟಿ ತಲುಪುವ ಸಾಧ್ಯತೆ ಇದೆ ಎನ್ನಲಾಗಿದೆ.

ಅಬಕಾರಿ, ವಾಣಿಜ್ಯ ಇಲಾಖೆಗಳ ಮೂಲಕ ಮುಂಬರುವ ಹಣಕಾಸು ವರ್ಷದಲ್ಲಿ ಆದಾಯ ಸಂಗ್ರಹದ ಹೆಚ್ಚಳಕ್ಕೆ ಒತ್ತು ನೀಡಲಾಗಿದೆ. ಸುಮಾರು ₹50 ಸಾವಿರ ಕೋಟಿ ಅಬಕಾರಿ ಆದಾಯದ ಗುರಿ ಹೊಂದಲಾಗಿದೆ. ಕಳೆದ ವರ್ಷ ಭಾರತೀಯ ಉತ್ಪಾದಿತ ಮದ್ಯದ (ಐಎಂಎಲ್) ಮೊದಲ ನಾಲ್ಕು ಸ್ಲ್ಯಾಬ್‌ಗಳ ಮೇಲೆ ಹೆಚ್ಚುವರಿ ಅಬಕಾರಿ ಸುಂಕವನ್ನು ಹೆಚ್ಚಿಸಲಾಗಿತ್ತು. ಕಡಿಮೆ ಬೆಲೆಯ ಈ ಸ್ಲ್ಯಾಬ್‌ಗಳೇ ರಾಜ್ಯದ ಒಟ್ಟು ಅಬಕಾರಿ ಆದಾಯದಲ್ಲಿ ಸುಮಾರು ಶೇ 85ರಷ್ಟು ಪಾಲು ಹೊಂದಿವೆ. ಇಂಧನ ಸೆಸ್ ಹೆಚ್ಚಿಸುವ ಸಾಧ್ಯತೆಯೂ ಇದೆ.

ಶಾಲಾ ಪಠ್ಯಪುಸ್ತಕ: ಬೆಲೆ ಹೆಚ್ಚಳ

ಒಂದನೇ ಪುಟದಿಂದ...

ಉದಾಹರಣೆಗೆ, 4ನೇ ತರಗತಿಯ ಪುಸ್ತಕದ ಬೆಲೆ ₹31ರಿಂದ ₹51ಕ್ಕೆ ಹೆಚ್ಚಿಸಲಾಗಿದೆ. ಹಾಗೆಯೇ, 1ನೇ ತರಗತಿಯ ಮೃದಂಗ ಪುಸ್ತಕದ ಬೆಲೆ ₹42ರಿಂದ ₹60ಕ್ಕೆ ಏರಿಕೆಯಾಗಿದೆ.

ಬೆಲೆ ಹೆಚ್ಚಳಕ್ಕೆ ಕರ್ನಾಟಕ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ ಆಕ್ಷೇಪ ವ್ಯಕ್ತಪಡಿಸಿದೆ. 'ಸರ್ಕಾರ ಮೊದಲೇ ಹೊಸ ಬೆಲೆಯ ಪಟ್ಟಿಯನ್ನು ಪ್ರಕಟಿಸಬೇಕಿತ್ತು. ಪ್ರಸ್ತುತ ಸನ್ನಿವೇಶದಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚುವರಿ ಹಣ ವಸೂಲಿ ಮಾಡುವ ಸ್ಥಿತಿಯಲ್ಲಿ ಶಾಲೆಗಳು ಇಲ್ಲ. ಬೆಲೆ ಏರಿಕೆ ತಡೆಯುವಂತೆ ಮನವಿ ಸಲ್ಲಿಸಿದ್ದೇವೆ. ಪಠ್ಯಪುಸ್ತಕಗಳ ಬೆಲೆ ನಿಗದಿಯಲ್ಲಿ ಪಾರದರ್ಶಕ ನೀತಿ ಅಳವಡಿಸಿಕೊಳ್ಳಬೇಕು' ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಒತ್ತಾಯಿಸಿದ್ದಾರೆ.

ಕೃಷ್ಣಾ ಮೇಲ್ದಂಡೆ- ಶೀಘ್ರದಲ್ಲೇ ಎಲ್ಲ ಸಂಸದರ ಸಭೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): 'ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ದೆಹಲಿಯಲ್ಲಿ ನಮ್ಮ ರಾಜ್ಯದ ಎಲ್ಲ ಸಂಸದರ ಸಭೆ ಕರೆದು, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಒತ್ತಾಯ ಮಾಡುತ್ತೇವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ತಾಲ್ಲೂಕಿನ ಯಡೂರು ಗ್ರಾಮದಲ್ಲಿ ಗುರುವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, 'ಕೃಷ್ಣ ಮೇಲ್ದಂಡೆ ಯೋಜನೆಗೆ ಬೇಕಾದ ಭೂಸ್ವಾಧೀನಕ್ಕಾಗಿ ₹70 ಸಾವಿರ ಕೋಟಿ ನೀಡಲು ಸರ್ಕಾರ ನಿರ್ಧರಿಸಿದೆ. ಈಗ ಕೇಂದ್ರ ಸರ್ಕಾರ ಮುತುವರ್ಜಿ ವಹಿಸಬೇಕು. ಯೋಜನೆ ವಿರೋಧಿಸಿ ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದಿಂದ ನಡೆಯುತ್ತಿರವ ಗದಾಪ್ರಹಾರ ತಡೆಯಬೇಕು' ಎಂದರು.

'ಬಿ.ವೈ.ವಿಜಯೇಂದ್ರ ನಮ್ಮ ಸರ್ಕಾರವನ್ನು ನಾಲಾಯಕ್ ಸರ್ಕಾರ ಎಂದು ಟೀಕಿಸಿದ್ದಾರೆ. ಪಾಪ ಅವರಿಗೆ ಗೊತ್ತಿಲ್ಲ; ಹಿಂದೆ ಅವರ ನಾಲಾಯಕ್ ಸರ್ಕಾರ ಇದ್ದ ಕಾರಣಕ್ಕೇ ಈಗ ಜನ ಲಾಯಕ್ ಸರ್ಕಾರ ತಂದಿದ್ದಾರೆ' ಎಂದರು.

ಸಚಿವ ಎಂ.ಬಿ.ಪಾಟೀಲ ಮಾತನಾಡಿ, 'ಪ್ರಧಾನಿ ಮೋದಿ ಅವರಿಗೆ ವಿದೇಶಾಂಗ ನೀತಿಗಳು ಅರ್ಥವಾ ಗುತ್ತಿಲ್ಲ. ಅದಕ್ಕೆ ರೂಪಾಯಿ ಮೌಲ್ಯ ದಾಖಲೆ ಪ್ರಮಾಣದಲ್ಲಿ ಕುಸಿಯುತ್ತಿದೆ. ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿದಂತೆ ಕುಣಿಯುತ್ತಿದ್ದಾರೆ. ಟ್ರಂಪ್ ಈಗ ಬೇರೆ ದೇಶದ ನಾಯಕರನ್ನು ಅಪಹರಿಸುವುದು, ಹತ್ಯೆ ಮಾಡುವುದು ನಡೆಸಿದ್ದಾರೆ. ಇಂದಲ್ಲ ನಾಳೆ ನಮ್ಮ ದೇಶಕ್ಕೂ ಹೀಗೇ ಮಾಡಿದರೆ ಸುಮ್ಮನಿರಬೇಕೇ? ಯುದ್ಧದಿಂದ ಅಮಾಯಕರು ಸಾಯುತ್ತಾರೆ' ಎಂದರು.

> **ರಾಜ್ಯದ ಪ್ರಭಾವಿ ಸ್ವಾಮೀಜಿಯೊಬ್ಬರು ಹನಿಟ್ರ್ಯಾಪ್‌ಗೆ ಒಳಗಾದ ಬಗ್ಗೆ ನನಗೆ ಗೊತ್ತಿಲ್ಲ. ಈ ಕುರಿತು ಯಾವುದೇ ಸ್ವಾಮೀಜಿ ನನ್ನ ಸಂಪರ್ಕ ಮಾಡಿಲ್ಲ**
>
> **ಎಂ.ಬಿ.ಪಾಟೀಲ,** ಸಚಿವ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಇಲಾಖೆ

ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಇಡೀ ದಿನ ಕಸರತ್ತು

ಬಿಜೆಪಿ: ಭಿನ್ನಮತ ಶಮನ ಪ್ರಯತ್ನ ವಿಫಲ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಬಿಜೆಪಿಯ ಜಿಲ್ಲಾ ಘಟಕದ ಕೆಲವು ಮುಖಂಡರಲ್ಲಿ ಮೂಡಿರುವ ಭಿನ್ನಮತವನ್ನು ಶಮನಗೊಳಿಸಲು ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಇಡೀ ದಿನ ನಡೆಸಿದ ಪ್ರಯತ್ನ ಸಫಲವಾಗಲಿಲ್ಲ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ನಿಯೋಜನೆಗೊಂಡ ಪಕ್ಷದ ಬೂತ್ ಮಟ್ಟದ ಕಾರ್ಯಕರ್ತರು ಹಾಗೂ ವಿಸ್ತಾರಕರ ಅಭಿನಂದನಾ ಕಾರ್ಯಕ್ರಮಕ್ಕಾಗಿ ಇಬ್ಬರೂ ಮುಖಂಡರು ಗುರುವಾರ ನಗರಕ್ಕೆ ಬಂದಿದ್ದರು. ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ ಹಾಗೂ ಹರಿಹರದ ಶಾಸಕ ಬಿ.ಪಿ. ಹರೀಶ್ ಬಣವು ಈ ಕಾರ್ಯಕ್ರಮದಿಂದ ದೂರ ಉಳಿಯಿತು.

'ಈಗಾಗಲೇ ಒಂದು ಕಡೆ ನನ್ನ ಸಮಯ ವ್ಯರ್ಥವಾಗಿದೆ. ಈಗ ಸಮಯ ತುಂಬಾ ಕಡಿಮೆ ಇದೆ. ಮತ್ತೊಮ್ಮೆ ಬರುವೆ' ಎಂದು ರಾಧಾಮೋಹನ್ ದಾಸ್ ಬಹಿರಂಗ ಕಾರ್ಯಕ್ರಮದಲ್ಲಿ ಕಾರ್ಯಕರ್ತರಿಗೆ ಸೂಚ್ಯವಾಗಿ ಹೇಳಿ ತರಾತುರಿಯಲ್ಲಿ ತೆರಳಿದರು.

ಭಿನ್ನರ ಜೊತೆ ಪ್ರತ್ಯೇಕ ಸಭೆ: ಮಾಜಿ ಸಚಿವರಾದ ಎಂ.ಪಿ. ರೇಣುಕಾಚಾರ್ಯ, ಎಸ್.ಎ. ರವೀಂದ್ರನಾಥ್ ಬಣದ ಜೊತೆಗೆ ರಾಧಾಮೋಹನದಾಸ್ ಹಾಗೂ ಬಿ.ವೈ. ವಿಜಯೇಂದ್ರ ಅವರು ನಗರದ ಹೊರವಲಯದ ರೆಸಾರ್ಟ್‌ನಲ್ಲಿ ಒಂದೂವರೆ ಗಂಟೆ ಸಭೆ ನಡೆಸಿದರು. ಮಾಜಿ ಸಚಿವ ಕರುಣಾಕರ ರೆಡ್ಡಿ ಸೇರಿದಂತೆ ಅನೇಕರ ಅಹವಾಲು ಆಲಿಸಿದರು.

ಜಿ.ಎಂ. ಸಿದ್ದೇಶ್ವರ ಹಾಗೂ ಬಿ.ಪಿ. ಹರೀಶ್ ಬಣದ ಜೊತೆಗೆ ಇಬ್ಬರು ನಾಯಕರು ಮಧ್ಯಾಹ್ನ ಸುದೀರ್ಘ ಸಭೆ ನಡೆಸಿದರು. ಬಳ್ಳಾರಿಯ ಮಾಜಿ ಸಂಸದ ದೇವೇಂದ್ರಪ್ಪ, ಮಾಜಿ ಶಾಸಕ ಎಚ್.ಪಿ. ರಾಜೇಶ್ ಸೇರಿ ಅನೇಕರು ಸಭೆಯಲ್ಲಿ ಪಾಲ್ಗೊಂಡಿದ್ದರು. 'ರೇಣುಕಾಚಾರ್ಯ ಹಠಾವೋ, ಬಿಜೆಪಿ ಬಚಾವೋ' ಎಂದು ಸಿದ್ದೇಶ್ವರ ಬೆಂಬಲಿಗರು ಈ ಸಂದರ್ಭ ಘೋಷಣೆ ಕೂಗಿದರು.

'ಪಕ್ಷದಲ್ಲಿ ಉಂಟಾಗಿರುವ ಸಣ್ಣಪುಟ್ಟ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಿದ್ದೇವೆ. ಎರಡೂ ಬಣಗಳೊಂದಿಗೆ ವಿಸ್ತೃತವಾಗಿ ಚರ್ಚಿಸಿದ್ದೇವೆ. ಸಮಸ್ಯೆ ಬಗೆಹರಿಯುವ ವಿಶ್ವಾಸ ಮೂಡಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಪಕ್ಷ ನಿರ್ಧರಿಸುವ ಅಭ್ಯರ್ಥಿಯ ಗೆಲುವಿಗೆ ಒಗ್ಗೂಡಿ ಶ್ರಮಿಸುವುದಾಗಿ ಎಲ್ಲರೂ ಒಪ್ಪಿದ್ದಾರೆ' ಎಂದು ಬಿ.ವೈ. ವಿಜಯೇಂದ್ರ ನಂತರ ಸುದ್ದಿಗಾರರಿಗೆ ತಿಳಿಸಿದರು.

ದಾವಣಗೆರೆಯ ಜೆಎಂಐಟಿ ಅತಿಥಿ ಗೃಹದಲ್ಲಿ ಗುರುವಾರ ನಡೆದ ಸಂಧಾನ ಸಭೆಯ ಬಳಿಕ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಒಟ್ಟಾಗಿ ಹೊರಬಂದರು

> **2028ರ ಸಾರ್ವತ್ರಿಕ ಚುನಾವಣೆಗೆ ಅಭ್ಯರ್ಥಿಗಳನ್ನು ಘೋಷಿಸಿದ ಬಿ.ಎಸ್. ಯಡಿಯೂರಪ್ಪ ಅವರು ಬಿಜೆಪಿಯನ್ನು ಗುತ್ತಿಗೆ ಹಿಡಿದಿರುವಂತೆ ವರ್ತಿಸುತ್ತಿದ್ದಾರೆ**
>
> **ಬಿ.ಪಿ.ಹರೀಶ್, ಶಾಸಕ,** ಹರಿಹರ

> **ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರವಾಲ್ ಬಳಿ ಕೆಲ ಬೇಡಿಕೆಗಳನ್ನು ಇರಿಸಿದ್ದೇವೆ. ಇದಕ್ಕೆ ಸ್ಪಂದಿಸುವ ಆಶ್ವಾಸನೆ ಸಿಕ್ಕಿದೆ. ಈಗ ಏನೂ ಹೇಳುವುದಿಲ್ಲ**
>
> **ಜಿ.ಎಂ. ಸಿದ್ದೇಶ್ವರ,** ಕೇಂದ್ರದ ಮಾಜಿ ಸಚಿವ

ಅಲ್ಪಸಂಖ್ಯಾತ ಮಹಿಳೆಯರ ಚಾಲನಾಸಕ್ತಿ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಅಲ್ಪಸಂಖ್ಯಾತರ ನಿರ್ದೇಶನಾಲಯದ ಸಹಯೋಗದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಹಮ್ಮಿಕೊಂಡಿರುವ ವಾಹನ ಚಾಲನಾ ತರಬೇತಿಗೆ ಇದೇ ಮೊದಲ ಬಾರಿಗೆ ಭಾರಿ ಸಂಖ್ಯೆಯಲ್ಲಿ ಅಲ್ಪಸಂಖ್ಯಾತ ಸಮುದಾಯದ ಹೆಣ್ಣುಮಕ್ಕಳು ಅರ್ಜಿ ಸಲ್ಲಿಸಿದ್ದಾರೆ.

ಎಲ್ಲರಿಗೂ ಸರ್ಕಾರಿ ಉದ್ಯೋಗ ಸಿಗುವುದು ಕಷ್ಟ. ಯುವಜನರು ಬೇರೆ ಬೇರೆ ಕೌಶಲಗಳನ್ನು ಪಡೆದು ಸ್ವಾವಲಂಬಿಗಳಾಗಬೇಕು ಎಂಬ ಕಾರಣಕ್ಕೆ ಲಘು ಹಾಗೂ ಭಾರಿ ವಾಹನ ಚಾಲನಾ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಈ ಹಿಂದಿನ ವರ್ಷಗಳಲ್ಲಿ ಅಲ್ಪಸಂಖ್ಯಾತ ಸಮುದಾಯದಿಂದ ಚಾಲನಾ ತರಬೇತಿಗೆ ಅರ್ಜಿ ಆಹ್ವಾನಿಸಿದಾಗಲೆಲ್ಲ ಪುರುಷರಷ್ಟೇ ಅರ್ಜಿ ಸಲ್ಲಿಸುತ್ತಿದ್ದರು. ಈ ಬಾರಿ ಭಾರಿ ವಾಹನ ತರಬೇತಿಗೆ ಪುರುಷರಷ್ಟೇ ಅರ್ಜಿ ಸಲ್ಲಿಸಿದ್ದರೆ, ಲಘು ವಾಹನ ತರಬೇತಿ ಪಡೆಯಲು ಮಹಿಳೆಯರು ಮುಂದಾಗಿದ್ದಾರೆ. ಅರ್ಜಿ ಸಲ್ಲಿಸಿದ ಮಹಿಳೆಯರಲ್ಲಿ ಮುಸ್ಲಿಂ ಹೆಣ್ಣು ಮಕ್ಕಳ ಪ್ರಮಾಣವೇ ಶೇ 83ರಷ್ಟಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೆಎಸ್‌ಆರ್‌ಟಿಸಿಯಲ್ಲಿ ಚಾಲನಾ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳು

ಕೆಎಸ್‌ಆರ್‌ಟಿಸಿಯ ಐದು ತರಬೇತಿ ಕೇಂದ್ರಗಳಲ್ಲಿ ತರಬೇತಿ ನಡೆಯಲಿದೆ. 18 ವರ್ಷ ದಾಟಿದ 45 ವರ್ಷದೊಳಗಿನವರಾಗಿದ್ದು, ಎಸ್ಸೆಸ್ಸೆಲ್ಸಿ ಉತ್ತೀರ್ಣರಾದವರಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಉಚಿತ ವಸತಿ ಮತ್ತು ಊಟ ಸಹಿತ ಒಂದು ತಿಂಗಳ ತರಬೇತಿ ಇದಾಗಿದೆ. ಮಾರ್ಚ್ 23ರ ನಂತರ ತರಬೇತಿ ಆರಂಭಗೊಳ್ಳಲಿದೆ. ಆನಂತರ ಸಾರಿಗೆ ಇಲಾಖೆಯ ಸಹಯೋಗದಲ್ಲಿ ಪರವಾನಗಿಯನ್ನು ಉಚಿತವಾಗಿ ನೀಡಲಾಗುತ್ತದೆ.

ಮಳವಳ್ಳಿ ತರಬೇತಿ ಕೇಂದ್ರಕ್ಕೆ ಭಾರಿ ವಾಹನ ಚಾಲನಾ ತರಬೇತಿಗೆ 52, ಲಘು ವಾಹನ ಚಾಲನಾ ತರಬೇತಿಗೆ 39 ಅರ್ಜಿ, ಚಿಕ್ಕಮಗಳೂರು ತರಬೇತಿ ಕೇಂದ್ರದಲ್ಲಿ ಭಾರಿ ವಾಹನಕ್ಕೆ 157, ಲಘು ವಾಹನ ಚಾಲನಾ ತರಬೇತಿಗೆ 187 ಅರ್ಜಿಗಳು ಸಲ್ಲಿಕೆಯಾಗಿವೆ.

ಹಾಸನ ತರಬೇತಿ ಕೇಂದ್ರದಲ್ಲಿ ಭಾರಿ ವಾಹನ ಚಾಲನಾ ತರಬೇತಿಗೆ 165, ಲಘು ವಾಹನ ಚಾಲನಾ ತರಬೇತಿಗೆ 153, ಹೊಳಲ್ಕೆರೆ ತರಬೇತಿ ಕೇಂದ್ರದಲ್ಲಿ ಭಾರಿ ವಾಹನಕ್ಕೆ 79, ಲಘು ವಾಹನಗಳಿಗೆ 74 ಹಾಗೂ ಮಾಲೂರು ತರಬೇತಿ ಕೇಂದ್ರದಲ್ಲಿ ಭಾರಿ ವಾಹನಗಳ ತರಬೇತಿಗೆ 70, ಲಘು ವಾಹನಗಳಿಗೆ 98 ಅರ್ಜಿಗಳು ಬಂದಿವೆ. ಇದರಲ್ಲಿ ಮಾಲೂರಿನಲ್ಲಿ 12 ಹಾಗೂ ಉಳಿದ ನಾಲ್ಕು ತರಬೇತಿ ಕೇಂದ್ರಗಳಲ್ಲಿ ತಲಾ 15 ಅರ್ಜಿಗಳು ಮಹಿಳೆಯರದ್ದಾಗಿವೆ ಎಂದು ಅಂಕಿ ಅಂಶ ನೀಡಿದ್ದಾರೆ.

ತರಬೇತಿ ಪಡೆಯುತ್ತಿರುವ 500 ಎಸ್‌ಸಿ ಅಭ್ಯರ್ಥಿಗಳು

ಸಮಾಜ ಕಲ್ಯಾಣ ಇಲಾಖೆಯ ಪಿಎಂ ಅಜಯ್ ಯೋಜನೆಯಡಿ ಕೆಎಸ್‌ಆರ್‌ಟಿಸಿಯ ಐದು ತರಬೇತಿ ಕೇಂದ್ರಗಳಲ್ಲಿ ಪರಿಶಿಷ್ಟ ಜಾತಿಯ 500 ಅಭ್ಯರ್ಥಿಗಳು ಭಾರಿ ವಾಹನ ಚಾಲನಾ ತರಬೇತಿ ಪಡೆಯುತ್ತಿದ್ದಾರೆ. 2,639 ಅರ್ಜಿಗಳು ಬಂದಿದ್ದು, ಮೊದಲ ಹಂತದಲ್ಲಿ 500 ಆಕಾಂಕ್ಷಿಗಳಿಗೆ ಅವಕಾಶ ನೀಡಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಲಘು ವಾಹನ ತರಬೇತಿಗೆ ಅರ್ಜಿ ಸಲ್ಲಿಸಿರುವ ಮಹಿಳೆಯರ ಧರ್ಮವಾರು ವಿವರ



ಉತ್ತಮ ಬೆಳವಣಿಗೆ

ಹಿಂದೆಲ್ಲ ವಾಹನ ತರಬೇತಿಗೆ ಹೆಣ್ಣುಮಕ್ಕಳು ಅಷ್ಟಾಗಿ ಬರುತ್ತಿರಲಿಲ್ಲ. ಈಗ ಅವರೂ ಆಸಕ್ತಿ ವಹಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ತಿಳಿಸಿದರು.

ವಾಹನ ಚಾಲನೆಗೆ ಬೇಡಿಕೆ ಇದೆ. ಮಹಿಳೆಯರು ಮನೆಯೊಳಗೆ ಇರಬೇಕು, ಇಲ್ಲವೇ ಕಚೇರಿಗಳಲ್ಲಿ ಮಾತ್ರ ಕೆಲಸ ಮಾಡಬೇಕು ಎಂಬ ಕಾಲ ಹೋಗಿದೆ. ಎಲ್ಲ ರಂಗದಲ್ಲಿಯೂ ಕೆಲಸ ಮಾಡಲು ಮುಂದಾಗುತ್ತಿದ್ದಾರೆ. ರಸ್ತೆ ಸುರಕ್ಷತೆ, ಕೌಶಲ ಅಭಿವೃದ್ಧಿ, ಒತ್ತಡ ನಿರ್ವಹಣೆ, ಚಾಲನಾ ಸೂಚನೆಗಳ ಬಗ್ಗೆ ತರಗತಿ ನಡೆಸಲಾಗುತ್ತದೆ. ಒಟ್ಟೊಟ್ಟಿಗೆ ಪ್ರಾಯೋಗಿಕ ಚಾಲನೆಯನ್ನೂ ಕಲಿಸಲಾಗುತ್ತದೆ. ಚಲನೆ ಆಧಾರಿತ ಬಸ್ ಸಿಮ್ಯುಲೇಟರ್ ತರಬೇತಿಯನ್ನು ನೀಡಲಾಗುತ್ತದೆ. ಒಂದು ತಿಂಗಳ ಬಳಿಕ ತರಬೇತಿ ಪೂರ್ಣಗೊಳಿಸುವ ಹೊತ್ತಿಗೆ ಪರಿಪೂರ್ಣರಾಗುತ್ತಾರೆ ಎಂದು ಮಾಹಿತಿ ನೀಡಿದರು.

ಶರಾವತಿ ಯೋಜನೆಗೆ ತಜ್ಞರ ಇತಿಶ್ರೀ

ಪಂಪ್ಡ್ ಸ್ಟೋರೇಜ್ ಯೋಜನೆಗೆ ಅನುಮತಿ ಬೇಡ
ಕೇಂದ್ರ ಸಮಿತಿ ಶಿಫಾರಸು

● ಮಂಜುನಾಥ ಹೆಬ್ಬಾರ್

ನವದೆಹಲಿ: '₹10 ಸಾವಿರ ಕೋಟಿ ವೆಚ್ಚದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಪ್ರಸ್ತಾವನೆ ತಾಂತ್ರಿಕ ಅರ್ಹತೆ, ಪರಿಸರ ಸುಸ್ಥಿರತೆ ಹಾಗೂ ಸಾರ್ವಜನಿಕ ಹಿತಾಸಕ್ತಿ ಹೊಂದಿಲ್ಲ' ಎಂದು ಅಭಿಪ್ರಾಯಪಟ್ಟಿರುವ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯದ ತಜ್ಞರ ತಂಡವು, 'ಈ ಯೋಜನೆಗೆ ಅನುಮತಿ ನೀಡುವುದು ಬೇಡ' ಎಂದು ಶಿಫಾರಸು ಮಾಡಿದೆ. ಇದರಿಂದಾಗಿ, ಯೋಜನೆ ವಿರೋಧಿಸಿ ಬೀದಿಗಿಳಿದಿದ್ದ ಸ್ಥಳೀಯ ಜನರು ಹಾಗೂ ಪರಿಸರವಾದಿಗಳ ಹೋರಾಟಕ್ಕೆ ದೊಡ್ಡ ಜಯ ಸಿಕ್ಕಂತಾಗಿದೆ.

ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸದಸ್ಯರಾದ ಡಾ.ಎಚ್.ಎಸ್.ಸಿಂಗ್, ಪ್ರೊ.ರಾಮನ್ ಸುಕುಮಾರನ್ ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಹಾನಿರ್ದೇಶಕ ಶಿವಕುಮಾರ್ ಅವರನ್ನು ಒಳಗೊಂಡ ತಜ್ಞರ ಸಮಿತಿಯು ಡಿಸೆಂಬರ್ 27ರಿಂದ 30ರವರೆಗೆ ಯೋಜನಾ ಪ್ರದೇಶದಲ್ಲಿ ಸುತ್ತಾಡಿ ಸ್ಥಳೀಯರಿಂದ ಅಭಿಪ್ರಾಯ ಸಂಗ್ರಹಿಸಿ ಹಾಗೂ ಅಧಿಕಾರಿಗಳಿಂದ ಮಾಹಿತಿ ಕಲೆ ಹಾಕಿ ಪರಿಸರ ಸಚಿವಾಲಯಕ್ಕೆ 42 ಪುಟಗಳ ವರದಿ ಸಲ್ಲಿಸಿದೆ. ಪರಿಸರ ಸಂರಕ್ಷಣಾವಾದಿ ಗಿರಿಧರ್ ಕುಲಕರ್ಣಿ ಅವರು ಮಾಹಿತಿ ಹಕ್ಕು ಕಾಯ್ದೆಯಡಿ ಗುರುವಾರ ಈ ವರದಿ ಪಡೆದಿದ್ದಾರೆ.

'ಯೋಜನೆಯ ಪರಿಸರ ಮತ್ತು ಆರ್ಥಿಕ ಕಾರ್ಯಸಾಧ್ಯತೆಯು ಪ್ರಶ್ನಾರ್ಹವಾಗಿದೆ. ಯೋಜನೆಯ ಅನುಷ್ಠಾನದಿಂದ ದೇಶದ ಪರಿಸರ ಸಮಗ್ರತೆಗೆ ಅಪಾರ ಪ್ರಮಾಣದ ಹಾನಿಯಾಗುವ ಸಾಧ್ಯತೆಯಿದೆ. ಜತೆಗೆ, ರಾಷ್ಟ್ರೀಯ ಆರ್ಥಿಕತೆಯ ದೀರ್ಘಕಾಲೀನ ಸುಸ್ಥಿರತೆಗೆ ಗಂಭೀರ ಪ್ರತಿಕೂಲ ಪರಿಣಾಮಗಳನ್ನು ಬೀರಲಿದೆ' ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

'ಪಂಪ್ಡ್ ಸ್ಟೋರೇಜ್ ಯೋಜನೆಯಿಂದಾಗಿ ವಿದ್ಯುತ್ ಉತ್ಪಾದನೆಯಲ್ಲಿ ಭಾರಿ ಲಾಭವೇನೂ ಆಗುವುದಿಲ್ಲ. ಯೋಜನೆಯಿಂದಾಗಿ ತಾತ್ಕಾಲಿಕ ಲಾಭವಷ್ಟೇ ಆಗುತ್ತದೆ. ಆದರೆ, ಯೋಜನೆಯಿಂದ ಆಗುವ ಪ್ರತಿಕೂಲ ಪರಿಣಾಮ ಘೋರವಾದುದು. ಪರಿಸರ ಸೂಕ್ಷ್ಮವಾದ ಹಾಗೂ ಸಂರಕ್ಷಿತ ಪ್ರದೇಶದಲ್ಲಿ ಅನುಷ್ಠಾನಗೊಳ್ಳಲಿರುವ ಯೋಜನೆಯಿಂದಾಗಿ ಹುಲಿಗಳು ಹಾಗೂ ಸಿಂಹ ಬಾಲದ ಸಿಂಗಳೀಕಗಳ ಮೇಲಾಗುವ ಪರಿಣಾಮ ಅಪಾರವಾದುದು. ಪ್ರಸ್ತಾವಿತ ಚಟುವಟಿಕೆಗಳು ಆವಾಸಸ್ಥಾನ ವಿಘಟನೆ, ವನ್ಯಜೀವಿಗಳಿಗೆ ಅಡಚಣೆ, ಅರಣ್ಯ ಮತ್ತು ನದಿ ಪರಿಸರ ವ್ಯವಸ್ಥೆಗಳ ಮೇಲೆ ಭಾರಿ ಒತ್ತಡ ಹೇರಲಿದೆ. ಅನೇಕ ಯೋಜನೆಗಳಿಂದಾಗಿ ಉತ್ತರ ಕನ್ನಡ ಜಿಲ್ಲೆ ಈಗಾಗಲೇ ನಲುಗಿದೆ. ಜಿಲ್ಲೆಯ ಮೇಲೆ ಮತ್ತೊಂದು ಯೋಜನೆಯನ್ನು ಹೇರಿದರೆ ಪರಿಸರ ಸಮಗ್ರತೆಯ ದೀರ್ಘಕಾಲೀನ ಅವನತಿಗೆ ಕಾರಣವಾಗಲಿದೆ' ಎಂದು ಸಮಿತಿ ಪ್ರತಿಪಾದಿಸಿದೆ.

'ಅಸ್ತಿತ್ವದಲ್ಲಿರುವ ವಿದ್ಯುತ್ ಪ್ರಸರಣ ಮಾರ್ಗಗಳನ್ನೇ ವಿದ್ಯುತ್ ಸರಬರಾಜಿಗೆ ಬಳಸಿಕೊಳ್ಳಲಾಗುವುದು ಎಂದು ಮೂಲ ಪ್ರಸ್ತಾವದಲ್ಲಿ ತಿಳಿಸಲಾಗಿದೆ. ಇದೊಂದು ಸತ್ಯ ಮರೆಮಾಚುವ ಹೇಳಿಕೆ. ಗೇರುಸೊಪ್ಪ ಹಾಗೂ ತಾಳಗುಪ್ಪದ ನಡುವೆ ಇರುವ 220 ಕೆ.ವಿ. ವಿದ್ಯುತ್ ಮಾರ್ಗವು 2000 ಮೆಗಾವಾಟ್ ವಿದ್ಯುತ್ ಸರಬರಾಜು ಮಾಡಲು ಅಸಮರ್ಥವಾಗಿದೆ. ಇದಕ್ಕೆ ಹೆಚ್ಚುವರಿ 400 ಕೆ.ವಿ ಮಾರ್ಗದ ಅಗತ್ಯ ಇದೆ. ಈ ವಿಷಯವನ್ನು ಮುಚ್ಚಿಡಲಾಗಿದೆ. ಪ್ರಸರಣ ಮಾರ್ಗದ ನಿರ್ಮಾಣದಿಂದ ಇನ್ನಷ್ಟು ಹಾನಿ ಆಗುತ್ತದೆ' ಎಂದು ತಜ್ಞರ ಸಮಿತಿ ಬೆಳಕು ಚೆಲ್ಲಿದೆ.

ಪಂಪ್ಡ್ ಸ್ಟೋರೇಜ್ ಯೋಜನೆಯ ಪ್ರಸ್ತಾವ ಬಗ್ಗೆ 2025ರ ಜೂನ್ 26ರಂದು ನಡೆದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ 84ನೇ ಸಭೆಯಲ್ಲಿ ಚರ್ಚಿಸಲಾಗಿತ್ತು. 13 ಷರತ್ತುಗಳನ್ನು ವಿಧಿಸಿ ಯೋಜನೆಗೆ ತಾತ್ವಿಕ ಅನುಮೋದನೆ ನೀಡಲಾಗಿತ್ತು. ಆಗಸ್ಟ್ 19ರಂದು ನಡೆದ ಸ್ಥಾಯಿ ಸಮಿತಿಯ 85ನೇ ಸಭೆಯಲ್ಲಿ ಪ್ರಸ್ತಾವವನ್ನು ಮರು ಪರಿಶೀಲಿಸಲಾಗಿತ್ತು. ಪಶ್ಚಿಮ ಘಟ್ಟದಲ್ಲಿ ಜಾರಿಗೊಳ್ಳಲಿರುವ ಯೋಜನೆ ಬಗ್ಗೆ ಕೆಲವು ಸದಸ್ಯರು ತೀವ್ರ ಕಳವಳ ವ್ಯಕ್ತಪಡಿಸಿದ್ದರು. ಹೀಗಾಗಿ, ತಜ್ಞರ ಸಮಿತಿ ರಚಿಸಿ ಸ್ವತಂತ್ರ ಹಾಗೂ ಸ್ಥಳ ಪರಿಶೀಲನಾ ವರದಿ ಪಡೆದುಕೊಳ್ಳಲು ತೀರ್ಮಾನಿಸಲಾಗಿತ್ತು. ಈ ವರದಿಯನ್ನು ಸ್ಥಾಯಿ ಸಮಿತಿಗೆ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಈ ವರದಿಯು ರಾಷ್ಟ್ರೀಯ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿಯ ಮುಂದಿನ ಸಭೆಯಲ್ಲಿ ಚರ್ಚೆಗೆ ಬರಲಿದೆ.

ಯೋಜನೆಯಿಂದ ಆಗುವ ಅನಾಹುತಗಳು

- ಅಗಾಧ ಪ್ರಮಾಣದ ಕಾಡುಗಳ ನಾಶ
- ವನ್ಯಜೀವಿಗಳ ಆವಾಸಸ್ಥಾನ ಹಾಗೂ ಕೆಲವು ಅಪರೂಪದ ಮತ್ತು ಸ್ಥಳೀಯ ಪ್ರಭೇದಗಳ ನಷ್ಟ
- ದೀರ್ಘಕಾಲದಲ್ಲಿ ನದಿಗಳ ಅವನತಿ
- ವನ್ಯಜೀವಿಗಳಿಗೆ ನಿರಂತರ ತೊಂದರೆ
- ಪಶ್ಚಿಮ ಘಟ್ಟದ ಇನ್ನೊಂದು ಬದಿಯಲ್ಲಿ ನಿರ್ಮಾಣ ಕಾರ್ಯಗಳಿಗೆ ಕಾಂಕ್ರೀಟ್ ಉತ್ಪಾದಿಸಲು ಗಣಿಗಾರಿಕೆ ಚಟುವಟಿಕೆಗಳು
- ಕೆಪಿಸಿಎಲ್ ಹೇಳಿಕೆ ನಿಜವಾಗಿದ್ದರೆ, 500 ಮೆಗಾವಾಟ್‌ಗಿಂತ ಹೆಚ್ಚಿನ ನಿವ್ವಳ ವಿದ್ಯುತ್ ನಷ್ಟ. ಕೆಪಿಸಿಎಲ್ ಒದಗಿಸಿದ ಅಂಕಿಅಂಶಗಳಿಗಿಂತ ನೈಜ ನಷ್ಟವು ಹೆಚ್ಚಾಗಿರಲಿದೆ ಎಂಬುದು ತಜ್ಞರ ಅಭಿಪ್ರಾಯ
- ಭೂಗತ ಬಂಡೆಗಳನ್ನು ಸ್ಫೋಟಿಸಲು ಭಾರವಾದ ಯಂತ್ರಗಳನ್ನು ಬಳಸುವುದರಿಂದ ಭೂಕುಸಿತ ಹೆಚ್ಚಳ
- ಯೋಜನೆ ಜಾರಿಯಿಂದಾಗಿ ರೈತರ ವಾಣಿಜ್ಯಿಕ ಹಾಗೂ ಇತರ ಬೆಳೆಗಳ ನಾಶ
- ವನ್ಯಜೀವಿಗಳ ಪ್ರಮುಖ ಆವಾಸಸ್ಥಾನವಾಗಿರುವ ದಟ್ಟ ಅರಣ್ಯಗಳಿಗೆ ಸ್ಥಳಾಂತರಗೊಂಡ ಕುಟುಂಬಗಳಿಂದ ಅತಿಕ್ರಮಣ ಸಾಧ್ಯತೆ. ಈ ಹಿಂದೆ ಶರಾವತಿ ಅಣೆಕಟ್ಟೆ ನಿರ್ಮಾಣದ ಸಂದರ್ಭದಲ್ಲಿ ಅನೇಕ ಸಂತ್ರಸ್ತ ಕುಟುಂಬಗಳು ದಟ್ಟ ಅರಣ್ಯದಲ್ಲಿ ಮನೆಗಳನ್ನು ನಿರ್ಮಿಸಿಕೊಂಡ ಉದಾಹರಣೆ ಕಣ್ಣ ಮುಂದಿದೆ

(ಸಮಿತಿಯ ವರದಿಯಲ್ಲಿ ಉಲ್ಲೇಖವಾಗಿರುವ ಅಂಶಗಳು)

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಗೂಗಲ್ ನಕ್ಷೆ

ಕೇಂದ್ರ ಸರ್ಕಾರದ ಸಮಿತಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಸೋಂದಾ ಸ್ವರ್ಣವಲ್ಲಿ ಶ್ರೀಗಳು, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಭೀಮಣ್ಣ ನಾಯ್ಕ್, ಶಿವರಾಮ ಹೆಬ್ಬಾರ, ಶಾಂತಾರಾಮ ಸಿದ್ದಿ, ವೃಕ್ಷ ಲಕ್ಷ ಆಂದೋಲನ, ಎರಡೂ ಜಿಲ್ಲೆಗಳ ಜನರು, ಧಾರ್ಮಿಕ ಮುಖಂಡರು, ಪರಿಸರವಾದಿಗಳು ಹಾಗೂ ಜೀವಶಾಸ್ತ್ರಜ್ಞರು ಸೇರಿದಂತೆ ಸಾವಿರಾರು ಜನರ ಹೋರಾಟಕ್ಕೆ ಜಯ ಸಿಕ್ಕಿದೆ

ಗಿರಿಧರ ಕುಲಕರ್ಣಿ, ವನ್ಯಜೀವಿ ಸಂರಕ್ಷಣಾವಾದಿ

ಬಾಬಾ ಬುಡನ್‌ಗಿರಿ: ಸರ್ಕಾರಕ್ಕೆ ಆಗ್ರಹ
'ಉರೂಸ್‌ಗೆ ಅನುಮತಿ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿಯ ಸೌಹಾರ್ದ ಪರಂಪರೆಯನ್ನು ಸಂರಕ್ಷಿಸಲು ಹಾಗೂ ಸಂಪ್ರದಾಯದಂತೆ ಉರೂಸ್ ನಡೆಸಲು ಅವಕಾಶ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಕರ್ನಾಟಕ ಸಮಸ್ತ ಪ್ರಗತಿಪರ ಸೌಹಾರ್ದ ಸಂಘಟನೆಗಳ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಆಗ್ರಹಿಸಿದ್ದಾರೆ.

ಪತ್ರಕರ್ತೆ ವಿಜಯಾ, ನಟ ಪ್ರಕಾಶ್ ರಾಜ್, ಎದ್ದೇಳು ಕರ್ನಾಟಕದ ತಾರಾರಾವ್, ಕರ್ನಾಟಕ ಜನಶಕ್ತಿಯ ನೂರ್ ಶ್ರೀಧರ್, ಕೆ.ಎಲ್. ಅಶೋಕ್, ಶಾಂತಿಗಾಗಿ ನಾಗರಿಕರ ವೇದಿಕೆಯ ನಗರಗೆರೆ ರಮೇಶ್, ವಿ.ಎಸ್. ಶ್ರೀಧರ್, ಸಾಹಿತಿ ಬಂಜಗೆರೆ ಜಯಪ್ರಕಾಶ್, ಶಿಕ್ಷಣ ತಜ್ಞರಾದ ಶ್ರೀಪಾದ್ ಭಟ್, ನಿರಂಜನಾರಾಧ್ಯ, ಒಳಮೀಸಲಾತಿ ಹೋರಾಟಗಾರರಾದ ಬಸವರಾಜ್ ಕೌತಾಳ್, ಕರಿಯಪ್ಪ ಗುಡಿಮನಿ, ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯ ಸಿರಿಮನೆ ನಾಗರಾಜ್, ಕುಮಾರ್ ಸಮತಳ, ಸ್ವರಾಜ್ ಇಂಡಿಯಾದ ಖಲೀಂ ಉಲ್ಲಾ, ಹೋರಾಟಗಾರ ಗೌಸ್ ಮೊಹಿಯುದ್ದೀನ್ ಈ ಬಗ್ಗೆ ಬಹಿರಂಗ ಪತ್ರ ಬರೆದಿದ್ದಾರೆ.



'ಸೌಹಾರ್ದ ತಾಣವಾದ ಬಾಬಾ ಬುಡನ್‌ಗಿರಿ ಉಳಿವಿಗೋಸ್ಕರ ಕರ್ನಾಟಕದ ಎಲ್ಲ ಪ್ರಗತಿಪರ ಮನಸ್ಸುಗಳು ಅನೇಕ ದಶಕಗಳ ಕಾಲ ಹೋರಾಟ ಮಾಡುತ್ತಾ ಬಂದಿದ್ದಾರೆ. ಆದರೂ ಸಂಘ ಪರಿವಾರದ ಒತ್ತಡಕ್ಕೆ ಮಣಿದ ಕಾಂಗ್ರೆಸ್ ಸರ್ಕಾರ ರಾಜಿ ಸೂತ್ರವನ್ನು ಮುಂದಿಟ್ಟಿತ್ತು. ಅದರ ಪ್ರಕಾರ ಉರೂಸ್ ಹಾಗೂ ದತ್ತಪೂಜೆ ಎರಡನ್ನೂ ನಡೆಸಲು ಅವಕಾಶ ಇರಬೇಕು. ಎರಡನ್ನೂ ಜಿಲ್ಲಾಡಳಿತ ಮೇಲ್ವಿಚಾರಣೆ ಮಾಡಬೇಕು ಎನ್ನುವ ತೀರ್ಮಾನಕ್ಕೆ ಇದಾಗಿತ್ತು. ಇದು ಸಂಘ ಪರಿವಾರಕ್ಕೆ ಮಣೆ ಹಾಕಿ, ಸೂಫಿ ಪರಂಪರೆಯನ್ನು ಇಲ್ಲವಾಗಿಸುವ ತಂತ್ರಗಾರಿಕೆ ಎಂಬುದು ಬಯಲಾಗಿದೆ' ಎಂದಿದ್ದಾರೆ.

ಬ್ರಾಹ್ಮಣೀಯ ರೀತಿಯಲ್ಲಿ ದತ್ತ ಜಯಂತಿ ನಡೆಸಲು ಜಿಲ್ಲಾಡಳಿತ ಸಂಪೂರ್ಣ ಅವಕಾಶ ನೀಡಿತ್ತು. ಬಾಬಾ ಬುಡನ್‌ಗಿರಿಯನ್ನು ಕೇಸರಿಮಯಗೊಳಿಸಿ ಸಂಘಪರಿವಾರದ ನೇತೃತ್ವದಲ್ಲಿ ದತ್ತ ಜಯಂತಿ ನಡೆಯಿತು. ಮಾರ್ಚ್ 4ರಿಂದ 6ರವರೆಗೆ ಉರೂಸ್ ನಡೆಸಲು ದರ್ಗಾ ಸಮಿತಿ ನಿರ್ಧರಿಸಿದ್ದರೂ ಜಿಲ್ಲಾಡಳಿತ ತಡೆಯೊಡ್ಡಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ. 'ಈ ಅನ್ಯಾಯವನ್ನು ಖಂಡಿಸಿ ಪ್ರಗತಿಪರ ಸಂಘಟನೆಗಳು ಪ್ರತಿಭಟನೆಗೆ ಕರೆ ನೀಡಿದ್ದವು. ಪ್ರತಿಭಟನೆಗೆ ಅವಕಾಶ ನೀಡದೇ ಹೋರಾಟಗಾರರನ್ನು ಪೊಲೀಸರು ಅವಮಾನಕಾರಿಯಾಗಿ ನಡೆಸಿಕೊಂಡಿದ್ದಾರೆ. ಇದು ಕಾಂಗ್ರೆಸ್ ಸರ್ಕಾರದ ಹುಸಿ ಜಾತ್ಯತೀತ ಹಾಗೂ ದ್ವಂದ್ವ ನೀತಿಯಾಗಿದೆ. ಮುಖ್ಯಮಂತ್ರಿಯವರು ಮಧ್ಯಪ್ರವೇಶ ಮಾಡಿ ಬಾಬಾ ಬುಡನ್‌ಗಿರಿಯಲ್ಲಿ ಸೌಹಾರ್ದ ಪರಂಪರೆ ಸಂರಕ್ಷಿಸಬೇಕು ಮತ್ತು ಸುಪ್ರೀಂಕೋರ್ಟ್ ತೀರ್ಪಿನ ಆದೇಶದಂತೆ ನಡೆದುಕೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಒಳಮೀಸಲಾತಿ ಇನ್ನೂ ಅಸ್ಪಷ್ಟ

ಒಂದನೇ ಪುಟದಿಂದ...

ಒಳಮೀಸಲಾತಿ ಅನ್ವಯಿಸದೇ ನೇಮಕಾತಿ ಪ್ರಕ್ರಿಯೆ ನಡೆಸಿದರೆ ಸುದೀರ್ಘ ಅವಧಿಯಿಂದ ಮೀಸಲಾತಿ ಸಿಗದೇ ಅನ್ಯಾಯಕ್ಕೆ ಒಳಗಾಗಿರುವ ಮಾದಿಗರೂ ಸೇರಿದಂತೆ ಎಡಗೈ ಗುಂಪಿನ ಜಾತಿಯವರಿಗೆ ವಂಚಿಸಿದಂತಾಗುತ್ತದೆ ಎಂದು ಈ ಸಮುದಾಯವನ್ನು ಪ್ರತಿನಿಧಿಸುವ ಕೆ.ಎಚ್. ಮುನಿಯಪ್ಪ ಹಾಗೂ ಆರ್.ಬಿ. ತಿಮ್ಮಾಪುರ ಏರಿದ ಧ್ವನಿಯಲ್ಲಿಯೇ ತಮ್ಮ ವಾದ ಮಂಡಿಸಿದರು ಎಂದು ಗೊತ್ತಾಗಿದೆ.

ಒಟ್ಟಾರೆ ಮೀಸಲಾತಿ ಪ್ರಮಾಣವನ್ನು ಶೇ 50ರಿಂದ ಶೇ 56ಕ್ಕೆ ಹೆಚ್ಚಿಸಿರುವುದಕ್ಕೆ ಹೈಕೋರ್ಟ್ ನೀಡಿರುವ ತಡೆಯಾಜ್ಞೆಯಿಂದಾಗಿ ಎಲ್ಲ ನೇಮಕಾತಿ ಪ್ರಕ್ರಿಯೆಗಳು ನಿಂತು ಹೋಗಿವೆ. ಶೇ 15ರಿಂದ ಶೇ 17ಕ್ಕೆ ಹೆಚ್ಚಿಸಿರುವ ಪರಿಶಿಷ್ಟ ಜಾತಿಯವರ ಮೀಸಲಾತಿ ಹಾಗೂ ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಿರುವ ಪರಿಶಿಷ್ಟ ಪಂಗಡದ ಮೀಸಲಾತಿಯಡಿ ನೇಮಕಾತಿ ಮಾಡಲು ಈಗ ಸಾಧ್ಯವಾಗದು. ಪರಿಶಿಷ್ಟ ಜಾತಿಗೆ ಶೇ 2 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ 4ರಷ್ಟು ಹೆಚ್ಚಿಸಿರುವ ಮೀಸಲು ಪ್ರಮಾಣದ ಹುದ್ದೆಗಳನ್ನು ಕಾಯ್ದಿರಿಸಿಯೇ ನೇಮಕಾತಿ ಮಾಡಲಾಗುತ್ತದೆ. ಈಗಲೂ ನೇಮಕ ಮಾಡದೇ ಇದ್ದರೆ ನಿರುದ್ಯೋಗಿಗಳ ಪ್ರತಿರೋಧ ಎದುರಿಸುವುದು ಕಷ್ಟ ಎಂದು ಬಲಗೈ ಸಮುದಾಯ ಪ್ರತಿನಿಧಿಸುವ ಜಿ. ಪರಮೇಶ್ವರ, ಎಚ್‌.ಸಿ. ಮಹದೇವಪ್ಪ ಮೊದಲಾದವರು ತಮ್ಮ ವಾದ ಮುಂದಿಟ್ಟರು ಎಂದು ಮೂಲಗಳು ಹೇಳಿವೆ.

ಎರಡೂ ಸಮುದಾಯದವರೂ ತಮ್ಮ ಪಟ್ಟು ಬಿಡದೇ ಇದ್ದುದರಿಂದ, ಮತ್ತೊಮ್ಮೆ ಸಭೆ ಸೇರಿ ಈ ವಿಷಯವನ್ನು ಚರ್ಚಿಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು ಎಂದು ಮೂಲಗಳು ತಿಳಿಸಿವೆ.

ಬಿಜೆಪಿ: 10 ವಿಭಾಗಗಳಿಗೆ ಪ್ರಭಾರಿಗಳ ನಿಯುಕ್ತಿ

ಬೆಂಗಳೂರು: ಬಿಜೆಪಿ ರಾಜ್ಯ ಘಟಕವು ಪಕ್ಷದ 10 ವಿಭಾಗಗಳಿಗೆ ಪ್ರಭಾರಿಗಳು ಹಾಗೂ ಸಹ–ಪ್ರಭಾರಿಗಳನ್ನು ನಿಯುಕ್ತಿ ಮಾಡಿದೆ.

ವಿಭಾಗಗಳು	ಪ್ರಭಾರಿ	ಸಹಪ್ರಭಾರಿ
ಮೈಸೂರು	ಸ್ವಾಮಿ ಮರುಳಾಪುರ	ಇ.ಸಿ.ನಿಂಗರಾಜುಗೌಡ
ಮಂಗಳೂರು	ಬಿ.ಬಿ.ಭಾರತೀಶ್	ಜಯಂತ್ ಕೋಟ್ಯಾನ್
ಶಿವಮೊಗ್ಗ	ಆರ್.ಕೆ.ಸಿದ್ರಾಮಣ್ಣ	ಆರ್.ಡಿ.ಹೆಗಡೆ
ಧಾರವಾಡ	ಜಯತೀರ್ಥ ಕಟ್ಟಿ	ಭೋಜರಾಜ ಕರೂದಿ
ಬೆಳಗಾವಿ	ಸಂಜಯ್ ಪಾಟೀಲ	ಬಸವರಾಜ ಯಂಕಂಚಿ
ಕಲಬುರಗಿ	ಅರುಣ್ ಶಹಾಪುರ	ಶರಣಪ್ಪ ತಳವಾರ
ಬಳ್ಳಾರಿ	ಅಮರನಾಥ ಪಾಟೀಲ	ಚನ್ನಬಸವನಗೌಡ ಪಾಟೀಲ
ದಾವಣಗೆರೆ	ಟಿ.ಡಿ.ಮೇಘರಾಜ್	ಎ.ಮುರಳಿ
ಬೆಂಗಳೂರು(ಗ್ರಾ)	ಬ್ಯಾಟರಂಗೇಗೌಡ	ಎಂ.ಕೆ.ವಾಸುದೇವ
ಬೆಂಗಳೂರು	ಎಸ್.ಎನ್.ರಾಜಣ್ಣ	ಚಂದ್ರಶೇಖರ ರಾಜು, ಕಿರಣ್ ಬಾಬು

ಡಿ.ಕೆ.ಶಿವಕುಮಾರ್ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಕ್ಷೇಪಾರ್ಹ ಹೇಳಿಕೆಗಳನ್ನು ಒಳಗೊಂಡ ಬಿಜೆಪಿ ನಾಯಕರ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಆರೋಪದಡಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ನನ್ನ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಅಧ್ಯಕ್ಷರೂ ಆದ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಶಿವಕುಮಾರ್ ಪರ ಹೈಕೋರ್ಟ್ ವಕೀಲ ಎಚ್.ವಿ.ಪ್ರವೀಣ್ ಗೌಡ ಅವರ ವಾದ ಪುರಸ್ಕರಿಸಿದ ನ್ಯಾಯಪೀಠ, ಶಿವಕುಮಾರ್ ಅವರಿಗೆ ಸೀಮಿತವಾಗಿ ಪ್ರಕರಣಕ್ಕೆ ತಡೆ ನೀಡಿತು. ಅಂತೆಯೇ, ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಪ್ರಕರಣವೇನು?

ರಾಮ ಜನ್ಮಭೂಮಿ ವಿವಾದಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿಯಲ್ಲಿ ನಡೆದಿದ್ದ ಗಲಭೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಶ್ರೀಕಾಂತ್ ಪೂಜಾರಿ ಅವರನ್ನು ಪೊಲೀಸರು ಬಂಧಿಸಿದ್ದರು. ಇದನ್ನು ಖಂಡಿಸಿ ಬಿಜೆಪಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿತ್ತು. ಆ ಸಂದರ್ಭದಲ್ಲಿ ಬಿಜೆಪಿ ನಾಯಕರು, 'ನಾನು ಕರಸೇವಕ. ನನ್ನನ್ನೂ ಬಂಧಿಸಿ' ಎಂಬ ಒಕ್ಕಣೆ ಹೊಂದಿದ್ದ ಭಿತ್ತಿಪತ್ರ ಹಿಡಿದು ಅಭಿಯಾನ ನಡೆಸಿದ್ದರು.

ಈ ಅಭಿಯಾನವನ್ನು ಟೀಕಿಸುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷವು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಫೋಟೊ ಬಳಸಿ 'ನಾನು ಆರ್‌ಟಿಜಿಎಸ್ ಮೂಲಕ ಲಂಚ ಪಡೆದಿದ್ದೇನೆ. ₹40 ಸಾವಿರ ಕೋಟಿ ಅಕ್ರಮದಲ್ಲಿ ಪಾಲುದಾರನಾದ ನನ್ನನ್ನೂ ಬಂಧಿಸಿ' ಎಂದು ಹಾಗೂ ಶಾಸಕ ವಿ.ಸುನೀಲ್ ಕುಮಾರ್ ಫೋಟೊ ಬಳಸಿ 'ನಾನು ಪರಶುರಾಮ ಮೂರ್ತಿ ಕಂಚನ್ನು ಕದ್ದಿದ್ದೇನೆ. ಸಿಮೆಂಟ್ ಕದ್ದಿದ್ದೇನೆ ನನ್ನನ್ನೂ ಬಂಧಿಸಿ' ಎಂಬ ಒಕ್ಕಣೆಯ ಚಿತ್ರಗಳನ್ನು ಕೆಪಿಸಿಸಿ ಅಧಿಕೃತ ಫೇಸ್‌ಬುಕ್ ಪೇಜ್‌ನಲ್ಲಿ ಪೋಸ್ಟ್ ಮಾಡಿತ್ತು.

ಪೋಸ್ಟ್ ಪ್ರಕಟಣೆಗೆ ಸಂಬಂಧಿಸಿ, ಡಿ.ಕೆ.ಶಿವಕುಮಾರ್ ಹಾಗೂ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಬಿ.ಆರ್.ನಾಯ್ಡು ವಿರುದ್ಧ ಬಿಜೆಪಿಯ ಕಾನೂನು ಘಟಕದ ಸಂಚಾಲಕ ಯೋಗೇಂದ್ರ ಹೊಡಘಟ್ಟ ಖಾಸಗಿ ದೂರು ದಾಖಲಿಸಿದ್ದರು. ಇದನ್ನು ಆಧರಿಸಿ ಹೈಗ್ರೌಂಡ್ಸ್ ಠಾಣೆ ಪೊಲೀಸರು, ಭಾರತೀಯ ದಂಡ ಸಂಹಿತೆ–1860ರ ಕಲಂ 153(ಎ), 504, 505(2) ಮತ್ತು 464ರ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.

'ದಾಖಲೆ'ಗೆ ಹಾರೈಕೆ...

ಪ್ರಜಾವಾಣಿ ಚಿತ್ರ:



ದಾಖಲೆಯ 17ನೇ ಬಜೆಟ್ ಮಂಡನೆಗೆ ಸಿದ್ಧವಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತವರು ಮೈಸೂರಿನ ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ 8,125 ಚದರ ಅಡಿಯ ಚಿತ್ರ ಬಿಡಿಸಿ ಗುರುವಾರ ವಿಶೇಷ ಅಭಿನಂದನೆ ಸಲ್ಲಿಸಲಾಯಿತು

ಪಾದಯಾತ್ರೆಗೆ ಬಿಜೆಪಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಚಿತ್ರದುರ್ಗದಿಂದ ಬೆಂಗಳೂರುವರೆಗೆ ಪಾದಯಾತ್ರೆ ನಡೆಸಲು, ಪ್ರತಿ ಜಿಲ್ಲೆಗಳಲ್ಲೂ ಹೋರಾಟ ಹಮ್ಮಿಕೊಳ್ಳಲು ಬಿಜೆಪಿ ನಿರ್ಧರಿಸಿದೆ.

ಸಂಸದ ಬಸವರಾಜ ಬೊಮ್ಮಾಯಿ ಅವರ ನಿವಾಸದಲ್ಲಿ ಗುರುವಾರ ನಡೆದ ಸಭೆಯಲ್ಲಿ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವ ಎ.ನಾರಾಯಣಸ್ವಾಮಿ, ಶಾಸಕ ಅರವಿಂದ ಬೆಲ್ಲದ ಮತ್ತಿತರರು ಈ ಕುರಿತು ಸುದೀರ್ಘ ಚರ್ಚೆ ನಡೆಸಿದರು.

ಒಳ ಮೀಸಲಾತಿ

ಒಳ ಮೀಸಲಾತಿ ಕುರಿತು ಬೆಂಗಳೂರಿನ ಪುರಭವನದಲ್ಲಿ ಮಾರ್ಚ್ 7ರಂದು ಸಭೆ ಕರೆದಿದ್ದೇವೆ. ಅಲ್ಲಿ ಚರ್ಚಿಸಿದ ನಂತರ ಮುಂದಿನ ಹೋರಾಟದ ರೂಪುರೇಷೆ ಪ್ರಕಟಿಸಲಾಗುವುದು

ಎ.ನಾರಾಯಣಸ್ವಾಮಿ, ಕೇಂದ್ರದ ಮಾಜಿ ಸಚಿವ

ಒಳಮೀಸಲಾತಿ ಜಾರಿಗೆ ರಾಜ್ಯ ಸರ್ಕಾರಕ್ಕೆ ಬದ್ಧತೆ ತೋರುತ್ತಿಲ್ಲ. ಪ್ರತಿ ಹಂತದಲ್ಲೂ ಪರಿಶಿಷ್ಟರಿಗೆ ಅನ್ಯಾಯ ಮಾಡಿದೆ. ಮೀಸಲಾತಿ ವಿರುದ್ಧ ಕೋರ್ಟ್ ಪ್ರಕರಣಗಳನ್ನು ಇತ್ಯರ್ಥಪಡಿಸಲು ಆಸಕ್ತಿ ತೋರುತ್ತಿಲ್ಲ. ಒಳ ಮೀಸಲಾತಿ ಜಾರಿಯಾಗುವುದು ಈ ಸರ್ಕಾರಕ್ಕೆ ಬೇಕಿಲ್ಲ. ಸರ್ಕಾರದ ದ್ವಂದ ನೀತಿಯ ವಿರುದ್ಧ ರಾಜ್ಯದ ಎಲ್ಲೆಡೆ ಹೋರಾಟ ಹಮ್ಮಿಕೊಳ್ಳಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು.

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಗಳಾಗಿದ್ದ ವೇಳೆ ಪರಿಶಿಷ್ಟ ಜಾತಿಗೆ ಶೇ 15ರಿಂದ 17ಕ್ಕೆ, ಪರಿಶಿಷ್ಟ ವರ್ಗಗಳಿಗೆ ಶೇ 3ರಿಂದ 7ಕ್ಕೆ ಮೀಸಲಾತಿ ಹೆಚ್ಚಳ ಮಾಡಲಾಗಿತ್ತು. ನ್ಯಾಯಮೂತಿ ಎಚ್. ಎನ್. ನಾಗಮೋಹನ್ ದಾಸ್ ಅವರ ಸಮಿತಿ ರಚಿಸಿದಾಗ ಶೇ 17ಕ್ಕೆ ಒಪ್ಪಿಗೆ ಕೊಡಲಾಗಿತ್ತು. ಆಯೋಗ ಶಿಫಾರಸು ಮಾಡಿದ್ದು ಐದು ಗುಂಪುಗಳು. ಆದರೆ, ಇವರು ರಾಜಕೀಯ ಲಾಭಕ್ಕಾಗಿ ಮೂರು ಗುಂಪು ಮಾಡಿ ಗೊಂದಲ ಸೃಷ್ಟಿಸಿದ್ದಾರೆ. ಯಾರಿಗೂ ನ್ಯಾಯ ಸಿಗದಂತೆ ಮಾಡಿದ್ದಾರೆ ಎಂದು ಛಲವಾದಿ ನಾರಾಯಣಸ್ವಾಮಿ ದೂರಿದರು.

ಐಐಎಸ್‌ಸಿ: ಗಣಿತಜ್ಞ ಕುಟುಂಬವನ್ನೇ ಮುಗಿಸಿದ್ದ ದುಷ್ಕರ್ಮಿಗಳು
ತ್ರಿವಳಿ ಕೊಲೆ ಆರೋಪಿಗಳಿಗೆ ಜೀವಾವಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿನೇಳು ವರ್ಷದ ಹಿಂದೆ ಬೆಂಗಳೂರಿನ ಐಐಎಸ್‌ಸಿ (ಭಾರತೀಯ ವಿಜ್ಞಾನ ಸಂಸ್ಥೆ) ನಿವೃತ್ತ ಪ್ರಾಧ್ಯಾಪಕ ಮತ್ತು ಖ್ಯಾತ ಗಣಿತಜ್ಞ ಪುರುಷೋತ್ತಮ ಲಾಲ್ ಸಚ್‌ದೇವ್, ಅವರ ಪತ್ನಿ ರೀಟಾ ಮತ್ತು ಪುತ್ರ ಮುನ್ನಾ ಅವರ ತ್ರಿವಳಿ ಕೊಲೆ ಪ್ರಕರಣದಲ್ಲಿ ಸೆಷನ್ಸ್ ನ್ಯಾಯಾಲಯದಿಂದ ಖುಲಾಸೆಗೊಂಡಿದ್ದ ನಾಲ್ವರು ವಲಸೆ ಕಾರ್ಮಿಕ ಆರೋಪಿಗಳಿಗೆ ಹೈಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ.

ಆರೋಪಿಗಳನ್ನು ಖುಲಾಸೆಗೊಳಿಸಿದ್ದ ಬೆಂಗಳೂರಿನ 65ನೇ ಸಿಟಿ ಸಿವಿಲ್ ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಮೇಲ್ಮನವಿ ಪುರಸ್ಕರಿಸಿರುವ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ತೀರ್ಪು ನೀಡಿದೆ. ಪಶ್ಚಿಮ ಬಂಗಾಳದ 24 ಪರಗಣ ಹಾಗೂ ಮುಜಫ್ಫರ್ ನಗರ ಜಿಲ್ಲೆಯ ದೀಪಕ್ ಹಲ್ದಾರ್, ಇವರ ಪತ್ನಿ ಸುಚಿತ್ರಾ ಹಲ್ದಾರ್, ಮೊಹಮ್ಮದ್ ಸರ್ಬಾಲ್ ಮತ್ತು ಬಿದನ್ ಶಿಕಾರಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಆರೋಪಿಗಳು.

'ಆರೋಪಿಗಳು ಮೂವರನ್ನೂ ಕತ್ತು ಹಿಸುಕಿ ಕೊಂದು ನಗದು, ಒಡವೆ ವಸ್ತು ದೋಚಿದ್ದಾರೆ. ಮೊದಲನೇ ಆರೋಪಿ ದೀಪಕ್ ಹಲ್ದಾರ್ ಮತ್ತು ಎರಡನೇ ಆರೋಪಿ ಸುಚಿತ್ರಾ ಹಲ್ದಾರ್ ಕೊಲೆಯಾದ ಮನೆಯಲ್ಲಿ ಮನೆಗೆಲಸದವರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಹಣ ಹಾಗೂ ಚಿನ್ನಾಭರಣಕ್ಕಾಗಿ ಮೂವರು ಅಮಾಯಕರನ್ನು ಹತ್ಯೆ ಮಾಡಿರುವ ಆರೋಪಿಗಳು ಸಮಾಜದಲ್ಲಿ ಶಾಂತಿ ಮತ್ತು ಸಹಬಾಳ್ವೆಗೆ ಕಂಟಕರಾಗಿದ್ದು ಅವರ ಈ ಕುಕೃತ್ಯ ಸಮಾಜಕ್ಕೆ ದೊಡ್ಡ ಅಪಾಯವಾಗಿದೆ' ಎಂದು ಪೀಠ ಆಘಾತ ವ್ಯಕ್ತಪಡಿಸಿದೆ.

'ಸದ್ಯ ಹೊರಗಿರುವ ನಾಲ್ವರು ಆರೋಪಿಗಳು ಎರಡು ವಾರಗಳಲ್ಲಿ ವಿಚಾರಣಾ ನ್ಯಾಯಾಲಯದ ಮುಂದೆ ಶರಣಾಗಬೇಕು. ಉಳಿದ ಅವಧಿಯ ಶಿಕ್ಷೆಯನ್ನು ಪೂರೈಸಲು ಅವರನ್ನು ಕಾರಾಗೃಹಕ್ಕೆ ಕಳುಹಿಸಬೇಕು' ಎಂದು ನ್ಯಾಯಪೀಠ ತೀರ್ಪಿನಲ್ಲಿ ವಿವರಿಸಿದೆ. ಪ್ರಾಸಿಕ್ಯೂಷನ್ ಪರ ರಶ್ಮಿ ಪಟೇಲ್ ವಾದ ಮಂಡಿಸಿದ್ದರು.

ಘಟನೆ: ಪುರುಷೋತ್ತಮ ಲಾಲ್ ಸಚ್‌ದೇವ್ (71), ಪತ್ನಿ ರೀಟಾ (62), ಪುತ್ರ ಮುನ್ನಾ(35) ಜತೆ ಆರ್.ಟಿ.ನಗರದ 80 ಅಡಿ ರಸ್ತೆಯಲ್ಲಿರುವ ಮನೆಯಲ್ಲಿ ವಾಸ ಮಾಡುತ್ತಿದ್ದರು. ಆರೋಪಿಗಳು 2009ರ ಫೆಬ್ರುವರಿ 16ರಂದು ಮೂವರನ್ನೂ ಕತ್ತು ಹಿಸುಕಿ ಕೊಂದು ಚಿನ್ನಾಭರಣ ನಗದು ದೋಚಿ ಪರಾರಿಯಾಗಿದ್ದರು.



'ವಲಸೆ ಕಾರ್ಮಿಕರ ನಿಗಾಕ್ಕೆ ಸಕಾಲ'

'ಇತ್ತೀಚಿನ ವರ್ಷಗಳಲ್ಲಿ ವಲಸೆ ಕಾರ್ಮಿಕರು ಮನೆಗೆಲಸ ನೆಪದಲ್ಲಿ ಅಪರಾಧ ಕೃತ್ಯಗಳಲ್ಲಿ ತೊಡಗುವ ಪ್ರಕರಣಗಳು ಹೆಚ್ಚುತ್ತಿವೆ. ಈ ಹಿನ್ನೆಲೆಯಲ್ಲಿ ಅವರ ಮೇಲೆ ನಿಗಾ ಇರಿಸಲು ವಲಸೆ ಕಾರ್ಮಿಕ ಮತ್ತು ಕ್ರಿಮಿನಲ್ ನಿಯಂತ್ರಣ ಕಾರ್ಯತಂತ್ರಗಳಡಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಬಹುತೇಕ ಪ್ರಕರಣಗಳಲ್ಲಿ ವಲಸೆ ಕಾರ್ಮಿಕರ ಹಿನ್ನೆಲೆ ಮತ್ತು ಅವರ ಗುರುತನ್ನು ಮನೆಗಳ ಮಾಲೀಕರು ಅಥವಾ ಉದ್ಯೋಗದಾತರು ಪರಿಶೀಲಿಸುವ ಗೋಜಿಗೆ ಹೋಗುವುದಿಲ್ಲ. ಹಾಗಾಗಿ, ಕೆಲವು ವಲಸಿಗರು ಆಗಾಗ್ಗೆ ಅಪರಾಧ ಕೃತ್ಯಗಳನ್ನು ಎಸಗಿ ಪರಾರಿಯಾಗುತ್ತಾರೆ. ಅದಕ್ಕಾಗಿ ಮುನ್ನೆಚ್ಚರಿಕೆ ಕ್ರಮವಾಗಿ, ಕಾರ್ಮಿಕ ಮತ್ತು ಅಪರಾಧ ಕಾನೂನುಗಳನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ವಲಸೆ ಕಾರ್ಮಿಕರ ಮಾಹಿತಿಯನ್ನು ಪೊಲೀಸರು ಕಡ್ಡಾಯವಾಗಿ ಪರಿಶೀಲಿಸಬೇಕು. ಅವರ ನೋಂದಣಿಗೆ ಪೋರ್ಟಲ್ ವ್ಯವಸ್ಥೆ ಮಾಡಬೇಕು. ಅದರ ಮಾಹಿತಿ ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡಬೇಕು' ಎಂದು ನ್ಯಾಯಪೀಠ ತಾಕೀತು ಮಾಡಿದೆ.

'ಈ ಪ್ರಕರಣದಲ್ಲಿ ಘಟನೆ ನಡೆದ 20 ತಿಂಗಳ ನಂತರ ಆರೋಪಿಗಳ ಬಂಧನವಾಗಿದೆ. ಹಾಗಾಗಿ, ವಲಸೆ ಕಾರ್ಮಿಕರ ನಿಯಮಗಳನ್ನು ಬಿಗಿಗೊಳಿಸಲು ಇದು ಸಕಾಲ. ಸರ್ಕಾರ ಈ ನಿಟ್ಟಿನಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಈ ಆದೇಶದ ಪ್ರತಿಯನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ರವಾನಿಸಬೇಕು' ಎಂದು ನಿರ್ದೇಶಿಸಿದೆ.

ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ನೇತೃತ್ವದಲ್ಲಿ ಕಾರ್ಮಿಕರು ಬೆಂಗಳೂರಿನ ಕಾರ್ಮಿಕ ಭವನ ಎದುರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಕನಿಷ್ಠ ವೇತನ: ಅಧಿಸೂಚನೆಗೆ ಆಗ್ರಹ

ಬೆಂಗಳೂರು: ಕನಿಷ್ಠ ವೇತನ ಪರಿಷ್ಕರಣೆಯ ಅಂತಿಮ ಅಧಿಸೂಚನೆ ಹೊರಡಿಸಬೇಕು. ತುಟ್ಟಿಭತ್ಯೆ ದರವನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸೇರಿದಂತೆ ವಿವಿಧ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ಕಾರ್ಮಿಕರು ಗುರುವಾರ ಪ್ರತಿಭಟನೆ ನಡೆಸಿದರು.

ಕನಿಷ್ಠ ವೇತನ ದಾನವಲ್ಲ. ಅದು ಕಾರ್ಮಿಕರ ಸಾಂವಿಧಾನಿಕ ಹಕ್ಕು. ಒಂದು ಕುಟುಂಬದ ಆಹಾರ, ವಸ್ತ್ರ, ವಸತಿ, ಶಿಕ್ಷಣ, ಆರೋಗ್ಯ ಸೇರಿದಂತೆ ಮೂಲಭೂತ ಅವಶ್ಯಗಳನ್ನು ಪೂರೈಸುವಷ್ಟು ವೇತನ ನೀಡುವುದು ಸರ್ಕಾರದ ಕರ್ತವ್ಯ. ಆದರೆ, ರಾಜ್ಯದಲ್ಲಿ 9 ವರ್ಷಗಳಿಂದ ಕನಿಷ್ಠ ವೇತನ ಪರಿಷ್ಕರಣೆ ಆಗಿಲ್ಲ. ಇದು ಕಾರ್ಮಿಕರ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ತುಟ್ಟಿಭತ್ಯೆ ಪ್ರಮಾಣವು ಗ್ರಾಹಕ ಬೆಲೆ ಸೂಚ್ಯಂಕದ ಪ್ರತಿ ಪಾಯಿಂಟ್‌ಗೆ ಕೇವಲ 4 ಪೈಸೆಯಾಗಿದ್ದು, ಇದು ಅಸಮರ್ಪಕವಾಗಿದೆ. ಹಣದುಬ್ಬರದ ಪರಿಣಾಮದಿಂದ ಕಾರ್ಮಿಕರ ನೈಜ ಆದಾಯ ಕುಸಿದಿರುವುದರಿಂದ ಪ್ರತಿ ಪಾಯಿಂಟ್‌ಗೆ 8 ಪೈಸೆಯಂತೆ ತುಟ್ಟಿಭತ್ಯೆ ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು.

ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಡಿ.ಎ. ವಿಜಯಭಾಸ್ಕರ, ಉಪಾಧ್ಯಕ್ಷ ಬಿ.ಅಮ್ಜದ್, ಸಿಐಟಿಯು ರಾಜ್ಯ ಅಧ್ಯಕ್ಷ ಮೀನಾಕ್ಷಿ ಸುಂದರಂ, ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ, ಎಐಟಿಯುಸಿ ಮುಖಂಡರಾದ ಎಂ.ಸತ್ಯಾನಂದ, ಜಯಮ್ಮ, ಹನುಮಂತಪ್ಪ, ಸಿಐಟಿಯು ಮುಖಂಡರಾದ ಗೋಪಾಲಗೌಡ, ಪ್ರತಾಪ ಸಿಂಹ ಭಾಗವಹಿಸಿದ್ದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ನಿಸರ್ಗವೇ ಜಗತ್ತಿನಲ್ಲಿ ಬಲು ದೊಡ್ಡ ಗುರು.

–ರವೀಂದ್ರನಾಥ ಟ್ಯಾಗೋರ್

ಸಂಪಾದಕೀಯ

ಸಭ್ಯ ರಾಜಕಾರಣಕ್ಕೆ ತಿಲಾಂಜಲಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಅಪಾಯ

ಮುಸ್ಲಿಮರನ್ನು ಗುರಿಯಾಗಿಸಿಕೊಂಡು ದ್ವೇಷ ಭಾಷಣ ಮಾಡುವುದರಲ್ಲಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಇತರ ಎಲ್ಲ ಹಿಂದುತ್ವ ರಾಜಕಾರಣಿಗಳಿಗಿಂತ ಮುಂದಿದ್ದಾರೆ. 2021ರಲ್ಲಿ ಮುಖ್ಯಮಂತ್ರಿ ಆದಾಗಿನಿಂದ ಅವರು ಮುಸ್ಲಿಮರ ವಿರುದ್ಧ ದ್ವೇಷ ಕಾರಿದ್ದಾರೆ, ತಾರತಮ್ಯಕ್ಕೆ ದಾರಿ ಮಾಡಿಕೊಡುವಂತಹ ನೀತಿಗಳನ್ನು ಅನುಸರಿಸಿದ್ದಾರೆ; ಮುಸ್ಲಿಮರನ್ನು ಕಿರುಕುಳಕ್ಕೆ ಗುರಿಪಡಿಸುವ, ಅವರನ್ನು ಹತ್ತಿಕ್ಕುವ ಕ್ರಮಗಳನ್ನು ಎಗ್ಗಿಲ್ಲದೆ ಕೈಗೊಂಡಿದ್ದಾರೆ. ಅವರು ಈಚೆಗೆ ಎಸಗಿದ ಕೃತ್ಯವೊಂದು ತೀರಾ ಆಕ್ಷೇಪಾರ್ಹವಾಗಿದೆ. ಶರ್ಮಾ ಅವರ ಇತ್ತೀಚಿನ ಕೆಲವು ಮಾತುಗಳನ್ನು ಉಲ್ಲೇಖಿಸಿ ಕೆಲವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಮುಸ್ಲಿಮರು ಧರಿಸುವಂತಹ ಟೋಪಿ ಧರಿಸಿದ್ದ ಕೆಲವರನ್ನು ಗುರಿಯಾಗಿಸಿಕೊಂಡು ಶರ್ಮಾ ಅವರು ಗುಂಡು ಹಾರಿಸುತ್ತಿರುವ ಚಿತ್ರವೊಂದು ಇರುವ ವಿಡಿಯೊ ಬಗ್ಗೆ ಅರ್ಜಿದಾರರು ಕೋರ್ಟ್‌ನ ಗಮನ ಸೆಳೆಯುವ ಕೆಲಸ ಮಾಡಿದ್ದಾರೆ. ಈ ವಿಡಿಯೊವನ್ನು ನಂತರ ಅಳಿಸಿಹಾಕಲಾಗಿದೆ. ಆದರೆ, ಇದು ಅಸ್ಸಾಂನಲ್ಲಿ ಹಾಗೂ ದೇಶದ ಇತರೆಡೆಗಳಲ್ಲಿ ವ್ಯಾಪಕವಾಗಿ ಹರಿದಾಡಿದೆ. 'ಮಿಯಾಗಳನ್ನು ಗುರಿಯಾಗಿಸಿಕೊಳ್ಳಿ' ಎಂದು ಶರ್ಮಾ ಅವರು ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಹೇಳಿದ್ದರು. ಬಂಗಾಳಿ ಭಾಷೆ ಮಾತನಾಡುವ ಮುಸ್ಲಿಮರನ್ನು 'ಮಿಯಾಗಳು' ಎಂದು ಕರೆಯಲಾಗುತ್ತಿದೆ. ಮುಸ್ಲಿಮರನ್ನು ಗುರಿಯಾಗಿಸಿಕೊಂಡು ತಾರತಮ್ಯ ಎಸಗುವವರಿಗೆ, ಅವರನ್ನು ಕಿರುಕುಳಕ್ಕೆ ಗುರಿಪಡಿಸುವವರಿಗೆ ಸರ್ಕಾರ ರಕ್ಷಣೆ ಒದಗಿಸುತ್ತದೆ ಎಂದು ಕೂಡ ಶರ್ಮಾ ಭರವಸೆ ನೀಡಿದ್ದಾರೆ.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ದೇಶದ ಸಾಮಾಜಿಕ ಮತ್ತು ರಾಜಕೀಯ ಪರಿಸರವನ್ನು ತೀವ್ರವಾಗಿ ಗಾಸಿಗೊಳಿಸುತ್ತಿದ್ದಾರೆ; ಸಭ್ಯ ರಾಜಕಾರಣದ ಎಲ್ಲೆಗಳನ್ನು ದಾಟಿದ್ದಾರೆ.

ಅಸ್ಸಾಂನ ವಿಧಾನಸಭೆಗೆ ಚುನಾವಣೆ ಹತ್ತಿರವಾಗುತ್ತಿದೆ. ಅಲ್ಲಿ ಸತತ ಮೂರನೆಯ ಬಾರಿಯೂ ಜಯ ಸಾಧಿಸಲು ಬಿಜೆಪಿ ಯತ್ನಿಸುತ್ತಿದೆ. ಶರ್ಮಾ ಅವರು ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಎಸಗುತ್ತಿರುವ ಕೃತ್ಯಗಳ ಹಿಂದೆ ಚುನಾವಣಾ ಲೆಕ್ಕಾಚಾರದ ಆಯಾಮವೂ ಇದ್ದಿರಬಹುದು. ಆದರೆ ಅವನ್ನೆಲ್ಲ ಚುನಾವಣಾ ಪ್ರಚಾರ ತಂತ್ರದ ಭಾಗ ಮಾತ್ರ ಎಂದಷ್ಟೇ ಪರಿಗಣಿಸಲು ಆಗದು. ಶರ್ಮಾ ಅವರ ಆರ್ಭಟದ ಮಾತುಗಳು ಅತ್ಯಂತ ವಿಭಜನಕಾರಿಯಾಗಿವೆ, ಅವು ದ್ವೇಷ ಭಾಷಣದ ವ್ಯಾಪ್ತಿಗೆ ಬರುವಂಥವು. ತಮ್ಮ ಮಾತುಗಳು ಬಾಂಗ್ಲಾದೇಶದಿಂದ ಬಂದಿರುವ ಅಕ್ರಮ ವಲಸಿಗರನ್ನು ಮಾತ್ರ ಗುರಿಯಾಗಿಸಿಕೊಂಡಿವೆ ಎಂದು ಶರ್ಮಾ ಹೇಳಿದ್ದಾರೆ. ಆದರೆ ವಾಸ್ತವದಲ್ಲಿ ಅವರ ಮಾತುಗಳಲ್ಲಿ ಆ ಬಗೆಯ ವ್ಯತ್ಯಾಸ ಕಾಣುತ್ತಿಲ್ಲ. ಅವರ ಮಾತುಗಳು ಮುಸ್ಲಿಮರೆಲ್ಲರನ್ನೂ ಗುರಿಯಾಗಿಸಿಕೊಂಡಂತೆ ಇವೆ. ಪ್ರಜೆಗಳನ್ನು ಗುರಿಯಾಗಿಸಿಕೊಂಡು ಗುಂಡು ಹಾರಿಸಲು ಮುಂದಾಗುವ, ಕೋಮು ಪ್ರಚೋದನಕಾರಿ ಸಂದೇಶ ರವಾನಿಸಲು ನಿರ್ದಿಷ್ಟ ಸಾಂಕೇತಿಕ ಪದಗಳನ್ನು ಬಳಕೆ ಮಾಡುವ ಮುಖ್ಯಮಂತ್ರಿ, ತಾನು ಸ್ವೀಕರಿಸಿದ ಪ್ರತಿಜ್ಞಾವಿಧಿಗೆ ತಕ್ಕಂತೆ ನಡೆದುಕೊಳ್ಳುತ್ತಿಲ್ಲ ಎನ್ನಬೇಕಾಗುತ್ತದೆ. ಅವರು ಸಭ್ಯ ರಾಜಕಾರಣದ ಎಲ್ಲೆಗಳನ್ನೆಲ್ಲ ಮೀರಿದ್ದಾರೆ.

ಬಾಂಗ್ಲಾದೇಶದ ಅಕ್ರಮ ವಲಸಿಗರ ವಿಷಯವನ್ನು ಬಿಜೆಪಿ ನಾಯಕರು ಹಾಗೂ ಶರ್ಮಾ ಅವರು ರಾಜಕೀಯ ಉದ್ದೇಶಕ್ಕೆ ಬಳಕೆ ಮಾಡಿಕೊಂಡಿದ್ದಾರೆ. ಅಸ್ಸಾಂಗೆ ಈಚೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೂ ಅಕ್ರಮ ವಲಸಿಗರ ಬಗ್ಗೆ ಮಾತನಾಡಿದ್ದಾರೆ. ಕೇಂದ್ರದಲ್ಲಿ ಹಾಗೂ ಅಸ್ಸಾಂನಲ್ಲಿ ಬಿಜೆಪಿಯು 10 ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಅಧಿಕಾರದಲ್ಲಿದೆ. ಈ ಸಮಸ್ಯೆಯನ್ನು ಕಾನೂನಿನ ಚೌಕಟ್ಟಿನ ಅಡಿಯಲ್ಲಿ ಬಗೆಹರಿಸುವ ಅಧಿಕಾರ, ಹೊಣೆ ಆ ಪಕ್ಷದ ಬಳಿಯೇ ಇದೆ. 1985ರ ಅಸ್ಸಾಂ ಒಪ್ಪಂದ ಹಾಗೂ ನಂತರದ ಸುಪ್ರೀಂ ಕೋರ್ಟ್ ತೀರ್ಪುಗಳು ಆಡಳಿತಾರೂಢರಿಗೆ ಮಾರ್ಗದರ್ಶಿಯಂತೆ ಇವೆ. ಆದರೆ ಎಲ್ಲ ಮುಸ್ಲಿಮರನ್ನು ಕೆಟ್ಟವರೆಂದು ಚಿತ್ರಿಸಲು ಯತ್ನಿಸುವುದು ಸರಿಯಾದ ಕ್ರಮವಲ್ಲ. ಶರ್ಮಾ ಅವರು ಕಾಂಗ್ರೆಸ್ಸಿನಿಂದ ಬಿಜೆಪಿ ಸೇರಿದವರು. ತಾವು ಇತರರಿಗಿಂತ ಹೆಚ್ಚಿನ ಮಟ್ಟದ ಹಿಂದುತ್ವ ಮೂಲಭೂತವಾದಿ ಎಂಬುದನ್ನು ಸಾಬೀತು ಮಾಡಲು ಅವರು ಯತ್ನಿಸುತ್ತಿರಬಹುದು. ಆ ಕಸರತ್ತಿನ ಭರಾಟೆಯಲ್ಲಿ ಅವರು ದೇಶದ ಸಾಮಾಜಿಕ ಪರಿಸರಕ್ಕೆ ಮತ್ತು ರಾಜಕೀಯ ಭಿತ್ತಿಗೆ ತೀವ್ರವಾದ ಅಪಾಯ ಉಂಟು ಮಾಡುತ್ತಿದ್ದಾರೆ. ಅವರು ಹದ್ದು ಮೀರಿ ವರ್ತಿಸುತ್ತಿದ್ದಾರೆ, ತಪ್ಪು ಮಾಡಿಯೂ ತಪ್ಪಿಸಿಕೊಳ್ಳಲು ಅವರಿಗೆ ಅವಕಾಶ ಕೊಡಬಾರದು.

ಚಾಟಿ

ಹೆಣ್ಣುಮಕ್ಕಳನ್ನು ಗೌರವಿಸಿ

ಈ ಕಾಲದಲ್ಲೂ ಹೆಣ್ಣುಮಕ್ಕಳನ್ನು ಗೌರವಿಸಿ ಎಂದು ಹೇಳಬೇಕೆಂದರೆ ಅದು ನಮ್ಮ ದೌರ್ಭಾಗ್ಯ. ದಯವಿಟ್ಟು ಆತ್ಮಸಾಕ್ಷಿಯಿಟ್ಟುಕೊಂಡು ಕೆಲಸ ಮಾಡಿ. ಹೆಣ್ಣುಮಕ್ಕಳ, ನಟಿಯರ ಗೌರವಕ್ಕೆ ಚ್ಯುತಿ ತರಬೇಡಿ.

ಶಿವರಾಜ್‌ಕುಮಾರ್, ನಟ, 'ಎಕ್ಸ್'ನಿಂದ

ಕಿಡಿನುಡಿ

ಹಿಂದೂ ಮಹಾಸಾಗರದಲ್ಲಿ ಇರಾನ್‌ನ ಯುದ್ಧನೌಕೆಯ ಮೇಲೆ ಅಮೆರಿಕ ದಾಳಿ ನಡೆಸಿದೆ. ಈ ವಿದ್ಯಮಾನವು ದೇಶದ ರಕ್ಷಣೆ ಮತ್ತು ಹಿತಾಸಕ್ತಿಗಳನ್ನು ಮೋದಿ ನೇತೃತ್ವದ ಸರ್ಕಾರ ಬಲಿಕೊಟ್ಟಿರುವುದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

25 ವರ್ಷಗಳ ಹಿಂದೆ

ಮಂಗಳವಾರ, 6-3-2001

• ತುಮಕೂರಿನಲ್ಲಿಯೇ ಕನ್ನಡ ಸಾಹಿತ್ಯ ಸಮ್ಮೇಳನ

ಬೆಂಗಳೂರು, ಮಾರ್ಚ್ 5– ಅಖಿಲ ಭಾರತ 69ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುವುದು ಎಲ್ಲಿ? ಎಂಬ ಬಗ್ಗೆ ಎದ್ದಿದ್ದ ಅನುಮಾನ ಈಗ ಬಹುತೇಕ ದೂರವಾಗಿದೆ.

ಏನೇ ಆದರೂ ಈ ಮೊದಲೇ ನಿಗದಿಯಾಗಿರುವಂತೆ ತುಮಕೂರಿನಲ್ಲಿಯೇ ಸಮ್ಮೇಳನ ನಡೆಯಲಿದೆ ಎಂಬುದು ಕನ್ನಡ ಸಾಹಿತ್ಯ ಪರಿಷತ್‌ನ ಮೂಲಗಳ ವಿಶ್ವಾಸ.

ತುಮಕೂರಿನಲ್ಲಿ ನಡೆಸಲು ಎದುರಾಗಿದ್ದ ಕೆಲವು ಸಮಸ್ಯೆಗಳಿಗೆ ಸದ್ಯದಲ್ಲೇ ಪೂರ್ಣ ವಿರಾಮ ಬೀಳಲಿದೆ ಎಂಬುದು ಈ ಮೂಲಗಳ ಅಭಿಪ್ರಾಯ.

ಕನ್ನಡ ಸಾಹಿತ್ಯ ಪರಿಷತ್ತಿನ ತುಮಕೂರು ಜಿಲ್ಲಾ ಘಟಕ ಇದೇ ವಾರದಲ್ಲಿ ಸಮ್ಮೇಳನ ಸ್ವಾಗತ ಸಮಿತಿಯನ್ನು ರಚಿಸಲಿದೆ ಎಂಬುದಾಗಿ ತಿಳಿದುಬಂದಿದೆ.

• ಆಮದು–ರಫ್ತು: ಸ್ವನಿಯಂತ್ರಣ ವ್ಯವಸ್ಥೆಗೆ ಮುಖ್ಯಮಂತ್ರಿ ಸಲಹೆ

ತುಮಕೂರು, ಮಾರ್ಚ್ 5– ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆ ದೊರೆಯಬೇಕಾದರೆ ಆಮದು ಮತ್ತು ರಫ್ತು ನಿಯಂತ್ರಿಸಲು ಸ್ವಯಂ ನಿಯಂತ್ರಣ ವ್ಯವಸ್ಥೆ ಜಾರಿಗೊಳಿಸುವ ಅಗತ್ಯವನ್ನು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ಇಂದು ಪ್ರತಿಪಾದಿಸಿದರು.

ಕುಣಿಗಲ್ ತಾಲ್ಲೂಕಿನ ಅಂಚೇಪಾಳ್ಯದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, 'ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಸೂಕ್ತ ಸಮಯದಲ್ಲಿ ಕೇಂದ್ರ ಸರ್ಕಾರ ಕಲ್ಪಿಸಬೇಕು. ಈ ಬಗ್ಗೆ ಎಲ್ಲ ಕಾಂಗ್ರೆಸ್ ಸಂಸದರು ಸಂಸತ್ತಿನಲ್ಲಿ ಕೇಂದ್ರದ ಮೇಲೆ ಒತ್ತಡ ತರಬೇಕು' ಎಂದರು.

75 ವರ್ಷಗಳ ಹಿಂದೆ

ಮಂಗಳವಾರ, 6-3-1951

• ಆಮದನ್ನು ಕನಿಷ್ಠ ಮಿತಿಗೆ ಇಳಿಸಬೇಕು

ನವದೆಹಲಿ, ಮಾ. 5– ವಾಣಿಜ್ಯ ಸಚಿವ ಶಾಖೆಯ ಬಗ್ಗೆ ಅಂದಾಜು ಸಮಿತಿಯ ವರದಿಯನ್ನು ಸಮಿತಿಯ ಅಧ್ಯಕ್ಷರೂ, ಪಾರ್ಲಿಮೆಂಟ್ ಉಪಾಧ್ಯಕ್ಷರೂ ಆದ ಅನಂತಶಯನಂ ಅಯ್ಯಂಗಾರ್ಯರು ಪಾರ್ಲಿಮೆಂಟಿನಲ್ಲಿ ಇಂದು ಮಂಡಿಸಿದರು.

ಭೋಗ ತ್ಯಾಜ್ಯತೆ ಹಾಗೂ ಮಿತವ್ಯಯ ಸೂಚನೆಗಳು ಈ ಮೇಲ್ಕಂಡ ವರದಿಯಲ್ಲಿ ಕಂಡುಬಂದ ಮುಖ್ಯ ವೈಶಿಷ್ಟ್ಯಗಳಾಗಿದ್ದವು.

"ಕೈಗಾರಿಕೆಗಳಿಗೆ ಅವಶ್ಯಕವಾದಷ್ಟು ಯಂತ್ರ ಹಾಗೂ ಕಚ್ಚಾ ಸಾಮಗ್ರಿಗಳನ್ನು ಬಿಟ್ಟು ಆಮದು ಮಾಡುವುದನ್ನು ಕನಿಷ್ಠ ಮಿತಿಗೆ ಇಳಿಸಬೇಕು' ಎಂದು ಸಮಿತಿ ಅಭಿಪ್ರಾಯಪಟ್ಟಿತು.

ಯುವಪೀಳಿಗೆಗೆ ಕಿವುಡೇಕೆ?

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಇಂದು ಎಲ್ಲಾ ರಂಗಗಳಲ್ಲೂ ಕಾಣೆಯಾಗಿರುವ ಅಥವಾ ಗೌಣವಾಗಿರುವ ಕ್ರಿಯೆ ಎಂದರೆ 'ಕೇಳುವಿಕೆ'. ಕೇಳುವಿಕೆ ಪದದ ಧ್ವನಿಯಲ್ಲಿ 'ಪ್ರಶ್ನಿಸುವಿಕೆ' ಮತ್ತು 'ಆಲಿಸುವಿಕೆ' ಎಂಬ ಎರಡೂ ಅರ್ಥಗಳು ಅಡಕವಾಗಿವೆ ಹಾಗೂ ಇವೆರಡೂ ಸಮಕಾಲೀನ ಸಂದರ್ಭದಲ್ಲಿ ಸಮಾನ ಅಭಾವಕ್ಕೆ ಈಡಾಗಿವೆ. ಗಮನಾರ್ಹ ಸಂಗತಿಯೆಂದರೆ, ಕಿರಿಯ ಪೀಳಿಗೆಯಲ್ಲಿ ಹಿರಿಯರಿಗೆ ಪ್ರಶ್ನೆ 'ಕೇಳುವ' ಹಾಗೂ ಹಿರಿಯ ಪೀಳಿಗೆಯಲ್ಲಿ ಕಿರಿಯರ ಮಾತು 'ಕೇಳುವ' ಅತೀವ ಬರ ಆವರಿಸಿದೆ.

'ನೀವಿನ್ನೂ ಚಿಕ್ಕವರು, ನಿಮಗೆ ಅರ್ಥವಾಗಲ್ಲ', 'ನಿನ್ನ ವಯಸ್ಸಿಗಿಂತ ನನ್ನ ಅನುಭವ ಹೆಚ್ಚಾಗಿದೆ' ಇತ್ಯಾದಿ ದೊಡ್ಡವರ ಮಾತುಗಳು ಆಗಾಗ ಕೇಳುತ್ತಲೇ ಇರುತ್ತವೆ. ಇದು ಕೇವಲ ಕುಟುಂಬದೊಳಗಿನ ವಿದ್ಯಮಾನವಲ್ಲ; ನಮ್ಮ ರಾಜಕೀಯ, ಶಿಕ್ಷಣ, ಆಡಳಿತ, ಧಾರ್ಮಿಕ ಕ್ಷೇತ್ರಗಳ ವಿವಿಧ ವೇದಿಕೆಗಳಲ್ಲಿ ಪ್ರತಿಧ್ವನಿಸುವ ಹಿರೀಕರ ಸಾಮಾನ್ಯ ನಡವಳಿಕೆ. ಯುವ ಪೀಳಿಗೆಯನ್ನು ಪ್ರೋತ್ಸಾಹಿಸುವ ಉತ್ಸಾಹವು ಭಾಷಣದ ಘೋಷಣೆಗಳಿಗೆ ಸೀಮಿತವಾಗಿರುತ್ತದೆ. ಆದರೆ, ನಿರ್ಧಾರ ಕೈಗೊಳ್ಳುವಾಗ ಅವರನ್ನು ಹೊರಗೇ ಇಡುವುದು ವಾಡಿಕೆ.

ಕೇಳುವುದಕ್ಕಿಂತ ಉಪದೇಶ ಹೇಳುವುದನ್ನು ಹೆಚ್ಚು ಇಷ್ಟಪಡುತ್ತದೆ ಹಳೆಯ ಪೀಳಿಗೆ. ಇದಕ್ಕೆ ಕಾರಣಗಳನ್ನು ಹುಡುಕುತ್ತಾ ಸಾಗಿದರೆ ಬಹುತೇಕವಾಗಿ ತಲೆಮಾರುಗಳ ಅಂತರದ ಜೊತೆಗೆ ಪ್ರಜಾಸತ್ತಾತ್ಮಕ ಮನೋಭಾವದ ಗೈರುಹಾಜರಿ ಗೋಚರಿಸುತ್ತದೆ. ಹೊಸ ತಲೆಮಾರಿನ ಧ್ವನಿಯ ಕೇಳುವಿಕೆಯು ಒಂದು ಶಿಷ್ಟಾಚಾರ, ಸೌಜನ್ಯ ಅಥವಾ ಔದಾರ್ಯದ ವರ್ತನೆ ಅಲ್ಲ; ಅದು ಪ್ರಜಾಸತ್ತಾತ್ಮಕ ಅವಶ್ಯಕತೆ ಎಂಬುದರ ಅರಿವು ಇಲ್ಲವಾಗಿದೆ. ಹಳೆಯ ತಲೆಮಾರಿಗೆ ತನ್ನ ಅನುಭವದ ಗರ್ವ ಇದ್ದೇ ಇರುತ್ತದೆ. ಹಾಗೆಯೇ ಹೊಸ ತಲೆಮಾರಿಗೂ ಬದಲಾವಣೆಯ ತುಡಿತ ಸಹಜ. ಈ ಎರಡೂ ಮನೋಭೂಮಿಕೆಗಳ ತಾಕಲಾಟ ಹೇಗೆ ಹೊಯ್ದಾಡುತ್ತದೆ ಎಂಬುದನ್ನು ತಲೆಮಾರುಗಳ ಸಾಮರಸ್ಯ ಆಧರಿಸಿರುತ್ತದೆ. 'ಕೇಳುವಿಕೆ' ಕುಸಿದಾಗ ಸಹಜೀವಿಗಳ ಜೊತೆಗಿನ ಬೌದ್ಧಿಕ ಮತ್ತು ಭೌತಿಕ ಅರಳುವಿಕೆಯೂ ಹುಸಿಯಾಗುತ್ತದೆ.

ಹಿರಿಯರು ತಮ್ಮ ಅನುಭವವನ್ನು ಆಧಾರವಾಗಿ ತೋರಿಸುತ್ತಾ ಸಕಲ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಮುಂದಾಗುತ್ತಾರೆ. ಅನುಭವ ಅಮೂಲ್ಯ ಎಂಬುದು ಯಾರೂ ನಿರಾಕರಿಸಲಾಗದ ಸಂಗತಿ. ಆದರೆ, ಆ ಅನುಭವ ಪ್ರಚಲಿತ ಸವಾಲುಗಳಿಗೆ ಮುಖಾಮುಖಿಯಾಗಲು ಎಷ್ಟು ಸಮರ್ಥ ಎಂಬುದು ಅಷ್ಟೇ ಮುಖ್ಯವಲ್ಲವೇ? ಬದಲಾಗುತ್ತಿರುವ ಜಗತ್ತಿನ ಪ್ರತಿಯೊಂದು ಪ್ರಶ್ನೆಗೆ ಹಳೆಯ ಅನುಭವದ ಗಂಟಿನೊಳಗೆ ಉತ್ತರ ಹುಡುಕುವ ಕ್ರಿಯೆಯೇ ಅಸಂಗತ ಎನ್ನಿಸುತ್ತದೆ. 1980ರ ದಶಕದ ಅನುಭವ ಬಳಸಿ 2020ರ ದಶಕದ ಆಧುನಿಕ ಆಗುಹೋಗುಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನದಲ್ಲಿನ ಅಪ್ರಾಯೋಗಿಕ ಆಯಾಮವನ್ನು ಗುರ್ತಿಸಬೇಕು.

ಕಳೆದ ಎರಡು ದಶಕಗಳಲ್ಲಿ ಜಗತ್ತು ಯಾರೂ ಊಹಿಸಲಾರದಷ್ಟು ಬದಲಾಗಿದೆ. ಡಿಜಿಟಲ್ ಆರ್ಥಿಕತೆ, ಕೃತಕ ಬುದ್ಧಿಮತ್ತೆ, ಹವಾಮಾನ ವೈಪರೀತ್ಯ, ಉದ್ಯೋಗದ ಅಸ್ಥಿರತೆ, ಸಾಮಾಜಿಕ ಮಾಧ್ಯಮದ ಪ್ರಭಾವ, ಮನುಷ್ಯ ಸಂಬಂಧಗಳ ಹೊಯ್ದಾಟದ ನಡುವೆ ಬದುಕು ಕಟ್ಟಿಕೊಳ್ಳಲು ನವತಲೆಮಾರು ಹೆಣಗುತ್ತಿದೆ. ಈ ವಾಸ್ತವಿಕತೆಯು ಕೇವಲ ಅವರ ಓದು ಕಲಿಸಿದ್ದಲ್ಲ; ಇದುವೇ ಅವರ ಅನುಭವಾಮೃತ. ಒಂದು ಬಗೆಯಲ್ಲಿ ಅವರ ಜೀವನವೇ ಹೊಸ ಜಗದ ಪ್ರಯೋಗಾಲಯ.

ಭಾರತವು ವಿಶ್ವದಲ್ಲೇ ಅತಿದೊಡ್ಡ ಯುವಜನಸಂಖ್ಯೆ ಹೊಂದಿದ ರಾಷ್ಟ್ರವಾಗಿದೆ. 2025ರ ಅಂದಾಜಿನಂತೆ 15ರಿಂದ 29 ವಯಸ್ಸಿನ 371 ದಶಲಕ್ಷಕ್ಕಿಂತಲೂ ಹೆಚ್ಚಿನ ಯುವ ಸಮುದಾಯ ಈ ದೇಶದ ಭಾಗವಾಗಿದೆ. ಇದು ದೇಶದ ಒಟ್ಟು ಜನಸಂಖ್ಯೆಯ ಸರಿಸುಮಾರು ಶೇ 27ರಷ್ಟಾಗುತ್ತದೆ.

> ಯುವಜನರ ಸಹಭಾಗಿತ್ವ ಇಲ್ಲದೆ ಯಾವ ಕ್ಷೇತ್ರವೂ ಹೊಸತನ ಮೈಗೂಡಿಸಿಕೊಳ್ಳುವುದು ಕಷ್ಟ. ರಾಜಕಾರಣ, ಸಾಂಸ್ಕೃತಿಕ ಕ್ಷೇತ್ರದ ಈ ಹೊತ್ತಿನ ಬಹುತೇಕ ಬಿಕ್ಕಟ್ಟುಗಳಿಗೆ, ಆ ಕ್ಷೇತ್ರಗಳು ಯುವಶಕ್ತಿಗೆ ಬೆನ್ನುಹಾಕಿರುವುದೇ ಕಾರಣ. ಹಿರಿಯರ ಅನುಭವದೊಂದಿಗೆ ಯುವಜನರ ಶಕ್ತಿಯೂ ಸೇರಿಕೊಳ್ಳುವುದು ಸಮಾಜದ ಆರೋಗ್ಯಕ್ಕೆ ಅಪೇಕ್ಷಣೀಯ.

ಸಮೀಕ್ಷೆಯೊಂದರ ಪ್ರಕಾರ, ಸುಮಾರು ಶೇ 64ರಷ್ಟು ಯುವಸಮುದಾಯ ಗ್ರಾಮೀಣ ಭಾರತದಲ್ಲಿ ವಾಸಿಸುತ್ತಿದ್ದರೆ, ಶೇ 36ರಷ್ಟು ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಬಿ.ಆರ್. ಅಂಬೇಡ್ಕರ್ ಅವರು ಹೇಳಿದಂತೆ, Every New Generation is a New Nation. ಅಂತಹ 'ಹೊಸ ದೇಶ'ದ ಒಳಗೊಳ್ಳುವಿಕೆಗೆ ವಿಶೇಷ ಮಹತ್ವ ಮತ್ತು ಶಕ್ತಿ ಇದೆ ಎಂಬುದನ್ನು ಗಂಭೀರವಾಗಿ ಪರಿಗಣಿಸುವುದು ಅತ್ಯಗತ್ಯ.

ಈ ಸಮೂಹದ ಕ್ರಿಯಾಶೀಲ ಸಹಭಾಗಿತ್ವ, ತೊಡಗುವಿಕೆ, ಪ್ರಾತಿನಿಧ್ಯ ಇಲ್ಲದ ಯಾವುದೇ ಚಟುವಟಿಕೆ ಅಪೂರ್ಣ ಎನ್ನುವುದನ್ನು ನಿರ್ಲಕ್ಷಿಸಲಾಗದು. ಪ್ರತಿಯೊಂದು ಸಾರ್ವಜನಿಕ ಕಾರ್ಯಕ್ರಮ, ಆಂದೋಲನ, ಸಂಘಟನೆ, ವೇದಿಕೆ, ನೀತಿನಿರೂಪಣೆ ಮತ್ತು ಚುನಾವಣಾ ರಾಜಕಾರಣದಲ್ಲಿ ಈ ಸಮುದಾಯಕ್ಕೆ ಯೋಗ್ಯ ಪ್ರಾತಿನಿಧ್ಯ ಕಲ್ಪಿಸಿದರೆ ಹೊಸ ಗಾಳಿ ಬೀಸಲು ಸಾಧ್ಯ. ಇದಕ್ಕೆ ವ್ಯತಿರಿಕ್ತವಾಗಿ ಹಿರಿಯ ಪೀಳಿಗೆಯ ಜನ ಬಹುಪಾಲು ಸ್ಥಾನಮಾನಗಳನ್ನು ಬಿಟ್ಟುಕೊಡಲು ಮಾನಸಿಕವಾಗಿ ಸಿದ್ಧವಾಗಿಲ್ಲ. ಇಲ್ಲಿನ ಸಮಸ್ಯೆಯ ಮೂಲ ವಯಸ್ಸಿಗೆ ಸಂಬಂಧಿಸಿದ್ದಲ್ಲ; ಧೋರಣಾತ್ಮಕತೆಯ ತಾಕಲಾಟ!

ಭವಿಷ್ಯವನ್ನು ಹೆಚ್ಚು ಕಾಲ ಬದುಕಬೇಕಾದವರು ಯುವಕ-ಯುವತಿಯರು, ಆದರೆ ಆ ಭವಿಷ್ಯದ ರೂಪುರೇಷೆಯನ್ನು ನಿರ್ಧರಿಸುವ ಹಕ್ಕು ಅವರಿಗೆ ಇಲ್ಲದಂತಾಗಿರುವುದು ನ್ಯಾಯಯುತ ಕ್ರಮ ಅನ್ನಿಸಿಕೊಳ್ಳಲಾರದು. ಈಗಾಗಲೇ ನಾನಾ ಕಾರಣಗಳಿಂದ ಭಾವನಾತ್ಮಕ, ಅವೈಚಾರಿಕ ಸುಳಿಯಲ್ಲಿ ಸಿಲುಕಿರುವ ಬಹುಪಾಲು ಯುವಜನಾಂಗ ವರ್ತಮಾನದ ಹೊಣೆಗಾರಿಕೆಹೊತ್ತುಕೊಳ್ಳುವಸವಾಲನ್ನುಸ್ವೀಕರಿಸಬೇಕಾದ ಜರೂರತ್ತು ಕೂಡ ಇದೆ. ಅದಕ್ಕೆ ಅಪಾರ ಮಾನಸಿಕ ಸಿದ್ಧತೆ, ಬದ್ಧತೆ ಬೇಕಾಗುತ್ತದೆ. ಅವರ ಇಂಥ ಸಾಮರ್ಥ್ಯದ ಬಗ್ಗೆ ಯಾರಿಗೂ ಸಂದೇಹ ಇರಲಾರದು. ಆದರೆ, ಪರಿಹಾರವಿರುವುದು ಹಿರಿಯರ ದೃಷ್ಟಿಕೋನದ ಬದಲಾವಣೆ ಯಲ್ಲಿ. ಹಿರೀಕರ ಮನೋಗತ ಅಧಿಕಾರದಿಂದ ಸಂವಾದಕ್ಕೆ, ಉಪದೇಶದಿಂದ ಸಹಭಾಗಿತ್ವಕ್ಕೆ, ನಿಯಂತ್ರಣದಿಂದ ಮಾರ್ಗದರ್ಶನಕ್ಕೆ, ಅನುಮಾನದಿಂದ ನಂಬಿಕೆಗೆ ಹೊರಳಿದಾಗ ಇದು ಸಾಧ್ಯವಾಗಬಹುದು.

ವಿವಿಧ ಕ್ಷೇತ್ರಗಳಲ್ಲಿ ಯುವಜನರ ಭಾಗವಹಿಸುವಿಕೆ ಬರೀ ನಾಮಮಾತ್ರ ಆಗಿದ್ದರೆ ಪ್ರಯೋಜನವಿಲ್ಲ. ವಿವಿಧ ಹಿನ್ನೆಲೆಯ ಪ್ರಾತಿನಿಧಿಕತೆ ನೆಲೆಗಟ್ಟಿನ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಯಶಸ್ಸಿಗೆ ತಲೆಮಾರುಗಳ ಪ್ರತಿನಿಧಿತ್ವವೂ ಅಷ್ಟೇ ಮುಖ್ಯ. ಅಂತೆಯೇ ರಾಜಕೀಯ ಪಕ್ಷಗಳು ಯುವ ನಾಯಕತ್ವಕ್ಕೆ ಅವಕಾಶ ನೀಡಬೇಕು, ವಿಶ್ವವಿದ್ಯಾಲಯಗಳ ಅಕಡೆಮಿಕ್ ಮತ್ತು ಆಡಳಿತಾತ್ಮಕ ನಿರ್ಧಾರಗಳಲ್ಲಿ ಪಾಲ್ಗೊಳ್ಳುವ ಅವಕಾಶ ವಿದ್ಯಾರ್ಥಿಗಳಿಗೆ ಇರಬೇಕು, ಮಾಧ್ಯಮಗಳು ಯುವ ನೀತಿಚಿಂತಕರಿಗೂ ವೇದಿಕೆ ಕಲ್ಪಿಸಬೇಕು, ಕುಟುಂಬಗಳಲ್ಲಿ ಕಿರಿಯರನ್ನು ಅವಲಂಬಿತ ಶಾಖೆಗಳೆಂದು ಭಾವಿಸದೆ ಚಿಂತನಶೀಲ ಘಟಕಗಳೆಂದು ಗುರುತಿಸಬೇಕು.

ಯುವ ಪ್ರಾತಿನಿಧ್ಯದ ಕೊರತೆಯಿಂದ ನಲುಗುತ್ತಿರುವ ಹಲವಾರು ವಲಯಗಳಲ್ಲಿ ಸಾಹಿತ್ಯ ಮತ್ತು ರಾಜಕೀಯ ರಂಗಗಳು ವಿಶೇಷವಾಗಿ ಗಮನ ಸೆಳೆಯುತ್ತಿವೆ. ಈ ಎರಡೂ ಕ್ಷೇತ್ರಗಳಲ್ಲಿ ಯುವ ಸಮುದಾಯಕ್ಕೆ ಆದ್ಯತೆ ದಕ್ಕಬೇಕೆಂಬ ವಿಷಯ ಬಹಳಷ್ಟು ವೇದಿಕೆಗಳಲ್ಲಿ ಪ್ರಸ್ತಾಪವಾಗುತ್ತದೆ. ಇಂಥ ನಡೆಯ ಅಗತ್ಯವನ್ನು ಬಲವಾಗಿ ಪ್ರತಿಪಾದಿಸುವ ವೇದಿಕೆಯಲ್ಲಿಯೇ ಅದರ ಪಾಲನೆಯಾಗದಿರುವ ವಿರೋಧಾಭಾಸವನ್ನೂ ಕಾಣಬಹುದಾಗಿದೆ.

ಬದಲಾವಣೆಯ ಮೂಲಾಶಯ ಹೊತ್ತ ಪ್ರಗತಿಪರ ಸಂಘಟನೆಗಳಲ್ಲಿ, ಕಾರ್ಯಕ್ರಮಗಳಲ್ಲಿ ಕೂಡ ನಿರೀಕ್ಷಿತ ಸಂಖ್ಯೆಯಲ್ಲಿ ಯುವ ತಲೆಮಾರಿಗೆ ಪ್ರಾತಿನಿಧ್ಯ ಸಿಗುವುದು ಅಪರೂಪ. ಇನ್ನು, ಸಾಹಿತ್ಯ ಪರಿಷತ್ತು, ಅಕಾಡೆಮಿಗಳು ಇತ್ಯಾದಿ ಸಾಂಪ್ರದಾಯಿಕ ಸಂಘ– ಸಂಸ್ಥೆಗಳಲ್ಲಿ ಹೊಸ ಮುಖಗಳಿಗೆ ಅವಕಾಶ ದೊರೆಯುವುದಂತೂ ಅಸಾಧ್ಯದ ಮಾತು. ರಾಜಕೀಯ ವ್ಯಾಕರಣದ ಪ್ರಕಾರ ಹೊಸ ಪೀಳಿಗೆಗೆ ಪ್ರಾತಿನಿಧ್ಯ ಅಂದರೆ ಅವರವರ ಮನೆತನದ ಕುಡಿಗಳ ಬೆಳವಣಿಗೆ ಎಂದೇ ಭಾವಿಸಲಾಗಿದೆ. ಅಲ್ಲಿ ಹೊಸ ಪೀಳಿಗೆಯ ಕಾರ್ಯಕರ್ತರ ದನಿ ಜೈಕಾರ ಕೂಗುಗಳ ಆಚೆಗೆ ಚಲಿಸುವುದು ವಿರಳ.

ವೇದಿಕೆಗೆಂದೇ 'ಹೇಳಿ ಮಾಡಿಸಿದಂತಹ' ಅನೇಕ ವ್ಯಕ್ತಿಗಳು ಬಹುಪಾಲು ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿರಾಜಮಾನರಾದ ದೃಶ್ಯಗಳನ್ನು ಎಲ್ಲೆಡೆ ನೋಡುತ್ತೇವೆ. ಹೀಗೆ ವಿಜೃಂಭಿಸುವ ಇಂಥ ಬಹಳಷ್ಟು ಮುಖಗಳನ್ನು ಯಾವುದೇ ಕಾರ್ಯಕ್ರಮದ ಸಭಿಕರ ಸಾಲಿನಲ್ಲಿ ನೋಡಲು ಸಾಧ್ಯವಾಗುವುದಿಲ್ಲ. ಅವರೆಲ್ಲಾ ಹೇಳುಗರೇ ಹೊರತು ಕೇಳುಗರಲ್ಲ; ತಾವು ವೇದಿಕೆಯ 'ಮೇಲಿನವರು' ಎಂಬ ಮೇಲರಿಮೆ ಹೊತ್ತವರು, 'ವೇದಿಕೆ ಸಂಸ್ಕೃತಿ'ಗೆ ಸೇರಿದ ಡಿಫಾಲ್ಟ್ ಅತಿಥಿಗಳು. ಯುವ ಬರಹಗಾರರ ಪುಸ್ತಕ ಬಿಡುಗಡೆ ಕಾರ್ಯಕ್ರಮಗಳಲ್ಲಿ ಹಿರಿಯರು ತಾವಾಗಿಯೇ ಭಾಗವಹಿಸುವುದು ವಿರಳ. ಹಿರಿಯರು ಯಾವುದೇ ಬಿಗುಮಾನ ಇಲ್ಲದೇ ಸಭಿಕರಾಗಿ ವೇದಿಕೆಯ ಮಾತುಗಳನ್ನು ಕೇಳುವ ದೃಶ್ಯವೇ ಒಂದು ಸಂದೇಶದಂತೆ ಇರಲು ಸಾಧ್ಯವಿದೆ. ಹೇಳುವವರು ಮತ್ತು ಕೇಳುವವರ ಪಾತ್ರಬದಲಾವಣೆಆದಾಗಚಿಂತನೆಮತ್ತುನೋಟಕ್ರಮದಲ್ಲಿ ನಾವೀನ್ಯ ಕಾಣಿಸಲು ಅನುವಾಗುತ್ತದೆ.

ಯುವದನಿಯನ್ನು ಕೇಳಿಸಿಕೊಳ್ಳದ ಸಮಾಜವು ನವೀನತೆ, ನೈತಿಕ ಮಾನ್ಯತೆ, ನಿರಂತರತೆ ಕಳೆದುಕೊಳ್ಳುವುದರಲ್ಲಿ ಅನುಮಾನವೇ ಇಲ್ಲ. ಕೇಳುವಿಕೆಯನ್ನು ಒಂದು ಸಂಸ್ಕಾರ, ಸಂಪ್ರದಾಯ, ಅನುಕರಣೀಯ ಆದರ್ಶ ಆಗಿ ಬೆಳೆಸುವ ಅಗತ್ಯದ ಬಗ್ಗೆ ಈ ವಲಯದಲ್ಲಿ ಚರ್ಚಿಸಲು ವಿವೇಕಿಗಳು ಕನಿಷ್ಠ ಒಂದು ಬೊಗಸೆ ನಿಷ್ಠುರತೆ ಮತ್ತು ಒಂದು ಹಿಡಿ ಗಂಭೀರತೆ ಪ್ರಕಟಿಸಬೇಕಾಗುತ್ತದೆ. ಆಗಲೇ ಯುವ ತಲೆಮಾರಿನ ಬಾಯಿಯಲ್ಲಿ ಪ್ರಶ್ನೆಗಳ 'ಕೇಳುವಿಕೆ' ಹಾಗೂ ಹಳೇ ತಲೆಮಾರಿನ ಕಿವಿಯಲ್ಲಿ ಹೊಸತನದ 'ಕೇಳುವಿಕೆ' ಸಾಧ್ಯವಾಗಬಹುದು.

ವಾಚಕರ ವಾಣಿ

ಭ್ರಷ್ಟಾಚಾರ ಎನ್ನುವ ದ್ವಿಮುಖ ವ್ಯವಹಾರ

ಸರ್ಕಾರದ ಬಹುತೇಕ ಕಚೇರಿಗಳಲ್ಲಿ ಲಂಚ ನೀಡದೆ ಯಾವುದೇ ಕೆಲಸ ಆಗುವುದಿಲ್ಲ. ಸರ್ಕಾರಿ ನೌಕರರಿಗೆ ಕೈತುಂಬ ಸಂಬಳ, ಭತ್ಯೆ ಸಿಗುತ್ತಿದ್ದರೂ ಲಂಚ ಪಡೆಯುವ ಮನಃಸ್ಥಿತಿ ಬದಲಾಗಿಲ್ಲ. ಜನಸಾಮಾನ್ಯರು ತ್ವರಿತವಾಗಿ ಕೆಲಸವಾದರೆ ಸಾಕೆನ್ನುವ ಸ್ಥಿತಿಯಲ್ಲಿರುತ್ತಾರೆ. ಈ ದಯನೀಯ ಸ್ಥಿತಿಯೇ ಅಧಿಕಾರಿಗಳಿಗೆ ಬಂಡವಾಳ. ಲಂಚ ಪಡೆಯುವುದು ಹಾಗೂ ಸ್ವೀಕರಿಸುವುದು ಎರಡೂ ಅಪರಾಧ. ಮತ್ತೊಂದೆಡೆ ಕಲ್ಲಿದ್ದಲು, ಕಬ್ಬಿಣದ ಅದಿರು ಗಣಿಗಾರಿಕೆಯಂತಹ ಗುತ್ತಿಗೆ ಪಡೆಯುವ ಖಾಸಗಿಯವರು ಮನಃಪೂರ್ವಕವಾಗಿಯೇ ಅಧಿಕಾರಿಗಳಿಗೆ ಲಂಚ ನೀಡುತ್ತಾರೆ. ಹಾಗಾಗಿ, ಭ್ರಷ್ಟಾಚಾರ ಎನ್ನುವುದು ದ್ವಿಮುಖ ವ್ಯವಹಾರ. ರಾಜ್ಯದಲ್ಲಿ ಆದಾಯಕ್ಕೂ ಮೀರಿ ಸಂಪತ್ತು ಹೊಂದಿದ ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸುತ್ತಾರೆ. ಆದರೆ, ಶಿಕ್ಷೆಗೆ ಗುರಿಯಾಗುವವರ ಪ್ರಮಾಣ ಕಡಿಮೆ.

ಪಿ.ಸಿ. ಕಂಗಾಣಿಸೋಮು, ಮೈಸೂರು

ಅಂಬೇಡ್ಕರ್ ಆದರ್ಶ ಚಿಣ್ಣರಿಗೆ ತಲಪಲಿ

ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಏ. 14ರಂದು ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಗುತ್ತದೆ. ಆದರೆ, ಶಾಲೆಗಳಲ್ಲಿ ಏ. 10ರಂದು ಪರೀಕ್ಷಾ ಫಲಿತಾಂಶ ಪ್ರಕಟಿಸಿ ಮಕ್ಕಳಿಗೆ ರಜೆ ನೀಡಲಾಗುತ್ತದೆ. ಹಾಗಾಗಿ, ಶಾಲೆಯಲ್ಲಿ ಹಮ್ಮಿಕೊಳ್ಳುವ ಅಂಬೇಡ್ಕರ್ ಜಯಂತಿಗೆ ಮಕ್ಕಳು ಹಾಜರಾಗುವುದು ವಿರಳ. ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರಷ್ಟೇ ಪಾಲ್ಗೊಂಡು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಕಾರ್ಯಕ್ರಮವನ್ನು ಮುಗಿಸುತ್ತಾರೆ. ದೇಶದ ಎಲ್ಲಾ ವರ್ಗದ ಜನರಿಗೆ ಸಂವಿಧಾನದ ಮೂಲಕ ಸಮಾನತೆ ಕಲ್ಪಿಸಿರುವುದು ಅಂಬೇಡ್ಕರ್ ಅವರ ಹೆಗ್ಗಳಿಕೆ. ಅವರ ಆದರ್ಶಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಬೇಕಿದೆ. ಹಾಗಾಗಿ, ಅಂಬೇಡ್ಕರ್ ಜಯಂತಿಯಂದೇ ಫಲಿತಾಂಶ ಪ್ರಕಟಿಸಿದರೆ ಜಯಂತಿಯಲ್ಲಿ ಮಕ್ಕಳು ಪಾಲ್ಗೊಳ್ಳುತ್ತಾರೆ. ಶಿಕ್ಷಣ ಇಲಾಖೆಯು ಈ ಬಗ್ಗೆ ಸುತ್ತೋಲೆ ಹೊರಡಿಸಬೇಕಿದೆ.

ಹರೀಶ್ ಬಾಸಾಪುರ, ಚಿಕ್ಕಮಗಳೂರು

ಜೆಡಿಎಸ್‌ನಲ್ಲಿ ಕಿತ್ತಾಟ ಇರಲಿಲ್ಲವೇ

'**ಕಥೆ** ಅದೇ, ನಟರಷ್ಟೇ ಬೇರೆ' ಲೇಖನದಲ್ಲಿ (ಲೇ: ವೈ.ಎಸ್.ವಿ. ದತ್ತ, ಪ್ರ.ವಾ., ಮಾ. 2) ಪ್ರಸ್ತಾಪಿಸಿರುವ ರಾಜಕೀಯ ವಿಚಾರಧಾರೆ ಚೆನ್ನಾಗಿದೆ. ಆದರೆ, ಜೆಡಿಎಸ್‌ನಲ್ಲಿಯೂ ಅದೇ ಕತೆ ಇರಲಿಲ್ಲವೆ? ಮೊದಲ ಬಾರಿಗೆ ರಾಮಕೃಷ್ಣ ಹೆಗಡೆ ಮತ್ತು ಎಚ್.ಡಿ. ದೇವೇಗೌಡರ ನಡುವೆ ಗುದ್ದಾಟ, ಬಟ್ಟೆ ಹರಿದು ಕಿತ್ತಾಟ, ನಂತರ ಎಸ್.ಆರ್. ಬೊಮ್ಮಾಯಿ ಅವರಿಗೆ ಪಟ್ಟ ದೊರೆತಿದ್ದನ್ನು ಲೇಖಕರು ಮರೆತಂತಿದೆ. ಎಲ್ಲಾ ಪಕ್ಷದಲ್ಲೂ ಡೊಂಕುಬಾಲದ ನಾಯಕರಿದ್ದಾಗ ಈ ಆಟ– ಮೇಲಾಟ ಸಹಜ. ಈ ವಿಚಾರಕ್ಕಿಂತ ಯೋಜನೆಗಳ ಅನುಷ್ಠಾನದ ಬಗ್ಗೆ ಮಾತನಾಡುವುದಿಲ್ಲವೇಕೆ?

ಮೋಟಮ್ಮ, ಚಿಕ್ಕಮಗಳೂರು

ನಟಿಯರ ಗೌರವ–ಘನತೆಗೆ ಚ್ಯುತಿ ತರಬೇಡಿ

ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ನಟಿಯರು ಕಾಣಿಸಿಕೊಳ್ಳುವುದು ಸಹಜ. ಅಂತಹ ಸಂದರ್ಭದಲ್ಲಿ ಒತ್ತಡದಿಂದಲೋ ಅಥವಾ ಆಕಸ್ಮಿಕವಾಗಿಯೋ ಮುಜುಗರದ ಸನ್ನಿವೇಶಗಳು ಜರುಗುತ್ತವೆ. ಅಂತಹ ಸೂಕ್ಷ್ಮ ದೃಶ್ಯಗಳನ್ನು ಕೆಲವರು ಬಂಡವಾಳ ಮಾಡಿಕೊಳ್ಳುತ್ತಾರೆ. ಮುಜುಗರದ ಫೋಟೊಗಳು, ವಿಡಿಯೊ ತುಣುಕುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಾರೆ. ವಿಕೃತ ಮನಃಸ್ಥಿತಿಯವರು ಅವುಗಳನ್ನು ವೈಭವೀಕರಿಸಿ ವೀವ್ಸ್ ಹೆಚ್ಚಳಕ್ಕೆ ಬಳಸಿಕೊಳ್ಳುತ್ತಾರೆ. ಮಾನವೀಯ ಮೌಲ್ಯಗಳನ್ನು ಬದಿಗೊತ್ತಿ ಇಂತಹ ದೃಶ್ಯಗಳಿಂದ ಲಾಭ ಪಡೆಯಲು ಯತ್ನಿಸುವುದು ಅಕ್ಷಮ್ಯ. ವಿಕೃತ ಮನಃಸ್ಥಿತಿಯವರಿಗೆ ಮೂಗುದಾರ ಹಾಕಬೇಕಿದೆ. ಜೊತೆಗೆ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ನಟಿಯರು ಎಚ್ಚರದಿಂದ ಇರಬೇಕಿದೆ.

ರವಿಕುಮಾರ ಜಾಧವ, ಹಂಪಿ

ಯುದ್ಧಕಾಲದಲ್ಲಿ ಭಾರತದ ಸಿದ್ಧತೆ–ಬದ್ಧತೆ

ತನ್ನ ಲಾಭಕ್ಕಾಗಿ ಅಮೆರಿಕವು ಅನ್ಯದೇಶಗಳ ಮಧ್ಯೆ ಸಂಘರ್ಷ ಹುಟ್ಟುಹಾಕುವುದು, ತನ್ನ ಮಾತು ಕೇಳದ ದೇಶಗಳ ಮೇಲೆ ದಾಳಿ ನಡೆಸುವುದು, ತನ್ನ ಭದ್ರತೆಯ ಕಾರಣವೊಡ್ಡಿ ಇಸ್ರೇಲ್ ನೆರೆಹೊರೆಯ ರಾಷ್ಟ್ರಗಳ ಮೇಲೆ ದಾಳಿ ಮಾಡುವುದು ಹೊಸತೇನಲ್ಲ. ಪ್ರಸ್ತುತ ಘೋರ ಯುದ್ಧವಾಗಿ ಪರಿಣಮಿಸಿರುವ ಈ ನಡೆಯು ಈಗ ಭಾರತದ ಕಾಲಬುಡಕ್ಕೆ, ಅಂದರೆ ಹಿಂದೂ ಮಹಾಸಾಗರದವರೆಗೂ ವಿಸ್ತರಿಸಿದೆ. ಭಾರತವೀಗ ತನ್ನ ಭೌತಿಕ, ಆರ್ಥಿಕ ಭದ್ರತೆಗಾಗಿ ಗಟ್ಟಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಆಳುವ ಪಕ್ಷವು ತಜ್ಞರೊಡನೆ ಸಮಾಲೋಚಿಸಿ ಮುಂದುವರಿಯಬೇಕು. ವಿಪಕ್ಷಗಳ ಮೇಲಿನ ಪ್ರಹಾರ ನಿಲ್ಲಿಸಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ವಿಪಕ್ಷಗಳು ಕೂಡ ಟೀಕೆ ಬಿಟ್ಟು ಸಹಕರಿಸಬೇಕು.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಯಜಮಾನಿಕೆ ಅಂತ್ಯ: ಸಹಬಾಳ್ವೆಗೆ ದಾರಿ

'**ಸ್ತ್ರೀವಾದ:** ಪುರುಷರಿಗೂ ಸಂಗಾತಿ!' ಲೇಖನವು (ಸವಿತಾ ಬನ್ನಾಡಿ, ಪ್ರ.ವಾ., ಮಾ. 5) 'ಯಜಮಾನಿಕೆ' ಎಂಬ ಕೃತಕ ಮುಖವಾಡವನ್ನು ಕಳಚಿ, ಮನುಷ್ಯತ್ವದ ಸಹಜ ಮುಖವನ್ನು ಅನಾವರಣಗೊಳಿಸಿದೆ. ನಿಜವಾದ ಸ್ತ್ರೀವಾದವು ಲಿಂಗಾಧಾರಿತ ಸಂಘರ್ಷವಲ್ಲ; ಅದು ಎಪ್‌ಸ್ಟೈನ್ ಪ್ರಕರಣದಂತಹ ಜಾಗತಿಕ ವಿಕೃತಿಗಳಿಂದ ಹಿಡಿದು ಮನೆಯೊಳಗಿನ ಅಡುಗೆಮನೆಯ ಅಸಮಾನತೆಯವರೆಗೆ ಎಲ್ಲವೂ 'ತಾನು ಮೇಲು, ಇನ್ನೊಬ್ಬರು ಅಧೀನ'ವೆಂಬ ದೋಷಪೂರಿತ ಚಿಂತನೆಯ ಫಲಿತಾಂಶವಾಗಿದೆ. ನಮ್ಮ ಬದುಕಿನ ಧ್ಯೇಯವಾಕ್ಯವು 'ನಾನು ಬರೀ ಒಬ್ಬ ವ್ಯಕ್ತಿಯಲ್ಲ; ನಾನು ಕುಟುಂಬದ ಕೊಂಡಿ, ಸಮಾಜದ ಭಾಗ, ದೇಶದ ಪ್ರಜೆ ಮತ್ತು ಈ ವಿಶಾಲ ವಿಶ್ವದ ಅತಿಥಿ' ಎಂಬುದಾಗಬೇಕು. ಯಜಮಾನಿಕೆ ಸ್ಥಾಪಿಸುವ ಹಸಿವಿಗಿಂತ, ಸಹಬಾಳ್ವೆಯ ಹಸಿವೇ ಇಂದಿನ ಜಗತ್ತನ್ನು ಯುದ್ಧ ಎಂಬ ವಿನಾಶದಿಂದ ಪಾರು ಮಾಡಬಲ್ಲ ಏಕೈಕ ಸಂಜೀವಿನಿ.

ಪ್ರವೀಣ್ ನಾಗಪ್ಪ ಯಲವಿಗಿ, ಮುಂಡಗೋಡ

ಚುರುಮುರಿ

ಯುದ್ಧ ಭವಿಷ್ಯ!

• ಬಿ.ಎನ್. ಮಲ್ಲೇಶ್

'**ನಾಳೆಯಿಂದ** ಚಾ, ತಿಂಡಿ ರೇಟು ಜಾಸ್ತಿ' ಎಂದಳು ಮಂಜಮ್ಮ.

'ಯಾಕೋ...?' ತೆಪರೇಸಿ ಆಕ್ಷೇಪಿಸಿದ.

'ಯುದ್ಧ ನಡೀತಿಲ್ವಾ? ಪೆಟ್ರೋಲು, ಗ್ಯಾಸು ಎಲ್ಲ ದುಬಾರಿ ಆಗುತ್ತೆ...'

'ಇದೊಳ್ಳೆ ಕತಿಯಾತಪ, ಅಲ್ಲೆಲ್ಲೋ ಮಳಿಯಾದ್ರೆ ನಾವು ಇಲ್ಲಿ ಪಂಚೆ ಎತ್ತಿ ಕಟ್ಕಾಬೇಕಾ? ನಾವು ಒಪ್ಪಲ್ಲ, ಪ್ರತಿಭಟನೆ ಮಾಡ್ತೀವಿ' ಎಂದ ದುಬ್ಬೀರ.

'ಈ ಪ್ರತಿಭಟನೇಲಿ ನಾನಿಲ್ಲ, ನಾನು ಸೆಂಟ್ರಲ್ ಗೌರ್ಮೆಂಟ್ ತರ, ತಟಸ್ಥ...' ಎಂದ ಗುಡ್ಡೆ.

'ಉದ್ರಿ ಗಿರಾಕಿ ನೀನು, ಎಷ್ಟ್ ರೇಟಾದ್ರೆ ನಿಂಗೇನು...' ದುಬ್ಬೀರ ನಕ್ಕ.

'ಅದಿರ್ಲಿ, ಎರಡು ದಿನ ಎಲ್ಲಿ ನಾಪತ್ತೆ ಆಗಿದ್ಯೋ ಗುಡ್ಡೆ?' ಮಂಜಮ್ಮ ಕೇಳಿದಳು.

'ಗ್ರಹಣ ಅಲ್ವ ಮಂಜಮ್ಮ, ಪ್ರಳಯ ಆಗುತ್ತೆ ಅಂದಿದ್ರು ನಮ್ ಬ್ರಹ್ಮಾಂಡ ಗುರುಗಳು...'

'ಮತ್ತೆಲ್ಲಿ ಪ್ರಳಯ ಆಗ್ಲೇ ಇಲ್ಲ?'

'ಆಗುತ್ತೆ ನೋಡ್ತಿರು, ಜಗತ್ತಲ್ಲಿ ಒಂದು ದೊಡ್ಡ ಹತ್ಯೆ ಆಗುತ್ತೆ ಅಂತ ನಮ್ ಗುರುಗಳು ಹೇಳಿದ್ದು ನಿಜ ಆಗಿಲ್ವಾ?'

'ಅಬಾಬಬ... ನಿಮ್ ಗುರುಗಳಿಗೆ ಮುಂದಾಗೋದೆಲ್ಲ ಗೊತ್ತಾಗುತ್ತಾ?'

'ನಮ್ ಗುರುಗಳು ತ್ರಿಕಾಲ ಜ್ಞಾನಿಗಳು, ಯುದ್ಧ ಆಗೋದನ್ನೂ ಮುಂಚೇನೆ ಹೇಳಿದ್ರು...'

'ಹೌದಾ? ಅಲ್ಲಿ ಅಮೆರಿಕ, ಇರಾನ್ ಯುದ್ಧ ಹಂಗಿರ್ಲಿ, ಇಲ್ಲಿ ನಮ್ ಡಿಕೆಶಿ, ಸಿದ್ರಾಮಣ್ಣ ನಡುವಿನ ಹಾಲು ಜೇನಿನ ಅಂತರ್ ಯುದ್ಧ ಏನಾಗಬಹುದು?'

'ಅದೂ...' ಗುಡ್ಡೆ ತಲೆ ಕೆರೆದುಕೊಂಡ.

'ಹೋಗ್ಲಿ, ಸಿದ್ರಾಮಣ್ಣ ಕುರ್ಚಿ ಬಿಟ್ ಕೊಡ್ತಾರೋ ಅಥ್ವ ಸ್ಟ್ರೀಟ್ ಫೈಟ್ ಆಗುತ್ತೋ?'

'ಅದು ಹೈಕಮಾಂಡ್‌ಗೆ ಬಿಟ್ಟದ್ದು...'

'ಓಕೆ, ಹೈಕಮಾಂಡ್ ತಲೇಲಿ ಏನಿದೆ ಅಂತ ನಿಮ್ ಗುರೂಜಿ ಹೇಳ್ತಾರಾ?' ಮಂಜಮ್ಮ ಪಟ್ಟು ಬಿಡಲಿಲ್ಲ.

'ಹೇಳ್ತಾರೆ, ಆದ್ರೆ...'

'ಆದ್ರೆ ಏನು?'

'ಹೈಕಮಾಂಡ್ ಅಂದ್ರೆ ಯಾರು? ರಾಗಾನೋ ಸೋಗಾನೋ ಪ್ರಿಗಾನೋ... ಯಾರು?' ಗುಡ್ಡೆ ತಲೆ ಓಡಿಸಿದ.

ಗುಡ್ಡೆಯ ಮಿಲಿಯನ್ ಡಾಲರ್ ಪ್ರಶ್ನೆಗೆ ಎಲ್ಲರೂ ಗಡ್ಡ ಕೆರೆದುಕೊಂಡರು.

ಸಂಗತ

ಕಾನೂನು ಕಣ್ತೆರೆದರೆ ಮಹಿಳಾಹಕ್ಕುಗಳಿಗೆ ಬಲ

ಶೋಷಿತ ಹೆಣ್ಣುಮಕ್ಕಳಿಗೆ ಶಕ್ತಿ ತುಂಬಲು, ಅವರ ಜೀವನ ಬದಲಾಯಿಸಲು ನ್ಯಾಯದ ನೆರವು ಅಗತ್ಯ. ಆ ದಿಸೆಯಲ್ಲಿ ಸಮಾಜ ಮತ್ತು ವ್ಯವಸ್ಥೆ ಚಿಂತಿಸಬೇಕಿದೆ.

• ಆಶಾ ಬಗ್ಗನಡು

ಮಹಿಳಾಹಕ್ಕುಗಳನ್ನು ರಕ್ಷಿಸುವ ಕಾನೂನುಗಳನ್ನು ಜಾರಿಗೆ ತರುವಲ್ಲಿ ದೇಶ ಗಮನಾರ್ಹ ಪ್ರಗತಿ ಸಾಧಿಸಿದ್ದರೂ, ಆ ಪ್ರಗತಿಯ ಬೆನ್ನುಮೂಳೆ ದುರ್ಬಲವಾಗಿದೆ ಹಾಗೂ ಅಸಮಾನತೆ ಯಿಂದ ಕೂಡಿದೆ. ಭಾರತೀಯ ಹೆಣ್ಣುಮಕ್ಕಳು ಅವರ ಹಕ್ಕುಗಳನ್ನು ನಿರಾಕರಿಸುವ, ಆಯ್ಕೆಗಳನ್ನು ನಿರ್ಬಂಧಿಸುವ ಮತ್ತು ಭವಿಷ್ಯವನ್ನು ಸೀಮಿತಗೊಳಿಸುವ ಸವಾಲುಗಳನ್ನು ಎದುರಿಸು ತ್ತಿದ್ದಾರೆ. ಮಹಿಳೆಯರ ಹಕ್ಕುಗಳು ಹಾಳೆಗಳಲ್ಲಿಯೇ ಭದ್ರ ವಾಗಿವೆ. ಆ ಹಕ್ಕುಗಳಿಗಾಗಿ ಅವರು ಪ್ರಭುತ್ವಕ್ಕೆ, ಸಮಾಜಕ್ಕೆ ಮೊರೆಯಿಡಬೇಕಾಗಿರುವುದು ಆಧುನಿಕ ಸಮಾಜದ ಘೋರ ವ್ಯಂಗ್ಯಗಳಲ್ಲೊಂದು.

ವಿಶ್ವಸಂಸ್ಥೆಯ ಇತ್ತೀಚಿನ ಅಧ್ಯಯನವೊಂದು ಜಾಗತಿಕವಾಗಿ ನ್ಯಾಯವ್ಯವಸ್ಥೆ ಒತ್ತಡದಲ್ಲಿರುವುದನ್ನು ಗುರ್ತಿಸಿದೆ. ಸಮೀಕ್ಷೆಗೊಳಗಾದ ಸುಮಾರು ಶೇ 70ರಷ್ಟು ದೇಶಗಳಲ್ಲಿ ಪುರುಷರಿಗಿಂತ ಮಹಿಳೆಯರು ನ್ಯಾಯ ಪಡೆಯುವಲ್ಲಿ ಹೆಚ್ಚಿನ ಅಡೆತಡೆ ಎದುರಿಸುತ್ತಿದ್ದಾರೆ. ಸಂಘರ್ಷ, ದಮನ ಮತ್ತು ರಾಜಕೀಯ ಉದ್ವಿಗ್ನತೆಗಳು ಕಾನೂನುಗಳನ್ನು ದುರ್ಬಲಗೊಳಿಸುತ್ತಿವೆ. ಇದರ ಪರಿಣಾಮ, ಮಹಿಳೆಯರು, ಹೆಣ್ಣುಮಕ್ಕಳು ಜಾಗತಿಕವಾಗಿ ಪುರುಷರಿಗಿರುವ ಹಕ್ಕುಗಳಲ್ಲಿ ಬರೀ ಶೇ 64ರಷ್ಟು ಹಕ್ಕುಗಳನ್ನಷ್ಟೇ ಹೊಂದಿದ್ದಾರೆ.

ಜಗತ್ತಿನಾದ್ಯಂತ ಕಾನೂನುಗಳು ಅಸ್ತಿತ್ವದಲ್ಲಿವೆ. ಆದರೆ, ಅವು ಮಹಿಳೆಯರಿಗೆ ನ್ಯಾಯದ ರಕ್ಷಣೆ ನೀಡುವಲ್ಲಿ ವಿಫಲವಾಗುತ್ತಿವೆ. ಹಾಗಾಗಿಯೇ 'ಎಲ್ಲಾ ಮಹಿಳೆಯರು ಮತ್ತು ಹುಡುಗಿಯರಿಗಾಗಿ ಹಕ್ಕುಗಳು, ನ್ಯಾಯ, ಕ್ರಿಯೆ' ಎಂಬ ವಿಷಯದ ಅಡಿಯಲ್ಲಿ ವಿಶ್ವಸಂಸ್ಥೆ ಈ ಬಾರಿಯ ಅಂತರರಾಷ್ಟ್ರೀಯ ಮಹಿಳಾದಿನ ಆಚರಿಸುತ್ತಿದೆ. ಸಮಾನ ನ್ಯಾಯಕ್ಕೆ ಇರುವ ರಚನಾತ್ಮಕ ಅಡೆತಡೆಗಳನ್ನು ನಿವಾರಿಸಲು ಕರೆ ನೀಡಿದೆ.

ಲೈಂಗಿಕ ಸಂತಾನೋತ್ಪತ್ತಿ ಹಕ್ಕುಗಳು ಮತ್ತು ಆಸ್ತಿ ಮಾಲೀಕತ್ವ ಪರಿಹರಿಸುವ ತೀರ್ಪುಗಳ ಮೂಲಕ ಸುಪ್ರೀಂ ಕೋರ್ಟ್ ಲಿಂಗ ಸಮಾನತೆಯ ದಾರಿಯಲ್ಲಿ ಮೈಲಿಗಲ್ಲು ಸ್ಥಾಪಿಸಿದೆ. ಆದರೂ, ಕಾನೂನಿನ ಸಮರ್ಪಕ ಅನುಷ್ಠಾನವಿಲ್ಲದೆ ಹೆಣ್ಣುಮಕ್ಕಳ ಮೇಲಿನ ಕ್ರೌರ್ಯ ಹೆಚ್ಚುತ್ತಿದೆ. 2012ರ 'ನಿರ್ಭಯ' ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಕಠಿಣ ಶಿಕ್ಷೆಗಳನ್ನು ಒಳಗೊಂಡಂತೆ, ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ವ್ಯಾಪಕವಾದ ಬದಲಾವಣೆ ತಂದಿದೆ. ಆದರೂ, ನಂತರದ ದಿನಗಳಲ್ಲಿ ಅತ್ಯಾಚಾರ ಪ್ರಕರಣಗಳಲ್ಲಿ ನಿರಂತರ ಏರಿಕೆಯಾಗಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಪ್ರಕಾರ, 2012ರಲ್ಲಿ ದೇಶದಲ್ಲಿ ಪ್ರತಿ ವರ್ಷ 25 ಸಾವಿರ ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿದ್ದರೆ, 2022ರ ನಂತರ ಈ ಸಂಖ್ಯೆ 30 ಸಾವಿರ ಮುಟ್ಟಿದೆ. 2018ರಿಂದ 2022ರ ನಡುವೆ ಅತ್ಯಾಚಾರದ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣವು ಶೇ 28ರಷ್ಟು ಮಾತ್ರವಿದೆ.

ಇತ್ತೀಚೆಗಷ್ಟೇ ಛತ್ತೀಸಗಢ ಹೈಕೋರ್ಟ್, 20 ವರ್ಷ ಹಳೆಯದಾದ ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿಯ ಶಿಕ್ಷೆಯ ಅವಧಿಯನ್ನು ಕಡಿಮೆಗೊಳಿಸಿದೆ. ಅದು ಅತ್ಯಾಚಾರವಲ್ಲ, ಅತ್ಯಾಚಾರಕ್ಕೆ ಸಿದ್ಧತೆ ಎಂಬ ಅಸೂಕ್ಷ್ಮ ತೀರ್ಪು ನೀಡಿದೆ. ಆ ತೀರ್ಪನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿರುವುದು ಸಮಾಧಾನದ ಸಂಗತಿ. ಕರ್ನಾಟಕದ ಸೌಜನ್ಯ ಕೊಲೆ ಪ್ರಕರಣದಲ್ಲಿ 14 ವರ್ಷ ಕಳೆದರೂ ಅಪರಾಧಿಯನ್ನು ಗುರ್ತಿಸಲು ಸಾಧ್ಯವಾಗಿಲ್ಲ. ಶಬರಿಮಲೆ ದೇಗುಲ ಪ್ರವೇಶಕ್ಕೆ ಮಹಿಳೆಯರಿಗೆ ಪ್ರವೇಶ ನಿರಾಕರಿಸಿ, ದೇವಸ್ಥಾನದ ಆಡಳಿತ ಮಂಡಳಿ ಇತ್ತೀಚೆಗಷ್ಟೇ ನಿರ್ಧಾರ ಕೈಗೊಂಡಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಕೇರಳ ಸರ್ಕಾರದ ಕಾನೂನು ಸಚಿವರು, ಭಕ್ತರ ನಂಬಿಕೆಗಳಿಗೆ ಸರ್ಕಾರ ಬದ್ಧವಾಗಿದೆ ಎಂದಿದ್ದಾರೆ. ದೇಶದಾದ್ಯಂತ ಇಂತಹ ಪ್ರಕರಣಗಳ ದಿಗ್ಭ್ರಮೆಗೊಳಿಸುವ ವಾಸ್ತವದ ಹಿಂದೆ ಕಾನೂನು ಜಾರಿ ಸಂಸ್ಥೆಗಳ ದ್ವಂದ್ವ, ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ ಮತ್ತು ವ್ಯಾಪಕವಾದ ರಾಜಕೀಯ ಹಸ್ತಕ್ಷೇಪವನ್ನು ಗಮನಿಸಬಹುದು.

ರಾಜಸ್ಥಾನದ ಭನ್ವರಿದೇವಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಕೆಲಸದ ಸ್ಥಳಗಳಲ್ಲಿ ಮಹಿಳಾ ಸುರಕ್ಷತೆಯ ಖಚಿತಪಡಿಸಿತು. ವೃತ್ತಿಗೆ ಸಂಬಂಧಿಸಿದ ನೋಟವೇ ಇಂತಹ ತೀರ್ಪುಗಳಿಗೆ ಕಾರಣವಾದರೂ, ಇಂದಿಗೂ ದೇಶದಲ್ಲಿ ಮಹಿಳಾ ಕಾರ್ಮಿಕ ಬಲದ ಭಾಗವಹಿಸುವಿಕೆ (ಪಿಎಲ್‌ಎಫ್‌ಎಸ್ 2023–24ರ ಪ್ರಕಾರ) ಶೇ 41.7ರಷ್ಟು ಮಾತ್ರವಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಕಾರ್ಮಿಕ ಬಲದ ಭಾಗವಹಿಸುವಿಕೆ ಹೆಚ್ಚಿದೆಯಾದರೂ, ಮಹಿಳಾ ಕಾರ್ಮಿಕ ಬಲದ ಶೇ 81ರಷ್ಟು ಮಹಿಳೆಯರು ಅನೌಪಚಾರಿಕ, ಖಾಸಗಿ ವಲಯಗಳಲ್ಲಿ ಉದ್ಯೋಗದಲ್ಲಿ ಇದ್ದಾರೆ. ಅವರಿಗೆ ಸಿಗಬೇಕಾದ ಕನಿಷ್ಠ ವೇತನ ಸಿಗುತ್ತಿಲ್ಲ. ಕೆಲಸದ ಸಮಯ ದೀರ್ಘವಾಗಿದ್ದು, ಸುರಕ್ಷತೆ ಖಾತರಿಯಿಲ್ಲ.

ದೇಶದಲ್ಲಿ ಕೋಟ್ಯಂತರ ಹೆಣ್ಣುಮಕ್ಕಳು ತಾರತಮ್ಯ, ಹಿಂಸೆ, ನಿಂದನೆ ಎದುರಿಸುತ್ತಿದ್ದಾರೆ. ದುರಂತವೆಂದರೆ, ಇವರಿಗೆ ನ್ಯಾಯದ ಸಹಾಯ ಸಿಗುತ್ತಿಲ್ಲ. ಅತ್ಯಾಚಾರ ಪ್ರಕರಣಗಳು ನ್ಯಾಯಾಲಯಗಳನ್ನು ತಲಪಿದರೂ ನ್ಯಾಯ ಸಿಗದೆ ಸಂತ್ರಸ್ತರು ಮೌನವಾಗಿ ಸಂಕಟಪಡುತ್ತಿದ್ದಾರೆ. ಕೆಲಸದ ಸ್ಥಳದಲ್ಲಿನ ಕಿರುಕುಳದ ದೂರು ಯಾವುದೇ ಪರಿಣಾಮಗಳಿಗೆ ಕಾರಣವಾಗದೆ ವಿಷಕಾರಿ ಪರಿಸ್ಥಿತಿ ಮುಂದುವರಿಯುತ್ತದೆ. ಒಬ್ಬ ಹೆಣ್ಣುಮಗಳು ಪೊಲೀಸ್ ಠಾಣೆಯ ಮೆಟ್ಟಿಲೇರಿಯೂ ರಕ್ಷಣೆ ಇಲ್ಲದೆ ಹೊರಬರುತ್ತಾಳೆ; ಮನೆಗೆ ಹಿಂತಿರುಗಿ ಮತ್ತಷ್ಟು ಹಿಂಸೆ–ಪ್ರತೀಕಾರಕ್ಕೆ ಒಳಗಾಗುತ್ತಾಳೆ. ಸಮಾನ ವೇತನ, ಉತ್ತರಾಧಿಕಾರಿ ಮತ್ತು ಭೂ ಹಕ್ಕುಗಳನ್ನು ನಿರಾಕರಿಸಲಾಗುತ್ತದೆ. ಇದರಿಂದಾಗಿ ಹೆಣ್ಣುಮಕ್ಕಳು ನೆಮ್ಮದಿ ಜೀವನ ನಡೆಸಲಾರದೆ, ಭವಿಷ್ಯ ರೂಪಿಸಿಕೊಳ್ಳಲು ಒದ್ದಾಡುವಂತಾಗಿದೆ. ಈ ತಾರತಮ್ಯ ಅದೆಷ್ಟು ಆಳವಾಗಿ ಬೇರೂರಿದೆ ಎಂದರೆ, ಅನೇಕ ಮಹಿಳೆಯರಿಗೆ ಅದನ್ನು ಪ್ರಶ್ನಿಸುವುದೂ ಸಾಧ್ಯವಾಗುತ್ತಿಲ್ಲ. ಬಹುತೇಕ ಸಂದರ್ಭಗಳಲ್ಲಿ ಹೆಣ್ಣುಮಕ್ಕಳ ಮೇಲಿನ ಹಿಂಸೆ ಮೌನದಲ್ಲಿ ಕೊನೆಗೊಳ್ಳುತ್ತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಮೆರಿಕ ಜಾಗತಿಕವಾಗಿ ಬೃಹತ್ ದೇಶ. ಇಸ್ರೇಲ್ ಅತ್ಯಂತ ಪ್ರಬಲ ದೇಶ. ಇವೆರಡರ ಜಂಟಿ ದಾಳಿಯನ್ನು ಇರಾನ್ ಹೆಚ್ಚು ದಿನ ತಡೆಯಲಾರದು ಎಂದು ವಿಶ್ಲೇಷಿಸಲಾಗಿತ್ತು. ಯುದ್ಧದ ಮೊದಲ ದಿನವೇ ತನ್ನ ಸರ್ವೋಚ್ಚ ನಾಯಕನನ್ನು ಮತ್ತು ಹಿರಿಯ ಅಧಿಕಾರಿಗಳನ್ನು ಕಳೆದುಕೊಂಡರೂ ಇರಾನ್ ದೈತ್ಯಶಕ್ತಿಗಳ ಎದುರು ಮಣಿದಿಲ್ಲ. ತನ್ನ ಭೂಪ್ರದೇಶ, ಜನರ ರಕ್ಷಣೆಗೆ ಪ್ರಯತ್ನ ನಡೆಸುತ್ತಲೇ ಅಮೆರಿಕ, ಇಸ್ರೇಲ್ ವಿರುದ್ಧ ಮಾತ್ರವಲ್ಲದೇ ತನ್ನ ನೆರೆಯ ಮುಸ್ಲಿಂ ರಾಷ್ಟ್ರಗಳ ವಿರುದ್ಧವೂ ಹೋರಾಡುತ್ತಿದೆ. ಇರಾನ್ ಇದುವರೆಗೆ ಸಾವಿರಕ್ಕೂ ಹೆಚ್ಚು ಡ್ರೋನ್‌ಗಳು, 650ಕ್ಕೂ ಹೆಚ್ಚು ಗುರಿ ನಿರ್ದೇಶಿತ ಕ್ಷಿಪಣಿಗಳನ್ನು ಪ್ರಯೋಗ ಮಾಡಿದೆ ಎನ್ನುವ ವರದಿಗಳಿವೆ

11.70 ಲಕ್ಷ– ಒಟ್ಟು ಸೇನಾ ಸಿಬ್ಬಂದಿ

6.10 ಲಕ್ಷ ಸಕ್ರಿಯ ಸಿಬ್ಬಂದಿ | **3.50** ಲಕ್ಷ ಮೀಸಲು ಸಿಬ್ಬಂದಿ | **2.10** ಲಕ್ಷ ಅರೆ ಸೇನಾ ಸಿಬ್ಬಂದಿ

- ಇರಾನ್‌ನಲ್ಲಿ ಎರಡು ಸೇನೆಗಳಿವೆ. ಒಂದು ಸಾಂಪ್ರದಾಯಿಕ ಸೇನೆ ಆರ್ಟೇಶ್, ಇನ್ನೊಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ). ಐಆರ್‌ಜಿಸಿ ದೇಶದ ಪರಮೋಚ್ಚ ನಾಯಕನ ಅಧೀನದಲ್ಲಿ ಬರುತ್ತದೆ. ಕ್ಷಿಪಣಿ, ಡ್ರೋನ್, ಗಡಿಯಾಚೆಗಿನ ನಿಗಾದ ಹೊಣೆಯನ್ನು ಇದು ಹೊತ್ತುಕೊಂಡಿದೆ. ಇದರ ಅಡಿಯಲ್ಲಿ ಬಸಿಜ್ ಎನ್ನುವ ಆಂತರಿಕ ಸ್ವಯಂ ಸೇವಕರ ಜಾಲ ಬರುತ್ತದೆ. ನೈತಿಕ ಪೊಲೀಸ್‌ಗಿರಿಯನ್ನು ಇದು ನಿರ್ವಹಿಸುತ್ತದೆ
- ಸೇನೆಗಳನ್ನು ಪ್ರತ್ಯೇಕ ಘಟಕಗಳನ್ನಾಗಿ ಮಾಡಲಾಗಿದ್ದು, ಯುದ್ಧದ ಸಮಯದಲ್ಲಿ ಆಯಾ ಘಟಕಗಳೇ ನಿರ್ಧಾರ ಕೈಗೊಳ್ಳುವ ಅಧಿಕಾರ ಹೊಂದಿವೆ
- ಗ್ಲೋಬಲ್ ಫೈರ್‌ಪವರ್‌ನ ಪ್ರಕಾರ, ಸೇನಾ ಶಕ್ತಿಯಲ್ಲಿ ಜಗತ್ತಿನ 145 ದೇಶಗಳ ಪೈಕಿ ಇರಾನ್‌ಗೆ 16ನೇ ಸ್ಥಾನ
- ಇರಾನ್‌ನ ಕ್ಷಿಪಣಿಗಳ ಬಹುತೇಕ ತಂತ್ರಜ್ಞಾನ ಉತ್ತರ ಕೊರಿಯಾ, ಚೀನಾ ಮತ್ತು ರಷ್ಯಾದ್ದು
- ಮೂರು ಹಂತದ ವಾಯು ರಕ್ಷಣಾ ವ್ಯವಸ್ಥೆಯನ್ನು ಇರಾನ್ ಹೊಂದಿದೆ. ಈ ವ್ಯವಸ್ಥೆಯ ತಂತ್ರಜ್ಞಾನ ಕೂಡ ಉತ್ತರ ಕೊರಿಯಾ, ಚೀನಾ ಮತ್ತು ರಷ್ಯಾದಿಂದ ಪಡೆದಿದ್ದು

551 ಯುದ್ಧವಿಮಾನಗಳು

2,675 ಸೇನಾ ಟ್ಯಾಂಕುಗಳು

107 ಯುದ್ಧ ನೌಕೆಗಳು

80,000 ಡ್ರೋನ್‌ಗಳ ಸಂಖ್ಯೆ

2,000* ಮಧ್ಯಮ ವ್ಯಾಪ್ತಿಯ ಗುರಿ ನಿರ್ದೇಶಿತ ಕ್ಷಿಪಣಿಗಳ ಅಂದಾಜು ಸಂಖ್ಯೆ

6,000-8,000* ಕಡಿಮೆ ವ್ಯಾಪ್ತಿಯ ಗುರಿ ನಿರ್ದೇಶಿತ ಕ್ಷಿಪಣಿಗಳ ಅಂದಾಜು ಸಂಖ್ಯೆ

650ಕ್ಕೂ ಹೆಚ್ಚು ಈವರೆಗೆ ಇರಾನ್ ದಾಳಿಗೆ ಬಳಸಿದ ಕ್ಷಿಪಣಿಗಳು

1,300ಕ್ಕೂ ಹೆಚ್ಚು ದಾಳಿಗೆ ಬಳಸಿದ ಡ್ರೋನ್‌ಗಳ ಸಂಖ್ಯೆ

* ಯುದ್ಧ ಆರಂಭಕ್ಕೂ ಮೊದಲು

ಅಮೆರಿಕದ ಅಂಕೆಗೆ ಸಿಗದ ಇರಾನ್

ಪ್ರಜಾವಾಣಿ ವಾರ್ತೆ

ಕೇವಲ 9.3 ಕೋಟಿ ಜನಸಂಖ್ಯೆ ಹೊಂದಿರುವ ಪುಟ್ಟ ರಾಷ್ಟ್ರ ಇರಾನ್. ಈ ತೈಲ ಸಮೃದ್ಧ ರಾಷ್ಟ್ರದ ಮೇಲೆ ಬಹಳ ಹಿಂದಿನಿಂದಲೂ ಜಗತ್ತಿನ ‘ದೊಡ್ಡಣ್ಣ’ ಎಂದೇ ಹೆಸರಾಗಿರುವ ಅಮೆರಿಕ, ತಂತ್ರಜ್ಞಾನ, ಶಸ್ತ್ರಾಸ್ತ್ರಗಳ ಸಾಮರ್ಥ್ಯದಲ್ಲಿ ಭಾರಿ ಪ್ರಗತಿ ಸಾಧಿಸಿರುವ ಇಸ್ರೇಲ್ ಕಣ್ಣು ನೆಟ್ಟಿದ್ದವು. ಅಷ್ಟೇ ಅಲ್ಲದೇ ನೆರೆಯ ಅರಬ್ ರಾಷ್ಟ್ರಗಳು ಕೂಡ ಇರಾನ್ ಅನ್ನು ಗುರಿ ಮಾಡುವ ಸಲುವಾಗಿ ದಶಕಗಳಿಂದ ಸಿದ್ಧತೆ ನಡೆಸಿದ್ದವು. ಅಮೆರಿಕದ ಸೇನಾನೆಲೆಗಳಿಗೆ ಸ್ಥಳ ಒದಗಿಸುವುದರ ಜತೆಗೆ ಅಮೆರಿಕದಿಂದ ಶಸ್ತ್ರಾಸ್ತ್ರಗಳನ್ನೂ ಖರೀದಿ ಮಾಡಿದ್ದವು.

ಅಮೆರಿಕ–ಇಸ್ರೇಲ್ ಫೆ.28ರಂದು ಇರಾನ್ ವಿರುದ್ಧ ದಿಢೀರ್ ದಾಳಿ ಆರಂಭಿಸಿದ್ದರೂ ಅದು ತೀರಾ ಅನಿರೀಕ್ಷಿತವೇನಲ್ಲ. ಮೊದಲ ದಿನವೇ ಇರಾನ್ ತನ್ನ ಸರ್ವೋಚ್ಚ ನಾಯಕ ಆಯತೊಲ್ಲಾ ಖಮೇನಿ ಅವರನ್ನು ಕಳೆದುಕೊಂಡಿತು. ನಂತರದ ದಿನಗಳಲ್ಲಿ ಹಲವು ಹಿರಿಯ ಅಧಿಕಾರಿಗಳು ಹತರಾದರು. ಇರಾನ್ ಬಹುಬೇಗ ಶರಣಾಗಲಿದೆ ಎಂದು ವಿರೋಧಿ ಕೂಟ ಭಾವಿಸಿತ್ತು. ಆದರೆ, ಅವರ ಲೆಕ್ಕಾಚಾರ ತಲೆಕೆಳಗಾಗಿದೆ, ಇರಾನ್ ಮಾಡು ಇಲ್ಲವೇ ಮಡಿ ಎನ್ನುವಂತೆ ತೀವ್ರವಾದ ಹೋರಾಟದಲ್ಲಿ ತೊಡಗಿದೆ.

ಇರಾನ್ ಮೇಲೆ ದಾಳಿ ಮಾಡುವಾಗ ಎಲ್ಲ ಅಂತರರಾಷ್ಟ್ರೀಯ ಕಾನೂನು, ನೈತಿಕತೆ ಮೀರಿ ಶಾಲೆ, ಆಸ್ಪತ್ರೆ, ಜನವಸತಿ ಪ್ರದೇಶಗಳ ಮೇಲೆ ಅಮೆರಿಕ–ಇಸ್ರೇಲ್ ದಾಳಿ ನಡೆಸಿವೆ. ಭಾರತದಲ್ಲಿ ನೌಕಾ ಸಮರಾಭ್ಯಾಸ ನಡೆಸಿ ಹೊರಟಿದ್ದ ಇರಾನ್‌ನ ಯುದ್ಧನೌಕೆಯನ್ನು ಶ್ರೀಲಂಕಾದ ಕರಾವಳಿಯಲ್ಲಿ ಅಂತರರಾಷ್ಟ್ರೀಯ ಜಲ ಮಾರ್ಗದಲ್ಲಿ ಹೊಡೆದುರುಳಿಸಲಾಗಿದೆ. ಯುದ್ಧದಿಂದಾಗಿ ಇರಾನ್‌ನಲ್ಲಿ ಇದುವರೆಗೆ ಸುಮಾರು 1,000ಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ ಎನ್ನಲಾಗುತ್ತಿದ್ದು, ಗಾಯಾಳುಗಳ ಸಂಖ್ಯೆಯೂ ದೊಡ್ಡದಿದೆ. ಆದರೆ, ಇರಾನ್, ತನ್ನ ನೆರೆಯ ಯುಎಇ, ಕುವೈತ್, ಸೌದಿ ಅರೇಬಿಯಾ, ಬಹರೇನ್, ಕತಾರ್, ಇರಾಕ್ ಮುಂತಾದ ಪಶ್ಚಿಮ ಏಷ್ಯಾದ ಮುಸ್ಲಿಂ ರಾಷ್ಟ್ರಗಳಲ್ಲಿರುವ ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ನಡೆಸುತ್ತಿದೆ. ಜತೆಗೆ, ಟೆಲ್ ಅವೀವ್ ಸೇರಿದಂತೆ ಇಸ್ರೇಲ್‌ನ ಹಲವು ಪ್ರದೇಶಗಳ ಮೇಲೆಯೂ ದಾಳಿ ನಡೆಸಿದೆ. ಈ ದೇಶಗಳ ಇಂಧನ ನೆಲೆಗಳು, ಹೋಟೆಲ್‌ಗಳು, ವಿಮಾನ ನಿಲ್ದಾಣಗಳ ಮೇಲೆ ದಾಳಿ ನಡೆಸಿದೆ. ನ್ಯಾಟೊ ಸದಸ್ಯ ರಾಷ್ಟ್ರ ಟರ್ಕಿಯ ಮೇಲೂ ಕ್ಷಿಪಣಿ ಪ್ರಯೋಗ ಮಾಡಿದೆ.

ಇರಾನ್ ದಾಳಿಯಿಂದ ನೆರೆಯ ರಾಷ್ಟ್ರಗಳ ತೈಲ ಮೂಲಸೌಕರ್ಯಗಳಿಗೆ ಹಾನಿಯಾಗಿದ್ದು, ಪ್ರವಾಸೋದ್ಯಮಕ್ಕೆ ದೊಡ್ಡ ಪೆಟ್ಟು ಬಿದ್ದಿದೆ. ಅಮೆರಿಕ ಸೈನಿಕರ ಜತೆಗೆ ನಾಗರಿಕರೂ ಸಾವಿಗೀಡಾಗಿದ್ದಾರೆ. ವಿಮಾನ ನಿಲ್ದಾಣಗಳನ್ನು ಬಂದ್ ಮಾಡಲಾಗಿದೆ. ಶಾಲೆಗಳನ್ನು ಸ್ಥಳಾಂತರಿಸಲಾಗಿದೆ. ಮನೆ ಬಿಟ್ಟು ಹೊರಬರದಂತೆ ಜನರಿಗೆ ಎಚ್ಚರಿಕೆ ನೀಡಲಾಗಿದೆ.

ಯುದ್ಧದ ಸಂದರ್ಭದಲ್ಲಿ ಯಾವ ರೀತಿಯ ಪ್ರತಿರೋಧ ತೋರಬೇಕು ಎನ್ನುವುದರ ಬಗ್ಗೆ ಇರಾನ್ ವರ್ಷಗಟ್ಟಲೇ ನಡೆಸಿದ ಚಿಂತನೆ, ಮಾಡಿದ ತಾಲೀಮು ಇದರ ಹಿಂದಿದೆ. ವಿವಿಧ ಯುದ್ಧಗಳ ಸಂದರ್ಭದಲ್ಲಿ ಅಮೆರಿಕ ಯಾವ ದೇಶಗಳ ವಿರುದ್ಧ ಯಾವ ರೀತಿ ಸೋಲು ಕಂಡಿತ್ತು ಎನ್ನುವುದನ್ನು ಅಧ್ಯಯನ ಮಾಡಿ ಯುದ್ಧತಂತ್ರ ರೂಪಿಸಿರುವುದಾಗಿ ಇರಾನ್ ಹೇಳಿದೆ.

ಆಧಾರ: ರಾಯಿಟರ್ಸ್, ಎಪಿ, ಸಿಎನ್‌ಎನ್, ಗ್ಲೋಬಲ್ ಫೈರ್‌ಪವರ್.ಕಾಂ, ಸಿಎನ್‌ಬಿಸಿ.ಕಾಂ

ಹೊರ್ಮುಜ್: ಸಂಚಾರಕ್ಕೆ ಅನುಮತಿ

ಯುದ್ಧ ಆರಂಭವಾದ ನಂತರ ಹೊರ್ಮುಜ್ ಜಲಸಂಧಿಯ ಮೂಲಕ ಹಡಗುಗಳ ಸಂಚಾರಕ್ಕೆ ಇರಾನ್ ಅವಕಾಶ ನೀಡು-ತ್ತಿರಲಿಲ್ಲ. ಜಗತ್ತಿನ ಶೇ 20ರಷ್ಟು ಇಂಧನವು ಇದೇ ಮಾರ್ಗದ ಮೂಲಕ ವಿವಿಧ ದೇಶಗಳನ್ನು ಮುಟ್ಟುತ್ತಿತ್ತು. ಹೀಗಾಗಿ ಹಲವು ದೇಶಗಳಲ್ಲಿ ಇಂಧನ ಕೊರತೆ ಉಂಟಾಗಬಹುದು ಎನ್ನುವ ಆತಂಕ ಮೂಡಿತ್ತು. ಬುಧವಾರ ಈ ಬಗ್ಗೆ ಇರಾನ್‌ನ ರೆವೆಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಹೇಳಿಕೆ ನೀಡಿದ್ದು, ಜಲಸಂಧಿಯು ತನ್ನ ನಿಯಂತ್ರಣದಲ್ಲಿದೆ ಎಂದಿದೆ. ಅಮೆರಿಕ, ಇಸ್ರೇಲ್ ಮತ್ತು ಯುರೋಪ್ ಅನ್ನು ಹೊರತುಪಡಿಸಿ ಉಳಿದ ದೇಶಗಳ ಹಡುಗಗಳು ಹೊರ್ಮುಜ್ ಮೂಲಕ ಸಾಗಬಹುದು ಎಂದು ಐಆರ್‌ಜಿಸಿ ಹೇಳಿದೆ.

ಕದನ ವಿರಾಮಕ್ಕಾಗಿ ತಂತ್ರ?

ತನ್ನ ಅಸ್ತಿತ್ವಕ್ಕೆ ಧಕ್ಕೆ ಬರುವ ಪರಿಸ್ಥಿತಿ ಉಂಟಾದರೆ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಪ್ರಯೋಗಿಸಿ ಪಶ್ಚಿಮ ಏಷ್ಯಾದಲ್ಲಿ ಅಲ್ಲೋಲ ಕಲ್ಲೋಲ ಉಂಟುಮಾಡುವುದು ಇರಾನ್‌ನ ಒಂದು ತಂತ್ರ ಎಂದೂ ಕೆಲವರು ವಿಶ್ಲೇಷಿಸುತ್ತಿದ್ದಾರೆ. ಈ ಮೂಲಕ ನೆರೆಯ ರಾಷ್ಟ್ರಗಳಲ್ಲಿ ಭಯ ಉಂಟುಮಾಡಿ, ಅವು ಅಮೆರಿಕದ ಮೇಲೆ ಕದನ ವಿರಾಮಕ್ಕೆ ಮುಂದಾಗುವಂತೆ ಒತ್ತಡ ಹೇರಲಿ ಎನ್ನುವುದು ಅದರ ಉದ್ದೇಶ. ಆದರೆ, ಇರಾನ್‌ನ ತಂತ್ರವು ಅದಕ್ಕೇ ಮುಳುವಾಗುವ ಸಾಧ್ಯತೆಗಳೂ ಇವೆ ಎನ್ನಲಾಗುತ್ತಿದೆ. ಇರಾನ್ ಮತ್ತು ಅಮೆರಿಕದಲ್ಲಿ ಸಾಕಷ್ಟು ಸಾವು–ನೋವು ವರದಿಯಾಗುತ್ತಿದ್ದು, ಅದೂ ಕದನ ವಿರಾಮದ ಒತ್ತಡ ಉಂಟಾಗಲು ಕಾರಣವಾಗಬಹುದು ಎನ್ನಲಾಗುತ್ತಿದೆ.

ಅಗ್ಗದ ಡ್ರೋನ್‌ನಿಂದ ಇರಾನ್ ದಾಳಿ

ಇರಾನ್ ಸೇನೆಯು ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ಪ್ರಬಲ ಕ್ಷಿಪಣಿಗಳಲ್ಲದೆ, ಡ್ರೋನ್‌ಗಳನ್ನು ದೊಡ್ಡ ಸಂಖ್ಯೆಯಲ್ಲಿ ಬಳಸುತ್ತಿದೆ. ಅಂದಾಜಿನ ಪ್ರಕಾರ ಇರಾನ್ ಬಳಿ 80 ಸಾವಿರ ಡ್ರೋನ್‌ಗಳಿವೆ. ಅದರಲ್ಲಿ ಇಲ್ಲಿಯವರೆಗೆ 1,300 ಕ್ಕೂ ಹೆಚ್ಚು ಡ್ರೋನ್‌ಗಳನ್ನು ಬಳಸಿದೆ ಎಂದು ಹೇಳಲಾಗುತ್ತಿದೆ.

ಶಾಹೇದ್–136 ಹೆಸರಿನ ಈ ಡ್ರೋನ್‌ಗಳು ಕಡಿಮೆ ವೆಚ್ಚದಲ್ಲಿ ತಯಾರಿಸುವಂತಹವು. 20 ಸಾವಿರ ಡಾಲರ್‌ನಿಂದ 50 ಸಾವಿರ ಡಾಲರ್ ವೆಚ್ಚದಲ್ಲಿ ಇದನ್ನು ತಯಾರಿಸಬಹುದು ಎಂದು ಅಂದಾಜಿಸಲಾಗಿದೆ. ಇತ್ತೀಚೆಗೆ ಇರಾನ್ ಭೂಗತ ಸ್ಥಳದಲ್ಲಿ ಇರಿಸಲಾಗಿದ್ದ ಡ್ರೋನ್‌ಗಳ ವಿಡಿಯೊವನ್ನು ಹಂಚಿಕೊಂಡಿತ್ತು. ವೈರಿ ರಾಷ್ಟ್ರದ ವಾಯು ರಕ್ಷಣಾ ವ್ಯವಸ್ಥೆಯು ತಡೆಯದೇ ಇದ್ದರೆ ಈ ಡ್ರೋನ್‌ಗಳು ದೊಡ್ಡ ಪ್ರಮಾಣದ ಹಾನಿ ಮಾಡಬಲ್ಲವು.

ಅಮೆರಿಕ ಮತ್ತು ಇಸ್ರೇಲ್‌ನ ವಾಯು ರಕ್ಷಣಾ ವ್ಯವಸ್ಥೆಯು ದುಬಾರಿಯಾಗಿದ್ದು, ಈ ಅಗ್ಗದ ಡ್ರೋನ್‌ಗಳನ್ನು ಆಗಸದಲ್ಲೇ ತಡೆದು ಧ್ವಂಸ ಮಾಡಲು ಹೆಚ್ಚು ಹಣ ಖರ್ಚು ಮಾಡಬೇಕಾಗಿದೆ. ಇಸ್ರೇಲ್ ಐರನ್ ಡೋಮ್ ವಾಯು ರಕ್ಷಣಾ ವ್ಯವಸ್ಥೆಯನ್ನು ಬಳಸುತ್ತಿದ್ದು, ಅಮೆರಿಕ ಪ್ಯಾಟ್ರಿಯಟ್ ಕ್ಷಿಪಣಿ ವ್ಯವಸ್ಥೆಯನ್ನು ನಿಯೋಜಿಸಿದೆ.

ರಾಷ್ಟ್ರೀಯ

ಫಿನ್ಲೆಂಡ್ ಅಧ್ಯಕ್ಷ ಸ್ಟಬ್ ಜೊತೆ ಚರ್ಚೆ

ಪಶ್ಚಿಮ ಏಷ್ಯಾ ಬಿಕ್ಕಟ್ಟು ಶಮನಕ್ಕೆ ಮೋದಿ ಕರೆ

ನವದೆಹಲಿ (ಪಿಟಿಐ): ‘ಪಶ್ಚಿಮ ಏಷ್ಯಾದಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟು ತ್ವರಿತವಾಗಿ ಅಂತ್ಯವಾಗಬೇಕಿದೆ. ಯಾವುದೇ ಸಮಸ್ಯೆಯು ಸೇನಾ ಸಂಘರ್ಷದಿಂದ ಕೊನೆಗೊಳ್ಳಲು ಸಾಧ್ಯವಿಲ್ಲ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಪ್ರತಿಪಾದಿಸಿದ್ದಾರೆ.

ಫಿನ್ಲೆಂಡ್ ಅಧ್ಯಕ್ಷ ಅಲೆಕ್ಸಾಂಡರ್ ಸ್ಟಬ್ ಜೊತೆಗಿನ ಮಾತುಕತೆಯ ಬಳಿಕ ಮೋದಿ ಅವರು ಈ ಹೇಳಿಕೆ ನೀಡಿದ್ದಾರೆ.

‘ಭಾರತ ಮತ್ತು ಫಿನ್ಲೆಂಡ್ ದೇಶಗಳು ಕಾನೂನು ಪಾಲನೆ, ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೇಲೆ ನಂಬಿಕೆ ಇಟ್ಟಿವೆ. ಅದು ಉಕ್ರೇನ್ ಆಗಿರಲಿ ಅಥವಾ ಪಶ್ಚಿಮ ಏಷ್ಯಾವಾಗಿರಲಿ. ಬಿಕ್ಕಟ್ಟು ಶಮನಕ್ಕೆ ನಡೆಯುವ ಎಲ್ಲ ಪ್ರಯತ್ನಗಳನ್ನು ನಾವು ಬೆಂಬಲಿಸುತ್ತೇವೆ’ ಎಂದು ಹೇಳಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಮತ್ತು ಉಕ್ರೇನ್ ಮೇಲಿನ ರಷ್ಯಾ ಆಕ್ರಮಣದ ಬಗ್ಗೆ ಚರ್ಚೆ ನಡೆಸಲಾಯಿತು ಎಂದು ಸ್ಟಬ್ ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

‘ಯುದ್ಧವನ್ನು ಕೊನೆಗೊಳಿಸುವುದು ಎಲ್ಲರ ಹಿತಾಸಕ್ತಿಗೆ ಒಳಿತು ಎಂಬುವುದನ್ನು ಒಪ್ಪಿಕೊಂಡಿದ್ದೇವೆ. ವಿಶ್ವಸಂಸ್ಥೆಯ ಮೂಲತತ್ವಗಳನ್ನು ಗೌರವಿಸಿದರೆ ಮಾತ್ರ ಶಾಂತಿ ಸ್ಥಾಪನೆ ಸಾಧ್ಯ’ ಎಂದು ಸ್ಟಬ್ ಹೇಳಿದರು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವಕ್ಕಾಗಿ ಭಾರತದ ಪ್ರಯತ್ನವನ್ನು ಸ್ಟಬ್ ಬಲವಾಗಿ ಬೆಂಬಲಿಸಿದರು.

ಫಿನ್ಲೆಂಡ್ ಅಧ್ಯಕ್ಷ ಅಲೆಕ್ಸಾಂಡರ್ ಸ್ಟಬ್ ಅವರ ಜೊತೆ ಪ್ರಧಾನಿ ಮೋದಿ ಮಾತುಕತೆ ನಡೆಸಿದರು

‘ಪ್ರಸ್ತುತ ಜಾಗತಿಕ ಭೌಗೋಳಿಕ ವಾಸ್ತವಗಳನ್ನು ಪ್ರತಿಬಿಂಬಿಸಲು ಮತ್ತು ಜಾಗತಿಕ ಬಹುಪಕ್ಷೀಯ ವ್ಯವಸ್ಥೆಯ ಸುಧಾರಣೆಗೆ ಇದು ಅತ್ಯಗತ್ಯವಾಗಿದೆ’ ಎಂದು ಸ್ಟಬ್ ಹೇಳಿದರು.

ರಕ್ಷಣೆ, ಬಾಹ್ಯಾಕಾಶ, ಸೆಮಿಕಂಡಕ್ಟರ್ ಮತ್ತು ವಿರಳ ಖನಿಜ ಕ್ಷೇತ್ರಗಳಿಗೆ ಸಂಬಂಧಿಸಿದ ಸಹಭಾಗಿತ್ವವನ್ನು ಮತ್ತಷ್ಟು ಹೆಚ್ಚಿಸಲು ಉಭಯ ರಾಷ್ಟ್ರಗಳು ಸಮ್ಮತಿಸಿದವು.

‘ಜಗತ್ತು ಅಸ್ಥಿರತೆ ಮತ್ತು ಅನಿಶ್ಚಿತತೆ ಕಾಲಘಟ್ಟದಲ್ಲಿದೆ. ಜಗತ್ತಿನ ಹಲವು ಭಾಗಗಳಲ್ಲಿ ಸಂಘರ್ಷವಿದೆ. ಇಂತಹ ಜಾಗತಿಕ ಸನ್ನಿವೇಶದಲ್ಲಿ ವಿಶ್ವದ ಎರಡು ಪ್ರಮುಖ ರಾಜತಾಂತ್ರಿಕ ಶಕ್ತಿಗಳಾದ ಭಾರತ ಮತ್ತು ಯುರೋಪ್ ತಮ್ಮ ಸಂಬಂಧಗಳ ಸುವರ್ಣಯುಗಕ್ಕೆ ಕಾಲಿಡುತ್ತಿವೆ’ ಎಂದು ಮೋದಿ ಹೇಳಿದರು.

‘ಇನ್ನೂ ಉತ್ತರಾಧಿಕಾರಿ ಆಯ್ಕೆಯಾಗಿಲ್ಲ’

ನವದೆಹಲಿ (ಪಿಟಿಐ): ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಹತರಾದ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಉತ್ತರಾಧಿಕಾರಿ ಸ್ಥಾನಕ್ಕೆ ಇನ್ನೂ ಯಾರನ್ನೂ ಆಯ್ಕೆ ಮಾಡಿಲ್ಲ ಎಂದು ಇರಾನ್‌ನ ಅಧಿಕಾರಿಯೊಬ್ಬರು ಗುರುವಾರ ಮಾಹಿತಿ ನೀಡಿದ್ದಾರೆ.

’ಉತ್ತರಾಧಿಕಾರಿ ಸ್ಥಾನಕ್ಕೆ ಇನ್ನೂ ಯಾರನ್ನೂ ಆಯ್ಕೆ ಮಾಡಿಲ್ಲ. ಇದಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳು ನಡೆಯುತ್ತಿವೆ’ ಎಂದು ಭಾರತದಲ್ಲಿನ ಇರಾನ್ ಸರ್ವೋಚ್ಚ ನಾಯಕರ ಪ್ರತಿನಿಧಿ ಆಗಿರುವ ಆಯತೊಲ್ಲಾ ಡಾ.ಅಬ್ದುಲ್ ಮಜೀದ್ ಹಕೀಮೆಲಾಹಿ ಸ್ಪಷ್ಟಪಡಿಸಿದ್ದಾರೆ.

’ಖಮೇನಿ ಅವರ ಸ್ಥಾನಕ್ಕೆ ಅವರ ಪುತ್ರ ಮೊಜ್ತಾಬಾ ಖಮೇನಿ ಅವರನ್ನೇ ಆಯ್ಕೆ ಮಾಡಲಾಗಿದೆ ಎನ್ನುವ ವರದಿಗಳು ಸುಳ್ಳು. ಇರಾನ್‌ನಲ್ಲಿ ಚುನಾವಣೆಯ ಮೂಲಕ 88 ಸದಸ್ಯರ ತಜ್ಞರ ಮಂಡಳಿಯನ್ನು ರಚಿಸಲಾಗಿದೆ. ಈ ಮಂಡಳಿಯು ದೇಶದ ಸರ್ವೋಚ್ಚ ನಾಯಕನನ್ನು ಆಯ್ಕೆ ಮಾಡುತ್ತದೆ. ಮಂಡಳಿಯು ಅರ್ಹ ವ್ಯಕ್ತಿಯನ್ನು ಆಯ್ಕೆ ಮಾಡಲು ಈಗಷ್ಟೇ ಮಾತುಕತೆ ಆರಂಭಿಸಿದೆ’ ಎಂದು ಹೇಳಿದ್ದಾರೆ.

‘ಮಂಡಳಿಯ ಸದಸ್ಯರು ಸಾಕಷ್ಟು ಚರ್ಚೆಗಳನ್ನು ನಡೆಸಿದ ಬಳಿಕ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುತ್ತಾರೆ. ಆದರೆ, ಸದ್ಯಕ್ಕೆ ಪರಿಸ್ಥಿತಿ ಸರಿಯಾಗಿಲ್ಲ. ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ನಡೆಸುತ್ತಿವೆ. ಹೀಗಾಗಿ, ಮಂಡಳಿಗೆ ಯಾವ ಸಮಯ ಉಚಿತವೋ ಆ ಸಂದರ್ಭದಲ್ಲಿ ಸಭೆ ಸೇರಿ, ಅರ್ಹ ವ್ಯಕ್ತಿಯನ್ನು ಆಯ್ಕೆ ಮಾಡುತ್ತಾರೆ’ ಎಂದೂ ಅವರು ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಇರಾನ್ ದಾಳಿಯಿಂದಾಗಿ ದುಬೈ ಹೊತ್ತಿ ಉರಿಯುತ್ತಿದೆ ಎಂದು ಪ್ರತಿಪಾದಿಸುತ್ತಾ ‘ಎಕ್ಸ್’ ಬಳಕೆದಾರರೊಬ್ಬರು ಬಹು ಅಂತಸ್ತಿನ ಕಟ್ಟಡವೊಂದರಲ್ಲಿ ಭಾರಿ ಪ್ರಮಾಣದಲ್ಲಿ ಬೆಂಕಿ ಅನಾಹುತ ಸಂಭವಿಸಿರುವ ವಿಡಿಯೊ ತುಣುಕೊಂದನ್ನು ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿ ರಿವರ್ಸ್ ಸರ್ಚ್ ವಿಧಾನದಲ್ಲಿ ಹುಡುಕಿದಾಗ ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ) ಸುದ್ದಿ ಸಂಸ್ಥೆ ‘ದಿ ನ್ಯಾಷನಲ್’, 2015ರ ಅಕ್ಟೋಬರ್ 1ರಂದು ಪ್ರಕಟಿಸಿದ್ದ ಬೆಂಕಿ ದುರ್ಘಟನೆಯ ವರದಿಯಲ್ಲಿ ವಿಡಿಯೊದ ಕೀ ಫ್ರೇಮ್ ಹೋಲುವ ಚಿತ್ರ ಪ್ರಕಟವಾಗಿತ್ತು. ಶಾರ್ಜಾದ ಕಿಂಗ್ ಫೈಸಲ್ ರಸ್ತೆಯ ಅಬ್ದುಲ್ ನಾಸರ್ ಕಟ್ಟಡದಲ್ಲಿ ಅಗ್ನಿ ಆಕಸ್ಮಿಕ ಸಂಭವಿಸಿರುವ ಬಗ್ಗೆ ವರದಿಯಲ್ಲಿ ಹೇಳಲಾಗಿತ್ತು. ಈಗ ಹಂಚಿಕೊಳ್ಳಲಾಗುತ್ತಿರುವ ವಿಡಿಯೊದಲ್ಲಿರುವ ಕಟ್ಟಡ ಮತ್ತು 2015ರ ಫೋಟೊದಲ್ಲಿರುವ ಕಟ್ಟಡವನ್ನು ಹೋಲಿಸಿ ನೋಡಿದಾಗ ಎರಡೂ ಒಂದೇ ಆಗಿದ್ದವು. 2015ರ ಅಕ್ಟೋಬರ್ 1ರಂದು ‘ದಿ ನ್ಯಾಷನಲ್’ ಮಾಧ್ಯಮವು ತನ್ನ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ಬೆಂಕಿ ದುರ್ಘಟನೆಯ ವಿಡಿಯೊವನ್ನೂ ಪ್ರಕಟಿಸಿತ್ತು. ಅಲ್ಲದೇ, ಈ ಘಟನೆಯ ಬಗ್ಗೆ ಎಪಿ ಸುದ್ದಿ ಸಂಸ್ಥೆ ಕೂಡ ವರದಿ ಮಾಡಿತ್ತು. 11 ವರ್ಷಗಳಷ್ಟು ಹಳೆಯ ವಿಡಿಯೊವನ್ನು, ಈಗ ಇರಾನ್ ಮಾಡಿದ ದಾಳಿಯ ವಿಡಿಯೊ ಎಂದು ಬಿಂಬಿಸಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6335

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ನಂಬಿಗಸ್ಥ (4)
3.ಅಕ್ಕಿ ತೊಳೆದ ನೀರು (4)
5.ಕಸ್ತೂರಿ ಕಂಪಿನ ಭಾಷೆ (3)
6.ಪದಾತಿಯಲ್ಲಿ ಸೇರಿರುವ ಗಂಡ (2)
8.ವರ ಮಾಡಿರುವ ಒತ್ತಾಯ (3)
12.ತುರಿಸುವಿಕೆಯನ್ನು ಹೀಗೆನ್ನಿ (3)
13.ಹರಸುವಾಗ ಕಾಣಿಸಿದ ಆಕಳು (2)
15.ಈತ ದುಡ್ಡಿಲ್ಲದವನು (3)
16.ಕಾಡುಪ್ರಾಣಿಯ ಸಮೀಪವಿರುವ ಮರೀಚಿಕೆ! (4)
17.ಅರಮನೆ ಹತ್ತಿರವೇ ಇರುವ ಜೈಲು (4)

ಮೇಲಿಂದ ಕೆಳಕ್ಕೆ

1.ಹುದುಗಿಟ್ಟ ಧನ (3)
2.ಕರಾರು ತಿಳಿಸಿದ್ದಕ್ಕೇ ಈ ಅಡ್ಡಿ ! (4)
3.ಕರದಲ್ಲಿರುವ ಚಿನ್ನ (4)
7.ಅರಿವು ಹೀಗೆ ಬಂದಿದೆ (5)
9.ಶೀರೋನಾಮೆಯಿದು (5)
10.ಕೊನೆಗೆ ಬಲವಿದ್ದರೂ ಈತ ನಿಶ್ಶಕ್ತ! (4)
11.ಭರದಿಂದ ನೀಡಿದ ಆಶ್ವಾಸನೆ (4)
14.ಕಾರಣವಿಲ್ಲದೆ ಎಂದು ಹೀಗೆನ್ನಿ (3)



6334ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿದ್ರುಮ 4.ಕಣ್ಣೀರು
6.ಜಲಜನಕ 7.ಯಮ
9.ಮಾತು 10.ಪಂಕ
12.ನಿಜ 14.ಗುಣವಾಚಕ
16.ದರ್ಪಣ 17.ರುಧಿರ

ಮೇಲಿಂದ ಕೆಳಕ್ಕೆ:
1.ವಿನಿಮಯ 2.ಮನುಜ
3.ಮಹಜರು 4.ಕಳಂಕ
5.ರುಜುವಾತು 8.ಮಸ್ತಕ
9.ಮಾನಿನಿ 10.ಪಂಕ್ತಿಭೇದ
11.ದವಾಖಾನೆ 13.ಜನಿವಾರ
14.ಗುಡಾಣ 15.ಕಶೇರು

ಸುಡೊಕು 6719

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

						5		7
	2	9	6		7		4	
		5		4				1
	4				1		7	
8				2			1	4
	9		7			6		
9				3		4		
			4		8		2	
2		4						3

6718 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ನಿಮ್ಮ ವಾಣಿಯೇ ನಿಮ್ಮ ವ್ಯಕ್ತಿತ್ವದ ಪ್ರತಿಬಿಂಬ

ನುಡಿ ಬೆಳಗು



ರೇಣುಕಾ ನಿಡಗುಂದಿ

ಗುಲಾಮಿ ಪದ್ಧತಿಯ ದಿನಗಳಲ್ಲಿ ಒಬ್ಬ ಮಾಲೀಕನ ಬಳಿ ಅನೇಕ ಗುಲಾಮರು ಇರುತ್ತಿದ್ದರು. ಲುಕ್ಮಾನ್ ಅವರಲ್ಲೊಬ್ಬನಾಗಿದ್ದ. ಲುಕ್ಮಾನ್ ಗುಲಾಮನಾಗಿದ್ದರೂ, ಅತ್ಯಂತ ಚತುರ ಮತ್ತು ಬುದ್ಧಿವಂತನಾಗಿದ್ದ. ಅವನ ಖ್ಯಾತಿ ದೂರ ದೂರದವರೆಗೂ ಹರಡಿತ್ತು.

ಈ ವಿಚಾರ ಮಾಲೀಕನ ಕಿವಿಗೂ ಬಿತ್ತು. ಒಂದು ದಿನ ಮಾಲೀಕನು ಲುಕ್ಮಾನ್‌ನನ್ನು ಕರೆಸಿ ಹೇಳಿದನು: ‘ನೀನು ತುಂಬಾ ಬುದ್ಧಿವಂತನೆಂದು ಕೇಳಿದ್ದೇನೆ. ನಿನ್ನ ಬುದ್ಧಿವಂತಿಕೆಯನ್ನು ಪರೀಕ್ಷಿಸಲು ಇಚ್ಛಿಸುತ್ತೇನೆ. ಈ ಪರೀಕ್ಷೆಯಲ್ಲಿ ನೀನು ಉತ್ತೀರ್ಣನಾದರೆ ನಿನ್ನನ್ನು ದಾಸತ್ವದಿಂದ ಮುಕ್ತಗೊಳಿಸುತ್ತೇನೆ. ಹೋಗಿ, ಸತ್ತ ಒಂದು ಮೇಕೆಯನ್ನು ಕತ್ತರಿಸಿ, ಅದರಲ್ಲಿನ ಉತ್ತಮವಾದ ಭಾಗವನ್ನು ನನಗೆ ತಂದುಕೊಡು’.

ಮಾಲೀಕನ ಆಜ್ಞೆಯಂತೆ ಲುಕ್ಮಾನ್ ಸತ್ತ ಮೇಕೆಯ ನಾಲಿಗೆಯನ್ನು ತೆಗೆದುಕೊಂಡು ಮಾಲೀಕನ ಮುಂದೆ ಇಟ್ಟನು.

‘ನಾಲಿಗೆಯನ್ನೇ ಯಾಕೆ ತಂದೆ?’ ಎಂದು ಮಾಲೀಕನು ಕೇಳಿದಾಗ, ಲುಕ್ಮಾನ್ ಉತ್ತರಿಸಿದನು: ‘ದೇಹದಲ್ಲಿ ನಾಲಿಗೆ ಒಳ್ಳೆಯದಾಗಿದ್ದರೆ, ಎಲ್ಲವೂ ಒಳ್ಳೆಯದೇ ಆಗಿರುತ್ತದೆ’.

ಅದಕ್ಕೆ ಮಾಲೀಕನು ಹೇಳಿದನು: ‘ಸರಿ, ಇದನ್ನು ತೆಗೆದುಕೊಂಡು ಹೋಗು. ಈಗ ಮೇಕೆಯಲ್ಲಿನ ಕೆಟ್ಟ ಭಾಗವನ್ನು ತಂದುಕೊಡು’.

ಲುಕ್ಮಾನ್ ಹೊರಗೆ ಹೋಗಿ ಸ್ವಲ್ಪ ಹೊತ್ತಿನಲ್ಲೇ ಮತ್ತೆ ಅದೇ ನಾಲಿಗೆಯನ್ನು ತಂದು ಮಾಲೀಕನ ಮುಂದೆ ಇಟ್ಟನು.

ಮತ್ತೆ ಕಾರಣ ಕೇಳಿದಾಗ ಲುಕ್ಮಾನ್ ಹೇಳಿದನು: ‘ದೇಹದಲ್ಲಿ ನಾಲಿಗೆ ಒಳ್ಳೆಯದಾಗಿರದಿದ್ದರೆ, ಎಲ್ಲವೂ ಕೆಟ್ಟದೇ ಆಗುತ್ತದೆ.’

ಅವನು ಮುಂದುವರಿದು ಹೇಳಿದನು: ‘ಮಾಲೀಕರೇ, ವಾಣಿ ಎಲ್ಲರಿಗೂ ಜನ್ಮಸಿದ್ಧವಾಗಿ ದೊರಕುತ್ತದೆ. ಆದರೆ, ಮಾತನಾಡುವ ಕಲೆಯು ಕೆಲವೇ ಜನರಿಗೆ ಬರುತ್ತದೆ. ಏನು ಮಾತನಾಡಬೇಕು? ಹೇಗೆ ಮಾತನಾಡಬೇಕು? ಯಾವಾಗ ಮಾತನಾಡಬೇಕು?—ಈ ಒಂದು ಕಲೆ ಅತಿ ವಿರಳರಿಗೆ ಮಾತ್ರ ತಿಳಿದಿದೆ. ಒಂದೇ ಮಾತಿನಿಂದ ಪ್ರೀತಿ ಹರಿಯಬಹುದು; ಮತ್ತೊಂದು ಮಾತಿನಿಂದ ಜಗಳ ಉಂಟಾಗಬಹುದು. ಕಹಿ ಮಾತುಗಳು ಲೋಕದಲ್ಲಿ ಎಷ್ಟೋ ಕಲಹಗಳನ್ನು ಹುಟ್ಟಿಸಿವೆ. ಈ ನಾಲಿಗೆಯೇ ಲೋಕದಲ್ಲಿ ಭಾರಿ ವಿಪತ್ತನ್ನುಂಟುಮಾಡಿದೆ. ಮೂರು ಇಂಚಿನ ಈ ನಾಲಿಗೆ ಎಂಬ ಆಯುಧದಿಂದ, ಆರು ಅಡಿ ಎತ್ತರದ ವ್ಯಕ್ತಿಯನ್ನೂ ಕೊಲ್ಲಬಹುದು; ಹಾಗೆಯೇ ಸಾಯುತ್ತಿರುವವನಲ್ಲೂ ಜೀವ ತುಂಬಬಹುದು. ಎಲ್ಲ ಜೀವಿಗಳಲ್ಲಿ ವಾಣಿ ಎಂಬ ವರವು ಮಾನವನಿಗೆ ಮಾತ್ರ ಲಭಿಸಿದೆ. ಅದರ ಸದ್ವಿನಿಯೋಗದಿಂದ ಸ್ವರ್ಗವೇ ಭೂಮಿಗೆ ಇಳಿಯಬಹುದು; ದುರುಪಯೋಗದಿಂದ ಸ್ವರ್ಗವೂ ನರಕವಾಗಬಹುದು’.

ಲುಕ್ಮಾನನ ಬುದ್ಧಿವಂತಿಕೆ ಮತ್ತು ಚಾತುರ್ಯಭರಿತ ಮಾತುಗಳನ್ನು ಕೇಳಿ ಮಾಲೀಕನು ಬಹಳ ಸಂತೋಷಪಟ್ಟನು. ಆ ದಿನ ಅವನ ಗುಲಾಮನೇ ಅವನಿಗೆ ದೊಡ್ಡ ಪಾಠವನ್ನು ಕಲಿಸಿದ್ದ. ಆದ್ದರಿಂದ ಅವನು ಲುಕ್ಮಾನನನ್ನು ದಾಸತ್ವದಿಂದ ಮುಕ್ತಗೊಳಿಸಿದನು.

ಶರಣರು ‘ನುಡಿದರೆ ಮುತ್ತಿನ ಹಾರದಂತಿರಬೇಕು’ ಎಂದರು. ಕಬೀರ ‘ಬೋಲಿ ಏಕ್ ಅನಮೋಲ್ ಹೈ, ಜೋ ಕೋಯಿ ಬೋಲೆ ಜಾನಿ, ಹಿಯೇ ತರಾಜು ತೌಲಿ ಕೆ, ತಬ್ ಮುಖ ಬಾಹರ ಆನಿ’ (ಮಾತು ಅಮೂಲ್ಯವಾದುದು, ಅಳೆದು-ತೂಗಿ ನೋಡಿ ಮಾತಾಡಬೇಕು) ಎಂದ. ಮಧುರ ವಾಣಿ ಒಂದು ವರ. ಅದನ್ನು ಸಿದ್ಧಿಸುವುದೇನು ಕಷ್ಟವಲ್ಲ. ನಿಮ್ಮ ವಾಣಿ ಹೇಗಿದೆ? ಅದು ತೀಕ್ಷ್ಣವಾಗಿದ್ದರೆ ಅಥವಾ ಸಾಮಾನ್ಯವಾಗಿದ್ದರೂ ಅದನ್ನು ಸಿಹಿಯಾಗಿಸುವ ಪ್ರಯತ್ನ ಮಾಡಿ. ನಿಮ್ಮ ವಾಣಿ ನಿಮ್ಮ ವ್ಯಕ್ತಿತ್ವದ ಪ್ರತಿಬಿಂಬ; ಅದು ಸದಾ ಉತ್ತಮವಾಗಿರಲೇಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

06 ಮಾರ್ಚ್ 2026 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ತೃತೀಯ ಗಂ. 17-54 ನಕ್ಷತ್ರ: ಹಸ್ತ ಗಂ. 9-30 ಯೋಗ: ಗಂಡ ಗಂ. 7-06 ಕರಣ: ವಿಷ್ಟಿ ಗಂ 17-54 ಕುಂಭ ಮಾಸದ 21 ನೇ ದಿನ. ಮಳೆ ನಕ್ಷತ್ರ : ಪೂರ್ವಾಭಾದ್ರ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00 , ಸೂರ್ಯೋದಯ : 06-47 ಸೂರ್ಯಾಸ್ತ : 06-36 ಮುಸ್ಲಿಂ ದಿನಾಂಕ : 16 ರಂಜಾನ್, ಅದೃಷ್ಟ ಸಂಖ್ಯೆ : 6, 7

ಮೇಷ: ಹೊಸ ಯೋಜನೆಗಳನ್ನು ಪ್ರಾರಂಭಿಸಲು ಮತ್ತು ಬಾಕಿ ಉಳಿದ ಕೆಲಸವನ್ನು ಪೂರ್ತಿಗೊಳಿಸಲು ಈ ದಿನ ಪ್ರಶಸ್ತ. ತಂಪು ಪಾನೀಯ ವ್ಯಾಪಾರಸ್ಥರಿಗೆ ಲಾಭ-ನಷ್ಟದ ಪರಿಚಯವಾಗಲಿದೆ.

ವೃಷಭ: ನಿಮ್ಮಲ್ಲಿನ ಸೃಜನಶೀಲತೆಗೆ ಉತ್ತಮ ವೇದಿಕೆ ಸಿಗಲಿದೆ. ಜೀವನದಲ್ಲಿ ಭಾರಿ ಬದಲಾವಣೆಯನ್ನು ಕಾಣಲಿದ್ದೀರಿ. ಆಹಾರದಿಂದ ಆರೋಗ್ಯ ಹದಗೆಡುವ ಲಕ್ಷಣಗಳಿವೆ. ಜಾಗ್ರತರಾಗಿರಿ.

ಮಿಥುನ: ರಾಜ್ಯ-ರಾಷ್ಟ್ರ ಮಟ್ಟದಲ್ಲಿ ಯಾವುದಾದರೊಂದು ಜವಾಬ್ದಾರಿಯನ್ನು ನಿಭಾಯಿಸುವಂಥ ಕೆಲಸದಲ್ಲಿ ಇರುವವರು ಚಾಣಾಕ್ಷತನದ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಉದರವ್ಯಾಧಿಯನ್ನು ನಿರ್ಲಕ್ಷಿಸಬೇಡಿ.

ಕರ್ಕಾಟಕ: ಸಹವರ್ತಿಗಳ ಜತೆ ಸಂಯಮದಿಂದ ವರ್ತಿಸಿ. ಗರ್ಭಿಣಿಯರು ವೈದ್ಯರ ಸಲಹೆಯಂತೆ ಔಷಧವನ್ನು ತೆಗೆದುಕೊಳ್ಳುವುದರ ಜೊತೆಗೆ ಪೌಷ್ಟಿಕ ಆಹಾರ, ದೈಹಿಕ ವ್ಯಾಯಾಮ ಗಮನಿಸಿ.

ಸಿಂಹ: ಸಂಶೋಧನಾ ವೃತ್ತಿಯಲ್ಲಿರುವವರಿಗೆ ಅಧ್ಯಯನಕ್ಕೆ ಸುಸಮಯ. ಸಹೋದ್ಯೋಗಿಯ ವಿರಾಮದಿಂದಾಗಿ ಉದ್ಯೋಗದಲ್ಲಿರುವ ಒತ್ತಡವನ್ನು ನಿವಾರಿಸಿಕೊಳ್ಳುವುದು ಕಷ್ಟವಾಗುತ್ತದೆ.

ಕನ್ಯಾ: ಸ್ವಂತ ಉದ್ಯೋಗ ನಡೆಸುವವರಿಗೆ ಸಂಪಾದನೆ ಕಡಿಮೆ ಇದ್ದರೂ ಉದ್ಯೋಗ ಬದಲಾಯಿಸದೆ ಅದನ್ನೇ ಮುಂದುವರಿಸಿ. ಬಂದ ಸಮಸ್ಯೆಗಳು ಆಂಜನೇಯನ ಅನುಗ್ರಹದಿಂದ ಸರಾಗವಾಗಿ ದೂರಾಗಲಿವೆ.

ತುಲಾ: ಪೂರ್ವನಿಯೋಜಿತ ಕಾರ್ಯಗಳು ಸರ್ವರ ಸಹಾಯದಿಂದ ಮಂದಗತಿಯಲ್ಲಿ ಪೂರ್ಣಗೊಳ್ಳಲಿವೆ. ಅವಕಾಶಗಳನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ. ಮಾನಸಿಕ ಪೀಡೆಗಳಿಗೆ ಒಳಗಾಗದಂತೆ ಕಾಲಜಿವಹಿಸಿ.

ವೃಶ್ಚಿಕ: ಭೂಖರೀದಿ ಗೃಹ ನಿರ್ಮಾಣದಂತ ಕಾರ್ಯಗಳನ್ನು ಕೈಗೊಳ್ಳಲು ಉತ್ತಮ ಸಮಯ. ಇನ್ನೊಬ್ಬರನ್ನು ಹೋಲಿಸಿಕೊಳ್ಳದೇ ಅತಿಯಾಸೆ ಇಲ್ಲದೆ, ನಿಶ್ಚಿಂತೆಯಿಂದ ದುಡಿದಲ್ಲಿ ಆದಾಯವನ್ನು ಹೊಂದುವಿರಿ.

ಧನು: ಕುಟುಂಬದ ಮಾರ್ಗಸೂಚಿಯಂತೆ ಕಳೆದು ಹೋಗಿದ್ದ ವಸ್ತುಗಳೂ ಪತ್ತೆಯಾಗಲಿವೆ. ಅನಗತ್ಯ ಮಾತನ್ನು ಆಡುವುದರಿಂದ ನೆಮ್ಮದಿಗೆ ಭಂಗ ಉಂಟಾಗುವುದು. ಮಕ್ಕಳ ವಿಷಯದಲ್ಲಿ ಸಂಯಮದೊಂದಿಗೆ ವರ್ತಿಸುವಿರಿ.

ಮಕರ: ಸ್ವತ್ತು ಮಾರಾಟ ವಿಚಾರದಲ್ಲಿ ಸೋದರರ ಅಭಿಪ್ರಾಯವನ್ನು ಪಡೆದು ಮುಂದುವರಿಯುವಿರಿ. ಶುಭ ಕಾರ್ಯ ನಡೆಸಿಕೊಡುವಲ್ಲಿ ಪ್ರಮುಖ ಪಾತ್ರ ನಿಮ್ಮದಾಗಲಿದೆ. ಮೇಲಧಿಕಾರಿಗಳ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗುವಿರಿ.

ಕುಂಭ: ಆರ್ಥಿಕ ಪರಿಸ್ಥಿತಿ ಅಷ್ಟೇನು ಉತ್ತಮವಾಗಿರುವುದಿಲ್ಲ. ವ್ಯವಹಾರದಲ್ಲಿ ಮತ್ತು ಖರ್ಚು ವೆಚ್ಚದಲ್ಲಿ ಮಿತಬಳಕೆಯನ್ನು ಸಾಧಿಸಿ. ಷರತ್ತುಗಳುಳ್ಳ ಯಾವುದೇ ರೀತಿಯ ವ್ಯವಹಾರಗಳಿಗೂ ಕೈ ಹಾಕಬೇಡಿ.

ಮೀನ: ಹೂಡಿಕೆಯ ಬಗ್ಗೆ ಮುಂದಾಲೋಚನೆ ಹಾಗೂ ಎಚ್ಚರಿಕೆಯಿಂದ ತೀರ್ಮಾನ ಕೈಗೊಳ್ಳಿ. ಉದ್ಯೋಗಕ್ಕಾಗಿ ನಡೆಸಿದ ತೀವ್ರ ಪ್ರಯತ್ನ ಫಲ ನೀಡಲಿದೆ. ಕುಟುಂಬದವರ ಜವಾಬ್ದಾರಿ ನಿಮ್ಮ ಮೇಲಿರುತ್ತದೆ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,480
ಇಂದಿನ ಅಂತ್ಯ:	24,765
ದಿನದ ಗರಿಷ್ಠ:	24,854
	285

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹480
12 ಕ್ಕೆ	₹63
ಮೈಸೂರು: 100 ಕ್ಕೆ	₹480

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹213.50
ಆರ್‌ಎಸ್‌ಎಸ್-5	₹207
ಗುಡ್ ಲಾಟ್	₹195

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹466-750
ದ್ವಿತಳಿ (ಬಿ.ವಿ)	₹440-885

ಮುದ್ರೆಮನೆ ಕಾಫಿ

ಎಪಿ	₹22700
ಎಸಿ	₹13100
ಆರ್‌ಪಿ	₹18300
ಆರ್‌ಸಿ	₹9880

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1660 (1650)
ಸೋಯಾ (ರಿಫೈನ್ಡ್)	₹1390 (1380)
ಸೂರ್ಯಕಾಂತಿ (ರಿಫೈನ್ಡ್)	₹1630 (1610)
ಪಾಮೋಲಿನ್	₹1335 (1320)

ಕಚ್ಚಾ ತೈಲಕ್ಕೆ ಅಮೆರಿಕದ ವಿಮೆ?

ಹಡಗುಗಳಿಗೆ ವಿಮೆ ವಿಚಾರ • ಅಮೆರಿಕದ ಜೊತೆ ಮಾತುಕತೆ ನಡೆಸಿದ ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಿಂದ ಕಚ್ಚಾ ತೈಲವನ್ನು ಸುರಕ್ಷಿತವಾಗಿ ತರಿಸಿಕೊಳ್ಳುವ ಉದ್ದೇಶದಿಂದ ಹಡಗುಗಳಿಗೆ ವಿಮಾ ರಕ್ಷೆ ಒದಗಿಸುವಂತೆ ಅಮೆರಿಕದ ಜೊತೆ ಭಾರತ ಮಾತುಕತೆ ನಡೆಸಿದೆ.

ಭಾರತದ ಬಳಿ 25 ದಿನಗಳಿಗೆ ಆಗುವಷ್ಟು ಕಚ್ಚಾ ತೈಲದ ಸಂಗ್ರಹ ಇದೆ. ಅಷ್ಟೇ ದಿನಗಳಿಗೆ ಆಗುವಷ್ಟು ಸಂಸ್ಕರಿತ ತೈಲದ ಸಂಗ್ರಹ ಕೂಡ ಇದೆ. ಆದರೆ ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಹೊರ್ಮುಜ್ ಜಲಸಂಧಿಯ ಮೂಲಕ ಹಡಗುಗಳ ಸಂಚಾರಕ್ಕೆ ಅಡ್ಡಿ ಸೃಷ್ಟಿಸಿದೆ. ಜಲಸಂಧಿಯ ಮೂಲಕ ಸಂಚರಿಸಲು ಹಡಗುಗಳಿಗೆ ಅವಕಾಶ ಕೊಡುವುದಿಲ್ಲ ಎಂದು ಇರಾನ್ ಎಚ್ಚರಿಸಿದೆ.

ತನಗೆ ಬೇಕಿರುವ ಕಚ್ಚಾ ತೈಲದಲ್ಲಿ ಶೇ 88ರಷ್ಟನ್ನು ಭಾರತವು ಆಮದು ಮಾಡಿಕೊಳ್ಳುತ್ತದೆ. ಎಲ್‌ಎನ್‌ಜಿ (ದ್ರವೀಕೃತ ನೈಸರ್ಗಿಕ ಅನಿಲ) ಅಗತ್ಯದ ಶೇ 50ರಷ್ಟು ಕೂಡ ಆಮದಾಗುತ್ತದೆ. ಹೆಚ್ಚಿನ ಪಾಲು ಕಚ್ಚಾ ತೈಲ ಹಾಗೂ ಎಲ್‌ಎನ್‌ಜಿ ಹೊರ್ಮುಜ್ ಜಲಸಂಧಿಯ ಮೂಲಕ ಭಾರತಕ್ಕೆ ಬರುತ್ತದೆ.

'ಈಗ ನಮ್ಮಲ್ಲಿನ ಸಂಗ್ರಹವು ಉತ್ತಮ ಮಟ್ಟದಲ್ಲಿ ಇದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಲ್ಲದೆ, ಹೊರ್ಮುಜ್ ಜಲಸಂಧಿಯನ್ನು ಬಳಸುವ ಅಗತ್ಯ ಇಲ್ಲದ ದೇಶಗಳಿಂದಲೂ ಭಾರತಕ್ಕೆ ಕಚ್ಚಾ ತೈಲ ಬರುತ್ತಿದೆ. ಕೇಂದ್ರ ಪೆಟ್ರೋಲಿಯಂ ಸಚಿವಾಲಯವು ಕಚ್ಚಾ ತೈಲ, ಎಲ್‌ಪಿಜಿ ಮತ್ತು ಎಲ್‌ಎನ್‌ಜಿ ತರಿಸಿಕೊಳ್ಳಲು ಪ್ರಮುಖ ಉತ್ಪಾದಕರು ಹಾಗೂ ವರ್ತಕರ ಜೊತೆ ಮಾತುಕತೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

'ಹೊರ್ಮುಜ್ ಜಲಸಂಧಿಯನ್ನು ದಾಟುವ ಹಡಗುಗಳಿಗೆ ಅಮೆರಿಕದ ಅಂತರರಾಷ್ಟ್ರೀಯ ಅಭಿವೃದ್ಧಿ ಹಣಕಾಸು ನಿಗಮದಿಂದ (ಐಡಿಎಫ್‌ಸಿ) ವಿಮಾ ರಕ್ಷೆ ಕೊಡಿಸಲು ನಾವು ಅಮೆರಿಕದ ಅಧಿಕಾರಿಗಳ ಜೊತೆ ಮಾತುಕತೆ ನಡೆಸುತ್ತಿದ್ದೇವೆ' ಎಂದು ಕೇಂದ್ರದ ಮೂಲಗಳು ಹೇಳಿವೆ.

ಈ ಪ್ರದೇಶದ ಮೂಲಕ ಸಾಗುವ ಹಡಗುಗಳಿಗೆ ಹಣಕಾಸಿನ ರಕ್ಷೆ ಒದಗಿಸುವಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಐಡಿಎಫ್‌ಸಿಗೆ ಆದೇಶಿಸಿದ್ದಾರೆ.

ಆದರೆ ಐಡಿಎಫ್‌ಸಿ ಆ ಕೆಲಸ ಮಾಡುವುದಕ್ಕೂ ಮೊದಲು ಲಕ್ಷಾಂತರ ಕೋಟಿ ಡಾಲರ್ ಮೌಲ್ಯದ ನಿಧಿಯೊಂದನ್ನು ರೂಪಿಸಬೇಕಾಗುತ್ತದೆ. ಹಡಗುಗಳ ಮೂಲಕ ಸರಕು ತರಿಸಿಕೊಳ್ಳುವ ಒಪ್ಪಂದ ಮಾಡಿಕೊಳ್ಳುವವರೇ ವಿಮಾ ಪ್ರೀಮಿಯಂ ಮೊತ್ತ ಭರಿಸಬೇಕಾಗುತ್ತದೆ ಎಂದು ಕೇಂದ್ರದ ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ರಷ್ಯಾ ಸೇರಿದಂತೆ ಲಭ್ಯವಿರುವ ಎಲ್ಲ ಮೂಲಗಳಿಂದ ಕಚ್ಚಾ ತೈಲವನ್ನು ಖರೀದಿಸಲು ಭಾರತ ಮುಂದಾಗಿದೆ ಎಂದು ಗೊತ್ತಾಗಿದೆ. ಅಲ್ಲದೆ, ಅಮೆರಿಕದಿಂದ ಎಲ್‌ಪಿಜಿ ಆಮದು ಕೂಡ ಜಾಸ್ತಿ ಆಗಿದೆ.

ಸಮರದಿಂದಾಗಿ ಕಂಪನಿಗಳ ಲಾಭದ ಮೇಲೆ ಪರಿಣಾಮ: ಕೋಟಕ್ ವರದಿ

ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ಶುರುವಾಗಿರುವ ಸಂಘರ್ಷವು ಕೆಲವು ವಾರಗಳಿಗಿಂತ ಹೆಚ್ಚು ಅವಧಿಗೆ ಮುಂದುವರಿದರೆ ದೇಶದ ಕಂಪನಿಗಳ ಲಾಭವು ತಗ್ಗುವ ಅಪಾಯ ಇದೆ ಎಂದು ಕೋಟಕ್ ಇನ್‌ಸ್ಟಿಟ್ಯೂಷನಲ್ ಈಕ್ವಿಟಿಸ್ ವರದಿ ತಿಳಿಸಿದೆ.

ಸಂಘರ್ಷದ ಪರಿಣಾಮವಾಗಿ ತೈಲ ಮತ್ತು ಅನಿಲ ಬೆಲೆ ಹೆಚ್ಚಳವಾಗಿ, ದೇಶದ ಆರ್ಥಿಕತೆ ಮತ್ತು ಮಾರುಕಟ್ಟೆಯ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆ ಇದೆ ಎಂದು ಅದು ಹೇಳಿದೆ.

ಪಶ್ಚಿಮ ಏಷ್ಯಾದಲ್ಲಿನ ಸಮರವು ಹೂಡಿಕೆದಾರರ ಮೇಲೆ ಈಗಾಗಲೇ ಪರಿಣಾಮ ಬೀರಲು ಆರಂಭಿಸಿದೆ. ಅದರಲ್ಲೂ ಮುಖ್ಯವಾಗಿ ವಿದೇಶಿ ಹೂಡಿಕೆದಾರರ ಮೇಲೆ ಪರಿಣಾಮ ಬೀರಿದೆ. ಅವರು ಇಂಧನ ಪೂರೈಕೆಯಲ್ಲಿನ ಸಮಸ್ಯೆ ಹಾಗೂ ಅರ್ಥವ್ಯವಸ್ಥೆಯ ಸ್ಥಿರತೆಯ ವಿಚಾರವಾಗಿ ಹೆಚ್ಚು ಸೂಕ್ಷ್ಮವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ ಎಂದು ವರದಿ ಹೇಳಿದೆ.

ಭಾರತವು ತನಗೆ ಬೇಕಿರುವ ಕಚ್ಚಾ ತೈಲದ ಬಹುಪಾಲನ್ನು ಆಮದು ಮಾಡಿಕೊಳ್ಳುತ್ತದೆ. ಕಚ್ಚಾ ತೈಲದ ಬೆಲೆಯಲ್ಲಿನ ಏರಿಕೆಯು ದೇಶದ ಅರ್ಥವ್ಯವಸ್ಥೆಯ ಮೇಲೆ ಭಾರಿ ಪರಿಣಾಮ ಬೀರುತ್ತದೆ.

ಕಚ್ಚಾ ತೈಲದ ಬೆಲೆ ಹೆಚ್ಚಳವಾದಲ್ಲಿ ವಿವಿಧ ವಲಯಗಳಲ್ಲಿ ತಯಾರಿಕಾ ವೆಚ್ಚ ಜಾಸ್ತಿ ಆಗುತ್ತದೆ, ಹಣದುಬ್ಬರ ಪ್ರಮಾಣ ಹೆಚ್ಚುತ್ತದೆ. ಅಲ್ಲದೆ, ಆಮದು ವೆಚ್ಚ ಕೂಡ ಜಾಸ್ತಿ ಆಗಿ ದೇಶದ ಕಂಪನಿಗಳ ಲಾಭದ ಪ್ರಮಾಣದ ಮೇಲೆ ಪರಿಣಾಮ ಆಗುತ್ತದೆ ಎಂದು ವರದಿ ಹೇಳಿದೆ.

ದೇಶದ ಹೂಡಿಕೆದಾರರು ಷೇರುಪೇಟೆಯಲ್ಲಿ ಸ್ಥಿರವಾಗಿ ಹೂಡಿಕೆ ಮಾಡುತ್ತಿರುವುದು ಹಾಗೂ ಭಾರತದ ಮಧ್ಯಮ ಅವಧಿಯ ಬೆಳವಣಿಗೆಯ ಸಾಧ್ಯತೆಯು ಮಾರುಕಟ್ಟೆಗೆ ಪೂರಕವಾಗಿ ಇವೆ. ಆದರೆ ಜಾಗತಿಕ ಮಟ್ಟದಲ್ಲಿನ ಬೆಳವಣಿಗೆಗಳ ಮೇಲೆ ಅಲ್ಪಾವಧಿಯಲ್ಲಿ ಗಮನ ಇರಿಸಬೇಕಾಗಿದೆ ಎಂದು ಅದು ಹೇಳಿದೆ.

ಎಂಆರ್‌ಪಿಎಲ್: ಒಂದು ಘಟಕದ ಕಾರ್ಯಾಚರಣೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ರಿಫೈನರಿ ಮತ್ತು ಪೆಟ್ರೊಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ಸಂಸ್ಥೆಯು ತನ್ನಲ್ಲಿರುವ ಮೂರು ಕಚ್ಚಾತೈಲ ಸಂಸ್ಕರಣಾ ಘಟಕಗಳಲ್ಲಿ ಒಂದು ಘಟಕದ ಕಾರ್ಯಾಚರಣೆಯನ್ನು ಗುರುವಾರ ಸ್ಥಗಿತಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.

ಎಂಆರ್‌ಪಿಎಲ್ ತನ್ನ ಅಗತ್ಯದ ಬಹುಪಾಲು ಕಚ್ಚಾತೈಲವನ್ನು ಕೊಲ್ಲಿ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಅಲ್ಲಿನ ಹೊರ್ಮುಜ್ ಜಲಸಂಧಿಯಲ್ಲಿ ಹಡಗು ಸಂಚಾರಕ್ಕೆ ಇರಾನ್ ತಡೆ ಒಡ್ಡಿರುವ ಕಾರಣ ಅಲ್ಲಿಂದ ಕಚ್ಚಾತೈಲ ಪೂರೈಕೆ ಆಗುತ್ತಿಲ್ಲ. ಹಾಗಾಗಿ ಎಂಆರ್‌ಪಿಎಲ್‌ನ ಕಚ್ಚಾತೈಲ ಸಂಗ್ರಹ ಕಡಿಮೆಯಾಗಿದೆ ಎಂದು ಮೂಲಗಳು ಹೇಳಿವೆ.

ಜಗತ್ತಿನ ಇಂಧನ ಸರಕಿನಲ್ಲಿ ಐದನೇ ಒಂದರಷ್ಟು ಪ್ರಮಾಣ ಕಚ್ಚಾತೈಲ ಸಾಗಾಟ ಹೊರ್ಮುಜ್ ಜಲಸಂಧಿಯ ಮೂಲಕವೇ ನಡೆಯುತ್ತಿತ್ತು.

ವರ್ಷದಲ್ಲಿ ಸುಮಾರು 1.80 ಕೋಟಿ ಟನ್ ಕಚ್ಚಾತೈಲವನ್ನು ಎಂಆರ್‌ಪಿಎಲ್ ಆಮದು ಮಾಡಿಕೊಳ್ಳುತ್ತದೆ. ಅದನ್ನು ಸಂಸ್ಕರಣೆಗೆ ಒಳಪಡಿಸಿ ವಿವಿಧ ಪೆಟ್ರೋಲಿಯಂ ಉತ್ಪನ್ನಗಳನ್ನು ತಯಾರಿಸುತ್ತದೆ. ದೇಶದ ಆಂತರಿಕ ಬೇಡಿಕೆಯನ್ನು ಪೂರೈಸುವುದರ ಜೊತೆಗೆ ವಿದೇಶಗಳಿಗೂ ಎಂಆರ್‌ಪಿಎಲ್ ಪೆಟ್ರೋಲಿಯಂ ಉತ್ಪನ್ನಗಳು ರಫ್ತಾಗುತ್ತವೆ.

ಎಂಆರ್‌ಪಿಎಲ್ ರಷ್ಯಾದಿಂದ ಕಚ್ಚಾತೈಲ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿದೆ. ಹಾಗಾಗಿ ಕಚ್ಚಾತೈಲಕ್ಕೆ ಕೊಲ್ಲಿ ರಾಷ್ಟ್ರಗಳ ಮೇಲಿನ ಅವಲಂಬನೆ ಹೆಚ್ಚಾಗಿದೆ ಎಂದು ಮೂಲಗಳು ತಿಳಿಸಿವೆ.

ಅಡಿಕೆ ಧಾರಣೆ

ಪುತ್ತೂರು		ಸಾಗರ (ಮುಂದು.)		ಶಿರಸಿ	
ಕೋಕ	20000-37500	ರಾಶಿ	48666-58500	ಚಾಲಿ	44299-47612
ಹೊಸತು	26000-47000	ಸರಕು	53300-92396	ಕೆಂಪುಗೋಟು	21199-36999
ಸಾಗರ		**ಸಿದ್ದಾಪುರ**		ರಾಶಿ	51108-56496
ಬಿಳಿಗೋಟು	14666-36011	ಬಿಳಿಗೋಟು	27899-38000	**ಯಲ್ಲಾಪುರ**	
ಚಾಲಿ	20110-44019	ಚಾಲಿ	41699-48099	ಆಪಿ	58001-59275
ಕೋಕ	14999-36677	ಕೋಕ	23699-34469	ಬಿಳಿಗೋಟು	18899-38799
ಕೆಂಪುಗೋಟು	12105-38299	ಹಳೆಚಾಲಿ	45300-48099	ಕೋಕ	15000-33299
ರಾಶಿ	45599-56299	ಕೆಂಪುಗೋಟು	31911-36699	ಹಳೆಚಾಲಿ	43019-50555
ಸಿಪ್ಪೆಗೋಟು	9290-23369	ರಾಶಿ	48899-54099	ಹೊಸಚಾಲಿ	39009-47599
ಶಿವಮೊಗ್ಗ		ತಟ್ಟಿಬೆಟ್ಟೆ	37099-50099	ಕೆಂಪುಗೋಟು	24900-38819
ಬೆಟ್ಟೆ	50119-65999	**ಶಿರಸಿ**		ರಾಶಿ	49419-58699
ಗೊರಬಲು	19010-41399	ಬೆಟ್ಟೆ	40699-51849	ತಟ್ಟಿಬೆಟ್ಟೆ	37510-52399
		ಬಿಳಿಗೋಟು	20000-39108		

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹20000-20000
ತಿಪಟೂರು	₹28000-29609
ತುರುವೇಕೆರೆ	₹28500-28500

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1500
ಮಧ್ಯಮ	₹600-1000
ಸಣ್ಣ	₹300-600

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಹುಟ್ಟುಹಬ್ಬದ ನೆನಪು

ಶ್ರೀ ಎ.ಜಿ. ದುರ್ಗಪ್ಪ, ಬನ್ನಿಕೋಡು
ಜನನ : 06.03.1925
ಮರಣ : 20.11.2016

ಶ್ರೀ ಮತಿ ಡಿ.ಎಲ್. ಗಂಗಮ್ಮ ದುರ್ಗಪ್ಪ
ಜನನ : 31.03.1932
ಮರಣ : 03.05.1985

ನಿಮ್ಮ ಆಶೀರ್ವಾದದಲ್ಲಿ, ಡಾ.ರವಿಪ್ರಕಾಶ್ ಡಿ.

2ನೇ ವರ್ಷದ ಚಿರಸ್ಮರಣೆ

ಸಿ.ಆರ್. ಗೋಪಾಲ್

ಲೇಟ್ ಶ್ರೀ ಕೆ.ರಾಮಯ್ಯ ಮತ್ತು ಲೇಟ್ ಶ್ರೀಮತಿ ಡಿ.ಶಾರದಮ್ಮನವರ ಪುತ್ರ
ಚಿಕ್ಕ ಆಡುಗೋಡಿ, ಬೆಂಗಳೂರು

ಜನನ: 17-10-1954 ನಿಧನ: 06-03-2024

ನೀವು ನಮ್ಮನಗಲಿ ಇಂದಿಗೆ ಎರಡು ವರ್ಷಗಳು ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ...

ದುಃಖತಪ್ತರು: ಧರ್ಮಪತ್ನಿ, ಮಕ್ಕಳು, ಸಹೋದರರು, ಸಹೋದರಿಯರು, ಭಾವಂದಿರು, ಅತ್ತಿಗೆಯರು, ನಾದಿನಿಯರು, ಅಳಿಯಂದಿರು, ಸೊಸೆಯಂದಿರು, ಮತ್ತು ಮೊಮ್ಮಕ್ಕಳು

ಎಸ್.ಆರ್. ಕುಟುಂಬವರ್ಗದವರು

ನೇಪಾಳ: ಮತದಾನ ಪೂರ್ಣ

ಕಠ್ಮಂಡು (ಎಎಫ್‌ಪಿ): ನೇಪಾಳದಲ್ಲಿ ಸಾರ್ವತ್ರಿಕ ಚುನಾವಣೆಯ ಮತದಾನ ಪ್ರಕ್ರಿಯೆಯು ಗುರುವಾರ ಶಾಂತಿಯುತವಾಗಿ ನಡೆಯಿತು.

ಭ್ರಷ್ಟಾಚಾರ ವಿರೋಧಿ ಹೋರಾಟ ಮತ್ತು ಯುವಕರ ಪ್ರತಿಭಟನೆಯಿಂದ ಸರ್ಕಾರ ಪತನಗೊಂಡು ಆರು ತಿಂಗಳ ಬಳಿಕ ಸಂಸತ್ ಚುನಾವಣೆ ನಡೆದಿದೆ.

ಕೆಲವು ಸ್ಥಾನಗಳ ಫಲಿತಾಂಶ ಶುಕ್ರವಾರ ಪ್ರಕಟವಾಗುವ ಸಾಧ್ಯತೆಗಳಿವೆ. ಆದರೆ ಪೂರ್ಣ ಪ್ರಮಾಣದ ಫಲಿತಾಂಶ ಹೊರಬೀಳಲು ಹಲವು ದಿನಗಳು ಬೇಕಾಗಬಹುದು.

'ಬದಲಾವಣೆಗಾಗಿ ನೇಪಾಳಿಗರು ದೀರ್ಘ ಕಾಲದಿಂದ ಕಾಯುತ್ತಿದ್ದರು. ಈ ಬಾರಿ ಅರ್ಥಪೂರ್ಣ ಬದಲಾವಣೆಗಳಾಗಬಹುದು' ಎಂದು ಮತದಾರರೊಬ್ಬರು ತಿಳಿಸಿದರು.

ಮುಂಬೈ ಧಾರಣೆ (ಶೇಂಗಾ)

05-03-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9500-9600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1670 (1660)
ಒಂದು ವಾರದ ಡೆಲಿವರಿ	1665 (1655)
ಪಾಮ್ ವಾರದ ಡೆಲಿವರಿ	1333 (1318)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1530)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,59,000 (1,62,500)
ಬೆಳ್ಳಿ ಕೆ.ಜಿಗೆ	2,60,500 (2,71,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮೀನು ಶಿಕಾರಿ

ಪಿಟಿಐ ಚಿತ್ರ

ಪಶ್ಚಿಮ ಬಂಗಾಳದ ಬಿರ್ಭುಮ್ ಜಿಲ್ಲೆಯ ಪರುಯಿ ಗ್ರಾಮದಲ್ಲಿನ ಜನರು ಸಾಂಪ್ರದಾಯಿಕ ಪದ್ಧತಿಯಲ್ಲಿ ಗುರುವಾರ ಮೀನು ಹಿಡಿದರು

ವಿಧಾನಸಭಾ ಚುನಾವಣೆ ಹೊಸ್ತಿಲಲ್ಲಿ ಬೆಳವಣಿಗೆ
ಪಶ್ಚಿಮ ಬಂಗಾಳ ರಾಜ್ಯಪಾಲ ರಾಜೀನಾಮೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ದಿನಗಣನೆ ಆರಂಭವಾಗಿರುವಂತೆಯೇ, ಹಠಾತ್ ಬೆಳವಣಿಗೆಯಲ್ಲಿ ಗುರುವಾರ ನವದೆಹಲಿ ಪ್ರವಾಸದಲ್ಲಿದ್ದ ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಸಿ.ವಿ ಆನಂದ ಬೋಸ್

'ರಾಜ್ಯಪಾಲರ ನಿರ್ಧಾರ ಆಘಾತ ಮೂಡಿಸಿದೆ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಿಳಿಸಿದ್ದಾರೆ.

2022ರ ನವೆಂಬರ್ 17ರಂದು ಬೋಸ್ ಅವರನ್ನು ಬಂಗಾಳದ ರಾಜ್ಯಪಾಲರನ್ನಾಗಿ ನೇಮಿಸಲಾಗಿತ್ತು.

'ನಾನು ರಾಜೀನಾಮೆ ನೀಡಿದ್ದೇನೆ. ಕಳೆದ ಮೂರೂವರೆ ವರ್ಷಗಳಿಂದ ಬಂಗಾಳದ ರಾಜ್ಯಪಾಲರಾಗಿ ಜವಾಬ್ದಾರಿ ನಿರ್ವಹಿಸಿದ್ದು, ನನಗೆ ಇಷ್ಟು ಸಾಕು' ಎಂದು 'ಪಿಟಿಐ' ಸುದ್ದಿಸಂಸ್ಥೆಗೆ ಖಚಿತಪಡಿಸಿದ್ದಾರೆ.

> ವಿಧಾನಸಭಾ ಚುನಾವಣೆಗೂ ಮುನ್ನ ಅಮಿತ್ ಶಾ ಅವರ ಒತ್ತಡದಿಂದಲೇ, ಬೋಸ್ ಅವರು ಈ ನಿರ್ಧಾರಕ್ಕೆ ಬಂದಿರುವ ಸಾಧ್ಯತೆಯಿದೆ
>
> **ಮಮತಾ ಬ್ಯಾನರ್ಜಿ,** ಮುಖ್ಯಮಂತ್ರಿ ಪಶ್ಚಿಮ ಬಂಗಾಳ

ಆರ್.ಎನ್.ರವಿ ಬಂಗಾಳದ ರಾಜ್ಯಪಾಲ

ಆರ್.ಎನ್.ರವಿ

ನವದೆಹಲಿ (ಪಿಟಿಐ): ತಮಿಳುನಾಡಿನ ರಾಜ್ಯಪಾಲ ಆರ್.ಎನ್.ರವಿ ಅವರನ್ನು ಪಶ್ಚಿಮ ಬಂಗಾಳದ ರಾಜ್ಯಪಾಲರನ್ನಾಗಿ ಗುರುವಾರ ನೇಮಿಸಲಾಗಿದೆ. ಸಿ.ವಿ. ಆನಂದ ಬೋಸ್ ಅವರ ರಾಜೀನಾಮೆ ಸ್ವೀಕಾರದ ಬಳಿಕ ಅವರ ಸ್ಥಾನಕ್ಕೆ ರವಿ ಅವರನ್ನು ನೇಮಕಗೊಳಿಸಲಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕಚೇರಿ ತಿಳಿಸಿದೆ.

ಪಶ್ಚಿಮ ಬಂಗಾಳ ಮಾತ್ರವಲ್ಲದೇ, ಬಿಹಾರ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಿಗೆ ನೂತನ ರಾಜ್ಯಪಾಲರನ್ನು ನೇಮಕಗೊಳಿಸಿ ಮುರ್ಮು ಅವರು ಆದೇಶ ಹೊರಡಿಸಿದ್ದಾರೆ.

ಕೇರಳ ರಾಜ್ಯಪಾಲರಾದ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ತಮಿಳುನಾಡಿನ ರಾಜ್ಯಪಾಲರ ಕರ್ತವ್ಯಗಳನ್ನೂ ನಿರ್ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಲೆಫ್ಟಿನೆಂಟ್ ಜನರಲ್ ಸಯ್ಯದ್ ಅತಾ ಹಸನೈನ್ ಅವರನ್ನು ಬಿಹಾರದ ನೂತನ ರಾಜ್ಯಪಾಲರನ್ನಾಗಿ ನೇಮಿಸಲಾಗಿದ್ದು, ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಆಗಿದ್ದ ವಿ.ಕೆ.ಸಕ್ಸೇನಾ ಅವರನ್ನು ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಕವಿಂದರ್ ಗುಪ್ತಾ ಅವರ ಸ್ಥಾನಕ್ಕೆ ನೇಮಿಸಲಾಗಿದೆ.

ಗುಪ್ತಾ ಅವರನ್ನು ಹಿಮಾಚಲ ಪ್ರದೇಶದ ರಾಜ್ಯಪಾಲರನ್ನಾಗಿ ನೇಮಿಸಿ, ತರಣ್‌ಜಿತ್ ಸಿಂಗ್ ಸಂಧು ಅವರನ್ನು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಮಾಡಲಾಗಿದೆ.

ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿದ್ದ ಶಿವ ಪ್ರತಾಪ ಶುಕ್ಲಾ ಅವರನ್ನು ತೆಲಂಗಾಣದ ರಾಜ್ಯಪಾಲರಾದ ಜಿಷ್ಣು ದೇವ್ ವರ್ಮಾ ಅವರ ಸ್ಥಾನಕ್ಕೆ ನೇಮಿಸಿ, ಜಿಷ್ಣು ಅವರನ್ನು ಮಹಾರಾಷ್ಟ್ರದ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ನಂದ ಕಿಶೋರ್ ಯಾದವ್ ಅವರನ್ನು ನಾಗಾಲ್ಯಾಂಡ್‌ನ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

24 ಲಕ್ಷ ವಾಹನಗಳ ಮಾರಾಟ

ನವದೆಹಲಿ (ಪಿಟಿಐ): ಫೆಬ್ರುವರಿ ತಿಂಗಳಿನಲ್ಲಿ ದೇಶದ ರಿಟೇಲ್ ಮಾರುಕಟ್ಟೆಯಲ್ಲಿ 24.09 ಲಕ್ಷ ವಾಹನಗಳು ಮಾರಾಟವಾಗಿವೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ತಿಳಿಸಿದೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ 19.17 ಲಕ್ಷ ವಾಹನಗಳು ಮಾರಾಟವಾಗಿದ್ದವು. ಇದಕ್ಕೆ ಹೋಲಿಸಿದರೆ ಈ ಬಾರಿ ವಾಹನಗಳ ಮಾರಾಟದಲ್ಲಿ ಶೇ 25.62ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ. ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಶೇ 25ರಷ್ಟು ಏರಿಕೆಯಾಗಿದ್ದರೆ, ತ್ರಿಚಕ್ರ ವಾಹನಗಳು (ಶೇ 24), ಪ್ರಯಾಣಿಕ ವಾಹನಗಳು (ಶೇ 26) ಮತ್ತು ವಾಣಿಜ್ಯ ವಾಹನಗಳ ಮಾರಾಟದಲ್ಲಿ ಶೇ 29ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

'ಜಿಎಸ್‌ಟಿ ಇಳಿಕೆ, ಹೊಸ ಮಾದರಿಯ ವಾಹನಗಳ ಬಿಡುಗಡೆಯು ಮಾರಾಟದ ಹೆಚ್ಚಳಕ್ಕೆ ಕಾರಣವಾಗಿವೆ' ಎಂದು ಎಫ್‌ಎಡಿಎ ಅಧ್ಯಕ್ಷ ಸಿ.ಎಸ್. ವಿಘ್ನೇಶ್ವರ ತಿಳಿಸಿದ್ದಾರೆ.

2ನೇ ಮಗು ಪಡೆದರೆ ₹25 ಸಾವಿರ ಪ್ರೋತ್ಸಾಹಧನ: ನಾಯ್ಡು

ಅಮರಾವತಿ (ಪಿಟಿಐ): ಆಂಧ್ರಪ್ರದೇಶದಲ್ಲಿ ಕುಸಿಯುತ್ತಿರುವ ಜನನ ಪ್ರಮಾಣ ಹೆಚ್ಚಿಸಲು ಎರಡನೇ ಮಗು ಪಡೆಯುವ ದಂಪತಿಗೆ ₹25 ಸಾವಿರ 'ಜನನ ಪ್ರೋತ್ಸಾಹಧನ' ನೀಡಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಎನ್. ಚಂದ್ರಬಾಬು ನಾಯ್ಡು

ಗುರುವಾರ ಅಧಿವೇಶನದಲ್ಲಿ ಮಾತನಾಡಿದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು, 'ರಾಜ್ಯದಲ್ಲಿ ಪ್ರಸ್ತುತ ಒಟ್ಟು ಫಲವಂತಿಕೆ ದರ 1.5ರಷ್ಟಿದ್ದು, ಇದು ನಿಗದಿತ ಮಟ್ಟಕ್ಕಿಂತ ಕಡಿಮೆಯಿದೆ. ಇದನ್ನು 2.1ಕ್ಕೆ ಏರಿಸುವುದು ಸರ್ಕಾರದ ಉದ್ದೇಶವಾಗಿದೆ' ಎಂದು ಹೇಳಿದ್ದಾರೆ.

'ನಾವು ಹೊಸ ವಿಧಾನವನ್ನು ಪರಿಶೀಲಿಸುತ್ತಿದ್ದೇವೆ. ಎರಡನೇ ಮಗು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳನ್ನು ಪಡೆಯುವ ಪೋಷಕರಿಗೆ ಹೆರಿಗೆಯ ಸಮಯದಲ್ಲಿಯೇ ₹25 ಸಾವಿರ ನೀಡಲಾಗುವುದು. ಇದು ದೊಡ್ಡ ಮಟ್ಟದ ಬದಲಾವಣೆ ತರಲಿದೆ. ಇದು ಸಾಧ್ಯವಾದರೆ, ತುಂಬಾ ಉಪಯುಕ್ತವಾಗಲಿದೆ' ಎಂದು ನಾಯ್ಡು ತಿಳಿಸಿದ್ದಾರೆ.

'ವಯಸ್ಸಾದ ಜನರಿಂದಾಗಿ ಅನೇಕ ದೇಶಗಳು ವಿವಿಧ ಸವಾಲುಗಳನ್ನು ಎದುರಿಸುತ್ತಿವೆ. ರಾಜ್ಯ ಸರ್ಕಾರವು ಮಾರ್ಚ್ ಅಂತ್ಯದ ವೇಳೆಗೆ ಜನಸಂಖ್ಯಾ ನಿರ್ವಹಣೆಯ ಕುರಿತು ನೀತಿಯನ್ನು ರೂಪಿಸಿ ಏಪ್ರಿಲ್‌ನಿಂದ ಜಾರಿಗೆ ತರಲು ಚಿಂತನೆ ನಡೆಸಿದೆ' ಎಂದಿದ್ದಾರೆ.

ಅಂಡಾಣು ಮಾರಾಟ ದಂಧೆ ಪ್ರಕರಣ
ನಾಸಿಕ್‌ನಲ್ಲಿ ಐವಿಎಫ್ ಕೇಂದ್ರಕ್ಕೆ ಬೀಗ

ನಾಸಿಕ್ (ಪಿಟಿಐ): ಮಹಿಳೆಯರಿಗೆ ಹಣದ ಆಮಿಷವೊಡ್ಡಿ ಅಂಡಾಣು ಪಡೆದು, ಬಾಡಿಗೆ ತಾಯ್ತನದ ಅಕ್ರಮ ವ್ಯವಹಾರ ನಡೆಸುತ್ತಿದ್ದ ನಾಸಿಕ್ ಐವಿಎಫ್ ಕೇಂದ್ರವನ್ನು ಅಧಿಕಾರಿಗಳು ಮುಚ್ಚಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ತನಿಖಾ ಸಮಿತಿಯನ್ನು ರಚಿಸಲಾಗಿದೆ.

ಅಂಡಾಣುವನ್ನು ಅಕ್ರಮವಾಗಿ ಪಡೆದು ನಂತರ ಮಾರಾಟ ಮಾಡುತ್ತಿದ್ದ ಪ್ರಕರಣವು ಠಾಣೆ ಜಿಲ್ಲೆಯ ಬದ್ಲಾಪುರದಲ್ಲಿ ಇತ್ತೀಚೆಗೆ ಬೆಳಕಿಗೆ ಬಂದಿತ್ತು.

'ಪ್ರಕರಣ ಸಂಬಂಧ ತನಿಖೆ ಆರಂಭಿಸಿದ್ದು 'ಮಾಲತಿ ಐವಿಎಫ್ ಕೇಂದ್ರ'ದಿಂದ ಹಲವು ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ನಾಸಿಕ್‌ನ ಮಹಾ ನಗರ ಪಾಲಿಕೆಯ ಆರೋಗ್ಯ ವಿಭಾಗದ ಅಧಿಕಾರಿಗಳು ಕೇಂದ್ರವನ್ನು ಮುಚ್ಚಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ನಾಸಿಕ್‌ನ ಮುಂಬೈ ನಾಕಾ ಪ್ರದೇಶದಲ್ಲಿರುವ ಐವಿಎಫ್ ಕೇಂದ್ರದ ಮೇಲೆ ಬುಧವಾರ ದಾಳಿ ನಡೆಸಿದ್ದ ಆರೋಗ್ಯ ಇಲಾಖೆಯ ಅಧಿಕಾರಿಗಳು, ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದರು. ಇದಾದ ಬಳಿಕ ಐವಿಎಫ್ ಕೇಂದ್ರದ ನೋಂದಣಿಯನ್ನು ರದ್ದುಗೊಳಿಸಲಾಗಿದ್ದು, ಬೀಗಮುದ್ರೆ ಹಾಕಲಾಗಿದೆ' ಎಂದು ಹೇಳಿದ್ದಾರೆ.

ವಿಸ್ತೃತ ತನಿಖೆಗಾಗಿ ಸಮಿತಿಯನ್ನು ರಚಿಸಲಾಗಿದ್ದು, ಐವಿಎಫ್ ಕೇಂದ್ರವು ನಿಯಾಮಗಳಿಗಳನ್ನು ಉಲ್ಲಂಘಿಸಿದ ಕುರಿತು ವರದಿ ನೀಡಲಿದೆ. ಕೇಂದ್ರದಲ್ಲಿ ಹಲವು ಅಕ್ರಮಗಳು ನಡೆದಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಕೇಂದ್ರವನ್ನು ಮುಚ್ಚಲಾಗಿದ್ದು, ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ನಾಸಿಕ್ ಆರೋಗ್ಯ ಇಲಾಖೆಯ ಮುಖ್ಯ ಆರೋಗ್ಯಾಧಿಕಾರಿ ಡಾ. ವಿಜಯ್ ಕುಮಾರ್ ದೇವಕರ್ ತಿಳಿಸಿದ್ದಾರೆ.

ಪ್ರಕರಣ ಬೆಳಕಿಗೆ ಬಂದಿದ್ದು ಹೇಗೆ: ಅಂಡಾಣು ಮಾರಾಟ ಮಾಡಿದರೂ ಕೂಡ ನೀಡಿದ ವಾಗ್ದಾನದಂತೆ ಹಣ ನೀಡಿಲ್ಲ ಎಂದು ಮಹಿಳೆಯೊಬ್ಬರು ನೀಡಿದ ದೂರಿನ ಬಳಿಕ ಪ್ರಕರಣ ಬೆಳಕಿಗೆ ಬಂದಿತ್ತು. ಪ್ರಮುಖ ಸೂತ್ರಧಾರಿ ಸುಲಕ್ಷಣ ಗಡೇಕರ್ (44) ಅವರ ಮನೆ ಮೇಲೆ ಪೊಲೀಸರು ದಾಳಿ ನಡೆಸಿದ ವೇಳೆ ಹಾರ್ಮೋನಲ್ ಇಂಜೆಕ್ಷನ್‌ಗಳು ಪತ್ತೆಯಾಗಿತ್ತು. ಇದಾದ ಬಳಿಕ ಅಕ್ರಮದಲ್ಲಿ ಭಾಗಿಯಾಗಿದ್ದ ಅಶ್ವಿನಿ ಛಬುಸ್ಕವಾರ್ (29) ಮಂಜುಷಾ ವಾಖಂಡೆ (46) ಅವರನ್ನು ಬಂಧಿಸಲಾಗಿತ್ತು.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 899 ಅಂಶ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಶೇ 1ರಷ್ಟು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 899 ಅಂಶ (ಶೇ 1.14ರಷ್ಟು) ಏರಿಕೆಯಾಗಿ, 80,015ಕ್ಕೆ ವಹಿವಾಟು ಅಂತ್ಯಗೊಂಡಿದೆ. ದಿನದ ವಹಿವಾಟಿನ ನಡುವೆ 1,187 ಅಂಶಗಳವರೆಗೆ ಸೆನ್ಸೆಕ್ಸ್ ಜಿಗಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 285 ಅಂಶ (ಶೇ 1.17ರಷ್ಟು) ಹೆಚ್ಚಳವಾಗಿ, 24,765ಕ್ಕೆ ಕೊನೆಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 1.84ರಷ್ಟು ಹೆಚ್ಚಳವಾಗಿದೆ. ಪ್ರತೀ ಬ್ಯಾರಲ್ ದರವು 82.90 ಡಾಲರ್‌ಗೆ ತಲುಪಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್, ಶಾಂಘೈ ಮತ್ತು ಹಾಂಗ್ ಕಾಂಗ್ ಮಾರುಕಟ್ಟೆಯು ಸಕಾರಾತ್ಮಕ ವಹಿವಾಟು ಕಂಡಿವೆ. ಈ ವಹಿವಾಟು ದೇಶದ ಷೇರು ಸೂಚ್ಯಂಕಗಳ ಏರಿಕೆಗೆ ನೆರವಾದವು.

ರೂಪಾಯಿ ಮೌಲ್ಯ ಚೇತರಿಕೆ: ಬುಧವಾರ ನಡೆದ ವಹಿವಾಟಿನಲ್ಲಿ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಇಳಿದಿದ್ದ ರೂಪಾಯಿ ಮೌಲ್ಯವು ಗುರುವಾರದ ವಹಿವಾಟಿನಲ್ಲಿ ಚೇತರಿಕೆ ಕಂಡು, 41 ಪೈಸೆ ಹೆಚ್ಚಳವಾಗಿದೆ. ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು ₹91.64 ಆಗಿದೆ.

ಐಬಿಎಂ ಮೂಲಸೌಕರ್ಯ ನಾವೀನ್ಯ ಕೇಂದ್ರ ಉದ್ಘಾಟನೆ

ಬೆಂಗಳೂರು: ಅಮೆರಿಕದ ತಂತ್ರಜ್ಞಾನ ಸಂಸ್ಥೆ ಐಬಿಎಂ, ಬೆಂಗಳೂರಿನಲ್ಲಿನ ತನ್ನ ಐಬಿಎಂ ಇಂಡಿಯಾ ಸಿಸ್ಟಮ್ಸ್ ಡೆವಲಪ್‌ಮೆಂಟ್ ಲ್ಯಾಬ್ ಕ್ಯಾಂಪಸ್‌ನಲ್ಲಿ ಮೂಲಸೌಕರ್ಯ ನಾವೀನ್ಯ ಕೇಂದ್ರವನ್ನು (ಇನ್‌ಫ್ರಾಸ್ಟ್ರಕ್ಚರ್ ಇನ್ನೋವೇಷನ್ ಸೆಂಟರ್) ಗುರುವಾರ ಆರಂಭಿಸಿದೆ.

ಇದು ಐಬಿಎಂ ಭಾರತದಲ್ಲಿ ಆರಂಭಿಸಿದ ಮೊದಲ ಮೂಲಸೌಕರ್ಯ ನಾವೀನ್ಯ ಕೇಂದ್ರ. ದೇಶದ ಹಾಗೂ ಜಾಗತಿಕ ಮಾರುಕಟ್ಟೆಗಳಿಗೆ ಈ ಕೇಂದ್ರವು ಕೃತಕ ಬುದ್ಧಿಮತ್ತೆ ನಾವೀನ್ಯ ಸೇವೆಯನ್ನು ಒದಗಿಸಲಿದೆ ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

ಸುಧಾರಿತ ಮೂಲಸೌಕರ್ಯ ತಂತ್ರಜ್ಞಾನ, ಹೈಬ್ರಿಡ್ ಕ್ಲೌಡ್ ಸಾಮರ್ಥ್ಯಗಳು ಮತ್ತು ಕೃತಕ ಬುದ್ಧಿಮತ್ತೆ ಸೇವೆಗಳನ್ನು ಒಂದೇ ಸೂರಿನಡಿ ತರುವ ಮೂಲಕ, ಸುರಕ್ಷಿತ, ಜವಾಬ್ದಾರಿಯುತ ಎ.ಐ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಕೇಂದ್ರವನ್ನು ವಿನ್ಯಾಸಗೊಳಿಸಲಾಗಿದೆ ಎಂದು ತಿಳಿಸಿದೆ.

ದೀರ್ಘ ಸಮರದಿಂದ ಹಲವರಿಗೆ ಸಮಸ್ಯೆ: ಜಿಟಿಆರ್‌ಐ

ನವದೆಹಲಿ (ಪಿಟಿಐ): ಹೊರ್ಮುಜ್ ಜಲಸಂಧಿಯು ಒಂದು ವಾರಕ್ಕಿಂತ ಹೆಚ್ಚಿನ ಅವಧಿಗೆ ಬಂದ್ ಆದರೆ ದೇಶದ ಇಂಧನ ಮಾರುಕಟ್ಟೆ ಮಾತ್ರವಲ್ಲದೆ, ರಸಗೊಬ್ಬರ ಪೂರೈಕೆ, ಕೈಗಾರಿಕೆಗಳಿಗೆ ಅಗತ್ಯವಿರುವ ಕಚ್ಚಾವಸ್ತುಗಳು, ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಸರಕುಗಳು ಮೇಲೆಯೂ ಪರಿಣಾಮ ಆಗಲಿದೆ ಎಂದು ಜಿಟಿಆರ್‌ಐ ಅಂದಾಜು ಮಾಡಿದೆ.

ವಜ್ರ ಸೇರಿದಂತೆ ವಿವಿಧ ಸರಕು, ಉತ್ಪನ್ನಗಳ ರಫ್ತಿನ ಮೇಲೆಯೂ ಕೆಟ್ಟ ಪರಿಣಾಮ ಆಗಲಿದೆ ಎಂದು ಅದು ಎಚ್ಚರಿಸಿದೆ. ಜಗತ್ತಿನ ವಿವಿಧೆಡೆಗಳಿಗೆ ರಫ್ತಾಗುವ ಕಚ್ಚಾ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲದಲ್ಲಿ ದೊಡ್ಡ ಪಾಲು ಈ ಜಲಸಂಧಿಯ ಮೂಲಕ ಸಾಗಿ ಬರುತ್ತದೆ.

ಇಸ್ರೇಲ್ ಮತ್ತು ಅಮೆರಿಕದ ನಡೆಸಿದ ಜಂಟಿ ದಾಳಿಯ ನಂತರದಲ್ಲಿ ಈ ಜಲಸಂಧಿಯನ್ನು ಮುಚ್ಚಿರುವುದಾಗಿ ಇರಾನ್ ಹೇಳಿದೆ. 2025ರಲ್ಲಿ ಭಾರತವು ಪಶ್ಚಿಮ ಏಷ್ಯಾದಿಂದ ಒಟ್ಟು 98.7 ಬಿಲಿಯನ್ ಡಾಲರ್‌ನಷ್ಟು (ಇಂದಿನ ಅಂದಾಜು ₹9 ಲಕ್ಷ ಕೋಟಿ) ಮೊತ್ತದ ಸರಕುಗಳನ್ನು ಆಮದು ಮಾಡಿಕೊಂಡಿದೆ.

'ತಕ್ಷಣದ ಪರಿಣಾಮವು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಇರಲಿದೆ' ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

2025ರಲ್ಲಿ ಭಾರತವು ಪಶ್ಚಿಮ ಏಷ್ಯಾದಿಂದ 50.8 ಬಿಲಿಯನ್ ಡಾಲರ್ (₹ 4.66 ಲಕ್ಷ ಕೋಟಿ) ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿದೆ. ಇದು ದೇಶದ ಒಟ್ಟು ಕಚ್ಚಾ ತೈಲ ಆಮದಿನ ಶೇ 48.7ರಷ್ಟು.

'ಕಚ್ಚಾ ತೈಲ ಸಾಗಣೆಯ ಮೇಲೆ ಬಹುಕಾಲ ಅಡ್ಡಿ ಉಂಟಾದರೆ ತೈಲ ಬೆಲೆಯು ಹೆಚ್ಚಾಗುತ್ತದೆ. ಇದರ ಪರಿಣಾಮವಾಗಿ ಸಾರಿಗೆ ವೆಚ್ಚ ಜಾಸ್ತಿ ಆಗಿ, ಹಣದುಬ್ಬರವೂ ಹೆಚ್ಚಾಗುತ್ತದೆ' ಎಂದು ಅವರು ಹೇಳಿದ್ದಾರೆ.

'ಸಾಮರಸ್ಯಕ್ಕೆ ಸನಾತನ ಧರ್ಮ ಉತ್ತೇಜನ'

ಅಹಮದಾಬಾದ್ (ಪಿಟಿಐ): ಸನಾತನ ಧರ್ಮವು ಸಾಮಾಜಿಕ ಸಾಮರಸ್ಯ ಮತ್ತು ಏಕತೆಯನ್ನು ಉತ್ತೇಜಿಸುತ್ತದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಗುರುವಾರ ಹೇಳಿದರು.

ಇಲ್ಲಿಗೆ ಸಮೀಪದ ಜೇತಲ್‌ಪುರ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವತ್ ಮಾತನಾಡಿದರು. 'ಜಾತಿ ಹೆಸರಿನಲ್ಲಿನ ತಾರತಮ್ಯವು ಧರ್ಮ ಹಾಗೂ ಸಮಾಜ ಎರಡಕ್ಕೂ ಹಾನಿಯುಂಟು ಮಾಡುತ್ತದೆ. ಮೇಲು ಮತ್ತು ಕೀಳು ಎಂಬ ವ್ಯತ್ಯಾಸ ಎಲ್ಲಿಂದ ಬಂತು? ಜಾತಿ ಮತ್ತು ವರ್ಗ ವ್ಯವಸ್ಥೆಗಳು ಅಸ್ತಿತ್ವದಲ್ಲಿರಬಹುದು. ಆದರೆ ಅದು ತಾರತಮ್ಯದ ಉದ್ದೇಶಕ್ಕಾಗಿ ಅಲ್ಲ' ಎಂದರು.

ಕೆನಡಾದಲ್ಲಿ ಭಾರತೀಯ 'ಇನ್‌ಫ್ಲುಯೆನ್ಸರ್' ಕೊಲೆ

ಚಂಡೀಗಢ (ಪಿಟಿಐ): ಪಂಜಾಬ್‌ನ ಸಾಮಾಜಿಕ ಜಾಲತಾಣ 'ಇನ್‌ಫ್ಲುಯೆನ್ಸರ್' ನ್ಯಾನ್ಸಿ ಗ್ರೇವಲ್ ಅವರನ್ನು ಕೆನಡಾದಲ್ಲಿ ಇರಿದು ಕೊಲೆ ಮಾಡಲಾಗಿದೆ.

ನ್ಯಾನ್ಸಿ ಗ್ರೇವಲ್ ಅವರಿಗೆ ಜೀವ ಬೆದರಿಕೆ ಇತ್ತು ಎಂದು ಜಲಂಧರ್‌ನಲ್ಲಿರುವ ಅವರ ತಾಯಿ ಹೇಳಿದ್ದಾರೆ. ಒಂಟಾರಿಯೊದ ಲಾಸಲ್ಲೆಯಲ್ಲಿ ನ್ಯಾನ್ಸಿ ಅವರನ್ನು ಮಾರ್ಚ್ 3ರಂದು ಕೊಲೆ ಮಾಡಲಾಗಿತ್ತು.

ನ್ಯಾನ್ಸಿ ಅವರು ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯರಾಗಿದ್ದು, ಪಂಜಾಬ್‌ನಲ್ಲಿನ ಸಾಮಾಜಿಕ ಅಸಮಾನತೆ ಮತ್ತು ರಾಜಕೀಯ ಸಮಸ್ಯೆಗಳ ಕುರಿತು ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ಖಾಲಿಸ್ತಾನಿಗಳು ಮತ್ತು ಖಾಲಿಸ್ತಾನಿಗಳ ನಾಯಕನ ಕಟುವಾಗಿ ಟೀಕಿಸುತ್ತಿದ್ದರು.

'ಮಾರ್ಚ್ 3ರ ರಾತ್ರಿ, 9:30ರ ಸುಮಾರಿಗೆ 45 ವರ್ಷದ ಮಹಿಳೆಯೊಬ್ಬರಿಗೆ ಚಾಕು ಇರಿದಿರುವುದಾಗಿ ಮಾಹಿತಿ ದೊರೆತಿದೆ. ತೀವ್ರ ಗಾಯಗೊಂಡಿದ್ದ ನ್ಯಾನ್ಸಿ ಅವರನ್ನು ಆಸ್ಪತ್ರೆಗೆ ದಾಖಲಿಸಿದರೂ, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ' ಎಂದು ಲಾಸಲ್ಲೆ ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers

ಡ್ರೈವರ್: ಬೆಂಗಳೂರು ಎಲ್ಲಾ ತಿಳಿದಿರುವ ಹಿಂದೂ 35ವರ್ಷ ಒಳಗಿನ ಉತ್ತಮ ಗುಣ ನಡತೆಯ, High End ಗಾಡಿಗಳು ಗೊತ್ತಿರುವ, ಸ್ವಲ್ಪ ಇಂಗ್ಲೀಷ್ ಬರುವ, ಮನೆಯಲ್ಲಿ ಇರಬಯಸುವವರು ಬೇಕಾಗಿದ್ದಾರೆ. ಉತ್ತಮ ವೇತನ, ವಸತಿ ನೀಡಲಾಗುವುದು. Ph: 8861145911

General

ಸರ್ಕಾರಿ ಇಲಾಖೆ ಗುತ್ತಿಗೆಗೆ, ಡಿಇಓ, ITI, 7th, PUC ಸಂಬಳ 25000 - 50000 ಉಚಿತ ವಸತಿಯೂಟವಿರುತ್ತದೆ. ಕರ್ನಾಟಕ ಉದ್ಯೋಗ (ಸರ್ಕಾರಿ ನೋಂದಾಯಿತ) ಸಂಪರ್ಕಿಸಿ: 080-29909699, 9606155699.

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೋರಿಯರ್ ಸೌಲಭ್ಯವಿದೆ. 9964322833.

ಪ್ರವಾಸ

Travel

23-3-2026 ಆಗ್ರಾ, ದೆಹಲಿ, ಅಮೃತ್ ಸರ್, ವೈಷ್ಣೋದೇವಿ, ಹರಿದ್ವಾರ, 13-4-2026 ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ, ಗಯಾ, ಬೈದ್ಯನಾಥ್, 17-4-2026 ಭುವನೇಶ್ವರ್, ಕೊಲ್ಕತ್ತ, 26-4-2026, 10-5-2026 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9845035349, 9482435755

ಶ್ರೀ ಮಹದೇಶ್ವರ ಟೂರ್ಸ್ & ಟ್ರಾವೆಲ್ಸ್ 14 ದಿನಗಳ ಚಾರ್ಧಮ್ ಯಾತ್ರೆ, 10 ದಿನಗಳ ಅಮರನಾಥ ಯಾತ್ರೆ, 10 ದಿನಗಳ ಕಾಶಿ ಯಾತ್ರೆ, 12 ದಿನಗಳ ನೇಪಾಳ ಪ್ರವಾಸ ಸಂಪರ್ಕಿಸಿ: 9611801143/ 8088559962

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ದುಬೈ, ದೋಹಾ ಮೇಲೆ ಇರಾನ್ ದಾಳಿ

ಅಬುಧಾಬಿಯಲ್ಲಿ ಡ್ರೋನ್ ಅವಶೇಷ ಬಿದ್ದು ಆರು ಜನರಿಗೆ ಗಾಯ

● ಕೊಲ್ಲಿಯಲ್ಲಿ ಈವರೆಗೆ 13 ಮಂದಿ ಸಾವು

ಅಬುಧಾಬಿ/ದೋಹಾ (ಎಎಫ್‌ಪಿ): ಅಮೆರಿಕ ಹಾಗೂ ಇಸ್ರೇಲ್ ನಡೆಸಿದ ಸೇನಾ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳಲು ಮುಂದಾಗಿರುವ ಇರಾನ್, ದುಬೈ, ದೋಹಾ ಮತ್ತು ಮನಾಮ ನಗರಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದೆ.

ಅಮೆರಿಕದ ಸೇನಾ ನೆಲೆಗಳು ಸೇರಿದಂತೆ ಗಲ್ಫ್‌ನಾದ್ಯಂತ ಇರುವ ಅಮೆರಿಕದ ರಾಯಭಾರ ಕಚೇರಿಗಳು ಮತ್ತು ನಾಗರಿಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದೆ.

ಯುನೈಟೆಡ್ ಅರಬ್ ಎಮಿರೇಟ್ಸ್ ರಾಜಧಾನಿ ಅಬುಧಾಬಿಯ ಕೈಗಾರಿಕಾ ವಲಯದಲ್ಲಿ ಗುರುವಾರ ಡ್ರೋನ್‌ನ ಅವಶೇಷಗಳು ಬಿದ್ದು ಆರು ಜನರು ಗಾಯಗೊಂಡಿದ್ದಾರೆ.

'ಇರಾನ್ ಹಾರಿಸಿದ ಡ್ರೋನ್ ಅನ್ನು ನಮ್ಮ ವಾಯು ರಕ್ಷಣಾ ಪಡೆಗಳು ಯಶಸ್ವಿಯಾಗಿ ತಡೆದವು. ಆದರೆ, ಎರಡು ಸ್ಥಳಗಳಲ್ಲಿ ಡ್ರೋನ್‌ನ ಅವಶೇಷಗಳು ಬಿದ್ದಿದ್ದರಿಂದ ಪಾಕಿಸ್ತಾನ ಹಾಗೂ ನೇಪಾಳದ ಪ್ರಜೆಗಳು ಸೇರಿದಂತೆ ಆರು ಮಂದಿ ಗಾಯಗೊಂಡಿದ್ದಾರೆ' ಎಂದು ಅಬುಧಾಬಿ ಎಮಿರೇಟ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಅಮೆರಿಕದ ರಾಯಭಾರ ಕಚೇರಿ, ಮೂಲಸೌಕರ್ಯ ಮೇಲೆ ದಾಳಿ
- ಮೂರು ಕ್ರೂಸ್ ಕ್ಷಿಪಣಿ ಹೊಡೆದುರುಳಿಸಿದ ಸೌದಿ ಅರೇಬಿಯಾ
- ತೈಲ ಟ್ಯಾಂಕರ್‌ನಲ್ಲಿ ಸ್ಫೋಟ: ಬ್ರಿಟನ್

ಇರಾನ್ ಶನಿವಾರ ದಾಳಿ ಆರಂಭಿಸಿದಾಗಿನಿಂದ ಕೊಲ್ಲಿಯಲ್ಲಿ ಕನಿಷ್ಠ 13 ಜನರು ಮೃತಪಟ್ಟಿದ್ದಾರೆ. ಇದರಲ್ಲಿ ಏಳು ನಾಗರಿಕರು ಸೇರಿದ್ದಾರೆ. ಕುವೈತ್‌ನಲ್ಲಿ ನಾಲ್ವರು ಸೇರಿದಂತೆ ಅಮೆರಿಕದ ಆರು ಯೋಧರು ಮೃತಪಟ್ಟಿದ್ದಾರೆ ಎಂದು ಅಮೆರಿಕ ತಿಳಿಸಿದೆ.

ದೋಹಾದಲ್ಲಿ ಸರಣಿ ಸ್ಫೋಟ: ಕತಾರ್ ರಾಜಧಾನಿ ದೋಹಾದಲ್ಲಿ ಗುರುವಾರ ಸರಣಿ ಸ್ಫೋಟದ ಶಬ್ದಗಳು ಕೇಳಿಬಂದಿವೆ.

'ಅಮೆರಿಕ ರಾಯಭಾರ ಕಚೇರಿಯ ಸಮೀಪ ವಾಸಿಸುತ್ತಿರುವ ನಿವಾಸಿಗಳನ್ನು ಸ್ಥಳಾಂತರಿಸಲಾಗುತ್ತಿದೆ' ಎಂದು ದೋಹಾದ ಅಧಿಕಾರಿಗಳು ತಿಳಿಸಿದ ಕೆಲವೇ ಗಂಟೆಗಳ ನಂತರ ಸ್ಫೋಟದ ಸದ್ದು ಕೇಳಿಬಂದಿದೆ. ದೋಹಾ ನಗರದಲ್ಲಿ ದಟ್ಟ ಹೊಗೆ ಕಾಣಿಸಿಕೊಂಡಿದೆ.

ಇರಾನ್ ತನ್ನ ಕ್ಷಿಪಣಿ ಮತ್ತು ಡ್ರೋನ್ ದಾಳಿಯನ್ನು ಆರಂಭಿಸಿದ ನಂತರ, ಉಭಯ ದೇಶಗಳ ನಡುವಿನ ಮೊದಲ ಉನ್ನತ ಮಟ್ಟದ ಮಾತುಕತೆ ವೇಳೆ ಕತಾರ್ ಪ್ರಧಾನಿ ಶೇಕ್ ಮೊಹಮ್ಮದ್ ಬಿನ್ ಅಬ್ದುಲ್‌ರಹಮಾನ್ ಅಲ್ ಥಾನಿ ಅವರು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರನ್ನು ಟೀಕಿಸಿದ್ದರು.

'ಇರಾನ್ ತನ್ನ ನೆರೆಹೊರೆಯವರಿಗೆ ಹಾನಿ ಮಾಡಲು ಮತ್ತು ಅವರದಲ್ಲದ ಯುದ್ಧಕ್ಕೆ ಎಳೆಯಲು ಪ್ರಯತ್ನಿಸುತ್ತಿದೆ' ಎಂದು ಕತಾರ್ ಪ್ರಧಾನಿ ಆರೋಪಿಸಿದ್ದರು. ಈ ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಕತಾರ್ ಅನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ.

ಬಹರೇನ್ ರಾಜಧಾನಿ ಮನಾಮದಲ್ಲಿಯೂ ಸ್ಫೋಟಗಳು ಸಂಭವಿಸಿವೆ.

'ಸೌದಿ ಅರೇಬಿಯಾದ ಅಲ್-ಖರ್ಜ್ ನಗರದ ಹೊರಗೆ ಮೂರು ಕ್ರೂಸ್ ಕ್ಷಿಪಣಿಗಳು ಮತ್ತು ಹಲವಾರು ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ' ಎಂದು ಸೌದಿ ರಕ್ಷಣಾ ಸಚಿವಾಲಯ 'ಎಕ್ಸ್'ನಲ್ಲಿ ತಿಳಿಸಿದೆ.

ಮತ್ತೊಂದೆಡೆ, ಕುವೈತ್ ಸಮೀಪವಿರುವ ಸಮುದ್ರದಲ್ಲಿ ತೈಲ ಟ್ಯಾಂಕರ್‌ನಲ್ಲಿ ಸ್ಫೋಟ ಸಂಭವಿಸಿದ್ದು, ಇದರಿಂದಾಗಿ ತೈಲ ಸೋರಿಕೆಯಾಗಿದೆ ಎಂದು ಬ್ರಿಟನ್‌ನ ಕಡಲ ಭದ್ರತಾ ಸಂಸ್ಥೆ ಯುಕೆಎಂಟಿಒ ತಿಳಿಸಿದೆ.

ಕತಾರ್ ರಾಜಧಾನಿ ದೋಹಾದಲ್ಲಿ ಸ್ಫೋಟದಿಂದಾಗಿ ದಟ್ಟ ಹೊಗೆ ಆವರಿಸಿತ್ತು —ಎಎಫ್‌ಪಿ ಚಿತ್ರ

'ಇರಾನ್ ದಾಳಿಗೆ ಪ್ರತೀಕಾರ'

ಬಾಕು (ಅಜರ್‌ಬೈಜಾನ್) (ಎಎಫ್‌ಪಿ): 'ಇರಾನ್ ಹಾರಿಸಿದ ಎರಡು ಡ್ರೋನ್‌ಗಳು ಶಾಲೆ ಮತ್ತು ವಿಮಾನ ನಿಲ್ದಾಣದ ಬಳಿ ಅಪ್ಪಳಿಸಿ ಇಬ್ಬರು ಗಾಯಗೊಂಡಿದ್ದಾರೆ. ಇದಕ್ಕೆ ಪ್ರತೀಕಾರ ತೆಗೆದುಕೊಳ್ಳುತ್ತೇವೆ' ಎಂದು ಅಜರ್‌ಬೈಜಾನ್ ಹೇಳಿದೆ.

ನಾಖ್‌ಚೆವಾನ್ ವಿಮಾನ ನಿಲ್ದಾಣದ ಟರ್ಮಿನಲ್ ಕಟ್ಟಡದ ಮೇಲೆ ಒಂದು ಡ್ರೋನ್ ಬಿದ್ದಿದ್ದು, ಕಟ್ಟಡಕ್ಕೆ ಹಾನಿಯಾಗಿದೆ. ಇನ್ನೊಂದು ಡ್ರೋನ್ ಶಕೇರಾಬಾದ್ ಗ್ರಾಮದ ಶಾಲಾ ಕಟ್ಟಡದ ಬಳಿ ಬಿದ್ದಿದ್ದು, ಇಬ್ಬರು ನಾಗರಿಕರು ಗಾಯಗೊಂಡಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

'ಇರಾನಿನ ಈ ನಡೆಯು ಅಂತರ ರಾಷ್ಟ್ರೀಯ ಕಾನೂನಿನ ನಿಯಮಗಳು, ತತ್ವಗಳಿಗೆ ವಿರುದ್ಧವಾಗಿದೆ. ನಮ್ಮ ಪ್ರಾದೇಶಿಕ ಸಮಗ್ರತೆ, ಸಾರ್ವಭೌಮತ್ವ ರಕ್ಷಿಸಲು, ನಾಗರಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ನಮ್ಮ ಮೇಲೆ ನಡೆದ ದಾಳಿಗೆ ಪ್ರತಿದಾಳಿ ನಡೆಸಲು ಸಿದ್ಧತೆ ನಡೆಸಲಾಗುತ್ತಿದೆ. ಇದಕ್ಕೆ ಉತ್ತರ ನೀಡದೇ ಇರಲಾರೆವು' ಎಂದು ರಕ್ಷಣಾ ಸಚಿವಾಲಯವು ಎಚ್ಚರಿಕೆ ನೀಡಿದೆ.

ದಾಳಿ ಮಾಡಿಲ್ಲ: ಸ್ಪಷ್ಟನೆ

ಟೆಹರಾನ್: ಅಜರ್‌ಬೈಜಾನ್ ಮೇಲೆ ತಾನು ದಾಳಿ ನಡೆಸಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿದೆ. 'ನಮ್ಮ ಸೇನೆಯು ಅಜರ್‌ಬೈಜಾನ್ ಮೇಲೆ ಡ್ರೋನ್ ದಾಳಿ ನಡೆಸಿದೆ ಎಂಬುದನ್ನು ಇರಾನ್ ನಿರಾಕರಿಸುತ್ತದೆ' ಎಂದು ಸೇನೆಯು ತಿಳಿಸಿದೆ.

'ಮುಸ್ಲಿಂ ರಾಷ್ಟ್ರಗಳ ನಡುವಿನ ಸಂಬಂಧವನ್ನು ಹಾಳು ಮಾಡಲು ಇಸ್ರೇಲ್ ಇಂತಹ ಕುತಂತ್ರ ನಡೆಸುವುದು ಹೊಸದೇನಲ್ಲ' ಎಂದು ಟೀಕಿಸಿದೆ.



ಡ್ರೋನ್ ದಾಳಿಯಿಂದಾಗಿ ಅಜರ್‌ಬೈಜಾನ್‌ನ ಶಕೇರಾಬಾದ್ ಗ್ರಾಮದ ಶಾಲಾ ಕಟ್ಟಡ ಧ್ವಂಸಗೊಂಡಿದೆ —ಎಪಿ ಚಿತ್ರ

16ರ ಬಳಿಕ ಪವಾರ್ ಕುಟುಂಬದ ಮೂವರು ಸಂಸತ್‌ನಲ್ಲಿ

ಮುಂಬೈ: ರಾಜ್ಯಸಭೆಗೆ ನಡೆಯುವ ಚುನಾವಣೆಗೆ ಮಹಾರಾಷ್ಟ್ರದಿಂದ ಎನ್‌ಸಿಪಿ(ಎಸ್‌ಪಿ) ವರಿಷ್ಠ ಶರದ್ ಪವಾರ್, ಅವರ ಮೊಮ್ಮಗ ಪಾರ್ಥ ಪವಾರ್ ಸ್ಪರ್ಧಿಸುತ್ತಿದ್ದಾರೆ.

ಎನ್‌ಸಿಪಿ(ಎಸ್‌ಪಿ)ಯ ಸುಪ್ರಿಯಾ ಸುಳೆ ಪ್ರಸ್ತುತ ಲೋಕಸಭಾ ಸದಸ್ಯರಾಗಿದ್ದಾರೆ. ಶರದ್ ಪವಾರ್ ಹಾಗೂ ಪಾರ್ಥ ಅವರ ಗೆಲುವು ಬಹುತೇಕ ಖಚಿತ ಎನ್ನಲಾಗುತ್ತಿದೆ. ಇದರೊಂದಿಗೆ, ಪ್ರಭಾವಿ ಪವಾರ್ ಕುಟುಂಬದ ಮೂವರು ಸಂಸತ್ ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಪಾರ್ಥ ಅವರು ಇತ್ತೀಚೆಗೆ ವಿಮಾನ ಅಪಘಾತದಲ್ಲಿ ಮೃತಪಟ್ಟ ಡಿಸಿಎಂ ಅಜಿತ್ ಪವಾರ್ ಅವರ ಹಿರಿಯ ಮಗ. ಅವರು ಎನ್‌ಸಿಪಿ(ಅಜಿತ್ ಪವಾರ ಬಣ) ಅಭ್ಯರ್ಥಿ. ಅವರ ತಾಯಿ ಸುನೇತ್ರಾ ಪವಾರ್ ಸದ್ಯ ಮಹಾರಾಷ್ಟ್ರದ ಡಿಸಿಎಂ.

ಮಾರ್ಚ್ 16ರಂದು ಚುನಾವಣೆ ನಡೆಯಲಿದೆ.

ಹಿಂದೂ ಮಹಾಸಾಗರದಲ್ಲಿ ಇರಾನ್ ಯುದ್ಧನೌಕೆ ಧ್ವಂಸ ಉಲ್ಲೇಖಿಸಿ ಮೋದಿ ವಿರುದ್ಧ ವಾಗ್ದಾಳಿ

'ಭಾರತಕ್ಕೆ ಸಮರ್ಥ ನಾಯಕತ್ವದ ಅಗತ್ಯವಿದೆ'

ನವದೆಹಲಿ(ಪಿಟಿಐ): ಹಿಂದೂ ಮಹಾಸಾಗರದಲ್ಲಿ, ಶ್ರೀಲಂಕಾ ಸಮೀಪ ಇರಾನ್‌ನ ಯುದ್ಧನೌಕೆ ಮೇಲೆ ಅಮೆರಿಕ ದಾಳಿ ನಡೆಸಿ, ಮುಳುಗುವಂತೆ ಮಾಡಿದ ವಿಚಾರಕ್ಕೆ ಸಂಬಂಧಿಸಿ ಕಾಂಗ್ರೆಸ್ ಪಕ್ಷವು ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಗುರುವಾರ ವಾಗ್ದಾಳಿ ನಡೆಸಿದೆ.

'ಸಂಕಷ್ಟದ ಸಮಯದಲ್ಲಿ ದೇಶವನ್ನು ಮುನ್ನಡೆಸುವ ಸಮರ್ಥ ನಾಯಕತ್ವವನ್ನು ಭಾರತ ಬಯಸುತ್ತದೆ. ಆದರೆ, ದೇಶದ ರಕ್ಷಣಾತ್ಮಕ ಸ್ವಾಯತ್ತತೆಯನ್ನು ಬಿಟ್ಟುಕೊಟ್ಟಿರುವ 'ರಾಜಿ ಮಾಡಿಕೊಂಡ ಪ್ರಧಾನಿ'ಯನ್ನು ಭಾರತ ಹೊಂದಿದೆ' ಎಂದು ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಹಿಂದೂ ಮಹಾಸಾಗರದಲ್ಲಿ ಇರಾನ್‌ನ ಯುದ್ಧನೌಕೆ ಮೇಲೆ ಅಮೆರಿಕ ದಾಳಿ ನಡೆಸಿರುವ ಬಗ್ಗೆ ಕೇಂದ್ರ ಸರ್ಕಾರ ಮೌನವಾಗಿರುವುದೇಕೆ ಎಂದೂ ಅವರು ಪ್ರಶ್ನಿಸಿದ್ದಾರೆ.

'ಇಡೀ ವಿಶ್ವವೇ ಈಗ ಅಸ್ಥಿರತೆ ಹಂತವನ್ನು ತಲುಪಿದೆ. ಮುಂಬರುವ ದಿನಗಳು ಮತ್ತಷ್ಟು ಪ್ರಕ್ಷುಬ್ಧವಾಗಿರಲಿವೆ' ಎಂದು ರಾಹುಲ್ ಗಾಂಧಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಭಾರತಕ್ಕೆ ತೈಲ ಪೂರೈಸುವ ವ್ಯವಸ್ಥೆಯೂ ಈಗ ಅಪಾಯಕ್ಕೆ ಸಿಲುಕಿದೆ. ದೇಶದ ಅಗತ್ಯದ ಪೈಕಿ ಶೇ40ರಷ್ಟು ತೈಲವು ಹೊರ್ಮುಜ್ ಜಲಸಂಧಿ ಮೂಲಕವೇ ಸಾಗಣೆಯಾಗಬೇಕು. ಈಗ ಈ ಜಲಸಂಧಿಯನ್ನು ಇರಾನ್ ನಿಯಂತ್ರಿಸುತ್ತಿರುವ ಕಾರಣ, ಬಿಕ್ಕಟ್ಟು ಎದುರಾಗಿದೆ' ಎಂದಿದ್ದಾರೆ.

ಖರ್ಗೆ ಟೀಕೆ: 'ಅಜಾಗರೂಕತೆ ಕಾರಣ ದೇಶದ ರಕ್ಷಣೆ ಮತ್ತು ಹಿತಾಸಕ್ತಿಗಳನ್ನು ಮೋದಿ ನೇತೃತ್ವದ ಸರ್ಕಾರ ಬಲಿಕೊಟ್ಟಿರುವುದನ್ನು ಈ ವಿದ್ಯಮಾನ ಹೇಳುತ್ತದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಅವರು ಕೂಡ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಭಾರತದ ಕಡಲ ಗಡಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ನೀವು ಪ್ರತಿಕ್ರಿಯೆ ನೀಡುತ್ತಿಲ್ಲ ಎಂದಾದಲ್ಲಿ, 'ಮಹಾಸಾಗರ' ನೀತಿ ಬಗ್ಗೆ ಯಾಕೆ ಭಾಷಣ ಮಾಡುತ್ತೀರಿ? ಭಾರತದ ಬಾವುಟ ಹೊಂದಿರುವ 38 ಸರಕು ಸಾಗಣೆ ಹಡಗುಗಳು ಹೊರ್ಮುಜ್ ಜಲಸಂಧಿಯಲ್ಲಿ ಸಿಕಿಲುವೆ. ಇವುಗಳಲ್ಲಿನ 1,100 ಸಾವಿಕರು ತೊಂದರೆಗೆ ಸಿಲುಕಿದ್ದಾರೆ' ಎಂದು ಖರ್ಗೆ ಹೇಳಿದ್ದಾರೆ.

'ಭಾರತದ ನಾವಿಕ ಕ್ಯಾಪ್ಟನ್ ಆಶಿಶ್ ಕುಮಾರ್ ಮೃತಪಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ. ಇಂತಹ ದಾಳಿಗಳು ನಡೆದ ಸಂದರ್ಭಗಳಲ್ಲಿ ರಕ್ಷಣಾ ಕಾರ್ಯಾಚರಣೆ ಯಾಕೆ ಕೈಗೊಳ್ಳಲಿಲ್ಲ' ಎಂದೂ ಪ್ರಶ್ನಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷ ಈಗ ನಮ್ಮ ಕಡಲಗಡಿ ವರೆಗೂ ವ್ಯಾಪಿಸಿದಂತಾಗಿದೆ. ಇಷ್ಟಾದರೂ ಪ್ರಧಾನಿ ನರೇಂದ್ರ ಮೋದಿ ಮೌನ ಮುರಿದಿಲ್ಲ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಪ್ರಧಾನಿ ನರೇಂದ್ರ ಮೋದಿ ಅವರು ರಾಜಕೀಯವಾಗಿ ಹಾಗೂ ನೈತಿಕವಾಗಿ ಶರಣಾಗಿರುವುದು ಸ್ಪಷ್ಟ. ಇದು ಭಾರತದ ಹಿತಾಸಕ್ತಿಗಳನ್ನು ಗೌಣವಾಗಿಸುವ ಜೊತೆಗೆ ನಮ್ಮ ವಿದೇಶಾಂಗ ನೀತಿಗೆ ಧಕ್ಕೆ ತರುತ್ತದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಇರಾನ್ ಯುದ್ಧನೌಕೆಯನ್ನು ಅಮೆರಿಕ ಮುಳುಗಿಸಿದ ಬಗ್ಗೆ ಭಾರತ ಈವರೆಗೆ ಪ್ರತಿಕ್ರಿಯಿಸಿಲ್ಲ. ಕೇಂದ್ರ ಸರ್ಕಾರ ಈ ಹಿಂದೆ ಯಾವತ್ತೂ ಇಷ್ಟೊಂದು ನಾಚಿಕೆಗೇಡಿತನ, ಹೆದರಿಕೆಯಿಂದ ವರ್ತಿಸಿರಲಿಲ್ಲ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲ್ ದಾಳಿ: 8 ಸಾವು

ಬೈರೂತ್, ಲೆಬನಾನ್ (ಎಎಫ್‌ಪಿ): ಹಿಜ್ಬುಲ್ಲಾ ಬಂಡುಕೋರ ಭದ್ರಕೋಟೆಯಾಗಿರುವ ಬೈರೂತ್‌ನ ದಕ್ಷಿಣ ಭಾಗದ ಪ್ರದೇಶಗಳ ಮೇಲೆ ಇಸ್ರೇಲ್ ಪಡೆಗಳು ಗುರುವಾರ ದಾಳಿ ನಡೆಸಿವೆ. ಘಟನೆಯಲ್ಲಿ 8 ಮಂದಿ ಮೃತರಾಗಿದ್ದಾರೆ.

ನಬತೀಹ್ ಪ್ರಾಂತ್ಯದ ಗ್ರಾಮವೊಂದರ ಮೇಲೆ ದಾಳಿ ನಡೆದಿದ್ದು, ಗ್ರಾಮದ ಮೇಯರ್ ಹಾಗೂ ಅವರ ಪತ್ನಿ ಮೃತಪಟ್ಟಿದ್ದಾರೆ. ನಂತರ ಅಲ್ಲಿಯೇ ಸಮೀಪದ ಗ್ರಾಮವೊಂದರ ಮೇಲೂ ದಾಳಿ ನಡೆದಿದ್ದು, ಇಬ್ಬರು ಮಕ್ಕಳು ಹಾಗೂ ಅವರ ಪೋಷಕರು ಮೃತಪಟ್ಟಿದ್ದಾರೆ. ಝುಹ್ಲಾ ಎಂಬಲ್ಲಿಯೂ ಇಬ್ಬರು ವ್ಯಕ್ತಿಗಳು ಮೃತಪಟ್ಟಿದ್ದಾರೆ.

ದಕ್ಷಿಣ ಲೆಬನಾನ್‌ನಲ್ಲಿ ಮಿಲಿಟರಿ ಕಾರ್ಯಾಚರಣೆಗಳನ್ನು ಕ್ಷಿಪ್ರಗೊಳಿಸಲಾಗುವುದು ಹೀಗಾಗಿ ಜನರು ಆ ಪ್ರದೇಶಗಳನ್ನು ಖಾಲಿ ಮಾಡಬೇಕು ಎಂದು ಇಸ್ರೇಲ್ ಪಡೆಗಳು ಗುರುವಾರ ಎಚ್ಚರಿಸಿವೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಈ ಹಿಂದೆಯೂ ಇಸ್ರೇಲ್ ಇದೇ ರೀತಿಯ ಸೂಚನೆಗಳನ್ನು ನೀಡಿತ್ತು.

ರಾಜ್ಯಸಭಾ ಚುನಾವಣೆ: ಆರ್‌ಜೆಡಿ ಹುರಿಯಾಳು ಅಮರೇಂದ್ರ ಕೂಡ ಸ್ಪರ್ಧೆ

ನಿತೀಶ್, ನಿತಿನ್ ಸೇರಿ ಐವರು ಕಣಕ್ಕೆ

ಪಟ್ನಾ (ಪಿಟಿಐ): ರಾಜ್ಯಸಭೆಗೆ ನಡೆಯಲಿರುವ ಚುನಾವಣೆಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಗುರುವಾರ ನಾಮಪತ್ರ ಸಲ್ಲಿಸಿದ್ದಾರೆ.

ಇವರ ಜೊತೆಗೆ ಇತರ ಮೂವರು ಅಭ್ಯರ್ಥಿಗಳನ್ನು ಕೂಡ ಎನ್‌ಡಿಎ ಕಣಕ್ಕಿಳಿಸಿದ್ದು, ಎಲ್ಲ ಐದು ಸ್ಥಾನಗಳನ್ನು ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದೆ. ವಿರೋಧ ಪಕ್ಷ ಆರ್‌ಜೆಡಿ ಕೂಡ ತನ್ನ ಉಮೇದುವಾರನನ್ನು ಕಣಕ್ಕಿಳಿಸಿದೆ.

ನಿತೀಶ್ ಕುಮಾರ್, ನಿತಿನ್ ನವೀನ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಸಮ್ಮುಖದಲ್ಲಿ ನಾಮಪತ್ರಗಳನ್ನು ಸಲ್ಲಿಸಿದರು.

ಎನ್‌ಡಿಎದ ಇತರ ಅಭ್ಯರ್ಥಿಗಳಾದ ಕೇಂದ್ರ ಸಚಿವ ರಾಮನಾಥ್ ಠಾಕೂರ್ (ಜೆಡಿಯು), ಆರ್‌ಎಲ್‌ಎಂ ಅಧ್ಯಕ್ಷ ಉಪೇಂದ್ರ ಕುಶ್ವಾಹ, ಬಿಜೆಪಿಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಶಿವೇಶ್ ಕುಮಾರ್ ಕೂಡ ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ಕೇಂದ್ರ ಸಚಿವ ಠಾಕೂರ್ ಅವರು 'ಹ್ಯಾಟ್ರಿಕ್ ಸಾಧನೆ' ದಾಖಲಿಸುವ ಗುರಿ ಹೊಂದಿದ್ದರೆ, ಕುಶ್ವಾಹ ಸತತ ಎರಡನೇ ಬಾರಿಗೆ ರಾಜ್ಯಸಭೆ ಪ್ರವೇಶಿಸುವ ವಿಶ್ವಾಸ ಹೊಂದಿದ್ದಾರೆ. ಮಾಜಿ ಶಾಸಕರಾದ ಶಿವೇಶ್ ಇದೇ ಮೊದಲ ಬಾರಿಗೆ ರಾಜ್ಯಸಭೆ ಪ್ರವೇಶಿಸುವ ಉತ್ಸಾಹದಲ್ಲಿದ್ದಾರೆ.

ಆರ್‌ಜೆಡಿಯ ಸಂಸದ ಅಮರೇಂದ್ರ ಧರಿ ಸಿಂಗ್, ಪಕ್ಷದ ಅಧ್ಯಕ್ಷ ತೇಜಸ್ವಿ ಯಾದವ್ ಹಾಗೂ ಇತರ ನಾಯಕರೊಂದಿಗೆ ವಿಧಾನಸಭೆ ಸಚಿವಾಲಯಕ್ಕೆ ತೆರಳಿ, ನಾಮಪತ್ರ ಸಲ್ಲಿಸಿದರು. ಅವರು ಉದ್ಯಮಿಯೂ ಆಗಿದ್ದಾರೆ.

ಎನ್‌ಡಿಎ ಅಭ್ಯರ್ಥಿ ಹಾಗೂ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಪಟ್ನಾದಲ್ಲಿ ಗುರುವಾರ ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸಿದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಹಾರ ಡಿಸಿಎಂ ಸಾಮ್ರಾಟ್ ಚೌಧರಿ ಉಪಸ್ಥಿತರಿದ್ದರು ಪಿಟಿಐ ಚಿತ್ರ

ಮಾರ್ಚ್ 6: ನಾಮಪತ್ರಗಳ ಪರಿಶೀಲನೆ
ಮಾರ್ಚ್ 9: ನಾಮಪತ್ರ ಹಿಂಪಡೆಯಲು ಕೊನೆಯ ದಿನ
ಮಾರ್ಚ್ 16: ಮತದಾನ (ಒಂದು ವೇಳೆ ಎಲ್ಲ ಆರು ಅಭ್ಯರ್ಥಿಗಳು ಕಣದಲ್ಲಿ ಉಳಿದಲ್ಲಿ)

ಜೆಡಿಯು ನನ್ನ ಮೇಲೆ ನಂಬಿಕೆ ಇಟ್ಟು ಮೂರು ಬಾರಿ ರಾಜ್ಯಸಭೆಗೆ ಕಳುಹಿಸಿದೆ. ಬಿಹಾರ ಅಭಿವೃದ್ಧಿಪಡಿಸುವ ನಿತೀಶ್ ಕುಮಾರ್ ಪ್ರಯತ್ನಗಳಿಗೆ ನಾನು ಕೈಜೋಡಿಸುವೆ

ರಾಮನಾಥ್ ಠಾಕೂರ್, ಕೇಂದ್ರ ಸಚಿವ

ನಿತೀಶ್ ಕುಮಾರ್ ರಾಜ್ಯಸಭೆ ಪ್ರವೇಶಿಸುತ್ತಿರುವುದು ಸಂತಸದ ವಿಚಾರ. ನಮ್ಮ ಅಣ್ಣನ ಜೊತೆಗೆ ಕೆಲಸ ಮಾಡುವ ಅವಕಾಶವೂ ನನಗೆ ಲಭಿಸುತ್ತಿದೆ

ಉಪೇಂದ್ರ ಕುಶ್ವಾಹ, ಆರ್‌ಎಲ್‌ಎಂ ಅಧ್ಯಕ್ಷ

ಪಶ್ಚಿಮ ಏಷ್ಯಾ ಸಂಘರ್ಷ ವಿಸ್ತರಣೆ

ಒಂದನೇ ಪುಟದಿಂದ...

'ನಾವು ಇತಿಹಾಸದ ಅತ್ಯಂತ ಮಹತ್ವದ ಪುಟಗಳ ಮೂಲಕ ಹಾದು ಹೋಗುತ್ತಿದ್ದೇವೆ, ನಮಗೆ ಭಯವಿಲ್ಲ. ಭರವಸೆ ಮಾತ್ರ ನಮ್ಮ ಮುಂದಿದೆ' ಎಂದು ಟೆಹರಾನ್‌ನ ನಿವಾಸಿಯೊಬ್ಬರು ಹೇಳಿರುವುದಾಗಿ ಎಎಫ್‌ಪಿ ಸುದ್ದಿಸಂಸ್ಥೆ ವರದಿ ಮಾಡಿದೆ.

ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಸಂಘಟನೆ ಗುರಿಯಾಗಿಸಿ ಇಸ್ರೇಲ್ ವೈಮಾನಿಕ ದಾಳಿಯನ್ನು ತೀವ್ರಗೊಳಿಸಿದೆ. ಇಸ್ರೇಲ್‌ನ ಬೆನ್ ಗುರಿಯಾನ್ ವಿಮಾನ ನಿಲ್ದಾಣ ಮತ್ತು ವಾಯು ನೆಲೆ ಮೇಲೆ ಕ್ಷಿಪಣಿ ದಾಳಿ ನಡೆಸಲಾಗಿದೆ ಎಂದು ಇರಾನ್‌ನ ಸರ್ಕಾರಿ ಸುದ್ದಿ ವಾಹಿನಿ ವರದಿ ಮಾಡಿದೆ. ಟೆಲ್ ಅವೀವ್ ಮತ್ತು ಜೆರುಸಲೇಂ ಸುತ್ತಮುತ್ತ ಇರಾನ್‌ನ ಕ್ಷಿಪಣಿಗಳು ಅಪ್ಪಳಿಸಿವೆ ಎಂದು ಇಸ್ರೇಲ್ ಹೇಳಿದೆ.

'ಭಾರಿ ಬೆಲೆ ತೆರಬೇಕಾಗುತ್ತದೆ': ತನ್ನ ಯುದ್ಧ ನೌಕೆಯ ಮೇಲೆ ಅಮೆರಿಕ ನಡೆಸಿದ ದಾಳಿಯನ್ನು ಇರಾನ್ ಕಟುವಾಗಿ ಖಂಡಿಸಿದ್ದು, ಇದಕ್ಕೆ ಭಾರಿ ಬೆಲೆ ತೆರಬೇಕಾಗುತ್ತದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಎಚ್ಚರಿಕೆ ನೀಡಿದೆ.

ಇರಾನ್‌ನ ಧಾರ್ಮಿಕ ಮುಖಂಡರೊಬ್ಬರು ಗುರುವಾರ ಟ್ರಂಪ್ ಹತ್ಯೆಗೆ ಕರೆ ನೀಡಿದ್ದಾರೆ.

'ಇರಾನ್ ಬಹುದೊಡ್ಡ ಪರೀಕ್ಷೆಯ ಅಂಚಿನಲ್ಲಿದೆ. ಅಮೆರಿಕದ ದಬ್ಬಾಳಿಕೆಯನ್ನು ಎದುರಿಸಬೇಕು, ಇಸ್ರೇಲ್‌ನಲ್ಲಿ ಯಹೂದಿಗಳ ರಕ್ತ ಹಾಗೂ ಅಮೆರಿಕದಲ್ಲಿ ಟ್ರಂಪ್ ರಕ್ತ ಚೆಲ್ಲಬೇಕು' ಎಂದು ಇರಾನ್‌ನ ಪ್ರಭಾವಿ ಧರ್ಮಗುರು ಆಯತೊಲ್ಲಾ ಅಬ್ದುಲ್ಲಾ ಜವಾದಿ ಅಮೋಲಿ ಹೇಳಿದ್ದಾರೆ.

'ಭಾರತದ ಅತಿಥಿಯಾಗಿ ಹೋಗಿದ್ದ ನೌಕೆ': ಭಾರತದ ಅತಿಥಿಯಾಗಿ ಹೋಗಿದ್ದ ಇರಾನ್‌ನ ಯುದ್ಧನೌಕೆ 'ಐರಿಸ್ ಡೆನಾ' ಮೇಲೆ ದಾಳಿ ನಡೆಸಿದ ಅಮೆರಿಕವು, ತನ್ನ ಕೃತ್ಯಕ್ಕೆ ತೀವ್ರ ಪಶ್ಚಾತ್ತಾಪ ಪಡಬೇಕಾಗುತ್ತದೆ' ಎಂದು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ನೌಕೆಯ ಮೇಲಿನ ದಾಳಿಯು 'ಸಮುದ್ರದಲ್ಲಿ ಅಮೆರಿಕ ನಡೆಸಿದ ಅಮಾನವೀಯ ಕೃತ್ಯ' ಎಂದು ಅಬ್ಬಾಸ್ ಹೇಳಿದ್ದಾರೆ. ದಾಳಿಯಲ್ಲಿ ನೌಕೆಯಲ್ಲಿದ್ದ 87 ಮಂದಿ ಮೃತಪಟ್ಟಿದ್ದರು.

1,300ಕ್ಕೂ ಹೆಚ್ಚು ಸಾವು: ಇರಾನ್ ವಿರುದ್ಧ ಇಸ್ರೇಲ್–ಅಮೆರಿಕ ನಡೆಸುತ್ತಿರುವ ದಾಳಿ ಆರು ದಿನಗಳಿಂದ ಮುಂದುವರಿದಿದ್ದು ಇದುವರೆಗೆ ಇರಾನ್‌ನಲ್ಲಿ 1,230 ಮಂದಿ, ಇಸ್ರೇಲ್‌ನಲ್ಲಿ 10ಕ್ಕೂ ಹೆಚ್ಚು ಜನರು ಹಾಗೂ ಲೆಬನಾನ್‌ನಲ್ಲಿ 100ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ. ಯುದ್ಧದಿಂದಾಗಿ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಮತ್ತು ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಸಾವಿರಾರು ಮಂದಿ ಸ್ವದೇಶಗಳಿಗೆ ಮರಳಲು ಆಗದೆ ಪಶ್ಚಿಮ ಏಷ್ಯಾದ ದೇಶಗಳಲ್ಲಿ ಸಿಲುಕಿಕೊಂಡಿದ್ದಾರೆ.

ಭಾರತದ ಸಂತಾಪ

ಒಂದನೇ ಪುಟದಿಂದ...

ಇಲ್ಲಿನ ಇರಾನ್ ರಾಯಭಾರ ಕಚೇರಿಗೆ ಭೇಟಿ ನೀಡಿದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು, ಭಾರತದಲ್ಲಿನ ಇರಾನ್ ರಾಯಭಾರಿ ಮೊಹಮ್ಮದ್ ಫಥಾಲಿ ಅವರೊಂದಿಗೆ ಮಾತುಕತೆ ನಡೆಸಿ, ಭಾರತದ ಸಂತಾಪ ತಿಳಿಸಿದರು. ನಂತರ, ಸಂತಾಪ ಸೂಚಕ ಪುಸ್ತಕದಲ್ಲಿ ಶೋಕ ಸಂದೇಶ ಬರೆದು, ಸಹಿ ಹಾಕಿದರು.

ಮತ್ತೊಂದೆಡೆ, ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಕೂಡ ಪ್ರತ್ಯೇಕವಾಗಿ ಸಂತಾಪ ಸೂಚಿಸಿದ್ದಾರೆ.

ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಅವರೊಂದಿಗೆ ಜೈಶಂಕರ್ ದೂರವಾಣಿ ಮೂಲಕ ಮಾತನಾಡಿದ್ದಾರೆ. ಈ ವೇಳೆ, ಉಭಯ ನಾಯಕರ ನಡುವಿನ ಮಾತುಕತೆ ಕುರಿತು ಹೆಚ್ಚಿನ ವಿವರಗಳು ಲಭ್ಯ ಇಲ್ಲ ಎಂದು ಮೂಲಗಳು ಹೇಳಿವೆ.

ಬಿಹಾರ: ಮೊದಲ ಮುಖ್ಯಮಂತ್ರಿ ಹೊಂದುವ ತವಕದಲ್ಲಿ ಬಿಜೆಪಿ

ಮುಂದಿನ ಸಿ.ಎಂ ಯಾರು; ಚರ್ಚೆ ಜೋರು

ಪ್ರಜಾವಾಣಿ ವಾರ್ತೆ/ಪಿಟಿಐ

ಪಟ್ನಾ: ರಾಜ್ಯಸಭೆಗೆ ನಡೆಯುವ ಚುನಾವಣೆಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಗುರುವಾರ ನಾಮಪತ್ರ ಸಲ್ಲಿಸಿದರು. ಇದರೊಂದಿಗೆ, ನಿತೀಶ್ ಕುಮಾರ್ ರಾಜ್ಯಸಭೆಯತ್ತ ಮುಖ ಮಾಡಿದ್ದಾರೆ ಎಂಬ ಊಹಾಪೋಹಗಳಿಗೆ ತೆರೆ ಬಿತ್ತು.

ಈ ಬೆಳವಣಿಗೆ ಬೆನ್ನಲ್ಲೇ, ಬಿಹಾರದ ಮುಂದಿನ ಸಿ.ಎಂ ಯಾರಾಗಲಿದ್ದಾರೆ ಎಂಬ ಚರ್ಚೆಯೂ ಈಗ ಆರಂಭವಾಗಿದೆ.

'ನಾನು ರಾಜ್ಯಸಭಾ ಸದಸ್ಯನಾಗಬೇಕು ಎಂಬ ಅಪೇಕ್ಷೆ ಇದೆ' ಎಂದು ಜೆಡಿಯು ವರಿಷ್ಠ ನಿತೀಶ್ ಕುಮಾರ್ ಹೇಳಿರುವ ಕಾರಣ, ಬಿಹಾರದಲ್ಲಿ ಹೊಸ ಸರ್ಕಾರ ರಚನೆಗೆ ದಾರಿ ಮಾಡಿಕೊಟ್ಟಂತಾಗಿದೆ. ಜೊತೆಗೆ, ತನ್ನದೇ ಮುಖ್ಯಮಂತ್ರಿ ಹೊಂದುವುದಕ್ಕೆ ಬಿಜೆಪಿಗೂ ಕಾಲ ಕೂಡಿಬಂದಂತಾಗಿದೆ.

ಬಿಜೆಪಿ ತೆಕ್ಕೆಗೆ ಸಿ.ಎಂ ಸ್ಥಾನ?: ಹಿಂದಿ ಭಾಷಿಕ ಪ್ರಮುಖ ರಾಜ್ಯವಾದ ಬಿಹಾರದಲ್ಲಿ ಬಿಜೆಪಿ ಈ ವರೆಗೂ ತನ್ನ ಮುಖ್ಯಮಂತ್ರಿಯನ್ನು ಹೊಂದಿಲ್ಲ. ಈ ಪಟ್ಟಕ್ಕಾಗಿ ಈ ಹಿಂದೆ ನಡೆಸಿರುವ ಯತ್ನಗಳು ಫಲ ನೀಡಿಲ್ಲ.

243 ಸದಸ್ಯ ಬಲದ ವಿಧಾನಸಭೆಯಲ್ಲಿ 89 ಶಾಸಕರನ್ನು ಹೊಂದುವ ಮೂಲಕ ಬಿಜೆಪಿ ಸದ್ಯ ಅತಿದೊಡ್ಡ ಪಕ್ಷವಾಗಿದೆ. ಜೆಡಿಯು ಶಾಸಕರ ಸಂಖ್ಯೆ 85. ಈಗ, ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಮುಖ್ಯಮಂತ್ರಿ ಸ್ಥಾನ ತ್ಯಜಿಸಿ ರಾಜ್ಯಸಭೆ ಪ್ರವೇಶಿಸಲು ಅಣಿಯಾಗಿರುವ ಕಾರಣ, ಬಿಹಾರದ ಮುಂದಿನ ಸಿ.ಎಂ ಯಾರು ಎಂಬ ಪ್ರಶ್ನೆ ಎದುರಾಗಿದೆ.

ಮುಂದಿನ ಸಿ.ಎಂ ಯಾರಾಗುವರು ಎಂಬ ಬಗ್ಗೆ ಎನ್‌ಡಿಎದ ಯಾವೊಬ್ಬ ನಾಯಕ ಕೂಡ ಮಾತನಾಡಲು ಸಿದ್ಧ ಇಲ್ಲ. ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಜೋಡಿ ಯಾವಾಗಲೂ ಅಚ್ಚರಿಯ ನಿರ್ಧಾರಗಳನ್ನು ಕೈಗೊಳ್ಳುವ ಕಾರಣ, ಈ ವಿಚಾರ ಮತ್ತಷ್ಟು ಕುತೂಹಲಕ್ಕೆ ಕಾರಣವಾಗಿದೆ.

ಮುಂಚೂಣಿಯಲ್ಲಿ ಯಾರು?: ಬಿಹಾರದ ಗೃಹ ಸಚಿವ ಹಾಗೂ ಡಿಸಿಎಂ ಆಗಿರುವ ಸಾಮ್ರಾಟ್ ಚೌಧರಿ ಮುಂದಿನ ಸಿ.ಎಂ ಪಟ್ಟದ ಸ್ಪರ್ಧೆ ಯಲ್ಲಿ ಮುಂಚೂಣಿಯಲ್ಲಿರುವ ಬಿಜೆಪಿ ನಾಯಕ.

ಸಾಮ್ರಾಟ್ ಅವರು ಕುಶ್ವಾಹ ಸಮುದಾಯಕ್ಕೆ ಸೇರಿದ್ದು, ಇದು ಯಾದವೇತರ ನಂತರ ಒಬಿಸಿಗಳಲ್ಲಿಯೇ ಎರಡನೇ ದೊಡ್ಡ ಸಮುದಾಯವಾಗಿದೆ. ಸಾಮ್ರಾಟ್ ಅವರು ಬಿಜೆಪಿ ನಾಯಕತ್ವ ವಲ್ಲದೇ, ನಿತೀಶ್ ಅವರೊಂದಿಗೂ ಉತ್ತಮ ಸಂಬಂಧ ಹೊಂದಿದ್ದಾರೆ.

ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರ ಹೆಸರೂ ಕೇಳಿಬರುತ್ತಿದೆ. ರಾಯ್, ಯಾದವ ಸಮುದಾಯಕ್ಕೆ ಸೇರಿದವರು. ಸ್ವಪಕ್ಷೀಯರೇ ಆದ ರಾಮ ಕೃಪಾಲ್ ಯಾದವ್ ಇವರ ಪ್ರತಿಸ್ಪರ್ಧಿ. ರಾಮ ಕೃಪಾಲ್ ಯಾದವ್, ಕೇಂದ್ರ ಮಂತ್ರಿಯಾಗಿದ್ದರು. ಕೇಂದ್ರ ಸಚಿವ ಗಿರಿರಾಜ್ ಸಿಂಗ್, ಕೈಗಾರಿಕಾ ಸಚಿವ ದಿಲೀಪ್ ಜೈಸ್ವಾಲ್ ಹೆಸರೂ ಕೇಳಿಬರುತ್ತಿವೆ.

ರಾಜ್ಯಸಭೆ ಪ್ರವೇಶಿಸುವ ತಮ್ಮ ಅಪೇಕ್ಷೆ ಕುರಿತು 'ಎಕ್ಸ್' ಮೂಲಕ ನಿತೀಶ್ ಕುಮಾರ್ ಹಂಚಿಕೊಂಡಿರುವ ಮಾಹಿತಿ ಅವರದೇ ಅಭಿಪ್ರಾಯ ಎನಿಸುವುದಿಲ್ಲ. ದೆಹಲಿಯಲ್ಲಿ ಕುಳಿತವರು ಅವರ ಪರವಾಗಿ ಬರೆದಂತಿದೆ

ಮನೋಜ್ ಝಾ, ಆರ್‌ಜೆಡಿ ಸಂಸದ

ನಮ್ಮ ಭವಿಷ್ಯ ನಿಜವಾಗುತ್ತಿದೆ. ನಿತೀಶ್ ಹೆಸರಿನಲ್ಲಿ ಎನ್‌ಡಿಎ ಪ್ರಚಂಡ ಬಹುಮತ ಪಡೆದು ಸರ್ಕಾರ ರಚಿಸಿದೆ. ಈಗ ಬಿಜೆಪಿ ನಡೆ ಜನಾದೇಶದ ವಿರುದ್ಧವಾಗಿದೆ

ತೇಜಸ್ವಿ ಯಾದವ್, ವಿಧಾನಸಭೆಯಲ್ಲಿ ವಿಪಕ್ಷ ನಾಯಕ

ಚೌಧರಿ

ನಿತ್ಯಾನಂದ



ಗಿರಿರಾಜ್ ಸಿಂಗ್

'ಬಿಜೆಪಿ ಮೇಲೆ ಅವಲಂಬನೆ'

'ಈ ಬೆಳವಣಿಗೆ ಪಕ್ಷದ ಅಸ್ತಿತ್ವದ ಬಗ್ಗೆ ಹಲವು ಪ್ರಶ್ನೆಗಳನ್ನು ಮೂಡಿಸಲಿದೆ. ವಿದ್ಯಮಾನಗಳು ಮೊದಲಿನಂತೆ ಇರುವುದಿಲ್ಲ' ಎಂದು ಹೆಸರು ಹೇಳಲು ಇಚ್ಛಿಸದ, ಜೆಡಿಯುನ ನಾಯಕರೊಬ್ಬರು ಪ್ರತಿಕ್ರಿಯಿಸಿದ್ದಾರೆ.

'ನಿತೀಶ್ ಕುಮಾರ್ ಪುತ್ರ ಸೇರಿದಂತೆ ಸಂಪುಟದ ಎಲ್ಲ ಸಚಿವರು ಇನ್ನು ಮುಂದೆ ಬಿಜೆಪಿಯ ಕೃಪಾಕಟಾಕ್ಷವನ್ನೇ ಅವಲಂಬಿಸಲಾಗುತ್ತದೆ. ಅಸ್ತಿತ್ವದ ಪ್ರಶ್ನೆಯಾಗುವ ಕಾರಣ ಇದು ಅನಿವಾರ್ಯವಾಗಲಿದೆ' ಎಂದಿದ್ದಾರೆ.

ರಾಜ್ಯಸಭಾ: ಕಾಂಗ್ರೆಸ್ ಅಚ್ಚರಿ ಅಭ್ಯರ್ಥಿಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಐದು ರಾಜ್ಯಗಳ ರಾಜ್ಯಸಭಾ ಚುನಾವಣೆಗೆ ಆರು ಅಭ್ಯರ್ಥಿಗಳನ್ನು ಕಾಂಗ್ರೆಸ್ ಗುರುವಾರ ಘೋಷಿಸಿದೆ.

ಹಾಲಿ ಸದಸ್ಯರಾದ ಅಭಿಷೇಕ್ ಮನು ಸಿಂಘ್ವಿ ಹಾಗೂ ಫುಲೊ ನೇತಂ ದೇವಿ ಅವರಿಗೆ ಮತ್ತೆ ಟಿಕೆಟ್ ನೀಡಿದೆ. ಛತ್ತೀಸಗಢದಲ್ಲಿ ಎರಡನೇ ಅಭ್ಯರ್ಥಿ ಗೆಲ್ಲುವ ಸಾಧ್ಯತೆ ಇಲ್ಲದ ಕಾರಣ ಹಾಲಿ ಸದಸ್ಯ ಕೆ.ಟಿ.ಎಸ್ ತುಳಸಿ ಅವರನ್ನು ಕೈಬಿಟ್ಟಿದೆ.

ತಮಿಳುನಾಡು, ಹರಿಯಾಣ ಹಾಗೂ ಹಿಮಾಚಲ ಪ್ರದೇಶದಲ್ಲಿ ಅಚ್ಚರಿಯ ಅಭ್ಯರ್ಥಿಗಳ ಆಯ್ಕೆ ಮಾಡಿದೆ. ತಮಿಳುನಾಡಿನಲ್ಲಿ ಎಐಸಿಸಿ ಕಾರ್ಯದರ್ಶಿ ಕ್ರಿಸ್ಟೋಫರ್ ತಿಲಕ್, ಹರಿಯಾಣದಲ್ಲಿ ದಲಿತ ನಾಯಕ ಕರಮ್‌ವೀರ್ ಸಿಂಗ್ ಬೌಧ್ ಹಾಗೂ ಹಿಮಾಚಲ ಪ್ರದೇಶದಲ್ಲಿ ಕಾಂಗ್ರಾ ಜಿಲ್ಲಾ ಘಟಕದ ಅಧ್ಯಕ್ಷ ಅನುರಾಗ್ ಶರ್ಮಾ ಅವರಿಗೆ ಮಣೆ ಹಾಕಿದೆ.

ಹಿಮಾಚಲ ಪ್ರದೇಶದಲ್ಲಿ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರು ಹಿರಿಯ ನಾಯಕರನ್ನು ಕಡೆಗಣಿಸಿ ತಮ್ಮ ಆಪ್ತ ಮಿತ್ರನಿಗೆ ಟಿಕೆಟ್ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೇಂದ್ರದ ಮಾಜಿ ಸಚಿವ ಆನಂದ್ ಶರ್ಮಾ ಹಾಗೂ ರಾಜ್ಯ ಘಟಕದ ಮಾಜಿ ಅಧ್ಯಕ್ಷೆ ಪ್ರತಿಭಾ ಸಿಂಗ್ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಸುಖು ಅವರ ಸಲಹೆಗಾರ ಬಿಟ್ಟು ಶರ್ಮಾ ಮತ್ತು ಹಿರಿಯ ನಾಯಕ ಸುರಿಂದರ್ ಚೌಹಾಣ್ ಅವರ ಹೆಸರುಗಳು ಕೇಳಿ ಬಂದಿತ್ತು.

ತಿಂಗಳ ಹಿಂದೆ ಜಿಲ್ಲಾ ಅಧ್ಯಕ್ಷರಾಗಿ ನೇಮಕಗೊಂಡ ಶರ್ಮಾ ಅವರನ್ನು ಆಯ್ಕೆ ಮಾಡುವ ಮೂಲಕ ತಳಮಟ್ಟದ ಕಾರ್ಯಕರ್ತ, ಹೊಸ ಮುಖಕ್ಕೆ ಪ್ರಾತಿನಿಧ್ಯ ನೀಡಲಾಗಿದೆ ಎಂದು ಬಿಂಬಿಸಲಾಗಿದೆ.

ಹರಿಯಾಣದಲ್ಲಿ ಹಿರಿಯ ದಲಿತ ನಾಯಕರಾದ ಉದಯ ಭಾನ್ ಹಾಗೂ ಅಶೋಕ್ ತನ್ವರ್ ಅವರನ್ನು ಕಡೆಗಣಿಸಿ ಬೌಧ್ ಅವರನ್ನು ಆಯ್ಕೆ ಮಾಡಿದೆ. ಬೌಧ್ ಅವರು ಸರ್ಕಾರಿ ಸೇವೆಯಿಂದ ನಿವೃತ್ತರಾದ ಬಳಿಕ ಐದು ವರ್ಷಗಳ ಹಿಂದೆ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು. ದಲಿತ ಸಮುದಾಯದ ಅವರು 2024ರ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಪಕ್ಷವು ಟಿಕೆಟ್ ನೀಡಿರಲಿಲ್ಲ.

ಅವರ ಅಭ್ಯರ್ಥಿತನವು ರಾಜ್ಯದಲ್ಲಿ ಜಾತಿ ಸಮೀಕರಣ ಸಮತೋಲನಗೊಳಿಸಲು ಸಹಾಯ ಮಾಡುತ್ತದೆ ಎಂದು ಹಿರಿಯ ನಾಯಕರೊಬ್ಬರು ಹೇಳಿದರು. ಪಕ್ಷದ ಶಾಸಕಾಂಗ ಪಕ್ಷದ ನಾಯಕ ಭೂಪಿಂದರ್ ಹೂಡಾ ಜಾಟ್ ಸಮುದಾಯದವರು ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರಾವ್ ನರೇಂದರ್ ಸಿಂಗ್ ಒಬಿಸಿ ಸಮುದಾಯದವರು.

ತಮಿಳುನಾಡಿನಲ್ಲಿ ಮಾಜಿ ಸಂಸದೆ ಮೀನಾಕ್ಷಿ ನಟರಾಜನ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಪಕ್ಷದ ವಲಯದಲ್ಲಿ ಚರ್ಚೆ ನಡೆದಿತ್ತು. ಆ ಬಳಿಕ, ದಲಿತ ಕ್ರಿಶ್ಚಿಯನ್ ಕ್ರಿಸ್ಟೋಫರ್ ತಿಲಕ್ ಅವರ ಹೆಸರನ್ನು ಅಖೈರುಗೊಳಿಸಲಾಯಿತು. ಇವರ ಆಯ್ಕೆಯಿಂದ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಮೈತ್ರಿ ಕೂಟಕ್ಕೆ ಅನುಕೂಲವಾಗಲಿದೆ ಎಂಬುದು ಕಾಂಗ್ರೆಸ್ ನಾಯಕರ ಲೆಕ್ಕಾಚಾರ.

2ನೇ ಸ್ಥಾನ ಗೆಲ್ಲಲು ತಂತ್ರ

ಸಿಂಘ್ವಿ ಅವರು ತೆಲಂಗಾಣದಿಂದ ಮತ್ತೊಂದು ಅವಧಿಗೆ ಮೇಲ್ಮನೆಗೆ ಮರಳಲಿದ್ದಾರೆ. ಅಲ್ಲಿ ಪಕ್ಷವು ಎರಡನೇ ಸ್ಥಾನಕ್ಕೆ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಮತ್ತು ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರ ಸಲಹೆಗಾರ ವೇಮ್ ನರೇಂದರ್ ರೆಡ್ಡಿ ಅವರನ್ನು ಕಣಕ್ಕಿಳಿಸಿದೆ. ಏಕೆಂದರೆ, ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲು ಬಿಆರ್‌ಎಸ್ ಮತ್ತು ಬಿಜೆಪಿ ಸಾಕಷ್ಟು ಶಾಸಕರನ್ನು ಹೊಂದಿಲ್ಲ.

ರೆಡ್ಡಿ ಅವರು ಟಿಡಿಪಿಯ ಮಾಜಿ ನಾಯಕ. 2004ರಲ್ಲಿ ಟಿಡಿಪಿ ಟಿಕೆಟ್ ನಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಗೆದ್ದಿದ್ದರು. ಆದರೆ, 2010ರಲ್ಲಿ ಸೋತಿದ್ದರು. 2015ರಲ್ಲಿ ವಿಧಾನ ಪರಿಷತ್ತಿನ ಚುನಾವಣೆಯಲ್ಲೂ ಅವರು ಸೋಲು ಕಂಡಿದ್ದರು.

ರೇವಂತ್ ರೆಡ್ಡಿ ಜತೆಗೆ 2017ರಲ್ಲಿ ಕಾಂಗ್ರೆಸ್ ಸೇರಿದ್ದರು. ಮೂರು ವರ್ಷಗಳ ನಂತರ ಅವರನ್ನು ಪಕ್ಷದ ರಾಜ್ಯ ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು. 119 ಸದಸ್ಯ ಬಲದ ವಿಧಾನಸಭೆಯಲ್ಲಿ ಕಾಂಗ್ರೆಸ್ 66 ಶಾಸಕರನ್ನು ಹೊಂದಿದ್ದು, ಸಿಪಿಐನ ಒಬ್ಬ ಸದಸ್ಯನ ಬೆಂಬಲ ಹೊಂದಿದೆ. ಆದರೆ, ಬಿಆರ್‌ಎಸ್‌ನಿಂದ ಹತ್ತು ಶಾಸಕರನ್ನು ತನ್ನ ಕಡೆಗೆ ಸೆಳೆಯುವಲ್ಲಿ ಅದು ಯಶಸ್ವಿಯಾಗಿತ್ತು. ಬಿಆರ್‌ಎಸ್ ಈಗ 27 ಶಾಸಕರನ್ನು ಹೊಂದಿದೆ. ಬಿಜೆಪಿಯಲ್ಲಿ ಕೇವಲ ಎಂಟು ಶಾಸಕರಿದ್ದಾರೆ.

ಪ್ರತಿ ಅಭ್ಯರ್ಥಿ ಗೆಲ್ಲಲು 41 ಮೊದಲ ಪ್ರಾಶಸ್ತ್ಯದ ಮತಗಳ ಅಗತ್ಯವಿದ್ದು, ಕಾಂಗ್ರೆಸ್ ಐದು ಮತಗಳ ಕೊರತೆ ಎದುರಿಸುತ್ತಿದೆ. ಕಾಂಗ್ರೆಸ್‌ಗೆ ಏಳು ಶಾಸಕರನ್ನು ಹೊಂದಿರುವ ಎಐಎಂಐಎಂ ಬೆಂಬಲ ಘೋಷಿಸಿದೆ. ಜತೆಗೆ, ಬಿಆರ್‌ಎಸ್‌ನ ಇನ್ನಷ್ಟು ಶಾಸಕರನ್ನು ಸೆಳೆಯಲು ಕಾಂಗ್ರೆಸ್ ತಂತ್ರ ರೂಪಿಸಿದೆ.

ಆರು ಮಂದಿ ಅವಿರೋಧ ಆಯ್ಕೆ ಸಾಧ್ಯತೆ

ಚೆನ್ನೈ: ತಮಿಳುನಾಡಿನ ಡಿಎಂಕೆ, ಎಐಎಡಿಎಂಕೆ, ಕಾಂಗ್ರೆಸ್, ಪಿಎಂಕೆ, ಡಿಎಂಡಿಕೆ ಪಕ್ಷಗಳಿಗೆ ಸೇರಿದ ಎಲ್ಲ ಆರು ಅಭ್ಯರ್ಥಿಗಳು ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ಇದೆ.

ಅಭ್ಯರ್ಥಿಗಳಾದ ತಿರುಚಿ ಶಿವ, ಜೆ. ಕಾನ್‌ಸ್ಟಂಟೈನ್ ರವೀಂದ್ರನ್ (ಡಿಎಂಕೆ), ಎಂ. ತಂಬಿದುರೈ (ಎಐಎಡಿಎಂಕೆ), ಕ್ರಿಸ್ಟೋಫರ್ ತಿಲಕ್ (ಕಾಂಗ್ರೆಸ್), ಅನ್ಬುಮಣಿ ರಾಮದಾಸ್ (ಪಿಎಂಕೆ), ಎಲ್.ಕೆ. ಸುದೀಶ್ (ಡಿಎಂಡಿಕೆ) ತಮ್ಮ ನಾಮಪತ್ರಗಳನ್ನು ಗುರುವಾರ ಸಲ್ಲಿಸಿದರು. ನಾಮಪತ್ರಗಳ ಪರಿಶೀಲನೆ ಶುಕ್ರವಾರ ನಡೆಯಲಿದೆ.

ಶಿವ ಮತ್ತು ತಂಬಿದುರೈ ಅವರನ್ನು ಆಯಾ ಪಕ್ಷಗಳು ಮತ್ತೊಂದು ಅವಧಿಗೆ ಆಯ್ಕೆ ಮಾಡಲು ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಿವೆ. ತಮಿಳು ವಾಹಿನಿಗಳಲ್ಲಿ ಜನಪ್ರಿಯ ವಾಗಿರುವ ರವೀಂದ್ರನ್ ಡಿಎಂಕೆ ಪಕ್ಷದ ಇಂಗ್ಲಿಷ್ ಮುಖವಾಣಿ 'ರೈಸಿಂಗ್ ಸನ್'ನ ಸಂಪಾದಕರೂ ಆಗಿದ್ದಾರೆ. ಅವರು ಕೆಲ ವರ್ಷಗಳ ಹಿಂದೆ ಡಿಎಂಡಿಕೆ ಪಕ್ಷದಿಂದ ಡಿಎಂಕೆಗೆ ಸೇರ್ಪಡೆಯಾದ ಕಾರಣ, ಅವರ ನಾಮನಿರ್ದೇಶನವು ಮಹತ್ವ ಪಡೆದಿದೆ.

ಡಿಎಂಕೆಯು ಡಿಎಂಡಿಕೆ ಪಕ್ಷಕ್ಕೆ ನೀಡಿದ್ದ ಭರವಸೆಯಂತೆ ಸುದೀಶ್ ಅವರಿಗೆ ರಾಜ್ಯಸಭಾ ಸ್ಥಾನ ಲಭಿಸಿದೆ. ಅನ್ಬುಮಣಿ ಅವರ ಪಿಎಂಕೆ ಪಕ್ಷಕ್ಕೆ ಅದರ ಮಿತ್ರಪಕ್ಷ ಎಐಎಡಿಎಂಕೆ ಒಂದು ಸ್ಥಾನವನ್ನು ಬಿಟ್ಟುಕೊಟ್ಟಿದೆ.

ಈ ಸದಸ್ಯರು ಅಧಿಕೃತವಾಗಿ ಆಯ್ಕೆಯಾದ ನಂತರ, ರಾಜ್ಯಸಭೆಯಲ್ಲಿ ಡಿಎಂಕೆ ಪಕ್ಷದ ಬಲವು ಪ್ರಸ್ತುತ ಇರುವ 10ರಿಂದ 8ಕ್ಕೆ ಇಳಿಕೆಯಾಗಲಿದೆ.

ಫೈನಲ್‌ಗೆ ಮತ್ತೆ ಲಗ್ಗೆಹಾಕಿದ ಭಾರತ

ವಾಂಖೆಡೆಯಲ್ಲಿ ಭಾರತ ಜಯಭೇರಿ • ಮಿಂಚಿದ ಸಂಜು, ಬೂಮ್ರಾ, ಅಕ್ಷರ್ • ಇಂಗ್ಲೆಂಡ್ ದಿಟ್ಟ ಆಟ • ಫಲನೀಡದ ಜೇಕಬ್ ಬೆಥೆಲ್ ಶತಕ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ರನ್‌ಗಳ ಹೊಳೆ ಹರಿಯಿತು. ಅದರಲ್ಲಿ ಭಾರತ ತಂಡವು ಈಜಿ ಗೆದ್ದಿತು. ಆದರೆ ಕಠಿಣ ಪೈಪೋಟಿಯೊಡ್ಡಿದ ಇಂಗ್ಲೆಂಡ್ ತಂಡವು ಕ್ರಿಕೆಟ್ ಪ್ರಿಯರ ಮನಗೆದ್ದಿತು.

ಇಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ತಂಡವನ್ನು 7 ರನ್‌ಗಳಿಂದ ಸೋಲಿಸಿದ ಭಾರತ ಫೈನಲ್‌ಗೆ ಲಗ್ಗೆ ಇಟ್ಟಿತು. ಹಾಲಿ ಚಾಂಪಿಯನ್ ಭಾರತವು ಇದೇ 8ರಂದು ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

ಸಂಜು ಸ್ಯಾಮ್ಸನ್ (89; 42ಎ) ಅಮೋಘ ಬ್ಯಾಟಿಂಗ್, ಅಕ್ಷರ್ ಪಟೇಲ್ ಅಮೋಘ ಫೀಲ್ಡಿಂಗ್ ಮತ್ತು ಕ್ಯಾಚಿಂಗ್ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದವು. ಇನ್ನೊಂದೆಡೆ ದಿಟ್ಟ ಹೋರಾಟ ಮಾಡಿದ ಇಂಗ್ಲೆಂಡ್ ತಂಡದ ಯುವ ಬ್ಯಾಟರ್ ಜೇಕಬ್ ಬೆಥೆಲ್ (105; 48ಎ) ಶತಕ ಬಹುಕಾಲ ನೆನಪಿನಲ್ಲಿ ಉಳಿಯಲಿದೆ.

ಟಾಸ್ ಗೆದ್ದ ಇಂಗ್ಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸಂಜು ಬ್ಯಾಟಿಂಗ್‌ನಿಂದ ಆತಿಥೇಯ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 253 ರನ್ ಗಳಿಸಿತು. ಈ ಬೃಹತ್ ಮೊತ್ತವನ್ನು ಬೆನ್ನಟ್ಟಿದ ಇಂಗ್ಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 246 ರನ್ ಗಳಿಸಿತು.

ಇಂಗ್ಲೆಂಡ್ ತಂಡವು ಪವರ್‌ಪ್ಲೇನಲ್ಲಿ 68 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಅದರಲ್ಲಿ ತಂಡದ ನಾಯಕ ಮತ್ತು ಸ್ಫೋಟಕ ಶೈಲಿಯ ಬ್ಯಾಟರ್ ಹ್ಯಾರಿ ಬ್ರೂಕ್ ಅವರ ವಿಕೆಟ್ ಪಡೆದ ಬೂಮ್ರಾ (33ಕ್ಕೆ1) ಅವರ ಅಮೋಘ ಬೌಲಿಂಗ್ ರಂಗೇರಿತು. ಬೂಮ್ರಾ ಡೆತ್ ಓವರ್‌ಗಳಲ್ಲಿಯೂ ಮಿಂಚಿದರು. ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ ಇಂಗ್ಲೆಂಡ್ ಖಾತೆಗೆ ಸಿಕ್ಸರ್, ಬೌಂಡರಿಗಳು ದಾಖಲಾಗುತ್ತಲೇ ಇದ್ದವು. ಸ್ಪಿನ್ನರ್ ವರುಣ್ ಚಕ್ರವರ್ತಿ (64ಕ್ಕೆ1) ಈ ಪಂದ್ಯದಲ್ಲಿಯೂ ದುಬಾರಿಯಾದರು.

ಆದರೆ ಬೌಲಿಂಗ್‌ನಲ್ಲಿ ಮಿಂಚಿದ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಫೀಲ್ಡಿಂಗ್‌ನಲ್ಲಿ ಸಾಹಸ ಮೆರೆದರು. ಬ್ರೂಕ್ ಅವರ ಕ್ಯಾಚ್ ಅನ್ನು ಡೈವ್ ಮಾಡಿ ಪಡೆದ ರೀತಿ ಆಕರ್ಷಕವಾಗಿತ್ತು. ಫಿಲ್ ಸಾಲ್ಟ್ ಕ್ಯಾಚ್ ಪಡೆದ ಅಕ್ಷರ್ ತಂಡದಲ್ಲಿ ವಿಶ್ವಾಸದ ಅಲೆ ಎಬ್ಬಿಸಿದ್ದರು. 20 ಎಸೆತಗಳಲ್ಲಿ 35 ರನ್ ಹೊಡೆದಿದ್ದ ವಿಲ್ ಜ್ಯಾಕ್ಸ್ ಅರ್ಷದೀಪ್ ಸಿಂಗ್ ಎಸೆತವನ್ನು ಸಿಕ್ಸರ್‌ಗೆತ್ತುವ ಪ್ರಯತ್ನ ಮಾಡಿದರು. ಆದರೆ ಬೌಂಡರಿಗೆರೆಯ ಬಳಿ ವೇಗವಾಗಿ ಓಡಿಬಂದ ಅಕ್ಷರ್ ಚೆಂಡನ್ನು ಹಿಡಿತಕ್ಕೆ ಪಡೆದರು. ಆದರೆ ವೇಗ ನಿಯಂತ್ರಿಸಲಾಗದೇ ತಾವು ಬೌಂಡರಿಗೆರೆ ದಾಟಿಯೇ ಬಿಡುವ ಮುನ್ನ ಸನಿಹದಲ್ಲಿದ್ದ ಫೀಲ್ಡರ್ ಶಿವಂ ದುಬೆಯತ್ತ ಚೆಂಡೆಸೆದರು. ಶಿವಂ ಕ್ಯಾಚ್ ಪಡೆದರು. ಕೊನೆಯ ಓವರ್‌ನಲ್ಲಿ ಬೆಥೆಲ್ ರನ್‌ಔಟ್ ಆದರು. ಆಗ ತಂಡಕ್ಕೆ 5 ಎಸೆತಗಳಲ್ಲಿ 29 ರನ್‌ಗಳ ಅಗತ್ಯವಿತ್ತು. ದುಬೆ ಹಾಕಿದ ಆ ಓವರ್‌ನಲ್ಲಿ ಜೋಫ್ರಾ ಆರ್ಚರ್ 3 ಸಿಕ್ಸರ್ ಹೊಡೆದರು.

ಸಂಜು ಅಬ್ಬರ: ಸಂಜು ಸ್ಯಾಮ್ಸನ್ ಅವರು ವೇಗಿ ಜೋಫ್ರಾ ಆರ್ಚರ್ ಸವಾಲನ್ನು ಮೀರಿ ನಿಂತರು. ಕೇರಳದ ಸಂಜು ಸತತ ಎರಡನೇ ಪಂದ್ಯದಲ್ಲಿ ಭರ್ಜರಿ ಅರ್ಧಶತಕ ಗಳಿಸಿದರು. ಸೂಪರ್ 8ರ ಹಂತದ ಕೊನೆಯ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಎದುರು ಏಕಾಂಗಿಯಾಗಿ ಹೋರಾಡಿದ್ದ ಸಂಜು ಅಜೇಯ 97 ರನ್ ಗಳಿಸಿದ್ದರು. ಅದರಿಂದಾಗಿ ಆ ಪಂದ್ಯದಲ್ಲಿ ಗೆದ್ದಿದ್ದ ಭಾರತ ನಾಲ್ಕರ ಘಟ್ಟಕ್ಕೆ ಪ್ರವೇಶಿಸಿತ್ತು.

ಅಭಿಷೇಕ್ ಶರ್ಮಾ (9; 7ಎ, 4X2) ಮತ್ತೊಮ್ಮೆ ವೈಫಲ್ಯ ಅನುಭವಿಸಿದರು. ಸಂಜು 8 ಬೌಂಡರಿ ಮತ್ತು 7 ಸಿಕ್ಸರ್ ದಾಖಲಿಸಿದರು. ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಎಡಗೈ ಬ್ಯಾಟರ್ ಇಶಾನ್ ಕಿಶನ್ (39; 18ಎ, 4X4, 6X2) ಅವರೊಂದಿಗೆ ಸಂಜು ಎರಡನೇ ವಿಕೆಟ್ ಜೊತೆಯಾಟದಲ್ಲಿ 97 ರನ್ ಸೇರಿಸಿದರು. ಇದರಿಂದಾಗಿ 8.3 ಓವರ್‌ಗಳಲ್ಲಿ ತಂಡದ ಮೊತ್ತವು 'ಶತಕ'ದ ಗಡಿ ಮುಟ್ಟಿತು.

ಆದರೆ ಇಶಾನ್, ಸ್ಪಿನ್ನರ್ ಹತ್ತನೇ ಓವರ್‌ನಲ್ಲಿ ಅದಿಲ್ ರಶೀದ್ ಎಸೆತದಲ್ಲಿ ವಿಲ್ ಜ್ಯಾಕ್ಸ್‌ಗೆ ಕ್ಯಾಚ್ ಆದರು. ಕ್ರಮಾಂಕದಲ್ಲಿ ಬಡ್ತಿ ಪಡೆದು ಬಂದ ಶಿವಂ ದುಬೆ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು. ಸಂಜು ಮತ್ತು ಶಿವಂ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 22 ಎಸೆತಗಳಲ್ಲಿ 43 ರನ್ ಸೇರಿಸಿದರು. ಆದರೆ ಹಾರ್ದಿಕ್ ಪಾಂಡ್ಯ (27; 12ಎ) ಎಂದಿನಂತೆ ಅಮೋಘ ಬ್ಯಾಟಿಂಗ್ ಮಾಡಿದರು. ತಿಲಕ್ ವರ್ಮಾ (21; 7ಎ, 6X3) ಅವರ ಕಾಣಿಕೆ ತಂಡದ ಮೊತ್ತ ಹೆಚ್ಚಿಸಲು ನೆರವಾಯಿತು.

ಟಿ20 ವಿಶ್ವಕಪ್: ತಂಡವೊಂದರ ಅತ್ಯಧಿಕ ಮೊತ್ತ

ರನ್	ತಂಡ	ಎದುರಾಳಿ	ತಾಣ	ವರ್ಷ
6ಕ್ಕೆ 260	ಶ್ರೀಲಂಕಾ	ಕೆನ್ಯಾ	ಜೋಹಾನೆಸ್‌ಬರ್ಗ್	2007
4ಕ್ಕೆ 256	ಭಾರತ	ಜಿಂಬಾಬ್ವೆ	ಚೆನ್ನೈ	2026
6ಕ್ಕೆ 254	ವೆಸ್ಟ್ ಇಂಡೀಸ್	ಜಿಂಬಾಬ್ವೆ	ವಾಂಖೆಡೆ	2026
7ಕ್ಕೆ 253	ಭಾರತ	ಇಂಗ್ಲೆಂಡ್	ವಾಂಖೆಡೆ	2026
7ಕ್ಕೆ 246	ಇಂಗ್ಲೆಂಡ್	ಭಾರತ	ವಾಂಖೆಡೆ	2026

ಸಂಜು ಸ್ಯಾಮ್ಸನ್
ರನ್ 89
ಎಸೆತ 42
ಬೌಂಡರಿ 8
ಸಿಕ್ಸರ್ 7

499
ಪಂದ್ಯದಲ್ಲಿ ಭಾರತ ಮತ್ತು ಇಂಗ್ಲೆಂಡ್ ತಂಡಗಳ ಒಟ್ಟು ರನ್. ಇದು ಪುರುಷರ ಟಿ20 ಕ್ರಿಕೆಟ್‌ನಲ್ಲಿ ಎರಡನೇ ಅತಿಹೆಚ್ಚು ರನ್ ದಾಖಲೆಯಾಗಿದೆ.

ಶತಕ ದಾಖಲಿಸಿದ ಜೇಕಬ್ ಬೆಥೆಲ್ ಅವರನ್ನು ರನೌಟ್ ಮಾಡಿ ಸಂಭ್ರಮಿಸಿದ ಭಾರತ ತಂಡದ ಅರ್ಷದೀಪ್ ಸಿಂಗ್, ಇಶಾನ್ ಕಿಶನ್, ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಮತ್ತು ಜಸ್‌ಪ್ರೀತ್ ಬೂಮ್ರಾ ಎಎಫ್‌ಪಿ ಚಿತ್ರ

ಪಂದ್ಯವೊಂದರಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳು (ಟಿ20 ವಿಶ್ವಕಪ್)

ಸಿಕ್ಸರ್	ತಂಡಗಳು	ತಾಣ	ವರ್ಷ
34	ಭಾರತ–ಇಂಗ್ಲೆಂಡ್	ವಾಂಖೆಡೆ	2026
31	ವೆಸ್ಟ್ ಇಂಡೀಸ್–ಜಿಂಬಾಬ್ವೆ	ಮುಂಬೈ	2026
30	ನೆದರ್ಲೆಂಡ್ಸ್–ಐರ್ಲೆಂಡ್	ಸಿಲ್ಹೆಟ್	2014
28	ಭಾರತ–ಜಿಂಬಾಬ್ವೆ	ಚೆನ್ನೈ	2026
25	ಇಂಗ್ಲೆಂಡ್–ಇಟಲಿ	ಕೋಲ್ಕತ್ತ	2026

ಸ್ಕೋರ್ ಕಾರ್ಡ್

ಭಾರತ: 20 ಓವರುಗಳಲ್ಲಿ 7 ವಿಕೆಟ್‌ಗೆ 253
ಸ್ಯಾಮ್ಸನ್ ಸಿ ಸಾಲ್ಟ್ ಬಿ ಜ್ಯಾಕ್ಸ್ 89 (42ಎ, 4x8, 6x7)
ಅಭಿಷೇಕ್ ಸಿ ಸಾಲ್ಟ್ ಬಿ ಜ್ಯಾಕ್ಸ್ 9 (7ಎ, 4x2)
ಇಶಾನ್ ಸಿ ಜಾಕ್ಸ್ ಬಿ ರಶೀದ್ 39 (18ಎ, 4x4, 6x2)
ದುಬೆ ರನ್‌ಔಟ್ (ಬ್ರೂಕ್) 43 (25ಎ, 4x1, 6x4)
ಸೂರ್ಯ ಸ್ಟಂ ಬಟ್ಲರ್ ಬಿ ರಶೀದ್ 11 (6ಎ, 6x1)
ಹಾರ್ದಿಕ್ ರನ್‌ಔಟ್ (ಬೆಥೆಲ್/ಬಟ್ಲರ್) 27 (12ಎ, 4x3, 6x2)
ತಿಲಕ್ ಬಿ ಆರ್ಚರ್ 21 (7ಎ, 6x3)
ಅಕ್ಷರ್ ಪಟೇಲ್ ಔಟಾಗದೇ 2 (2ಎ)
ವರುಣ್ ಚಕ್ರವರ್ತಿ ಔಟಾಗದೇ 0 (1ಎ)
ಇತರೆ: 12 (ಬೈ 2, ಲೆಗ್‌ಬೈ 1, ವೈಡ್ 9)
ವಿಕೆಟ್ ಪತನ: 1–20 (ಅಭಿಷೇಕ್ ಶರ್ಮಾ, 1.6), 2–117 (ಇಶಾನ್ ಕಿಶನ್, 9.3), 3–160 (ಸಂಜು ಸ್ಯಾಮ್ಸನ್, 13.1), 4–190 (ಸೂರ್ಯಕುಮಾರ್ ಯಾದವ್, 15.4), 5– 212 (ಶಿವಂ ದುಬೆ,17.3), 6–236 (ತಿಲಕ್ ವರ್ಮಾ, 18.5), 7–251 (ಹಾರ್ದಿಕ್ ಪಾಂಡ್ಯ, 19.5).
ಬೌಲಿಂಗ್: ಜೋಫ್ರಾ ಆರ್ಚರ್ 4–0–61–1; ವಿಲ್ ಜ್ಯಾಕ್ಸ್ 4–0–40–2; ಜೇಮಿ ಓವರ್ಟನ್ 3–0–36–0; ಸ್ಯಾಮ್ ಕರನ್ 4–0–53–0; ಅದಿಲ್ ರಶೀದ್ 4–0–41–2; ಲಿಯಾಂ ಡಾಸನ್ 1–0–19–0

ಇಂಗ್ಲೆಂಡ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 246
ಸಾಲ್ಟ್ ಸಿ ಅಕ್ಷರ್ ಬಿ ಪಾಂಡ್ಯ 5 (3ಎ, 4x1)
ಬಟ್ಲರ್ ಬಿ ವರುಣ್ 25 (17ಎ, 4x4, 6x1)
ಬ್ರೂಕ್ ಸಿ ಅಕ್ಷರ್ ಬಿ ಬೂಮ್ರಾ 7 (6ಎ, 4x1)
ಬೆಥೆಲ್ ರನೌಟ್ (ಪಾಂಡ್ಯ/ಸಂಜು) 105 (48ಎ, 4x8, 6x7)
ಬ್ಯಾಂಟನ್ ಬಿ ಅಕ್ಷರ್ 17 (5ಎ, 4x1, 6x2)
ಜ್ಯಾಕ್ಸ್ ಸಿ ದುಬೆ ಬಿ ಅರ್ಷದೀಪ್ 35 (20ಎ, 4x4, 6x2)
ಕರನ್ ಸಿ ತಿಲಕ್ ಬಿ ಪಾಂಡ್ಯ 18 (14ಎ, 4x2)
ಓವರ್ಟನ್ ಔಟಾಗದೇ 2 (3ಎ)
ಆರ್ಚರ್ ಔಟಾಗದೇ 19 (4ಎ, 6x3)
ಇತರೆ: 13 (ಲೆಗ್‌ಬೈ 3, ವೈಡ್ 10)
ವಿಕೆಟ್ ಪತನ: 1-13 (ಫಿಲ್ ಸಾಲ್ಟ್, 1.1), 2-38 (ಹ್ಯಾರಿ ಬ್ರೂಕ್, 4.1), 3-64 (ಜೋಸ್ ಬಟ್ಲರ್, 5.5), 4-95 (ಟಾಮ್ ಬ್ಯಾಂಟನ್, 7.3), 5-172 (ವಿಲ್ ಜ್ಯಾಕ್ಸ್, 13.6), 6-222 (ಸ್ಯಾಮ್ ಕರನ್, 18.3), 7-225 (ಜೇಕಬ್ ಬೆಥೆಲ್, 19.1)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–51–1, ಹಾರ್ದಿಕ್ ಪಾಂಡ್ಯ 4–0–38–2, ಜಸ್‌ಪ್ರೀತ್ ಬೂಮ್ರಾ 4–0–33–1, ವರುಣ್ ಚಕ್ರವರ್ತಿ 4–0–64–1, ಅಕ್ಷರ್ ಪಟೇಲ್ 3–0–35–1, ಶಿವಂ ದುಬೆ 1–0–22–0
ಪಂದ್ಯದ ಆಟಗಾರ: ಸಂಜು ಸ್ಯಾಮ್ಸನ್

ಫಲಿತಾಂಶ: ಭಾರತಕ್ಕೆ 7 ರನ್‌ಗಳ ಗೆಲುವು

ಭಾರತ– ಆಸ್ಟ್ರೇಲಿಯಾ ಮಹಿಳಾ ತಂಡಗಳ ಹಣಾಹಣಿ

ಪಿಂಕ್‌ಬಾಲ್ ಟೆಸ್ಟ್ ಇಂದಿನಿಂದ

ಪರ್ತ್ (ಪಿಟಿಐ): ಏಕದಿನ ಸರಣಿಯಲ್ಲಿ 0–3 ಮುಖಭಂಗ ಅನುಭವಿಸಿದ್ದ ಭಾರತ ತಂಡ, ಶುಕ್ರವಾರ ಆರಂಭವಾಗಲಿರುವ ಮಹಿಳೆಯರ ಏಕೈಕ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಈ ಹಗಲು–ರಾತ್ರಿ (ಪಿಂಕ್‌ಬಾಲ್) ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ ಅನುಭವಿ ಆಟಗಾರ್ತಿಯರಿಂದ ಉತ್ತಮ ಆಟ ನಿರೀಕ್ಷಿಸುತ್ತಿದೆ.

ಸುಮಾರು ಐದು ವರ್ಷಗಳ ನಂತರ ಭಾರತ ತಂಡವು ಹೊರದೇಶದಲ್ಲಿ ಟೆಸ್ಟ್ ಆಡುತ್ತಿದೆ. ತಂಡವು ಕೊನೆಯ ಐದು ಟೆಸ್ಟ್ ಪಂದ್ಯಗಳಲ್ಲಿ ಅಜೇಯವಾಗಿ ಉಳಿದಿದೆ. ಡಿಸೆಂಬರ್ 2023 ರಿಂದ 2024ರ ಜುಲೈ ನಡುವೆ ಸತತ ಮೂರು ಟೆಸ್ಟ್‌ಗಳನ್ನು (ಇಂಗ್ಲೆಂಡ್, ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಎದುರು) ಜಯಗಳಿಸಿತ್ತು. ಎಲ್ಲವೂ ತವರು ನೆಲದಲ್ಲಿ.

2021ರಲ್ಲಿ ಭಾರತ ತಂಡವು ಕೊನೆಯ ಬಾರಿ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ನೆಲದಲ್ಲಿ ಆಡಿದ್ದ ಟೆಸ್ಟ್‌ಗಳು ಡ್ರಾ ಆಗಿದ್ದವು.

ಪಿಂಕ್‌ಬಾಲ್ ಟೆಸ್ಟ್‌ನೊಡನೆ ಆಸ್ಟ್ರೇಲಿಯಾ ವಿರುದ್ಧದ ಭಾರತದ ಬಹುಮಾದರಿ ಸರಣಿ ಮುಕ್ತಾಯಗೊಳ್ಳಲಿದೆ. ಈ ಪ್ರವಾಸದಲ್ಲಿ ಮೊದಲು ನಡೆದ ಟಿ20 ಸರಣಿಯನ್ನು ಭಾರತ 2–1 ರಿಂದ ಗೆದ್ದುಕೊಂಡಿತ್ತು. ಆದರೆ ಆಸ್ಟ್ರೇಲಿಯಾ ಏಕದಿನ ಸರಣಿಯನ್ನು 3–0 ಯಿಂದ ಗೆದ್ದಿತ್ತು. ಆಸ್ಟ್ರೇಲಿಯಾ ಈಗ 8–4 ಪಾಯಿಂಟ್‌ಗಳಿಂದ ಮುಂದಿದೆ.

ಟಿ20 ಮತ್ತು ಏಕದಿನ ಮಾದರಿಯ ಪ್ರತಿ ಪಂದ್ಯದ ಗೆಲುವಿಗೆ ಎರಡು ಪಾಯಿಂಟ್‌ಗಳನ್ನು ನೀಡಲಾಗುತ್ತದೆ. ಟೆಸ್ಟ್ ಪಂದ್ಯ ಗೆದ್ದ ತಂಡ 4 ಪಾಯಿಂಟ್ ಪಡೆಯಲಿದೆ. ಈ ಏಕೈಕ ಟೆಸ್ ಡ್ರಾ ಆದಲ್ಲಿ ಆಸ್ಟ್ರೇಲಿಯಾ 'ಸರಣಿ' ಗೆಲ್ಲಲಿದೆ.

2023ರಲ್ಲಿ ಆಸ್ಟ್ರೇಲಿಯಾ ವಿರುದ್ಧ ವಾಂಖೆಡೆಯಲ್ಲಿ ಟೆಸ್ಟ್ ಪಂದ್ಯ ಗೆದ್ದ ನಂತರ ಭಾರತದ ವಿಶ್ವಾಸ ವೃದ್ಧಿಸಿದೆ.

ತಂಡದಲ್ಲಿ ನಾಯಕಿ ಹರ್ಮನ್‌ಪ್ರೀತ್ ಕೌರ್, ಉಪನಾಯಕಿ ಸ್ಮೃತಿ ಮಂದಾನ, ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ ಸೇರಿದಂತೆ ಅನುಭವಿಗಳ ಪಡೆಯಿದೆ. ಆರಂಭ ಆಟಗಾರ್ತಿ ಪ್ರತೀಕಾ ರಾವಲ್ ಅವರು ಟೆಸ್ಟ್‌ಗೆ ಪದಾರ್ಪಣೆ ಮಾಡುವ ನಿರೀಕ್ಷೆಯಿದೆ.

ಈ ಏಕೈಕ ಟೆಸ್ಟ್‌ಗೆ ಆಯ್ಕೆ ಮಾಡಿರುವ ತಂಡದಲ್ಲಿ ಏಳು 'ಅನ್‌ಕ್ಯಾಪ್ಡ್' ಆಟಗಾರ್ತಿಯರಿದ್ದಾರೆ. ಇವರಲ್ಲಿ ಎಡಗೈ ಸ್ಪಿನ್ನರ್ ವೈಷ್ಣವಿ ಶರ್ಮಾ ಜೊತೆಗೆ ಕ್ರಾಂತಿ ಗೌಡ, ಸಯಾಲಿ ಸಾತ್ಘರೆ, ಕಶ್ವಿ ಗೌತಮ್ ಒಳಗೊಂಡಿದ್ದಾರೆ. ಕ್ರಾಂತಿ ಮತ್ತು ಅಮನ್ಜೋತ್ ಕೌರ್ ಅವರು ಶುಕ್ರವಾರ ಟೆಸ್ಟ್‌ಗೆ ಪದಾರ್ಪಣೆ ಮಾಡುವ ಸಾಧ್ಯತೆಯಿದೆ.

ಮಧ್ಯಮ ವೇಗಿ ರೇಣುಕಾ ಸಿಂಗ್ ಅವರು ಕಾರ್ಯಭಾರ ನಿರ್ವಹಣೆ ಭಾಗವಾಗಿ ಈ ಪಂದ್ಯಕ್ಕೆ ಅಲಭ್ಯರಾಗಿದ್ದು ಅವರ ಸ್ಥಾನಕ್ಕೆ ಕಶ್ವಿ ಗೌತಮ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ.

ಆಸ್ಟ್ರೇಲಿಯಾ ತಂಡದ ನಾಯಕಿ ಅಲಿಸಾ ಹೀಲಿ ಅವರ ಪಾಲಿಗೆ ಇದು ವಿದಾಯದ ಟೆಸ್ಟ್ ಪಂದ್ಯವಾಗಿದೆ. ಇದು ಅವರು ಆಡಲಿರುವ 299ನೇ ಹಾಗೂ ಕೊನೆಯ ಅಂತರರಾಷ್ಟ್ರೀಯ ಪಂದ್ಯ.

ಪಂದ್ಯ ಆರಂಭ: ಬೆಳಿಗ್ಗೆ 10.50 (ಭಾರತೀಯ ಕಾಲಮಾನ)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಪ್ರತೀಕಾ ರಾವಲ್

ಕ್ವಾರ್ಟರ್‌ಫೈನಲ್‌ಗೆ ಲಕ್ಷ್ಯ ಸೇನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಅವರು ಮೂರು ಗೇಮ್‌ಗಳ ಸೆಣಸಾಟದಲ್ಲಿ ಹಾಂಗ್‌ಕಾಂಗ್‌ನ ಆ್ಯಂಗಸ್ ಇಂಗ್ ಕಾ ಲಾಂಗ್ ಅವರನ್ನು ಸೋಲಿಸಿ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ಗೆ ದಾಪುಗಾಲಿಟ್ಟರು.

ವಿಶ್ವ ಕ್ರಮಾಂಕದಲ್ಲಿ 12ನೇ ಸ್ಥಾನದಲ್ಲಿರುವ ಲಕ್ಷ್ಯ ಗುರುವಾರ ನಡೆದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 21–19, 21–23, 21–10 ರಿಂದ ಇಂಗ್ ಕಾ ಲಾಂಗ್ ಅವರನ್ನು ಹಿಮ್ಮೆಟ್ಟಿಸಿದರು. ಉತ್ತರಾಖಂಡದ ಆಟಗಾರ ಮೊದಲ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಶಿ ಯುಕಿ ಅವರಿಗೆ ಆಘಾತ ನೀಡಿದ್ದರು.

2022ರಲ್ಲಿ ಫೈನಲ್ ತಲುಪಿದ್ದ ಲಕ್ಷ್ಯ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಆರನೇ ಶ್ರೇಯಾಂಕ ಪಡೆದಿರುವ ಚೀನಾದ ಆಟಗಾರ ಲಿ ಶಿಫೆಂಗ್ ಅವರನ್ನು ಎದುರಿಸಲಿದ್ದಾರೆ.

ಮೊದಲ ಗೇಮ್‌ನಲ್ಲಿ 4–6 ಹಿನ್ನಡೆಯಿಂದ ಚೇತರಿಸಿದ ಅವರು ಕ್ರಮೇಣ 15–11 ಮುನ್ನಡೆ ಸಾಧಿಸಿದರು. ನಂತರ ಅದನ್ನು 17–13ಕ್ಕೆ ಬೆಳೆಸಿದರು. ಆದರೆ ಹಾಂಗ್‌ಕಾಂಗ್ ಆಟಗಾರನಿಂದ ಹೋರಾಟ ಎದುರಾಯಿತು. ಸ್ಕೋರ್ 19–19ರಲ್ಲಿ ಸಮನಾಯಿತು. ಜಂಪ್ ಸ್ಮ್ಯಾಶ್ ಮೂಲಕ ಒಂದು ಪಾಯಿಂಟ್ ಪಡೆದ ಲಕ್ಷ್ಯ, ಎದುರಾಳಿಯ ಹೊಡೆತ ಕೋರ್ಟ್‌ನಾಚೆ ಬಿದ್ದಾಗ 'ಗೇಮ್ ಪಾಯಿಂಟ್' ಸಹ ಗಳಿಸಿದರು.

ಲಕ್ಷ್ಯ ಅವರು ಎರಡನೇ ಗೇಮ್‌ನ ಬಹುತೇಕ ಸಮಯ ಮುನ್ನಡೆಯಲ್ಲಿದ್ದರು. ಲಾಂಗ್ ಅವರು ಅಧೀರರಾಗಲಿಲ್ಲ. 7–14, ನಂತರ 12–17ರಲ್ಲಿ ಹಿನ್ನಡೆಯಿಂದ ಅವರು ಚೇತರಿಸಿದರು. ಉತ್ತಮ ಹೋರಾಟ ಕಂಡುಬಂದು ಸ್ಕೋರ್ 20–20ರಲ್ಲಿ ಸಮನಾಯಿತು. ನಂತರ ಹಾಂಗ್‌ಕಾಂಗ್ ಆಟಗಾರ ಗೇಮ್ ಗೆದ್ದರು. ನಿರ್ಣಾಯಕ ಗೇಮ್‌ನಲ್ಲಿ ಲಕ್ಷ್ಯ ಯಾವ ಹಂತದಲ್ಲೂ ಎದುರಾಳಿ ಲಾಂಗ್ ಅವರಿಗೆ ಚೇತರಿಸಲು ಅವಕಾಶ ನೀಡಲಿಲ್ಲ. 10–4 ಮುನ್ನಡೆ ಪಡೆದ ಅವರು ನಂತರ ಅದನ್ನು 18–7ಕ್ಕೆ ಹೆಚ್ಚಿಸಿದರು. ಅಮೋಘ ರಕ್ಷಣೆಯ ಆಟದ ಜೊತೆಗೆ ಕೆಲವೊಮ್ಮೆ ಡೈವ್‌ಗಳನ್ನು ಮಾಡಿ 'ರ್‍ಯಾಲಿ'ಗಳಲ್ಲಿ ಪಾಯಿಂಟ್ ನಷ್ಟವಾಗದಂತೆ ನೋಡಿಕೊಂಡು ಜಯ ಸಾಧಿಸಿದರು.

ಭಾರತದ ಲಕ್ಷ್ಯ ಸೇನ್

ಪಾರಮ್ಯ ಮೆರೆದ ಅಂಕಿತಾ, ವೈಷ್ಣವಿ

ಕಲಬುರಗಿ ಓಪನ್ ಟೆನಿಸ್: ಹೋರಾಡಿ ಸೋತ ದೇಸಾಯಿ

• ಬಸವರಾಜ ದಳವಾಯಿ

ಕಲಬುರಗಿ: ಭಾರತದ ಅನುಭವಿ ಅಂಕಿತಾ ರೈನಾ ಹಾಗೂ ಭರವಸೆಯ ಪ್ರತಿಭೆ ವೈಷ್ಣವಿ ಅಡ್ಕರ್ ಅವರು ಕಲಬುರಗಿ ಓಪನ್ ಐಟಿಎಫ್ ಮಹಿಳೆಯರ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಎಂಟರ ಘಟ್ಟಕ್ಕೆ ಮುನ್ನಡೆದರು. ಆದರೆ, ಜೀಲ್ ದೇಸಾಯಿ ಅವರ ಸವಾಲು ಪ್ರಿಕ್ವಾರ್ಟರ್ ಫೈನಲ್‌ನಲ್ಲೇ ಅಂತ್ಯಗೊಂಡಿತು.

ಇಲ್ಲಿಯ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಗುರುವಾರ ನಡೆದ 16ರ ಘಟ್ಟದ ಹಣಾಹಣಿಯಲ್ಲಿ ಎಂಟನೇ ಶ್ರೇಯಾಂಕದ ಅಂಕಿತಾ 6–2, 6–1ರಿಂದ ಉಜ್ಬೆಕಿಸ್ತಾನದ ಮಿಲಾನಾ ಮಸ್ಲೆಂಕೊವಾ ಅವರನ್ನು ಮಣಿಸಿದರು.

ಶರವೇಗದ ಸರ್ವ್ ಮತ್ತು ಹೊಡೆತಗಳ ಮೂಲಕ ಮೊದಲ ಸೆಟ್‌ನಲ್ಲಿ ಆರಂಭದ ಮೂರು ಗೇಮ್‌ಗಳನ್ನು ತಮ್ಮದಾಗಿಸಿಕೊಂಡ ಅಂಕಿತಾ, ಎರಡನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಮುರಿದರು. ನಂತರದ ಒಂದು ಗೇಮ್ ಮಸ್ಲೆಂಕೊವಾ ಪಾಲಾಯಿತು. ತೀವ್ರ ಪೈಪೋಟಿ ಮುಂದುವರಿದು ಇಬ್ಬರೂ ತಲಾ ಒಂದೊಂದು ಗೇಮ್ ಜಯಿಸಿದಾಗ ಅಂಕಿತಾ 4–2ರ ಮುನ್ನಡೆಯಲಿದ್ದರು. ಏಳನೇ ಗೇಮ್ ಕೂಡ ಆತಿಥೇಯ ಆಟಗಾರ್ತಿ ಮಡಿಲಿಗೆ ಬಂತು. ಎಂಟನೇ ಗೇಮ್‌ನಲ್ಲಿ ಸುಮಾರು 10 ನಿಮಿಷಕ್ಕೂ ಹೆಚ್ಚು ಕಾಲ ಅಡ್ವಾಂಟೇಜ್, ಡ್ಯೂಸ್‌ಗಳ ಸರಣಿ ನಡೆಯಿತು. ಒತ್ತಡ ಮೆಟ್ಟಿನಿಂತ ಅಂಕಿತಾ, ಅಂತಿಮವಾಗಿ ಗೇಮ್ ಹಾಗೂ ಸೆಟ್ ಕೈವಶಮಾಡಿಕೊಂಡರು.

ಅಂಕಿತಾ ಎರಡನೇ ಸೆಟ್‌ನಲ್ಲಿ ಎದುರಾಳಿಗೆ ಕೇವಲ ಒಂದು ಗೇಮ್ (2ನೇ) ಬಿಟ್ಟುಕೊಟ್ಟು ಪ್ರಾಬಲ್ಯ ಸಾಧಿಸಿದರು.ಏಟಿಎ ರ್‍ಯಾಂಕಿಂಗ್‌ನಲ್ಲಿ ಆರನೇ ಸ್ಥಾನದಲ್ಲಿರುವ ವೈಷ್ಣವಿ 6–2, 6–0ರಿಂದ ರಷ್ಯಾದ ಆ್ಯನಾ ಸೆದಿಶೇವಾ ಅವರನ್ನು ಪರಾಭವಗೊಳಿಸಿದರು. ಈ ಪೈಪೋಟಿಯಲ್ಲಿ 21ರ ಹರೆಯದ ಪುಣೆ ಆಟಗಾರ್ತಿ ಎರಡು ಭರ್ಜರಿ ಏಸ್‌ಗಳನ್ನೂ ಸಿಡಿಸಿದರು. ಐದು ಬಾರಿ ಎದುರಾಳಿಯ ಸರ್ವ್ ಮುರಿದರು.

ಇನ್ನೊಂದು ಹಣಾಹಣಿಯಲ್ಲಿ ಐದನೇ ಶ್ರೇಯಾಂಕದ ಜೀಲ್ ದೇಸಾಯಿ ಅವರಿಗೆ 6–7, 3–6 ರಿಂದ ರಷ್ಯಾದ ಎಲಿನಾ ನೇಪಿಲಿ ಎದುರು ಸೋಲು ಎದುರಾಯಿತು. ಟೈಬ್ರೇಕ್‌ವರೆಗೆ ಸಾಗಿದ ಮೊದಲ ಸೆಟ್‌ನಲ್ಲಿ ತೀವ್ರ ಪೈಪೋಟಿ ನೀಡಿದ್ದ ಜೀಲ್ ಎರಡನೇ ಸೆಟ್‌ನಲ್ಲಿ ಮಂಕಾದಂತೆ ಕಂಡುಬಂದರು.

ಸಿಂಗಲ್ಸ್ ಇನ್ನುಳಿದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಅಗ್ರಶ್ರೇಯಾಂಕದ ಆಟಗಾರ್ತಿ, ನೆದರ್ಲೆಂಡ್ಸ್‌ನ ಯಾಸ್ಮಿನ್ ಜಿಂಬ್ರೆ 7–5, 7–5ರಿಂದ ಸಿಂಗಪುರದ ಇವಾ ಮೇರಿ ಡೆಸ್ವಿನ್ಸ್ ಎದುರು, ಇಸ್ರೇಲ್‌ನ ಮಾಯನ್ ಲಾರೆನ್ 6–3, 6–1ರಿಂದ ಜಪಾನ್‌ನ ಮಿಚಿಕಾ ಒಜೆಕಿ ವಿರುದ್ಧ, ರಷ್ಯಾದ ಎವ್‌ಜೆನಿಯಾ ಬರ್ಡಿನಾ 7–6, 6–2ರಿಂದ ತಮ್ಮದೇ ದೇಶದ ಸುಫಿಯಾ ಸುಸ್ಲೊವಾ ಮೇಲೆ, ಥಾಯ್ಲೆಂಡ್‌ನ ಅಂಚಿಸಾ ಚಂತಾ 6–3, 6–3ರಿಂದ ಬೆಲಾರಸ್‌ನ ಪೊಲಿನಾ ಕುಹರೆಂಕೊ ವಿರುದ್ಧ, ಥಾಯ್ಲೆಂಡ್‌ನ ಥಾಸಪಾರ್ನ್ ನಕ್ಲೊ 6–3, 6–0ರಿಂದ ರಷ್ಯಾದ ಸೋಫಿಯಾ ವಿರುದ್ಧ ಗೆದ್ದು ಕ್ವಾರ್ಟರ್‌ಫೈನಲ್‌ಗೆ ಕಾಲಿಟ್ಟರು.

ಭಾರತದ ವೈಷ್ಣವಿ ಅಡ್ಕರ್ ಚೆಂಡು ಹಿಂದಿರುಗಿಸಿದ ಪರಿ
ಚಿತ್ರ: ತಾಜುದ್ದೀನ್ ಆಜಾದ್

ಸಲೋನಿ ಆಲ್‌ರೌಂಡ್ ಆಟಕ್ಕೆ ಗೆಲುವು

ಬೆಂಗಳೂರು: ಸಲೋನಿ ಪಿ. (ಔಟಾಗದೇ 50; 15ಕ್ಕೆ 3) ಅವರ ಆಲ್‌ರೌಂಡ್ ಆಟದ ನೆರವಿನಿಂದ ಕರ್ನಾಟಕ ತಂಡವು 23 ವರ್ಷದೊಳಗಿನ ಮಹಿಳೆಯರ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 79 ರನ್‌ಗಳಿಂದ ಬರೋಡಾ ತಂಡವನ್ನು ಮಣಿಸಿತು.

ಜೈಪುರಿಯ ವಿದ್ಯಾಲಯ ಮೈದಾನದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಬರೋಡಾ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಸಲೋನಿ ಅವರ ಅಜೇಯ ಅರ್ಧಶತಕದ ಬಲದಿಂದ ಕರ್ನಾಟಕ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗೆ 232 ರನ್ ಗಳಿಸಿತು. ಎಂಟನೇ ಕ್ರಮಾಂಕದಲ್ಲಿ ಕ್ರೀಸ್‌ಗಿಳಿದ ಸಲೋನಿ 44 ಎಸೆತಗಳಲ್ಲಿ 7 ಬೌಂಡರಿ, ಒಂದು ಸಿಕ್ಸರ್ ಸೇರಿ 50 ರನ್ ಬಾರಿಸಿದರು. ಆರಂಭ ಆಟಗಾರ್ತಿ ರಚಿತಾ ಹತ್ವಾರ್ (45) ಉಪಯುಕ್ತ ಕಾಣಿಕೆ ನೀಡಿದರು. ಗುರಿ ಬೆನ್ನಟ್ಟಿದ ಬರೋಡಾ ತಂಡವು 37.2 ಓವರ್‌ಗಳಲ್ಲಿ 153 ರನ್ ಗಳಿಸಿ ಹೋರಾಟ ಮುಗಿಸಿತು. ವಿಧಿ ಎಚ್. ಪರಮಾರ್ (54; 79ಎ) ಏಕಾಂಗಿ ಹೋರಾಟ ನಡೆಸಿದರು. ಸಲೋನಿ 3 ವಿಕೆಟ್ ಪಡೆದರೆ, ಮಿಥಿಲಾ ಮತ್ತು ಪೂಜಾ ಕುಮಾರಿ ತಲಾ 2 ವಿಕೆಟ್ ಗಳಿಸಿದರು.

ಬ್ಯಾಸ್ಕೆಟ್‌ಬಾಲ್: ಯಂಗ್ ಓರಿಯನ್ಸ್‌ಗೆ ಗೆಲುವು

ಬೆಂಗಳೂರು: ಸರಾಯು ಮತ್ತು ಬಿಂದುಶ್ರೀ ಅವರ ಆಟದ ನೆರವಿನಿಂದ ಯಂಗ್ ಓರಿಯನ್ಸ್ ಎಸ್.ಸಿ ತಂಡವು ಎಸ್‌ಎಂಎನ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ಮಾತ್ರ ಕಪ್ ರಾಜ್ಯ ಮಟ್ಟದ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಲೀಗ್ ಪಂದ್ಯದಲ್ಲಿ 63–54ರಿಂದ ರಾಜ್‌ಮಹಲ್ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ವಿರಾಮದ ವೇಳೆ ಓರಿಯನ್ಸ್ ತಂಡವು 28–34ರಿಂದ ಹಿನ್ನಡೆಯಲ್ಲಿತ್ತು. ಉತ್ತರಾರ್ಧದಲ್ಲಿ ಪಾರಮ್ಯ ಮೆರೆದ ತಂಡವು 9 ಅಂಕಗಳಿಂದ ಜಯಿಸಿತು.

ಫಲಿತಾಂಶಗಳು: ನೈರುತ್ಯ ರೈಲ್ವೆ ಮೈಸೂರು 86–18ರಿಂದ ಭಾರತ್ ಎಸ್.ಯು ವಿರುದ್ಧ; ಡಿವೈಇಎಸ್ ಮೈಸೂರು 62–28ರಿಂದ ಆಲ್ ಸ್ಟಾರ್ ಮೈಸೂರು ಬಿ.ಸಿ ವಿರುದ್ಧ; ಮೌಂಟ್ಸ್ ಬಿ.ಸಿ. 36–14ರಿಂದ ಪಟ್ಟಾಭಿರಾಮನಗರ ಬಿ.ಸಿ ವಿರುದ್ಧ; ಬೀಗಲ್ಸ್ ಬಿ.ಸಿ 59–30ರಿಂದ ವಿವೇಕ್ಸ್ ಎಸ್.ಸಿ ವಿರುದ್ಧ; ಜೆಎಸ್‌ಸಿ 83–31ರಿಂದ ಡಿವೈಇಎಸ್ ವಿದ್ಯಾನಗರ ವಿರುದ್ಧ; ಯಂಗ್ ಓರಿಯನ್ಸ್ ಎಸ್‌ಸಿ 63–54ರಿಂದ ರಾಜ್‌ಮಹಲ್ ವಿರುದ್ಧ ಗೆಲುವು ಸಾಧಿಸಿದವು.

ಗುಕೇಶ್–ಮಘಸೂಡ್ಲು ಪಂದ್ಯ ಡ್ರಾ

ಪ್ರಾಗ್ (ಝೆಕ್ ರಿಪಬ್ಲಿಕ್), (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರಿಗೆ ಪ್ರಾಗ್ ಅಂತರರಷ್ಟ್ರೀಯ ಚೆಸ್ ಟೂರ್ನಿಯ ಏಳನೇ ಸುತ್ತಿನಲ್ಲೂ ಗೆಲುವು ಒಲಿಯಲಿಲ್ಲ. ಗುರುವಾರ ನಡೆದ ಪಂದ್ಯದಲ್ಲಿ ಅವರು ಇರಾನಿನ ಪರ್ಹಾಮ್ ಮಘಸೂಡ್ಲು ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.

ಇದು ಗುಕೇಶ್ ಅವರಿಗೆ ನಾಲ್ಕನೇ ಡ್ರಾ. ಮೂರು ಪಂದ್ಯ ಸೋತಿರುವ ಅವರು ಒಟ್ಟು ಎರಡು ಅಂಕಗಳನ್ನು ಗಳಿಸಿದ್ದು ಕೊನೆಯ ಸ್ಥಾನದಲ್ಲಿದ್ದಾರೆ. ಈ ಟೂರ್ನಿಯಲ್ಲಿ ಒಟ್ಟು 10 ಆಟಗಾರರು ಭಾಗವಹಿಸಿದ್ದು, ಎರಡು ಸುತ್ತುಗಳಷ್ಟೇ ಬಾಕಿ ಉಳಿದಿವೆ.

ದಿನದ ಐದು ಪಂದ್ಯಗಳಲ್ಲಿ ಒಂದರಲ್ಲಷ್ಟೇ ಸೋಲು–ಗೆಲುವು ನಿರ್ಧಾರವಾಯಿತು. ಉಳಿದ ನಾಲ್ಕು ಪಂದ್ಯಗಳು ಡ್ರಾ ಆದವು. ಜರ್ಮನಿಯ ವಿನ್ಸೆಂಟ್ ಕೀಮರ್ (3.5 ಅಂಕ) ಅವರು ಸ್ಪೇನ್‌ನ ಡೇವಿಡ್ ಗಿಜಾರೊ (3.5) ಅವರನ್ನು ಸೋಲಿಸಿದರು.

ಕಳೆದ ಬಾರಿಯ ಚಾಂಪಿಯನ್ ಅರವಿಂದ ಚಿದಂಬರಮ್ (3 ಅಂಕ) ಅವರು ಉಜ್ಬೇಕಿಸ್ತಾನದ ನಾದಿರ್ಬೆಕ್ ಯಾಕುಬೊಯೆವ್ (3) ಜೊತೆ ಡ್ರಾ ಮಾಡಿಕೊಂಡರು. ಮತ್ತೊಬ್ಬ ಉಜ್ಬೇಕ್ ಆಟಗಾರ ನಾದಿರ್ಬೆಕ್ ಅಬ್ದುಸತ್ತಾರೋವ್ ಜೊತೆ ಡ್ರಾ ಮಾಡಿಕೊಂಡ ಡಚ್ ಗ್ರ್ಯಾಂಡ್‌ಮಾಸ್ಟರ್ ಜೋರ್ಡಾನ್ ವಾನ್ ಫೊರೀಸ್ಟ್ (5 ಅಂಕ) ಅವರು ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಅಬ್ದುಸತ್ತಾರೋವ್ ಮತ್ತು ಝೆಕ್ ರಿಪಬ್ಲಿಕ್‌ನ ಡೇವಿಡ್ ನವಾರ ಅವರು ತಲಾ 4.5 ಅಂಕ ಸಂಗ್ರಹಿಸಿದ್ದು ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಚಾಲೆಂಜರ್ಸ್ ವಿಭಾಗದಲ್ಲಿ ಸೂರ್ಯಶೇಖರ ಗಂಗೂಲಿ ಏಳನೇ ಸುತ್ತಿನಲ್ಲಿ ಚೀನಾದ ಜಿನೆರ್ ಝು (2 ಅಂಕ) ಅವರನ್ನು ಸೋಲಿಸಿ ಟೂರ್ನಿಯಲ್ಲಿ ತಮ್ಮ ಮೊದಲ ಗೆಲುವು ದಾಖಲಿಸಿದರು. ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ (3.5 ಅಂಕ) ಅವರು ಡೆನ್ಮಾರ್ಕ್‌ನ ಯೊನಾಸ್ ಜೆರಿ ಬುಹ್ಲ್ (3.5) ಜೊತೆ ಡ್ರಾ ಮಾಡಿಕೊಂಡರು.

ಡಿ.ಗುಕೇಶ್

ರಾಜ್ಯ ಸರ್ಕಾರ ನೇಮಿಸಿದ ಪರಿಶೀಲನಾ ಸಮಿತಿ ಅಭಿಪ್ರಾಯ

ನವೀಕರಣ ಕಾಮಗಾರಿ: ಕೆಎಸ್‌ಸಿಎ ಹಿನ್ನಡೆ

• ಪ್ರಜ್ವಲ್ ಡಿಸೋಜಾ

ಬೆಂಗಳೂರು: ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸುವುದಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಮೂರು ದಿನಗಳ ಹಿಂದಷ್ಟೇ ಘೋಷಿಸಿತ್ತು.

ಆದರೆ ಮಾರ್ಚ್ ಅಂತ್ಯದೊಳಗೆ ಐಪಿಎಲ್ ಶುರುವಾಗುವ ಮುಂಚೆ ಕಾಮಗಾರಿಗಳು ಪೂರ್ಣಗೊಳಿಸುವಲ್ಲಿ ಕೆಎಸ್‌ಸಿಎ ಹಿಂದುಳಿದಿದೆ. ಸಂಸ್ಥೆಯು ನೀಡಿದ ಕಾಲಮಿತಿಗೆ ಅನುಗುಣವಾಗಿ ಸದ್ಯ ನಡೆದಿರುವ ಕಾಮಗಾರಿಯು ತಲುಪಿರುವ ಹಂತ ತೃಪ್ತಿಕರವಾಗಿಲ್ಲ ಎಂದು ರಾಜ್ಯ ಸರ್ಕಾರ ನೇಮಕ ಮಾಡಿರುವ ತಜ್ಞರ ಸಮಿತಿಯು ಅಭಿಪ್ರಾಯಪಟ್ಟಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಕೆಎಸ್‌ಸಿಎ ಕ್ರಮವಾಗಿ ಪತ್ರಿಕಾ ಪ್ರಕಟಣೆ ಹಾಗೂ ಸುದ್ದಿಗೋಷ್ಠಿಯ ಮೂಲಕ ಐದು ಪಂದ್ಯಗಳು, ಒಂದು ಪ್ಲೇಆಫ್ ಮತ್ತು ಫೈನಲ್ ಪಂದ್ಯಗಳು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿವೆ ಎಂದು ಘೋಷಿಸಿದ್ದವು.

ಹೋದ ವರ್ಷದ ಜೂನ್ 4ರಂದು ಆರ್‌ಸಿಬಿಯ ಚೊಚ್ಚಲ ಪ್ರಶಸ್ತಿ ಗೆಲುವಿನ ಸಂಭ್ರಮಾಚರಣೆಯ ವೇಳೆ ಸಂಭವಿಸಿದ್ದ ಕಾಲ್ತುಳಿತದಲ್ಲಿ ಕ್ರೀಡಾಂಗಣದ ಬಳಿ 11 ಜನರು ಸಾವನ್ನಪ್ಪಿದ್ದರು ಮತ್ತು ಅನೇಕರು ಗಾಯಗೊಂಡಿದ್ದರು.

ರಾಜ್ಯ ಸರ್ಕಾರವು ನೇಮಕ ಮಾಡಿದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿ ಕುನ್ಹಾ ಅವರ ನೇತೃತ್ವದಲ್ಲಿ ಸಮಿತಿಯು ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳು ಮತ್ತು ಮೂಲಸೌಲಭ್ಯಗಳ ನವೀಕರಣಕ್ಕೆ ಶಿಫಾರಸುಗಳನ್ನು ಮಾಡಿತು. ಆಯೋಗದ ಶಿಫಾರಸುಗಳ ಅನುಷ್ಠಾನದ ಮೇಲ್ವಿಚಾರಣೆಗಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತ ಎಂ ಮಹೇಶ್ವರರಾವ್ ಅವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನೂ ರಚಿಸಿತು.

ರಾಜ್ಯ ಸರ್ಕಾರವು ಫೆಬ್ರುವರಿ 16ರಂದು ಹೊರಡಿಸಿದ್ದ ಆದೇಶದ ಪ್ರಕಾರ; ಶಿಫಾರಸುಗಳ ಅನುಷ್ಠಾನದ ಆಧಾರದ ಮೇಲೆ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸಲು ಅನುಮತಿ ಪಡೆಯಲು ಅಥವಾ ನಿರಾಕರಿಸಲು ಸಮಿತಿಗೆ ಅಧಿಕಾರ ನೀಡಿದೆ. ಈ ಆದೇಶದ ಪ್ರತಿಯು ಪತ್ರಿಕೆಗೆ ಲಭ್ಯವಾಗಿದೆ.

ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿಯ ಮೂರು ಹಂತಗಳಲ್ಲಿ ಶಿಫಾರಸುಗಳನ್ನು ಜಾರಿಗೆ ತರಲು ಕೆಎಸ್‌ಸಿಎ ಸಮಿತಿಯೊಂದಿಗೆ ಪರಸ್ಪರ ಒಪ್ಪಿಗೆ ನೀಡಿದೆ. ಮೊದಲ ಹಂತದ ಅನುಷ್ಠಾನಕ್ಕೆ ಮಾರ್ಚ್ 5 ಮತ್ತು ಮಾರ್ಚ್ 10ರಂದು ದಿನಾಂಕಗಳನ್ನು ನಿರ್ಧರಿಸಲಾಯಿತು. ಇದನ್ನು ಬೆಂಬಲಿಸುವ ದಾಖಲೆಗಳನ್ನು ಸಹ ಪತ್ರಿಕೆಯು ಪರಿಶೀಲಿಸಿದೆ. 'ತಜ್ಞರ ಸಮಿತಿಯ ನಿರ್ದೇಶನಗಳನ್ನು ಕೆಎಸ್‌ಸಿಎ ಅನುಸರಿಸುತ್ತಿಲ್ಲ. ಮುಖ್ಯವಾಗಿ; ಅಡೆತಡೆಗಳನ್ನು ತೆಗೆದುಹಾಕುವುದು ಮತ್ತು ಖಾಲಿ ಜಾಗವನ್ನು ಗುರುತಿಸುವ ಶಿಫಾರಸಿಗೆ ಸಂಬಂಧಿಸಿದಂತೆ, ಕ್ರೀಡಾಂಗಣದ ಬಿ ಮೈದಾನವನ್ನು ಬಳಸುವ ಬಗ್ಗೆ ಕೆಎಸ್‌ಸಿಎ ಒಳಗೇ ಒಮ್ಮತದ ಕೊರತೆಯೂ ಇದೆ' ಎಂದು ಮೂಲವೊಂದು ಹೇಳಿದೆ.

ತುರ್ತು ನಿರ್ಗಮನ ಮಾರ್ಗ ಮತ್ತು ಜನರನ್ನು ಸ್ಥಳಾಂತರಿಸುವ ಹಾದಿಯ ಯೋಜನೆಯ ಕೊರತೆ, ವೈದ್ಯಕೀಯ ಚಿಕಿತ್ಸೆಯ ಸೌಲಭ್ಯದ ವಿವರಗಳು ಬಾಕಿ ಇರುವ ಕೆಲವು ಶಿಫಾರಸುಗಳಲ್ಲಿ ಸೇರಿವೆ ಎಂದು ಮೂಲಗಳು ತಿಳಿಸಿವೆ.

ಈ ಕುರಿತು ಪ್ರತಿಕ್ರಿಯಿಸಿದ ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್, 'ತಜ್ಞರ ಸಮಿತಿಯು ಏನಾದರೂ ವಿಳಂಬವಾಗಿರುವುದನ್ನು ಸೂಚಿಸಿದರೆ, ನಿಗದಿತ ಕಾಲಮಿತಿಯನ್ನು ಅನುಸರಿಸಲಾಗುವುದೆಂದು ನಮ್ಮ ಸಂಸ್ಥೆ ಭರವಸೆ ನೀಡುತ್ತದೆ' ಎಂದರು.

ಚಿತ್ರಾವಳಿ

ಕರ್ನಾಟಕ ತಂಡದ ವೇಗದ ಬೌಲರ್ ವೈಶಾಖ ವಿಜಯ್‌ಕುಮಾರ್ ಅವರು ಸಾಗರಿಕಾ ಅವರೊಂದಿಗೆ ಗುರುವಾರ ಬೆಂಗಳೂರಿನ ಅರಮನೆ ಮೈದಾನದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ನಟ ಸುದೀಪ್ ಸೇರಿದಂತೆ ಗಣ್ಯರು ನವಜೋಡಿಗೆ ಶುಭಕೋರಿದರು

ಕ್ರಿಕೆಟ್ ದಂತಕತೆ ಸಚಿನ್ ತೆಂಡೂಲ್ಕರ್ ಅವರ ಪುತ್ರ ಅರ್ಜುನ್ ತೆಂಡೂಲ್ಕರ್ ಮತ್ತು ಕೈಗಾರಿಕೋದ್ಯಮಿ ರವಿ ಘಾಯ್ ಅವರ ಮೊಮ್ಮಗಳು ಸಾನಿಯಾ ಚಾಂದೋಕ್ ಅವರ ವಿವಾಹ ಸಮಾರಂಭ ಮುಂಬೈನಲ್ಲಿ ಗುರುವಾರ ನಡೆಯಿತು ಪಿಟಿಐ ಚಿತ್ರ